# ಇಸ್ಲಾಂ ಧರ್ಮ ತತ್ವಜ್ಞಾನ

ಹಝ಼್ರತ್ ಮಿರ್ಝ಼ಾ ಗ಼ುಲಾಂ ಅಹ್ಮದ್



The essay entitled *The Philoshophy of the Teachings of Islam* was written in Urdu by Hazrat Mirza Ghulam Ahmad, the Promised Messiah and Mahdi[as] at the invitation of Swami Shugan Chandar under whose auspicious the conference of Great Religions was held in Lahore Town Hall from 26th to 29th December 1896. The scholars of Muslims, Christians, Arya Samaj and other religions were invited to represent their religions at the conference of Great Religion. They were required to write on the following five topics on the basis of their Holy Books:

- The Physical, moral and spiritual states of man
- The state of man after death.
- The object of man's life and the means of its attainment.
- The operation of the practical ordinances of the Law in this life and the next.
- Sources of Divine knowledge.

Allah revealed to the Promised Messiah[as] that his essay will be declared supreme over all other essays. And so it was. For instance the Civil and Military Gazette, Lahore, wrote that Hazrat Ahmad's essay was the only one worth mentioning and the only one paper which was commended highly. The essay has been published in several languages in different countries.

It is the best and most comprehensive introduction to Islam within the scope of the above five questions.

# ಇಸ್ಲಾಂ ಧರ್ಮ ತತ್ವಜ್ಞಾನ


ಗ್ರಂಥಕರ್ತ:

**ಹಝ಼್ರತ್ ಮಿರ್ಝ಼ಾ ಗ಼ುಲಾಂ ಅಹ್ಮದ್**

ಅನುವಾದಕ:

**ಮುಹಮ್ಮದ್ ಯೂಸುಫ್, ಮಂಗಳೂರು**

Kannada translation of Urdu Work:

اسلامی اصول کی فلاسفی

***"ISLAMI USOOL KI PHILOSOPHY"***


| | |
|---|---|
| Author | Hazrat Mirza Ghulam Ahmad |
| Translated by | Muhammad Yusuf, Mangalore |
| Type Setting | U. Basheer Ahmad, Manjeshwar;<br>Inamullah, Mangalore |
| Published by | Nazarat Nashro - Isha'at, Qadian,<br>Distt. Gurdaspur, Punjab -143516 |
| First Edition | 1993 |
| Second Edition | 2001 |
| Third Edition | 2018 |
| Reviewed by | Moulavi Inamullah |
| Copies | 1000 |
| Printed at | Fazl-e-Umar Printing Press, Qadian |

| ವಿಷಯಾನುಕ್ರಮಣಿಕೆ | ಪುಟ |
|---|---|
| ಸಂದೇಶ | 1 |
| ಪುಸ್ತಕ ಪರಿಚಯ | 3 |
| ಅನುವಾದಕರ ನುಡಿ | 19 |
| ಇಸ್ಲಾಂ ಧರ್ಮ ತತ್ವಜ್ಞಾನ | 21 |
| **ಪ್ರಥಮ ಪ್ರಶ್ನೆ** | 23 |
| ಮಾನವನ ಶಾರೀರಿಕ, ನೈತಿಕ ಮತ್ತು ಆಧ್ಯಾತ್ಮಿಕ ಸ್ಥಿತಿಗಳು | 23 |
| ಆತ್ಮದ ಉಗಮ | 29 |
| ಆತ್ಮವು ಒಂದು ಸೃಷ್ಟಿ | 34 |
| ಮನುಷ್ಯನ ಅನುಕ್ರಮವಾದ ಮುನ್ನಡೆ | 35 |
| ಪ್ರಾಕೃತಿಕಾವಸ್ಥೆ ಮತ್ತು ನೈತಿಕಾವಸ್ಥೆಗಳ ಅಂತರ | 37 |
| ತ್ರಿವಿಧ ಸಂಸ್ಕಾರ ಘಟ್ಟಗಳು | 39 |
| ಹಝ್ರತ್ ಪೈಗಂಬರರ(ಸ) ಆವಿರ್ಭಾವ | 40 |
| ನೈತಿಕ ಗುಣಗಳ ನಿರೂಪಣೆ | 42 |
| ಶಾರೀರಿಕ ಸ್ಥಿತಿ | 47 |
| ಹಂದಿ ಮಾಂಸ ನಿಷಿದ್ಧ | 52 |
| ಮಾನವನ ನೈತಿಕ ಸ್ಥಿತಿ | 54 |
| ಚಾರಿತ್ರ್ಯ ಶುದ್ಧಿ | 55 |
| ಚಾರಿತ್ರ್ಯ ಶುದ್ಧಿಗೆ ಐದು ಸೂತ್ರಗಳು | 58 |
| ಪ್ರಾಮಾಣಿಕತೆ | 60 |
| ಸೌಮ್ಯಶೀಲತೆ | 64 |
| ಸಭ್ಯತೆ | 66 |
| ಕ್ಷಮಾಗುಣ | 68 |
| ಉಪಕಾರಶೀಲತೆ | 70 |
| ಧೈರ್ಯ | 77 |
| ಸತ್ಯಸಂಧತೆ | 79 |
| ಸಹನೆ | 81 |
| ಸಹಾನುಭೂತಿ | 83 |
| ದೇವನ ಅಸ್ತಿತ್ವದ ಅನ್ವೇಷಣೆ | 84 |
| ಪರಮಾತ್ಮನ ವಚನಾಮೃತ | 87 |
| ಪ್ರಪಂಚಕ್ಕೆ ಪವಿತ್ರ ಖುರ್‌ಆನಿನ ಕೊಡುಗೆ | 89 |
| ದೈವಾಸ್ತಿತ್ವದ ಸಾಕ್ಷ್ಯಗಳು | 91 |
| ದೇವನ ಮಹಾತ್ಮೆ | 95 |

| | |
|---|---|
| ಆಧ್ಯಾತ್ಮಿಕ ಸ್ಥಿತಿ | 103 |
| ಉತ್ಕೃಷ್ಟವಾದೊಂದು ಪ್ರಾರ್ಥನೆ | 107 |
| “ಕಾಫೂರ್” ಮತ್ತು “ಝನ್‌ಜಬೀಲ್”ನಿಂದ ತಯಾರಿಸಿದ ಪಾನೀಯಗಳ ತಾತ್ಪರ್ಯ | 113 |
| ಪರಮಾತ್ಮನೊಡನೆ ಪರಿಪೂರ್ಣ ಆಧ್ಯಾತ್ಮಿಕ ಸಂಬಂಧವೇರ್ಪಡಿಸುವ ಮಾರ್ಗ | 122 |
| **ಎರಡನೆಯ ಪ್ರಶ್ನೆ** | 126 |
| ಮರಣಾನಂತರ ಜೀವನ | 126 |
| ಮಾನವ ಜೀವಿತದ ಮೂರು ಲೋಕಗಳು | 133 |
| **ಮೂರನೆಯ ಪ್ರಶ್ನೆ** | 146 |
| ಐಹಿಕ ಜೀವಿತೋದ್ದೇಶ ಹಾಗೂ ಅದನ್ನು ಗಳಿಸುವ ಮಾರ್ಗಗಳು | 146 |
| ಉದ್ದೇಶ ಸಿದ್ಧಿಯ ಮಾರ್ಗಗಳು | 148 |
| **ನಾಲ್ಕನೆಯ ಪ್ರಶ್ನೆ** | 156 |
| ಧರ್ಮ ನಿಯಮಾನುಸರಣೆಯ ಫಲ | 156 |
| ಪವಿತ್ರ ಖುರ್‌ಆನಿನ ಪ್ರಮಾಣ ವಾಕ್ಯಗಳ ತತ್ವ | 159 |
| **ಐದನೆಯ ಪ್ರಶ್ನೆ** | 166 |
| ದೈವಿಕಜ್ಞಾನ ಸಿದ್ಧಿಯ ಮಾರ್ಗಗಳು | 166 |
| ದಿವ್ಯವಾಣಿ ಎಂದರೇನು | 173 |
| ನಾನು ದೇವಸಂಬೋಧಿತನು | 178 |
| ದಿವ್ಯವಾಣಿ ಮೂಲಕ ಪರಿಪೂರ್ಣ ಜ್ಞಾನಸಿದ್ಧಿ | 179 |
| ಮಹಾತ್ಮರ ಕಷ್ಟಾನುಭವ | 181 |
| ಹಝ್ರತ್ ಪೈಗಂಬರರ(ಸ) ಜೀವನದ ಎರಡು ಘಟ್ಟಗಳು | 183 |
| ಇಸ್ಲಾಮಿಕ ಯುದ್ಧ | 187 |

بِسۡمِ اللّٰہِ الرَّحۡمٰنِ الرَّحِیۡمِ

# ಸಂದೇಶ

ಜಾಗತಿಕ ಅಹ್ಮದಿಯಾ ಮುಸ್ಲಿಮ್ ಸಂಘಟನೆ ಈ ವೈಶಿಷ್ಟ್ಯಪೂರ್ಣ ಗ್ರಂಥದ ಪ್ರಕಟಣೆಯ ಶತವಾರ್ಷಿಕ ಸಮಾರಂಭವನ್ನು ಜರಗಿಸುತ್ತಿದೆ. ಈ ಗ್ರಂಥವನ್ನು ಕ್ರಿ.ಶ. 1896 ಡಿಸೆಂಬರ್ ದಿನಾಂಕ 26ರಿಂದ 29ರ ತನಕ ಲಾಹೋರಿನಲ್ಲಿ ನಡೆದ ಸರ್ವಧರ್ಮ ಸಮ್ಮೇಳನದಲ್ಲಿ ವಾಚಿಸಲಾಯಿತು. ಈ ಗ್ರಂಥವನ್ನು ಅಲ್ಲಾಹನ ಸಹಾಯದಿಂದ ರಚಿಸಲಾಗಿದೆ. ಅದು ಮಾತ್ರ ಜಯಶಾಲಿಯಾಗುವುದು ಎಂದು ಅಲ್ಲಾಹನು ತನ್ನ ಸಂದೇಶವಾಣಿಯ ಮೂಲಕ ಮುಂಚಿತವಾಗಿಯೇ ತಿಳಿಸಿದ್ದನು. ಸಮ್ಮೇಳನ ಜರಗುವ ಮೊದಲೇ ಈ ಸಂದೇಶವಾಣಿಯನ್ನು ಪ್ರಕಟಿಸಲಾಗಿತ್ತು ಮತ್ತು ಲಾಹೋರಿನ ಅನೇಕ ಸಾರ್ವಜನಿಕ ಸ್ಥಳಗಳಲ್ಲಿ ಕರಪತ್ರಗಳನ್ನೂ ಪ್ರಕಟಣೆಗಳನ್ನೂ ಹಚ್ಚಲಾಗಿತ್ತು.

ಕೃತಜ್ಞತೆಯರ್ಪಿಸುವ ನಮ್ಮ ಸಮಾರಂಭ ಸತ್ಯವಿಶ್ವಾಸಿಗಳಿಗೆ ಶೋಭಾಯ ಮಾನವಾದ ರೀತಿಯಲ್ಲಿದ್ದು ಅರ್ಥಭರಿತವೂ ಗಂಭೀರವೂ ಎಲ್ಲ ವಿಧದ ನಿರರ್ಥಕ ಮತ್ತು ಲಘು ಪ್ರದರ್ಶನದಿಂದ ವಿರಹಿತವೂ ಆಗಿದೆ. ಆದುದರಿಂದ ನಾವು ಈ ಗ್ರಂಥದ ಭಾಷಾಂತರವನ್ನು ಅನೇಕ ಭಾಷೆಗಳಲ್ಲಿ ಪ್ರಕಟಿಸಿ ಅದರ ಪ್ರಕಟಣೆಯ ಶತವಾರ್ಷಿಕ ಸಮಾರಂಭವನ್ನು ಏರ್ಪಡಿಸುತ್ತಿದ್ದೇವೆ. ಲೋಕದ ಬಹುತೇ

ಕ ದೇಶಗಳ ಜನರು ಈ ಗ್ರಂಥದ ಅನುಗ್ರಹಗಳ ಬಹುದೊಡ್ಡ ಪಾಲನ್ನು ಪಡೆಯುವರೆಂದು ನಾವು ಆಶಿಸುತ್ತೇವೆ.

ಅಲ್ಲಾಹನ ಅನುಗ್ರಹದಿಂದ ಇಂದಿನ ತನಕ ನಾವು ಈ ಗ್ರಂಥದ ಭಾಷಾಂತರವನ್ನು 52 ಭಾಷೆಗಳಲ್ಲಿ ಪ್ರಕಟಿಸಿದ್ದೇವೆ. ಬೇರೆ ಕೆಲವು ಭಾಷೆಗಳಿಗೆ ಈ ಗ್ರಂಥವನ್ನು ಭಾಷಾಂತರಿಸುವ ಕೆಲಸ ನಡೆಯುತ್ತಾ ಇದೆ. ಕ್ರಿ.ಶ. 1996ರ ಕೊನೆಗೆ ನಾವು ಈ ಕೆಲಸ ಈಡೇರಿಸುವ ಆಶೆಯನ್ನು ಹೊಂದಿದ್ದೇವೆ.

ಈ ಕೆಲಸವನ್ನು ಈಡೇರಿಸಲು ತಮ್ಮ ಸಾಮರ್ಥ್ಯವನ್ನು ಮತ್ತು ಸಮಯವನ್ನು ವಿನಿಯೋಗಿಸಿ ಪ್ರಯತ್ನಿಸಿದವರಿಗೆ ಅಲ್ಲಾಹನು ತನ್ನ ಪಾರಿತೋಷಕಗಳನ್ನು ದಯಪಾಲಿಸಲಿ ಎಂದು ಪ್ರಾರ್ಥಿಸುತ್ತೇನೆ.

ಜನವರಿ 1996 **ಮಿರ್ಝಾ ತಾಹಿರ್ ಅಹ್ಮದ್**

ಜಾಗತಿಕ ಅಹ್ಮದಿಯಾ ಸಂಘಟನೆಯ ಚತುರ್ಥ ಖಲೀಫ

# ಪುಸ್ತಕ ಪರಿಚಯ

ಸ್ವಾಮಿ ಸಾಧು ಶುಗನ್ ಚಂದರ್ ಎಂಬ ಮಹನೀಯರು ಹಿಂದುಗಳ ಕಾಯಸ್ಥ ಸಮಾಜದಲ್ಲಿ ಸುಧಾರಣೆಯ ಸೇವೆ ಮಾಡುತ್ತಿದ್ದರು. ಕ್ರಿ.ಶ. 1892ರಲ್ಲಿ ಅವರು ಎಲ್ಲ ಜನರನ್ನು ಒಗ್ಗೂಡಿಸಿ ಸೌಹಾರ್ದದ ತಳಹದಿ ಹಾಕುವ ಯೋಚನೆ ಮಾಡಿದರು. ಅವರು ತನ್ನ ಉದ್ದೇಶದ ಈಡೇರಿಕೆಗಾಗಿ ಸರ್ವಧರ್ಮ ಸಮ್ಮೇಳನ ನಡೆಸುವ ನಿರ್ಧಾರ ಕೈಗೊಂಡರು. ಇಂತಹ ಮೊದಲನೆಯ ಸಮ್ಮೇಳನ ಅಜ್‌ಮೀರ್‌ನಲ್ಲಿ ನಡೆಯಿತು. ಅನಂತರ 1896ರಲ್ಲಿ ಎರಡನೆಯ ಸಮ್ಮೇಳನ ಲಾಹೋರಿನಲ್ಲಿ ನಡೆಸುವುದು ಯೋಗ್ಯವೆಂದು ನಿರ್ಧರಿಸಿ ಅದಕ್ಕೆ ಬೇಕಾದ ತಯಾರಿಗಳನ್ನು ನಡೆಸಲಾಯಿತು.[1]

ಸ್ವಾಮೀಜಿಯವರು ಈ ಧಾರ್ಮಿಕ ಸಮ್ಮೇಳನಕ್ಕಾಗಿ ಒಂದು ಸಮಿತಿಯನ್ನು ರೂಪಿಸಿದರು. ಅದರ ಅಧ್ಯಕ್ಷರು ಮಾಸ್ಟರ್ ದುರ್ಗಾ ಪ್ರಸಾದ್ ಆಗಿದ್ದರು. ಲಾಹೋರಿನ ಚೀಫ್ ಕೋರ್ಟ್ ನ್ಯಾಯವಾದಿ ಲಾಲಾ ಧನ್‌ಪತ್ ರಾಯ್ ಬಿ.ಎ., ಎಲ್.ಎಲ್.ಬಿ. ಅದರ ಕಾರ್ಯದರ್ಶಿಯಾಗಿದ್ದರು.

ಸಮ್ಮೇಳನ ಕ್ರಿ.ಶ. 1896ರ ಡಿಸೆಂಬರ್ ದಿನಾಂಕ 26,27,28ರಂದು ನಡೆಸಲು ನಿಶ್ಚಯಿಸಲಾಯಿತು. ಈ ಕೆಳಗಿನ ಆರು ಮಂದಿಯನ್ನು ಮೋಡರೇಟರುಗಳನ್ನಾಗಿ ನೇಮಿಸಲಾಯಿತು:

1. ರಾಯ್ ಬಹಾದುರ್ ಬಾಬೂ ಪ್ರತೂಲ್ ಚಂದ್, ಜಡ್ಜ್ ಪಂಜಾಬ್ ಚೀಫ್ ಕೋರ್ಟ್.
2. ಖಾನ್ ಬಹಾದುರ್ ಶೇಖ್ ಖುದಾಭಕ್ಷ್, ಜಡ್ಜ್ ಸ್ಮಾಲ್ ಕಾಸಸ್ ಕೋರ್ಟ್, ಲಾಹೋರ್.
3. ರಾಯ್ ಬಹಾದುರ್ ಪಂಡಿತ್ ರಾಧಾ ಕಿಷನ್ ಕೌಲ್, ಪ್ಲೀಡರ್ ಚೀಫ್ ಕೋರ್ಟ್, ಜಮ್ಮುವಿನ ಮಾಜಿ ಗವರ್ನರ್.
4. ಹಝ್ರತ್ ಮೌಲವಿ ಹಕೀಮ್ ನೂರುದ್ದೀನ್, ರಾಜ ವೈದ್ಯ, ಜಮ್ಮು.
5. ರಾಯ್ ಭವಾನಿ ದಾಸ್ ಎಂ.ಎ. ಎಕ್‌ಸ್ಟ್ರಾ ಸೆಟ್ಲ್‌ಮೆಂಟ್ ಆಫೀಸರ್, ಝೀಲಮ್.
6. ಸರ್‌ದಾರ್ ಜವಾಹರ್ ಸಿಂಗ್, ಕಾರ್ಯದರ್ಶಿ ಖಾಲಸ ಕಮಿಟಿ, ಲಾಹೋರ್.

1. ಸರ್ವಧರ್ಮ ಸಮ್ಮೇಳನದ ವರದಿ: ಪುಟ 253 – 254, ಸಿದ್ದೀಖೀ ಪ್ರೆಸ್ ಲಾಹೋರ್‌ನಲ್ಲಿ ಕ್ರಿ.ಶ. 1897ರಲ್ಲಿ ಮುದ್ರಿತ.

ಸ್ವಾಮಿ ಶುಗನ್ ಚಂದರ್ ಒಂದು ಕರಪತ್ರ ಪ್ರಕಟಿಸಿ ಈ ಸಮ್ಮೇಳನದಲ್ಲಿ ಮುಸ್ಲಿಮರ, ಕ್ರೈಸ್ತರ ಮತ್ತು ಆರ್ಯ ಸಮಾಜದ ವಿದ್ವಾಂಸರು ಭಾಗವಹಿಸಿ ತಮ್ಮ ಧರ್ಮಗಳ ವೈಶಿಷ್ಟ್ಯಗಳ ಕುರಿತು ವಿವರಿಸಲು ಆಹ್ವಾನಿಸಿದರು. ಸಮ್ಮೇಳನ ಲಾಹೋರಿನ ಟೌನ್‌ಹಾಲ್‌ನಲ್ಲಿ ನಡೆಸಲಾಗುವುದೆಂದೂ ಪ್ರತಿಯೊಂದು ಧರ್ಮಕ್ಕೆ ಸೇರಿದವರು ತಮ್ಮ ಧರ್ಮದ ಉತ್ತಮ ಉಪದೇಶಗಳನ್ನು ಜನರಿಗೆ ವಿವರಿಸಿಕೊಡಬೇಕೆಂದೂ ಅದರ ಫಲವಾಗಿ ಜನರು ಧರ್ಮಗಳ ಕುರಿತು ಸ್ನೇಹಭಾವ ಹೊಂದುವಂತೆ ಆಗಬೇಕೆಂದೂ ಧಾರ್ಮಿಕ ಸಾಕ್ಷ್ಯಾಧಾರಗಳನ್ನು ಚೆನ್ನಾಗಿ ಅರಿತುಕೊಳ್ಳಲು ಸಾಧ್ಯವಾಗಬೇಕೆಂದೂ ಆ ಕರಪತ್ರದಲ್ಲಿ ಸೂಚಿಸಲಾಗಿತ್ತು. ಪ್ರತಿಯೊಂದು ಧರ್ಮದ ವಿದ್ವಾಂಸರಿಗೆ ತಮ್ಮ ಧರ್ಮದ ಕುರಿತು ವಿವರಿಸಲು ಇದು ಉತ್ತಮ ಸಂದರ್ಭವೊದಗಿಸಲಿ ಎಂದೂ ಧರ್ಮಗಳ ಉಪದೇಶಗಳ ಅಧ್ಯಾಯನವನ್ನು ನಡೆಸಲು ಈ ಸಮ್ಮೇಳನ ಸಹಕಾರಿಯಾಗಿ ಅದರ ಮೂಲಕ ಸತ್ಯಸ್ವೀಕಾರ ಸುಲಭಗೊಳಿಸುವಂತಾಗಲಿ ಎಂದೂ ಉದ್ದೇಶಿಸಲಾಗಿತ್ತು.

ಆ ಕರಪತ್ರದಲ್ಲಿ ಹೀಗೆ ಬರೆಯಲಾಗಿತ್ತು: "ಇಂದಿನ ಕಾಲದಲ್ಲಿ ಧರ್ಮಗಳ ಮಧ್ಯೆ ಜಗಳದ ಕಾರಣದಿಂದ ಜನರ ಹೃದಯಗಳಲ್ಲಿ ಸತ್ಯಧರ್ಮವನ್ನು ಅರಿತುಕೊಳ್ಳುವ ಆಶೆ ಇರುತ್ತದೆ. ಇದಕ್ಕಿರುವ ಅತ್ಯುತ್ತಮ ಮಾರ್ಗ ಎಲ್ಲ ಧರ್ಮಗಳಿಗೆ ಸೇರಿದ ಪ್ರವಚನಕಾರರಾದ ಹಿರಿಯರನ್ನು ಒಂದು ವೇದಿಕೆಯಲ್ಲಿ ಒಗ್ಗೂಡಿಸಿ, ಪ್ರಕಟಿಸಲಾದ ಪ್ರಶ್ನೆಗಳಿಗೆ ಅವರ ಉತ್ತರಗಳನ್ನು ಆಲಿಸುವುದಾಗಿದೆ. ಈ ಸಮ್ಮೇಳನದಲ್ಲಿ ಸೇರುವ ದೊಡ್ಡ ಧರ್ಮಗಳಲ್ಲಿ ಯಾವ ಧರ್ಮ ಸತ್ಯವಾಗಿಯೂ ಪರಮೇಶ್ವರನ ಕಡೆಯಿಂದ ಬಂದುದಾಗಿದೆಯೋ ಆ ಧರ್ಮ ನಿಶ್ಚಯವಾಗಿಯೂ ತನ್ನ ಸ್ಪಷ್ಟವಾದ ಥಳಕನ್ನು ಪ್ರಕಾಶಿಸುವುದು. ಇದೇ ಉದ್ದೇಶದಿಂದ ಈ ಸಮ್ಮೇಳನವನ್ನು ಏರ್ಪಡಿಸಲಾಗಿದೆ. ಪ್ರತಿಯೊಂದು ಧರ್ಮದ ಹಿರಿಯ ವಿದ್ವಾಂಸರು ತನ್ನ ಧರ್ಮದ ಸತ್ಯವನ್ನು ಪ್ರಕಟಿಸುವುದು ತಮ್ಮ ಕರ್ತವ್ಯವೆಂದು ತಿಳಿದಿರುವರು. ಈ ಸಮ್ಮೇಳನವನ್ನು ನಡೆಸುವುದು ಸತ್ಯವನ್ನು ಪ್ರಕಟಿಸಲಿಕ್ಕಾಗಿದೆ. ಇದು ದೇವನು ಒದಗಿಸಿದ ಉತ್ತಮ ಸಂದರ್ಭವಾಗಿದೆ. ಇದು ಮನುಷ್ಯನಿಗೆ ಯಾವಾಗಲೂ ದೊರಕುವಂತಹದ್ದಲ್ಲ."

ಆ ಕರಪತ್ರ ಹೀಗೆ ಮುಂದುವರಿಯುತ್ತದೆ:

"ಒಬ್ಬ ವ್ಯಕ್ತಿಯ ಹತ್ತಿರ ಇನ್ನೊಬ್ಬ ವ್ಯಕ್ತಿಯ ಮಾರಕ ರೋಗವನ್ನು ಗುಣಪಡಿಸಬಹುದಾದ ಮದ್ದು ಇದ್ದು ಆ ಮದ್ದನ್ನು ಹೊಂದಿರುವ ವ್ಯಕ್ತಿ ಮಾನವರ ಹಿತೈಷಿ ಎಂದು ವಾದಿಸುತ್ತಲೂ ಇರುವಾಗ ಅವನನ್ನು ಚಿಕಿತ್ಸೆಗಾಗಿ ಬಡ ರೋಗಿಗಳು ಕರೆಯುತ್ತಲೂ ಇರುವಾಗ ಅವನು ಅವರನ್ನು ನಿರ್ಲಕ್ಷಿಸಬಲ್ಲ ಎಂದು

ನಾನು ಸಮ್ಮತಿಸಲಾರೆನು. ಯಾವ ಧರ್ಮ ನಿಜವಾಗಿಯೂ ಸತ್ಯದಿಂದ ತುಂಬಿದೆ ಎಂಬುದರ ತೀರ್ಮಾನ ಆಗಬೇಕು ಎಂಬ ಬಗ್ಗೆ ನನ್ನ ಹೃದಯ ತುಡಿಯುತ್ತಿದೆ. ನನ್ನ ಹೃತ್ಪೂರ್ವಕವಾದ ಉತ್ಸಾಹವನ್ನು ಸ್ಪಷ್ಟವಾಗಿ ರೂಪಿಸಬಲ್ಲ ಶಬ್ದಗಳು ನನ್ನ ಬಳಿ ಇಲ್ಲ."

ಈ ಸರ್ವಧರ್ಮ ಸಮ್ಮೇಳನದಲ್ಲಿ ಭಾಗವಹಿಸಲು ವಿವಿಧ ಧರ್ಮಗಳ ಪ್ರತಿನಿಧಿಗಳು ಸ್ವಾಮೀಜಿಯವರ ಆಹ್ವಾನ ಸ್ವೀಕರಿಸಿದರು. ಕ್ರಿ.ಶ. 1896ರ ಡಿಸೆಂಬರ್ ತಿಂಗಳ ರಜಾದಿನಗಳಲ್ಲಿ ಸರ್ವಧರ್ಮ ಸಭೆ ನಡೆಯಿತು. ಸಮ್ಮೇಳನದ ಸಮಿತಿಯು ಪ್ರಕಟಿಸಿದ ಐದು ಪ್ರಶ್ನೆಗಳಿಗೆ ವಿವಿಧ ಧರ್ಮಗಳ ಪ್ರತಿನಿಧಿಗಳು ಉತ್ತರ ರೂಪವಾಗಿ ಭಾಷಣಗಳನ್ನು ಮಾಡಿದರು. ಭಾಷಣ ಮಾಡುವ ವ್ಯಕ್ತಿ ತನ್ನ ಧರ್ಮದ ಧಾರ್ಮಿಕ ಗ್ರಂಥದ ಪರಿಮಿತಿಯೊಳಗೆ ತನ್ನ ಸಾಕ್ಷ್ಯಾಧಾರಗಳನ್ನು ನೀಡಬೇಕೆಂದು ಸಮಿತಿಯು ನಿಬಂಧನೆ ಮಾಡಿದ್ದಿತು.

**ಪ್ರಶ್ನೆಗಳು:**

1. ಮಾನವನ ಶಾರೀರಿಕ, ನೈತಿಕ ಮತ್ತು ಆಧ್ಯಾತ್ಮಿಕ ಸ್ಥಿತಿಗಳು.
2. ಮಾನವನ ಮರಣಾನಂತರದ ಸ್ಥಿತಿ.
3. ಮಾನವನ ಐಹಿಕ ಜೀವಿತೋದ್ದೇಶ ಮತ್ತು ಅದನ್ನು ಗಳಿಸುವ ಮಾರ್ಗಗಳು.
4. ಧರ್ಮ ನಿಯಮಾನುಸರಣೆ ಇಹ–ಪರ ಜೀವಿತದಲ್ಲಿ ಉಂಟುಮಾಡುವ ಫಲಗಳು.
5. ದೈವಿಕ ಜ್ಞಾನಸಿದ್ಧಿಯ ಮಾರ್ಗಗಳು.

ಕ್ರಿ.ಶ. 1896ರ ಡಿಸೆಂಬರ್ 26ರಿಂದ 29ನೇ ದಿನಾಂಕದ ತನಕ ಜರಗಿದ ಈ ಸಮ್ಮೇಳನದಲ್ಲಿ ಸನಾತನ ಧರ್ಮ, ಹಿಂದೂ ಧರ್ಮ, ಆರ್ಯಸಮಾಜ, ಫ್ರೀ ತಿಂಕರ್ಸ್, ಬ್ರಹ್ಮ ಸಮಾಜ, ತಿಯೋಸಫಿಕಲ್ ಸೊಸೈಟಿ, ರಿಲಿಜನ್ ಆಫ್ ಹಾರ್ಮನಿ, ಕ್ರೈಸ್ತ, ಇಸ್ಲಾಮ್, ಸಿಖ್ ಧರ್ಮಗಳ ಪ್ರತಿನಿಧಿಗಳು ಭಾಷಣ ಮಾಡಿದರು. ಆದರೆ ಈ ಎಲ್ಲ ಭಾಷಣಗಳಲ್ಲಿ ಕೇವಲ ಒಂದೇ ಒಂದು ಭಾಷಣದಲ್ಲಿ ಈ ಪ್ರಶ್ನೆಗಳಿಗೆ ಸತ್ಯಾಂಶಭರಿತ ಪರಿಪೂರ್ಣ ಉತ್ತರಗಳಿದ್ದುವು. ಈ ಭಾಷಣವನ್ನು ಹಝ್ರತ್ ಮೌಲವಿ ಅಬ್ದುಲ್ ಕರೀಮ್ ಸಾಹೇಬರು ತನ್ನ ಅತ್ಯಂತ ಇಂಪಾದ ಸ್ವರದಲ್ಲಿ ಓದುತ್ತಿದ್ದಾಗ ಆ ಸಮ್ಮೇಳನದಲ್ಲಿ ನೆರೆದವರ ಸ್ಥಿತಿ ಹೇಗಿತ್ತೆಂದು ವಿವರಿಸುವುದು ಸಾಧ್ಯವಿಲ್ಲ. ಯಾವುದೇ ಧರ್ಮಕ್ಕೆ ಸೇರಿದ ಯಾವನೇ ಒಬ್ಬ ವ್ಯಕ್ತಿ ಕೂಡ ಆ ಭಾಷಣವನ್ನು ಪ್ರಶಂಶಿಸಿ

ಉದ್ಗರಿಸದೆ ಇರಲಿಲ್ಲ. ಭಾವಾತಿರೇಕಕ್ಕೆ ಮತ್ತು ತನ್ಮಯತೆಗೆ ಪಾತ್ರನಾಗದವನು ಅಲ್ಲಿ ಯಾರೂ ಇರಲಿಲ್ಲ. ವಿಷಯ ವಿವರಣೆ ಅತ್ಯಂತ ಮನಮೋಹಕವಾಗಿತ್ತು. ಶತ್ರುಗಳು ಕೂಡ ಮೆಚ್ಚಿಗೆ ಸೂಚಿಸುತ್ತಾ ಇದ್ದರೆಂಬುದು ಈ ಭಾಷಣದ ಶ್ರೇಷ್ಠತೆಗೆ ತಕ್ಕುದಾದ ಸಾಕ್ಷ್ಯಾಧಾರವಾಗಿದೆ. ಲಾಹೋರಿನ ಪ್ರಸಿದ್ಧ ಇಂಗ್ಲಿಷ್ ಪತ್ರಿಕೆಯಾಗಿದ್ದ "ಸಿವಿಲ್ ಆ್ಯಂಡ್ ಮಿಲಿಟರಿ ಗಝೆಟ್" ಕ್ರೈಸ್ತರ ಮಾಲಿಕತ್ವದಲ್ಲಿ ಪ್ರಕಟವಾಗುತ್ತಿದ್ದರೂ ಕೇವಲ ಇದೊಂದೇ ಭಾಷಣದ ಕುರಿತು ಅತ್ಯಂತ ಹೆಚ್ಚು ಹೊಗಳಿ ಬರೆಯಿತು ಮತ್ತು ಇದೊಂದೇ ಭಾಷಣ ಪ್ರಸ್ತಾಪಿಸಲು ಅರ್ಹವೆಂದು ಹೇಳಿತು.

ಈ ಉಪನ್ಯಾಸ ಬರೆದವರು ಅಹ್ಮದಿಯಾ ಜಮಾಅತಿನ ಸ್ಥಾಪಕರಾದ ಹಝ್ರತ್ ಮಿರ್ಝಾ ಗ್ಹುಲಾಂ ಅಹ್ಮದ್ ಆಗಿದ್ದರು. ಈ ಭಾಷಣಕ್ಕಾಗಿ ಎರಡು ಗಂಟೆಯ ಸಮಯ ನಿಗದಿಗೊಳಿಸಲಾಗಿತ್ತು. ಆದರೆ ಭಾಷಣ ಈ ಅವಧಿಯಲ್ಲಿ ಪೂರ್ಣವಾಗಿ ಓದಲು ಸಾಧ್ಯವಾಗದ ಕಾರಣ ಸಮ್ಮೇಳನವನ್ನು ಒಂದು ದಿನ ಹೆಚ್ಚುವರಿಯಾಗಿ ನಡೆಸಲಾಯಿತು. "ಪಂಜಾಬ್ ಒಬ್ಸರ್ವರ್" ಎಂಬ ಪತ್ರಿಕೆ ಈ ಭಾಷಣದ ವಿಷಯದ ನಿರೂಪಣೆಯನ್ನು ಅನೇಕ ಕಾಲಮ್‌ಗಳಲ್ಲಿ ತುಂಬಿಸಿತು. "ಪೈಸ ಅಖ್‌ಬಾರ್", "ಚೌದವೀಂ ಸದೀ", "ಸಾದಿಖುಲ್ ಅಖ್‌ಬಾರ್", "ಮುಖ್‌ಬಿರೆ ದಖ್ಖನ್", "ಜನರಲ್ ವ ಗೌಹರ್ ಆಸಫೀ ಕಲ್ಕತ್ತ" ಮೊದಲಾದ ಪತ್ರಿಕೆಗಳು ಒಮ್ಮತದಿಂದ ಈ ಭಾಷಣದ ವಿಷಯದ ಬಗ್ಗೆ ಮೆಚ್ಚುಗೆ ಸೂಚಿಸಿ ಬರೆದುವು. ಮುಸ್ಲಿಮೇತರರು ಈ ಭಾಷಣದ ವಿಷಯ ನಿರೂಪಣೆ ಇತರ ಎಲ್ಲ ಭಾಷಣಗಳಿಗಿಂತ ಶ್ರೇಷ್ಠವೆಂದು ಸಮ್ಮತಿಸಿದರು. ಈ ಸರ್ವಧರ್ಮ ಸಮ್ಮೇಳನದ ಕಾರ್ಯದರ್ಶಿಯಾಗಿದ್ದ ಧನ್‌ಪತ್‌ರಾಯ್ ಬಿ.ಎ.,ಎಲ್.ಎಲ್.ಬಿ., ಪ್ಲೀಡರ್ ಚೀಫ್ ಕೋರ್ಟ್ ಪಂಜಾಬ್, ಸರ್ವಧರ್ಮ ಸಮ್ಮೇಳನದ ವರದಿಯಲ್ಲಿ ಹೀಗೆ ಬರೆದರು:

"ಪಂಡಿತ್ ಗೋವರ್ಧನ್ ದಾಸರ ಭಾಷಣದ ನಂತರ ಅರ್ಧ ಗಂಟೆಯ ವಿರಾಮವಿದ್ದಿತು. ವಿರಾಮ ವೇಳೆಯ ನಂತರ ಇಸ್ಲಾಮ್ ಧರ್ಮದ ಒಬ್ಬ ಪ್ರಸಿದ್ಧ ಪ್ರತಿನಿಧಿಯ ಭಾಷಣವಿದ್ದ ಕಾರಣದಿಂದ ಬಹುತೇಕ ಜನರು ತಮ್ಮ ಆಸನವನ್ನು ಬಿಟ್ಟೇಳಲಿಲ್ಲ. ಮಧ್ಯಾಹ್ನ ಒಂದೂವರೆ ಗಂಟೆಯಾಗಲು ಇನ್ನೂ ಬಹಳ ಸಮಯವಿರುವಾಗಲೇ ಇಸ್ಲಾಮಿಯಾ ಕಾಲೇಜಿನ ವಿಶಾಲವಾದ ಸಭಾಭವನ ಬೇಗ ಬೇಗನೆ ಜನರಿಂದ ತುಂಬಲು ತೊಡಗಿತು. ಕೆಲವೇ ನಿಮಿಷಗಳಲ್ಲಿ ಎಲ್ಲ ಆಸನಗಳು ಭರ್ತಿಯಾದುವು. ಆಗ ಅಂದಾಜು ಏಳರಿಂದ ಎಂಟು ಸಾವಿರದಷ್ಟು ಜನರು ಜಮಾಯಿಸಿದ್ದರು. ವಿವಿಧ ಧರ್ಮಗಳ ಮತ್ತು ವಿವಿಧ ಸಂಘಟನೆಗಳ ಪ್ರತಿಷ್ಠಿತ ಮತ್ತು ವಿದ್ಯಾಸಂಪನ್ನರಾದ ಜನರು ಅಲ್ಲಿ ಉಪಸ್ಥಿತರಾಗಿದ್ದರು. ಕುರ್ಚಿ ಮೇಜುಗಳು

ಮತ್ತು ಹಾಸುಗಂಬಳಿಗಳು ಧಾರಾಳವಾಗಿ ಒದಗಿಸಲ್ಪಟ್ಟಿದ್ದರೂ ನೂರಾರು ಜನರು ನಿಂತಿರಬೇಕಾಯಿತು. ಹಾಗೆ ನಿಂತುಕೊಂಡೇ ಭಾಷಣವನ್ನು ಆಲಿಸಿದವರಲ್ಲಿ ದೊಡ್ಡ ದೊಡ್ಡ ಪ್ರಮುಖ ವ್ಯಕ್ತಿಗಳು, ಪಂಜಾಬಿನ ಪ್ರತಿಷ್ಠಿತರು, ವಿದ್ವಾಂಸರು, ಬ್ಯಾರಿಸ್ಟರ್‌ಗಳು, ವಕೀಲರು, ಪ್ರೊಫೆಸರ್‌ಗಳು, ಎಕ್ಸ್‌ಟ್ರಾ ಅಸಿಸ್ಟೆಂಟ್‌ಗಳು, ಡಾಕ್ಟರ್‌ಗಳು, ಹಾಗೆ ಪ್ರತಿಯೊಂದು ಶಾಖೆಗೆ ಸೇರಿದ ಮೇಲ್ವರ್ಗದ ವಿವಿಧ ಜನರು ಅಲ್ಲಿ ಹಾಜರಿದ್ದರು. ಈ ಜನರು ಈ ರೀತಿ ಜಮಾಯಿಸುವುದು ಮತ್ತು ಅತ್ಯಂತ ಸಹನೆದೋರಿ ಉತ್ಸಾಹದಿಂದ ನಾಲ್ಕೈದು ಗಂಟೆ ಕಾಲ ನಿಂತು ಭಾಷಣ ಆಲಿಸಿದ್ದು ನಮ್ಮ ಪರಿಶುದ್ಧ ಆಂದೋಲನದ ಬಗ್ಗೆ ಅವರಿಗಿರುವ ಸಹಾನುಭೂತಿಯನ್ನು ಸ್ಪಷ್ಟವಾಗಿ ಸೂಚಿಸುತ್ತದೆ. ಉಪನ್ಯಾಸದ ಲೇಖಕ ಸ್ವತಃ ಸಮ್ಮೇಳನದಲ್ಲಿ ಹಾಜರಾಗಲಿಲ್ಲ. ಆದರೆ ಅವರು ತನ್ನ ಆಪ್ತ ಶಿಷ್ಯರಾಗಿದ್ದ ಮೌಲವಿ ಅಬ್ದುಲ್ ಕರೀಮ್ ಸಿಯಾಲ್‌ಕೋಟಿಯವರನ್ನು ಈ ಉಪನ್ಯಾಸವನ್ನು ಓದಲು ಕಳುಹಿಸಿದ್ದರು. ಈ ಭಾಷಣಕ್ಕೆ ಸಮ್ಮೇಳನ ಸಮಿತಿ ಎರಡು ಗಂಟೆ ಸಮಯ ನೀಡಿತ್ತು. ಆದರೆ ಸಮ್ಮೇಳನದ ಶ್ರೋತೃಗಳಲ್ಲಿ ಈ ಭಾಷಣದ ಬಗ್ಗೆ ಹೆಚ್ಚಿನ ಆಸಕ್ತಿಯಿರುವುದನ್ನು ಗಮನಿಸಿದ ಮೋಡರೇಟರ್‌ಗಳು ಈ ಭಾಷಣವನ್ನು ಓದಿ ಮುಗಿಸುವ ತನಕ ಸಭೆಯನ್ನು ಮುಂದುವರಿಸಲು ಅತ್ಯಂತ ಸಂತೋಷದಿಂದ ಸಮ್ಮತಿಸಿದರು. ಇದು ಸಭಾವಿಷ್ಟರ ಇಚ್ಛೆಗೆ ಅನುಸಾರವಾಗಿಯೇ ಇತ್ತು. ಈ ಭಾಷಣಕ್ಕೆ ನಿಗದಿಪಡಿಸಲಾದ ಎರಡು ಗಂಟೆಯ ಸಮಯ ಮುಗಿದಾಗ ಮುಂದಿನ ಭಾಷಣಗಾರ ಮೌಲವಿ ಅಬೂ ಯೂಸುಫ್ ಮುಬಾರಕ್ ಅಲಿ ತನಗೆ ನಿಗದಿಪಡಿಸಲಾದ ಸಮಯವನ್ನು ಈ ಭಾಷಣ ಓದಲಿಕ್ಕೆ ನೀಡಿದಾಗ ಶ್ರೋತೃಗಳು ಮತ್ತು ಮೋಡರೇಟರ್‌ಗಳು ಸಂತೋಷದಿಂದ ಮೌಲವಿ ಸಾಹೇಬರಿಗೆ ಕೃತಜ್ಞತೆ ಸೂಚಿಸಿದರು. ಸಮ್ಮೇಳನ ಸಾಯಂಕಾಲ ನಾಲ್ಕೂವರೆ ಗಂಟೆಗೆ ಮುಕ್ತಾಯವಾಗಬೇಕಾಗಿತ್ತು. ಆದರೆ ಎಲ್ಲರ ಅಭಿಲಾಷೆ ಪ್ರಕಾರ ಸಮ್ಮೇಳನವನ್ನು ಐದೂವರೆ ಗಂಟೆ ತನಕ ಮುಂದುವರಿಸಲಾಯಿತು. ಈ ಭಾಷಣ ಅಂದಾಜು ನಾಲ್ಕು ಗಂಟೆಗಳಷ್ಟು ಕಾಲ ಮುಂದುವರಿಯಿತು. ಇದು ಆರಂಭದಿಂದ ಮುಕ್ತಾಯದ ತನಕ ಒಂದೇ ರೀತಿಯಲ್ಲಿ ಜನರಿಗೆ ಆಸಕ್ತಿಯನ್ನು ಉಂಟುಮಾಡಿ ಅವರ ಮೆಚ್ಚಿಗೆಗೆ ಪಾತ್ರವಾಗಿತ್ತು."

ಜಮಾಅತ್ ಅಹ್ಮದಿಯಾದ ಸ್ಥಾಪಕರು ಈ ಸಮ್ಮೇಳನ ತೊಡಗುವ ಮೊದಲು ಕ್ರಿ.ಶ. 1896ರ ಡಿಸೆಂಬರ್ ದಿನಾಂಕ 21ರಂದು ಪ್ರಕಟಿಸಿದ ಒಂದು ಕರಪತ್ರದಲ್ಲಿ ತನ್ನ ಭಾಷಣ ಇತರ ಎಲ್ಲ ಭಾಷಣಗಳಿಗಿಂತ ಶ್ರೇಷ್ಠವೆಂದು ಗಣಿಸಲ್ಪಡುವುದೆಂದು ಬರೆದರು. ಅದು ಈ ರೀತಿಯಾಗಿದೆ:

# ಸತ್ಯಧರ್ಮ ಅನ್ವೇಷಕರಿಗೆ ಒಂದು ಶುಭವಾರ್ತೆ

ಸ್ವಾಮಿ ಶುಗನ್‌ಚಂದರ್ – ಸರ್ವಧರ್ಮ ಮಹಾ ಸಮ್ಮೇಳನದ ಸಂಘಟಕ – ತನ್ನ ಪ್ರಕಟಣೆಯಲ್ಲಿ, ಮುಸ್ಲಿಮರೂ ಕ್ರೈಸ್ತರೂ ಆರ್ಯಸಮಾಜದವರೂ ತಮ್ಮ ತಮ್ಮ ಧರ್ಮಗಳ ಶ್ರೇಷ್ಠತೆಗಳನ್ನು ಪ್ರತಿಪಾದಿಸುವ ರೀತಿಯ ಭಾಷಣಗಳನ್ನು ಸಮರ್ಥರಾದ ಧರ್ಮ ಪಂಡಿತರಿಂದ ಸಿದ್ಧಪಡಿಸಬೇಕೆಂದು ದೇವನಾಮದಲ್ಲಿ ವಿನಂತಿಸಿದ್ದಾರೆ. ದೇವನಾಮದಲ್ಲಿರುವ ಈ ಪ್ರಕಟಣೆಯನ್ನು ಗೌರವಿಸಿ ಅವರ ಇಚ್ಛೆಯನ್ನು ಈಡೇರಿಸಲಿಕ್ಕಾಗಿ ನಾನು ಸಿದ್ಧನಾಗಿದ್ದೇನೆಂಬ ವಿಚಾರವನ್ನು ಇದೋ ತಿಳಿಸುತ್ತಿದ್ದೇನೆ. ದೇವೇಚ್ಛೆಯಂತೆ ಆ ಸಮ್ಮೇಳನದಲ್ಲಿ ನನ್ನೊಂದು ಪ್ರಬಂಧ ಓದಲ್ಪಡುವುದು. ಇಸ್ಲಾಂ ದೇವನಾಮೋಚ್ಚಾರಣದಲ್ಲಿ ಕರೆಯಲ್ಪಡುವ ಕೆಲಸಕ್ಕೆ ಪರಿಪೂರ್ಣವಾದ ಅನುಸರಣೆ ತೋರಿಸಬೇಕೆಂದು ಕಲಿಸುವ ಒಂದು ಧರ್ಮವಾಗಿದೆ. ಆದರೆ ಆರ್ಯಸಮಾಜದವರು ಅವರ ಪರಮೇಶ್ವರನ ಮತ್ತು ಕ್ರೈಸ್ತ ಪಾದ್ರಿಗಳು ಅವರ ಯೇಸುಕ್ರಿಸ್ತನ ಮಹತ್ವವನ್ನು ಸಂರಕ್ಷಿಸಲಿಕ್ಕೆ ಆಸಕ್ತಿವುಳ್ಳವರೋ ಎಂದೂ ಸರ್ವೋನ್ನತನೂ ಸರ್ವೋಚ್ಚ ಮಹತ್ವಶಾಲಿಯೂ ಆದವನ ನಾಮದಲ್ಲಿರುವ ವಿಜ್ಞಾಪನೆಯನ್ನು ಗೌರವಿಸಲು ಅವರು ಸನ್ನದ್ಧರೋ ಎಂದೂ ನೋಡೋಣ.

ಲಾಹೋರ್ ಟೌನ್‌ಹಾಲ್‌ನಲ್ಲಿ[2] 1896 ಡಿಸೆಂಬರ್ 26, 27, 28 ಎಂಬೀ ದಿನಾಂಕಗಳಂದು ಜರಗಲಿರುವ ಈ ಸರ್ವಧರ್ಮ ಸಮ್ಮೇಳನದಲ್ಲಿ ಪವಿತ್ರ ಖುರ್‌ಆನಿನ ಶ್ರೇಷ್ಠತೆಗಳನ್ನೂ ಅದ್ಭುತ ಶಕ್ತಿಗಳನ್ನೂ ಪ್ರತಿಪಾದಿಸುವ ನನ್ನ ಒಂದು ಪ್ರಬಂಧ ಓದಲ್ಪಡುವುದು. ದೇವನ ವಿಶಿಷ್ಟ ನೆರವಿನಿಂದ ಬರೆಯಲ್ಪಟ್ಟ, ಮನುಷ್ಯ ಶಕ್ತಿಗೆ ಅತೀತವಾದ ಈ ಪ್ರಬಂಧ ಒಂದು ದೈವಿಕ ದೃಷ್ಟಾಂತವಾಗಿದೆ. ಪವಿತ್ರ ಖುರ್‌ಆನ್ ದೇವಪ್ರೋಕ್ತವಾದ ಒಂದು ದಿವ್ಯ ಗ್ರಂಥವೆಂದು ಸ್ಪಷ್ಟವಾಗಿ ರುಜುಪಡಿಸಲಿಕ್ಕೆ ಅರ್ಹವಾದ ತತ್ವರಹಸ್ಯಗಳೂ ಪರಮಾರ್ಥ ಜ್ಞಾನಗಳೂ ಇದರಲ್ಲಿ ಕ್ರೋಢೀಕರಿಸಲ್ಪಟ್ಟಿವೆ. ಅದರಲ್ಲಿ ಪ್ರತಿಪಾದಿಸಲ್ಪಟ್ಟಿರುವ ಐದು ಪ್ರಶ್ನೆಗಳ ಉತ್ತರವನ್ನು ಮೊದಲಿನಿಂದ ಕೊನೆಯವರೆಗೆ ಲಕ್ಷ್ಯವಿಟ್ಟು ಆಲಿಸುವ ಯಾರ ಹೃದಯದಲ್ಲೂ ಹೊಸದಾದ ಭಕ್ತಿ ವಿಶ್ವಾಸ ಮತ್ತು ಪ್ರಕಾಶ ಹುಟ್ಟುವುದು. ಅಷ್ಟೇ ಅಲ್ಲ, ಆತನಿಗೆ ದೇವನ ವಚನದ (ಪವಿತ್ರ ಖುರ್‌ಆನಿನ) ಒಂದು ವ್ಯಾಖ್ಯಾನ ಸಂಗ್ರಹ ಲಭಿಸುವುದು. ನನ್ನ ಈ ಪ್ರಬಂಧ ಮಾನವ ಸಹಜವಾದ ದೌರ್ಬಲ್ಯ ಮತ್ತು ಆತ್ಮಪ್ರಶಂಸೆಯಿಂದೆಲ್ಲ ಮುಕ್ತವಾಗಿದೆ.

ಜನರೊಡನೆ ಇರುವ ಅತಿ ಅನುಕಂಪದ ಕಾರಣದಿಂದ ಮಾತ್ರವೇ ಈ

---

2. ಟೌನ್‌ಹಾಲ್‌ನಲ್ಲಿ ಸ್ಥಳದ ಕೊರತೆ ಇದ್ದುದರಿಂದ ಇಸ್ಲಾಮಿಯಾ ಕಾಲೇಜ್ ಹಾಲ್‌ನಲ್ಲಿ ಸಮ್ಮೇಳನ ಜರಗಿತು. – ಅನುವಾದಕ

ಪ್ರಕಟಣೆಯನ್ನು ಬರೆದು ಪ್ರಕಟಿಸಲಿಕ್ಕೆ ನಾನು ಪ್ರೇರಿತನಾಗಿದ್ದೇನೆ. ಅಂದರೆ, ಅವರು ಪವಿತ್ರ ಖುರ್‌ಆನಿನ ಸೌಂದರ್ಯಪೂರ್ಣ ಮಹಿಮಾ ವಿಲಾಸಗಳನ್ನು ದರ್ಶಿಸುವಂತಾಗಲಿಕ್ಕೆ ಮತ್ತು ವಿರೋಧಿಗಳು ಯಾವ ರೀತಿ ತಪ್ಪಭಿಪ್ರಾಯದಲ್ಲಿ ಮುಳುಗಿದ್ದು ಅಂಧಕಾರವನ್ನು ಪ್ರೀತಿಸಿ ಪ್ರಕಾಶವನ್ನು ದ್ವೇಷಿಸುವವರೆಂದು ಎಲ್ಲರಿಗೂ ತಿಳಿಸಲಿಕ್ಕೋಸ್ಕರ ನನ್ನ ಪ್ರಬಂಧ ಬೇರೆಲ್ಲ ಪ್ರಬಂಧಗಳಿಗಿಂತಲೂ ಭಾಷಣಗಳಿಗಿಂತಲೂ ಮಿಗಿಲಾಗಿರುವುದೆಂದು ಸರ್ವಜ್ಞನಾದ ದೇವನು ನನಗೆ ದೈವಿಕ ಪ್ರಕಾಶದಿಂದ ಭರವಸೆಯಿತ್ತಿದ್ದಾನೆ. ಇತರ ಧರ್ಮೀಯರು ಆ ಸಂದರ್ಭದಲ್ಲಿ ಉಪಸ್ಥಿತರಿದ್ದು ಅದನ್ನು ಆರಂಭದಿಂದ ಕೊನೆಯವರೆಗೆ ಗಮನವಿಟ್ಟು ಶ್ರವಿಸಿದರೆ ಅವರು ಲಜ್ಜಿತರಾಗುವಂತೆ ಸತ್ಯ, ವಿವೇಕ ಮತ್ತು ಜ್ಞಾನದ ಪ್ರಭೆ ಅದರಲ್ಲಿ ಅಂತರ್ಲೀನವಾಗಿರುವುದು. ತತ್ತುಲ್ಯವಾದ ಶ್ರೇಷ್ಠತೆ ಕ್ರೈಸ್ತರಿಗಾಗಲಿ, ಆರ್ಯ ಸಮಾಜದವರಿಗಾಗಲಿ, ಸನಾತನ ಧರ್ಮೀಯರಿಗಾಗಲಿ ಬೇರೆ ಯಾವುದೇ ಧರ್ಮದವರಿಗಾಗಲಿ ತಮ್ಮ ಧರ್ಮಗ್ರಂಥಕ್ಕೆ ಇರುವುದಾಗಿ ರುಜುಪಡಿಸಲು ಸಾಧ್ಯವಿಲ್ಲ. ಏಕೆಂದರೆ, ಆ ದಿನದಂದು ದೇವನು ತನ್ನ ಪವಿತ್ರ ಗ್ರಂಥವಾದ ಖುರ್‌ಆನಿನ ಮಹಾತ್ಮೆಯನ್ನು ಬಹಿರಂಗಪಡಿಸಲು ನಿರ್ಧರಿಸಿದ್ದಾನೆ.

ಇದಕ್ಕೆ ಸಂಬಂಧಿಸಿ ನನಗೆ ಹೀಗೊಂದು ಆತ್ಮದರ್ಶನ ಉಂಟಾಗಿದೆ. ನನ್ನ ಭವನದ ಮೇಲೆ ದಿವ್ಯವಾದೊಂದು ಹಸ್ತ ಬಂದು ಬಡಿಯಿತು. ಆ ಕರಸ್ಪರ್ಶದಿಂದ ಆ ಗೃಹದಿಂದ ಕಣ್ಣು ಕುಕ್ಕುವ ಒಂದು ಪ್ರಕಾಶ ಹೊರಟು ಸುತ್ತುಮುತ್ತಲೆಲ್ಲ ವ್ಯಾಪಿಸಿತು. ಆ ಪ್ರಕಾಶ ನನ್ನ ಕೈಗಳ ಮೇಲೂ ಬಿತ್ತು. ಆಗ ನನ್ನ ಸಮೀಪವಿದ್ದ ಒಬ್ಬ ವ್ಯಕ್ತಿ اَللّٰهُ اَكْبَرُ خَرِبَتْ خَيْبَرُ "**ಅಲ್ಲಾಹು ಅಕ್ಬರ್ ಖರಿಬತ್ ಖೈಬರ್**" – "ಅಲ್ಲಾಹನು ಮಹೋನ್ನತನು, ಖೈಬರ್ ನಾಶವಾಯಿತು" ಎಂದು ಉಚ್ಚ ಸ್ವರದಲ್ಲಿ ಹೇಳುತ್ತಿದ್ದನು. ಈ ದರ್ಶನದ ತಾತ್ಪರ್ಯವೇನೆಂದರೆ: ಭವನ ಎಂಬುದರ ಅರ್ಥ ದಿವ್ಯವಾದ ಪ್ರಕಟನೆ ಅವತೀರ್ಣವಾಗುವ ಮತ್ತು ಪ್ರಕಾಶ ಭರಿತವಾಗುವ ನನ್ನ ಹೃದಯವಾಗಿದೆ. ಪ್ರಕಾಶವೆಂದರೆ ಖುರ್‌ಆನಿನ ಜ್ಞಾನವಾಗಿದೆ. ಅಸತ್ಯ ಹಾಗೂ ಧರ್ಮವಿರುದ್ಧವಾದ ಸಿದ್ಧಾಂತಗಳ ಕಲಬೆರಕೆಯಿಂದ ಕೂಡಿದ, ಮನುಷ್ಯನಿಗೆ ದೇವನ ಸ್ಥಾನವನ್ನು ನೀಡುವ ಅಥವಾ ದೇವನ ವಿಶೇಷ ಗುಣಗಳನ್ನು ಅವುಗಳ ಪೂರ್ಣತೆಯ ಸ್ಥಾನದಿಂದ ಕೆಳಗಿಳಿಸುವ ಸಕಲ ಮಿಥ್ಯಾ ಧರ್ಮಗಳನ್ನು 'ಖೈಬರ್' ಎಂಬ ಶಬ್ದ ಸೂಚಿಸುತ್ತದೆ. ಹೀಗೆ ನನ್ನ ಉಪನ್ಯಾಸ ವ್ಯಾಪಕವಾಗಿ ಪ್ರಚಾರಗೊಳ್ಳುವುದರ ಮೂಲಕ ಮಿಥ್ಯ ಧರ್ಮ ಮಾರ್ಗಗಳ ಅಸತ್ಯ ಬಯಲಾಗಿ, ಪವಿತ್ರ ಖುರ್‌ಆನಿನ ಸತ್ಯ ದಿನೇ ದಿನೇ ಪ್ರಚಾರಗೊಂಡು ಭೂಲೋಕದಲ್ಲೆಲ್ಲೂ ಹರಡುವುದೆಂದು ನನಗೆ ಸೂಚಿಸಲಾಯಿತು. ಕೊನೆಗೆ ಈ ಆಧ್ಯಾತ್ಮಿಕ ದರ್ಶನಾವಸ್ಥೆಯಿಂದ ನಾನು ಇನ್ನೊಂದು ಅನುಭೂತಿಯೆಡೆಗೆ ಕೊಂಡೊಯ್ಯಲ್ಪಟ್ಟು ದೇವ ಸಂಬೋಧನೆಯಿಂದ ಅನುಗ್ರಹಿಸಲ್ಪಟ್ಟೆನು.

ನನಗುಂಟಾದ ಆ ದಿವ್ಯವಾಣಿ ಹೀಗೆ:

اِنَّ اللّٰہَ مَعَکَ اِنَّ اللّٰہَ یَقُوْمُ اَیْنَمَا قُمْتَ

"ಇನ್ನಲ್ಲಾಹ ಮಅಕ ಇನ್ನಲ್ಲಾಹ ಯಕೂಮು ಅಯಿನಮಾ ಖುಮ್‌ತ."

"ಖಂಡಿತವಾಗಿಯೂ ಅಲ್ಲಾಹನು ನಿನ್ನೊಂದಿಗಿದ್ದಾನೆ; ನೀನು ನಿಲ್ಲುವಡೆ ಅಲ್ಲಾಹನು ನಿಲ್ಲುತ್ತಾನೆ." ಇದು ದೇವಸಹಾಯವನ್ನು ಸೂಚಿಸುವ ಒಂದು ಅಲಂಕಾರೋಕ್ತಿಯಾಗಿದೆ.

ಈ ಬಗ್ಗೆ ಇನ್ನೂ ಬರೆದು ಈ ಪ್ರಕಟಣೆಯನ್ನು ದೀರ್ಘಗೊಳಿಸಲು ನಾನು ಬಯಸುವುದಿಲ್ಲ. ಒಟ್ಟಾರೆ, ಎಲ್ಲ ಮಹನೀಯರು ತಮ್ಮ ಬುದ್ಧಿಗೆ ಮತ್ತು ಧರ್ಮವಿಶ್ವಾಸಕ್ಕೆ ಊಹಿಸಲು ಅಸಾಧ್ಯವಾದ ರೀತಿಯ ವಿಕಾಸ ಮತ್ತು ಪ್ರಕಾಶ ಪಡೆಯಲಿಕ್ಕಾಗಿ ಯುಕ್ತವಾದ ತತ್ವಜ್ಞಾನಗಳನ್ನು ಶ್ರವಿಸಲಿಕ್ಕಾಗಿ ಲಾಹೋರ್‌ನಲ್ಲಿ ಜರಗುವ ಆ ಧರ್ಮ ಸಮ್ಮೇಳನದಲ್ಲಿ ನಿಶ್ಚಿತ ದಿನಾಂಕಗಳಂದು ಉಪಸ್ಥಿತರಾಗಬೇಕಾಗಿ ನಾನು ವಿನಂತಿಸುತ್ತೇನೆ. ಸತ್ಪಥವನ್ನು ಅವಲಂಬಿಸುವವರ ಮೇಲೆ ಶಾಂತಿ ಇರಲಿ.

**ಮಿರ್ಝಾ ಗುಲಾಂ ಅಹ್ಮದ್**

ಖಾದಿಯಾನ್, 21 ಡಿಸೆಂಬರ್ 1896.

ಈ ಭಾಷಣದ ಕುರಿತು ಪತ್ರಿಕೆಗಳಲ್ಲಿ ಬಂದ ವಿಮರ್ಶೆಗಳು ಈ ಕೆಳಗಿನಂತಿವೆ:

**ಸಿವಿಲ್ ಆ್ಯಂಡ್ ಮಿಲಿಟರಿ ಗಝೆಟ್ (ಲಾಹೋರ್)** ಹೀಗೆ ಬರೆಯಿತು:

"ಈ ಸಮ್ಮೇಳನದಲ್ಲಿ ಶ್ರೋತೃಗಳ ಹೃತ್ಪೂರ್ವಕ ಆಸಕ್ತಿ ಮಿರ್ಝಾ ಗುಲಾಂ ಅಹ್ಮದ್‌ರ ಭಾಷಣದ ಕುರಿತಾಗಿತ್ತು. ಅವರು ಇಸ್ಲಾಮಿಗೆ ಕಾವಲು ಮತ್ತು ಸಹಾಯ ನೀಡುವುದರಲ್ಲಿ ಪರಿಪೂರ್ಣವಾಗಿ ನಿಪುಣರಾಗಿರುವರು. ಈ ಭಾಷಣವನ್ನು ಆಲಿಸಲು ದೂರ ಸ್ಥಳಗಳಿಂದಲೂ ಹತ್ತಿರದ ಪ್ರದೇಶಗಳಿಂದಲೂ ವಿವಿಧ ಪಂಥಗಳಿಗೆ ಸೇರಿದ ಜನರ ಬಹಳ ದೊಡ್ಡದಾದೊಂದು ಸಮೂಹ ಉತ್ಸಾಹದಿಂದ ಬಂದು ಜಮಾಯಿಸಿದ್ದಿತು. ಮಿರ್ಝಾ ಸಾಹೇಬರು ಸ್ವತಃ ಆಗಮಿಸದ ಕಾರಣ ಅವರ ಒಬ್ಬ ಯೋಗ್ಯ ಶಿಷ್ಯ ಮುನ್‌ಶೀ ಅಬ್ದುಲ್ ಕರೀಮ್ ಸಿಯಾಲ್‌ಕೋಟಿ ಭಾಷಣವನ್ನು ಓದಿದರು. ದಿನಾಂಕ 27ರಂದು ಮಧ್ಯಾಹ್ನ ಮೂರು ಗಂಟೆ ತನಕ ಈ ಭಾಷಣವನ್ನು ಜನರು ಬಹಳ ಆಸಕ್ತಿಯಿಂದ ಆಲಿಸುತ್ತಾ ಇದ್ದರು. ಆದರೆ ಆಗ ಒಂದು ಪ್ರಶ್ನೆಗೆ ಉತ್ತರ ಮಾತ್ರ ಮುಗಿದಿತ್ತು. ತನಗೆ ಹೆಚ್ಚಿನ ಸಮಯ ದೊರೆತರೆ ಉಳಿದ ಪ್ರಶ್ನೆಗಳಿಗೆ ಉತ್ತರವನ್ನು ಓದಿ ಹೇಳುವುದಾಗಿ ಮೌಲವಿ ಅಬ್ದುಲ್ ಕರೀಮ್ ಹೇಳಿದರು. ವ್ಯವಸ್ಥಾಪಕ ಸಮಿತಿ ಮತ್ತು

ಅಧ್ಯಕ್ಷರು ಈ ಸೂಚನೆಯನ್ನು ಅಂಗೀಕರಿಸಿದರು. ಹಾಗೆ ದಿನಾಂಕ 29ರಂದು ಸಹ ಸಮ್ಮೇಳನವನ್ನು ಮುಂದುವರಿಸಲಾಯಿತು."

**ಚೌದವೀಂ ಸದೀ (ರಾವಲ್ಪಿಂಡಿ)** ಹೀಗೆ ಬರೆಯಿತು:

"ಈ ಭಾಷಣಗಳಲ್ಲಿ ಅತ್ಯಂತ ಉತ್ತಮವಾದುದು ಮತ್ತು ಸಮ್ಮೇಳನದ ಚೈತನ್ಯಭರಿತ ಆತ್ಮದಂತಿದ್ದುದು ಮಿರ್ಝಾ ಗುಲಾಮ್ ಅಹ್ಮದ್ ಸಾಹೇಬರ ಭಾಷಣವಾಗಿತ್ತು. ಅದನ್ನು ಪ್ರಸಿದ್ಧ ವಾಗ್ಮಿ ಮೌಲವಿ ಅಬ್ದುಲ್ ಕರೀಮ್ ಸಿಯಾಲ್‌ಕೋಟಿ ಅತ್ಯಂತ ಮನೋಹರ ಮತ್ತು ಉತ್ತಮ ರೀತಿಯಲ್ಲಿ ಓದಿದರು. ಈ ಭಾಷಣ ಎರಡು ದಿನಗಳಲ್ಲಿ ಪರಿಪೂರ್ಣವಾಯಿತು. ಡಿಸೆಂಬರ್ ದಿನಾಂಕ 27ರಂದು ಅಂದಾಜು ನಾಲ್ಕು ಗಂಟೆಗಳಷ್ಟು ಕಾಲ ಮತ್ತು ದಿನಾಂಕ 29ರಂದು ಅಂದಾಜು ಎರಡು ಗಂಟೆಗಳಷ್ಟು ಕಾಲ, ಒಟ್ಟಿಗೆ ಆರು ಗಂಟೆಗಳಲ್ಲಿ ಈ ಭಾಷಣ ಪೂರ್ಣಗೊಂಡಿತು. ಇದು ದೊಡ್ಡ ಸೈಜಿನ ಕಾಗದದ ಅಂದಾಜು ನೂರು ಪುಟಗಳಷ್ಟು ಆಗಬಹುದು. ಈ ಭಾಷಣವನ್ನು ಮೌಲವಿ ಅಬ್ದುಲ್ ಕರೀಮ್ ಸಾಹೇಬರು ಓದಲು ಆರಂಭಿಸಿದರು. ಅವರು ಭಾಷಣ ಆರಂಭಿಸಿದ ಕೂಡಲೇ ಶ್ರೋತೃಗಳು ಅದರಿಂದ ಪ್ರಭಾವಿತರಾದರು. ವಾಕ್ಯ ವಾಕ್ಯಗಳ ಬಗ್ಗೆ ಪ್ರಶಂಸೆ ಸೂಚಕ ಉದ್ಗಾರಗಳು ಕೇಳಿಸಿದವು. ಕೆಲವು ಸಾರಿ ಒಂದೊಂದು ವಾಕ್ಯವನ್ನು ಪುನರಾವರ್ತಿಸಿ ಓದಲು ಶ್ರೋತೃಗಳು ಅಪೇಕ್ಷಿಸಿದರು. ನಾವು ನಮ್ಮ ಆಯುಷ್ಯದಲ್ಲಿ ಇಷ್ಟರವರೆಗೆ ಇಷ್ಟು ಮನೋಹರ ಮತ್ತು ರಮ್ಯವಾದ ಭಾಷಣ ಆಲಿಸಲಿಲ್ಲ. ಇತರ ಧರ್ಮಗಳ ಬಗ್ಗೆ ಭಾಷಣ ಮಾಡಿದವರು, ಕೇಳಲಾದ ಎಲ್ಲ ಪ್ರಶ್ನೆಗಳಿಗೆ ಉತ್ತರ ಕೂಡ ಕೊಟ್ಟಿರಲಿಲ್ಲ. ಬಹುತೇಕ ಭಾಷಣಗಾರರು ನಾಲ್ಕನೆಯ ಪ್ರಶ್ನೆಯ ಕುರಿತು ಮಾತ್ರ ವಿವರಿಸಿದರು. ಉಳಿದ ಪ್ರಶ್ನೆಗಳ ಬಗ್ಗೆ ಅವರು ಬಹಳ ಕಡಿಮೆ ಪ್ರಸ್ತಾಪಿಸಿದರು. ಹಲವು ಭಾಷಣಗಾರರು ಹೆಚ್ಚು ಹೆಚ್ಚಾಗಿ ಮಾತನಾಡುತ್ತಿದ್ದರು. ಆದರೆ ಆ ಮಾತುಗಳಲ್ಲಿ ಚೈತನ್ಯಭರಿತ ವಿಷಯ ಯಾವುದೂ ಇರಲಿಲ್ಲ. ಮಿರ್ಝಾ ಸಾಹೇಬರು ಈ ಎಲ್ಲ ಪ್ರಶ್ನೆಗಳಿಗೆ ಬೇರೆ ಬೇರೆಯಾಗಿ ಸವಿಸ್ತಾರವೂ ಪರಿಪೂರ್ಣವೂ ಆದ ಉತ್ತರಗಳನ್ನು ನೀಡಿದ್ದರು. ಅವರ ಭಾಷಣವನ್ನು ಶ್ರೋತೃಗಳು ಅತ್ಯಂತ ಗಮನವಿಟ್ಟು ಆಸಕ್ತಿಯಿಂದ ಆಲಿಸಿದರು. ಅದರಲ್ಲಿ ವ್ಯಕ್ತಪಡಿಸಲಾದ ವಿಚಾರಗಳು ಅಮೂಲ್ಯವೂ ಉನ್ನತ ಶ್ರೇಣಿಯವೂ ಆಗಿವೆ ಎಂದು ಅವರು ಮನವರಿಕೆ ಮಾಡಿಕೊಂಡರು."

"ನಾವು ಮಿರ್ಝಾ ಸಾಹೇಬರ ಶಿಷ್ಯರಲ್ಲ. ನಮಗೂ ಅವರಿಗೂ ಯಾವುದೇ ಸಂಬಂಧವಿಲ್ಲ. ಆದರೆ ನಾವು ನ್ಯಾಯದ ಕೊಲೆ ಎಂದೂ ಮಾಡಲಾರೆವು. ಉತ್ತಮ ಪ್ರಕೃತಿ ಮತ್ತು ಸರಿಯಾದ ಮನಸ್ಸಾಕ್ಷಿ ಅದನ್ನೆಂದೂ ಒಪ್ಪದು. ಮಿರ್ಝಾ ಸಾಹೇಬರು

ಎಲ್ಲ ಪ್ರಶ್ನೆಗಳ ಉತ್ತರವನ್ನು (ಯೋಗ್ಯವಾದ ರೀತಿಯಲ್ಲಿ) ಪವಿತ್ರ ಖುರ್‌ಆನ್ ಮೂಲಕ ನೀಡಿದರು ಹಾಗೂ ಇಸ್ಲಾಮಿನ ಎಲ್ಲ ದೊಡ್ಡ ದೊಡ್ಡ ಸಿದ್ಧಾಂತಗಳನ್ನು ಮತ್ತು ಸಂಬಂಧಿತ ವಿಚಾರಗಳನ್ನು ತಾರ್ಕಿಕವಾಗಿ ಮತ್ತು ತಾತ್ವಿಕ ಸಾಕ್ಷ್ಯಾಧಾರಗಳ ಮೂಲಕ ಅಲಂಕರಿಸಿದರು. ಮೊದಲು ತಾರ್ಕಿಕವಾಗಿ ದೈವಿಕ ವಿಷಯಗಳನ್ನು ಸಾಬೀತುಗೊಳಿಸುವುದು ಮತ್ತು ಅನಂತರ ಪವಿತ್ರ ಖುರ್‌ಆನಿನ ವಚನಗಳನ್ನು ಪುರಾವೆಯಾಗಿ ನೀಡುವುದು ಅದ್ಭುತ ವೈಭವವನ್ನು ತೋರಿಸುತ್ತಿತ್ತು."

"ಮಿರ್ಝಾ ಸಾಹೇಬರು ಪವಿತ್ರ ಖುರ್‌ಆನಿನ ವಿಚಾರಗಳ ತಾತ್ವಿಕ ವಿವರಣೆ ನೀಡಿದರಲ್ಲದೆ ಪವಿತ್ರ ಖುರ್‌ಆನಿನ ಶಬ್ದಗಳ ಭಾಷಾಶಾಸ್ತ್ರ ಪರವಾದ ವಿವರಣೆಯನ್ನೂ ಒಟ್ಟೊಟ್ಟಿಗೆ ನೀಡಿದರು. ಒಟ್ಟಾರೆ ಹೇಳುವುದಾದರೆ, ಮಿರ್ಝಾ ಸಾಹೇಬರ ಭಾಷಣ ಇತರ ಭಾಷಣಗಳಿಗಿಂತ ಪರಿಪೂರ್ಣವೂ ಪ್ರಭಾವಿಯೂ ಆಗಿತ್ತು. ಅದರಲ್ಲಿ ಅಸಂಖ್ಯಾತ ಸತ್ಯಾಂಶಗಳು, ಜಾಣ್ಮೆ ಮತ್ತು ದೈವಿಕ ರಹಸ್ಯಗಳ ಮುತ್ತುಗಳು ಹೊಳೆಯುತ್ತಿದ್ದುವು. ಅವರು ದೈವಿಕ ತತ್ವಜ್ಞಾನವನ್ನು ಹೇಗೆ ವಿವರಿಸಿದರೆಂದರೆ ಎಲ್ಲ ಧರ್ಮಗಳ ಅನುಯಾಯಿಗಳು ತಬ್ಬಿಬ್ಬಾದರು. ಯಾವ ವ್ಯಕ್ತಿಯ ಭಾಷಣದ ವೇಳೆಯಲ್ಲಿ ಕೂಡ ಮಿರ್ಝಾ ಸಾಹೇಬರ ಭಾಷಣದ ವೇಳೆಯಲ್ಲಿ ಜಮಾಯಿಸಿದಷ್ಟು ಜನರು ಸೇರಿರಲಿಲ್ಲ. ಸಭಾಭವನ ಮೇಲಿನಿಂದ ಕೆಳಗಿನ ತನಕ ಮಿರ್ಝಾ ಸಾಹೇಬರ ಭಾಷಣ ವೇಳೆಯಲ್ಲಿ ತುಂಬಿತ್ತು. ಶ್ರೋತೃಗಳು ಕಿವಿಗೊಟ್ಟು ಭಾಷಣವನ್ನು ಆಲಿಸುತ್ತಿದ್ದರು. ಮಿರ್ಝಾ ಸಾಹೇಬರ ಭಾಷಣದ ಶ್ರೋತೃಗಳು ಮತ್ತು ಇತರ ಭಾಷಣಗಾರರ ಶ್ರೋತೃಗಳ ವ್ಯತ್ಯಾಸವನ್ನು ಹೀಗೆ ಸೂಚಿಸಬಹುದು – ಮಿರ್ಝಾ ಸಾಹೇಬರ ಭಾಷಣದ ವೇಳೆಯಲ್ಲಿ ಜನರು ಜಮಾಯಿಸುತ್ತಿದ್ದುದು ಜೇನಿನ ಮೇಲೆ ಜೇನು ನೊಣಗಳು ಬಂದು ಬೀಳುವ ಹಾಗೆ. ಆದರೆ ಇತರ ಭಾಷಣಗಾರರ ಭಾಷಣದ ವೇಳೆ ಬಹುತೇಕ ಜನರು ನಿರಾಸಕ್ತರಾಗಿ ಕುಳಿತಲ್ಲಿಂದ ಎದ್ದು ಹೋಗುತ್ತಿದ್ದರು. ಮೌಲವಿ ಮುಹಮ್ಮದ್ ಹುಸೇನ್ ಬಟಾಲವಿಯ ಭಾಷಣ ಅತ್ಯಂತ ಸಾಮಾನ್ಯವಾಗಿತ್ತು. ನಾವು ಪ್ರತಿದಿನ ಆಲಿಸುತ್ತಾ ಇರುವ ಮುಲ್ಲಾಗಳ ವಿಚಾರಗಳಿಂದ ಅದು ತುಂಬಿತ್ತು. ಅದರಲ್ಲಿ ವಿಶೇಷವಾದ ವಿಚಾರಗಳೇನೂ ಇರಲಿಲ್ಲ. ಅವರ ಎರಡನೆಯ ಭಾಷಣದ ಸಮಯದಲ್ಲಿ ಅನೇಕ ಜನರು ಎದ್ದು ಹೋಗಿದ್ದರು. ಮೌಲವಿ ಸಾಹೇಬರಿಗೆ ತಮ್ಮ ಭಾಷಣ ಪೂರ್ಣಗೊಳಿಸಲು ಕೆಲವು ಮಿನಿಟುಗಳಷ್ಟು ಹೆಚ್ಚಿನ ಸಮಯ ಕೂಡ ದೊರಕಲಿಲ್ಲ."

**(ಚೌದವೀಂ ಸದೀ, ರಾವಲ್ಪಿಂಡಿ 1–2–1897)**

**ಜನರಲ್ ವ ಗೌಹರ್ ಆಸಫೀ (ಕಲ್ಕತ್ತ)**

ಈ ಪತ್ರಿಕೆಯ 24–1–1897ರ ಸಂಚಿಕೆಯಲ್ಲಿ ಲಾಹೋರಿನ ಸರ್ವಧರ್ಮ ಸಮ್ಮೇಳನ ಮತ್ತು ಫತ್‌ಹೆ ಇಸ್ಲಾಮ್ (ಇಸ್ಲಾಮಿನ ವಿಜಯ) ಎಂಬ ಎರಡು ಶೀರ್ಷಿಕೆಗಳ ಕೆಳಗೆ ಹೀಗೆ ಬರೆಯಲಾಗಿತ್ತು:

"ಈ ಸಮ್ಮೇಳನದ ಕಾರ್ಯಕ್ರಮದ ಬಗ್ಗೆ ಬರೆಯುವ ಮೊದಲು ನಾವು ಒಂದು ವಿಷಯ ಸ್ಪಷ್ಟಗೊಳಿಸಲು ಬಯಸುತ್ತೇವೆ. ಈ ಸರ್ವಧರ್ಮ ಸಮ್ಮೇಳನದಲ್ಲಿ ಇಸ್ಲಾಮಿನ ಪ್ರತಿನಿಧಿಯಾಗಿ ಭಾಗವಹಿಸಲು ಅತ್ಯಂತ ಅರ್ಹತೆ ಪಡೆದ ವ್ಯಕ್ತಿ ಯಾರೆಂಬ ಬಗ್ಗೆ ನಮ್ಮ ಪತ್ರಿಕೆಯಲ್ಲಿ ಈ ಮೊದಲು ಚರ್ಚಿಸಲಾಗಿದೆ. ನಮ್ಮ ಒಬ್ಬ ಗೌರವಾನ್ವಿತ ವರದಿಗಾರ ಪೂರ್ವಗ್ರಹ ಪೀಡಿತನಾಗದೆ ಮತ್ತು ಸತ್ಯವನ್ನು ಮುಂದಿರಿಸಿಕೊಂಡು ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ (ರಈಸೇ ಖಾದಿಯಾನ್) ಅವರನ್ನು ತನ್ನ ಅಭಿಪ್ರಾಯದ ಪ್ರಕಾರ ಆಯ್ಕೆ ಮಾಡಿದ್ದರು. ಇದೇ ರೀತಿಯ ಅಭಿಪ್ರಾಯ ನಮ್ಮ ಇನ್ನೊಬ್ಬ ಗೌರವಾನ್ವಿತ ಸ್ನೇಹಿತರು ಸೂಚಿಸಿದ್ದರು. ಜನಾಬ್ ಮೌಲವಿ ಸಯ್ಯಿದ್ ಮುಹಮ್ಮದ್ ಫಖ್ರುದ್ದೀನ್ ಫಖ್‌ರ್ ತನ್ನ ಸ್ವತಂತ್ರ ಅಭಿಪ್ರಾಯವನ್ನು ಜನರ ಮುಂದಿರಿಸಿದ್ದರು. ಅವರು ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಸಾಹೇಬ್ ಮತ್ತು ಜನಾಬ್ ಸರ್ ಸಯ್ಯಿದ್ ಅಹ್ಮದ್ ಖಾನ್‌ರ (ಅಲೀಗಢ್) ಹೆಸರುಗಳನ್ನು ಸೂಚಿಸಿದ್ದರು. ಅಲ್ಲದೆ ಕೆಲವರು ಈ ಕೆಳಗಿನ ಹೆಸರುಗಳನ್ನು ಸಹ ಸೂಚಿಸಿದ್ದರು: ಮೌಲವಿ ಅಬೂ ಸಈದ್ ಮುಹಮ್ಮದ್ ಹುಸೇನ್ ಸಾಹೇಬ್ ಬಟಾಲವಿ, ಜನಾಬ್ ಮೌಲವಿ ಹಾಜಿ ಸಯ್ಯಿದ್ ಮುಹಮ್ಮದ್ ಅಲಿ ಸಾಹೇಬ್ ಕಾನ್‌ಪುರಿ, ಮೌಲವಿ ಅಹ್ಮದ್ ಹುಸೇನ್ ಸಾಹೇಬ್ ಅಝೀಮಾಬಾದಿ. ನಮ್ಮ ಸ್ಥಳೀಯ ಪತ್ರಿಕೆಯ ಒಬ್ಬ ವರದಿಗಾರರು ತಫ್ಸೀರ್ ಹಖ್ಖಾನಿಯ ಲೇಖಕ ಮೌಲವಿ ಅಬ್ದುಲ್ ಹಖ್ ಸಾಹೇಬ್ ದೆಹ್ಲವಿಯವರ ಹೆಸರನ್ನು ಸಹ ಈ ಕಾರ್ಯಕ್ಕಾಗಿ ಸೂಚಿಸಿದ್ದರು."

ಮೇಲಿನಂತೆ ಬರೆದ ನಂತರ ಸ್ವಾಮಿ ಶುಗನ್ ಚಂದರ್‌ರ ಕರಪತ್ರದ ಒಂದು ಭಾಗವನ್ನು ಉಲ್ಲೇಖಿಸಿ, ಆ ಬಳಿಕ ಹೀಗೆ ಪತ್ರಿಕೆಯಲ್ಲಿ ಬರೆಯಲಾಗಿದೆ:

"ಈ ಸಮ್ಮೇಳನದ ಬಗ್ಗೆ ಕರಪತ್ರ ಮೊದಲಾದುವುಗಳನ್ನು ನೋಡಿದ ನಂತರ ಮತ್ತು ಆಹ್ವಾನಗಳು ತಲುಪಿದ ನಂತರ ಹಿಂದೂಸ್ಥಾನದ ಮತ ವಿದ್ವಾಂಸರು ಇಸ್ಲಾಮ್ ಧರ್ಮದ ಬಗ್ಗೆ ವಾದಿಸಲು ಹೇಗೆ ಉತ್ಸಾಹಭರಿತರಾದರು, ಅವರು ಇಸ್ಲಾಮಿಗಾಗಿ ವಾದಿಸಲು ಹೇಗೆ ಸನ್ನದ್ಧರಾದರು ಮತ್ತು ಸಾಕ್ಷ್ಯಾಧಾರಗಳ ಮೂಲಕ ಪವಿತ್ರ ಖುರ್‌ಆನಿನ ಶ್ರೇಷ್ಠತೆಯನ್ನು ಅನ್ಯ ಧರ್ಮೀಯರ ಹೃದಯಗಳಲ್ಲಿ ಸ್ಥಾಪಿಸಲು ಹೇಗೆ ಕಾರ್ಯೋನ್ಮುಖರಾದರು ಎಂಬುದು ತಿಳಿಯಬೇಕಾಗಿದೆ."

"ಸಮ್ಮೇಳನದ ಕಾರ್ಯನಿರ್ವಾಹಕರು ವಿಶಿಷ್ಟವಾಗಿ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಸಾಹೇಬರನ್ನು ಮತ್ತು ಸರ್ ಸಯ್ಯಿದ್ ಅಹ್ಮದ್ ಸಾಹೇಬರನ್ನು ಈ ಸಮ್ಮೇಳನದಲ್ಲಿ ಭಾಗವಹಿಸಲು ಆಹ್ವಾನಿಸಿದ್ದರೆಂದು ನಮಗೆ ವಿಶ್ವಾಸಾರ್ಹ ಮೂಲಗಳಿಂದ ತಿಳಿದು ಬಂದಿದೆ. ಹಝ್ರತ್ ಮಿರ್ಝಾ ಸಾಹೇಬರಿಗೆ ಅನಾರೋಗ್ಯದ ಕಾರಣದಿಂದ ಸ್ವತಃ ಸಮ್ಮೇಳನದಲ್ಲಿ ಭಾಗವಹಿಸಲು ಸಾಧ್ಯವಾಗಲಿಲ್ಲ. ಆದರೆ ಅವರು ತಮ್ಮ ಪ್ರಬಂಧವನ್ನು ಬರೆದು ಅದನ್ನು ಓದಲು ತಮ್ಮ ಆಪ್ತ ಶಿಷ್ಯ ಮೌಲವಿ ಅಬ್ದುಲ್ ಕರೀಮ್ ಸಿಯಾಲ್‌ಕೋಟಿಯವರನ್ನು ಕಳುಹಿಸಿದರು. ಆದರೆ ಸರ್ ಸಯ್ಯಿದ್ ಸಮ್ಮೇಳನದಲ್ಲಿ ಭಾಗವಹಿಸಲೂ ಇಲ್ಲ; ಪ್ರಬಂಧ ಕಳುಹಿಸಲೂ ಇಲ್ಲ. ಇದು ಅವರು ತುಂಬಾ ವೃದ್ಧರಾದ ಕಾರಣದಿಂದ ಅಥವಾ ಇಂತಹ ಸಮ್ಮೇಳನಗಳಲ್ಲಿ ಭಾಗವಹಿಸಲು ಶಕ್ತಿಯಿಲ್ಲದುದರಿಂದಲ್ಲ. ಅಥವಾ ಮೀರತ್‌ನಲ್ಲಿ ಎಜ್ಯುಕೇಶನಲ್ ಕಾನ್‌ಫರೆನ್ಸ್ ಜರಗುವುದು ಇದೇ ದಿನಗಳಲ್ಲಿ ನಿಶ್ಚಯಿಸಲಾದುದರಿಂದಲೂ ಅಲ್ಲ. ಇದರ ಮೂಲ ಕಾರಣ ಇದಾಗಿತ್ತು: ಧಾರ್ಮಿಕ ಸಮ್ಮೇಳನಗಳು ಅವರಿಗೆ ಲಕ್ಷಿಸಲು ಯೋಗ್ಯವಾಗಿರಲಿಲ್ಲ. ಅವರು ತಮ್ಮ ಪತ್ರದಲ್ಲಿ, ಅವರು ಪ್ರವಚನಕಾರನಾಗಲೀ ಉಪದೇಶಕನಾಗಲೀ ಮೌಲವಿಯಾಗಲೀ ಅಲ್ಲವೆಂದು ಸ್ಪಷ್ಟಪಡಿಸಿರುವರು. ಧಾರ್ಮಿಕ ಸಮ್ಮೇಳನದಲ್ಲಿ ಭಾಗವಹಿಸುವ ಕೆಲಸ ಪ್ರವಚನಕಾರರದ್ದು ಮತ್ತು ಉಪದೇಶಕರದ್ದಾಗಿದೆ ಎಂದು ಅದರಲ್ಲಿ ಸ್ಪಷ್ಟವಾಗಿ ಬರೆದಿರುವರು. (ನಾವು ಆ ಪತ್ರವನ್ನು ನಮ್ಮ ಪತ್ರಿಕೆಯಲ್ಲಿ ಮುಂದೆ ಯಾವಾಗಲಾದರೂ ಪ್ರಕಟಿಸುವೆವು. (ಇನ್‌ಶಾ ಅಲ್ಲಾಹ್)."

"ಸಮ್ಮೇಳನದ ಕಾರ್ಯಕ್ರಮಗಳನ್ನು ಕಾಣುವುದರ ಮೂಲಕ ಮತ್ತು ಅನ್ವೇಷಣೆ ಮಾಡುವ ಮೂಲಕ ತಿಳಿಯುವುದೇನೆಂದರೆ, ಜನಾಬ್ ಮೌಲವಿ ಸಯ್ಯಿದ್ ಮುಹಮ್ಮದ್ ಅಲಿ ಕಾನ್‌ಪುರಿ, ಜನಾಬ್ ಮೌಲವಿ ಅಬ್ದುಲ್ ಹಖ್ ದೆಹ್ಲವಿ, ಜನಾಬ್ ಮೌಲವಿ ಅಹ್ಮದ್ ಹುಸೈನ್ ಅಝೀಮಾಬಾದಿ ಈ ಸಮ್ಮೇಳನದ ಕುರಿತು ಉತ್ಸಾಹಭರಿತ ಯಾವುದೇ ಲಕ್ಷ್ಯ ನೀಡಲಿಲ್ಲ. ನಮ್ಮ ವಿದ್ವಾಂಸರ ಪವಿತ್ರ ಸಂಘಕ್ಕೆ ಸೇರಿದ ಬೇರೆ ಯಾವುದೇ ಯೋಗ್ಯ ವ್ಯಕ್ತಿ ತನ್ನ ಪ್ರಬಂಧ ಓದಲು ಅಥವಾ ಓದಿಸಲು ದೃಢನಿರ್ಧಾರ ಮಾಡಲಿಲ್ಲ. ಹೌದು! ಒಬ್ಬಿಬ್ಬರು ವಿದ್ವಾಂಸರು ಬಹಳ ಧೈರ್ಯ ಹೊಂದಿ, 'ನಾವು ಅದರಲ್ಲಿ ಇಲ್ಲ' ಎಂದು ಘೋಷಿಸಿದರು. ಅವರು ಸಮ್ಮೇಳನದಲ್ಲಿ ಪ್ರಸ್ತಾಪಿಸಲಾದ ವಿಷಯಗಳ ಬಗ್ಗೆ ಯಾವುದೇ ಅಭಿಪ್ರಾಯ ಹೇಳಲಿಲ್ಲ. ಅಥವಾ ಮನಸ್ಸಿಗೆ ತೋಚಿದಂತೆ ಏನಾದರೂ ಅಸಂಬದ್ಧ ಮಾತು ಹೇಳಿದರು. ಈ ಬಗ್ಗೆ ನಮ್ಮ ವರದಿಯಿಂದ ಮುಂದೆ ಇದು ಸ್ಪಷ್ಟವಾಗುವುದು."

"ಸಮ್ಮೇಳನದ ಕಾರ್ಯಕ್ರಮದಿಂದ ಸಾಬೀತಾಗುವುದೇನೆಂದರೆ, ಖಾದಿಯಾನಿನ ಮುಂದಾಳು ಆಗಿರುವ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಸಾಹೇಬರು ಮಾತ್ರ ಈ

ಸ್ಪರ್ಧೆಯ ಅಂಗಣದಲ್ಲಿ ಇಸ್ಲಾಮಿನ ಪಹಿಲ್ವಾನರಾಗಿ ಪರಿಪೂರ್ಣವಾಗಿ ತಮ್ಮ ಕರ್ತವ್ಯ ನಿರ್ವಹಿಸಿದರು. ಅವರು ತಮ್ಮನ್ನು ಆಯ್ಕೆ ಮಾಡಿದವರ ಭರವಸೆಯನ್ನು ಈಡೇರಿಸಿದರು. ಇಸ್ಲಾಮಿನ ಪ್ರತಿನಿಧಿಯಾಗಿ ಆಯ್ಕೆ ಮಾಡಲು ಪೆಶಾವರ, ರಾವಲ್ಪಿಂಡಿ, ಝೀಲಮ್, ಶಾಹ್‌ಪುರ್, ಭೇರ, ಖುಶಾಬ್, ಸಿಯಾಲ್‌ಕೋಟ್, ಜಮ್ಮು, ವಝೀರಾಬಾದ್, ಲಾಹೋರ್, ಅಮೃತಸರ, ಗುರುದಾಸಪುರ, ಲುಧಿಯಾನ, ಶಿಮ್ಲಾ, ದೆಹಲಿ, ಅಂಬಾಲ, ಪಟಿಯಾಲ, ಡೇರಡೂನ್, ಅಲಾಹಾಬಾದ್, ಮದ್ರಾಸ್, ಬೊಂಬಾಯಿ, ಹೈದರಾಬಾದ್ ದಖ್ಖನ್, ಬೆಂಗಳೂರು ಮೊದಲಾದ ಪ್ರದೇಶಗಳ ವಿವಿಧ ಇಸ್ಲಾಮೀ ಪಂಗಡಗಳು ಅವರ ಹೆಸರನ್ನು ಸೂಚಿಸಿದ್ದವು. ಈ ಸಮ್ಮೇಳನದಲ್ಲಿ ಹಝ್ರತ್ ಮಿರ್ಝಾ ಸಾಹೇಬರ ಈ ಪ್ರಬಂಧವಿಲ್ಲದೆ ಇರುತ್ತಿದ್ದರೆ ಮುಸ್ಲಿಮರು ಮುಸ್ಲಿಮೇತರರ ಮುಂದೆ ಅಪಮಾನಿತರೂ ಲಜ್ಜಿತರೂ ಆಗುತ್ತಿದ್ದರೆಂಬುದು ಒಂದು ಸತ್ಯ ಸಂಗತಿಯಾಗಿದೆ. ಅಲ್ಲಾಹನ ಶಕ್ತಿಶಾಲಿ ಕೈ ಪವಿತ್ರ ಇಸ್ಲಾಮ್ ಧರ್ಮವನ್ನು ಕೆಳಗೆ ಬೀಳುವುದರಿಂದ ರಕ್ಷಿಸಿತು. ಇಸ್ಲಾಮಿಗೆ ಈ ಭಾಷಣದ ಮೂಲಕ ಎಂತಹ ಜಯ ಲಭಿಸಿತೆಂದರೆ ಇಸ್ಲಾಮಿನ ಹಿತೈಷಿಗಳು ಮಾತ್ರವಲ್ಲ, ವಿರೋಧಿಗಳು ಸಹ ಸಹಜ ಉತ್ಸಾಹದಿಂದ, 'ಈ ಭಾಷಣ ಇತರ ಎಲ್ಲ ಭಾಷಣಗಳಿಗಿಂತ ಶ್ರೇಷ್ಠವಾಗಿದೆ' ಎಂದು ಉದ್ಗರಿಸಿದರು. ಈ ಭಾಷಣ ಓದಿ ಮುಗಿಸಿದ ನಂತರ ಇಸ್ಲಾಮಿನ ವಿರೋಧಿಗಳ ಬಾಯಿಯಿಂದ, 'ಈಗ ಇಸ್ಲಾಮಿನ ನೈಜ ಸ್ವರೂಪ ಪ್ರಕಟವಾಯಿತು. ಇಸ್ಲಾಮಿಗೆ ಜಯ ಲಭಿಸಿತು' ಎಂಬ ಮಾತು ಹೊರಟಿತು. ಹಝ್ರತ್ ಮಿರ್ಝಾ ಸಾಹೇಬರ ಆಯ್ಕೆ ಹೀಗೆ ಅರ್ಹವೆಂದು ಸಾಬೀತಾಯಿತು. ಅವರ ಆಯ್ಕೆಯ ವಿರುದ್ಧ ಹೇಳಲು ಏನೂ ಸಾಧ್ಯವಿರಲಿಲ್ಲ. ಅವರು ನಮ್ಮ ಅಭಿಮಾನಕ್ಕೆ ಹೇತುವಾದರು. ಅವರ ಪ್ರಬಂಧದಲ್ಲಿ ಇಸ್ಲಾಮಿನ ವೈಭವ ಪ್ರಕಟವಾಗಿದೆ. ಅದರಲ್ಲಿ ಇಸ್ಲಾಮಿನ ಮಹಿಮೆ ಮತ್ತು ಸತ್ಯ ತುಂಬಿದೆ."

"ಇದು ಹಿಂದೂಸ್ಥಾನದ ಎರಡನೆಯ ಸರ್ವಧರ್ಮ ಮಹಾ ಸಮ್ಮೇಳನವಾಗಿತ್ತು. ಆದರೆ ಈ ಸಮ್ಮೇಳನ ಹಿಂದೂಸ್ಥಾನದ ಇತರ ಎಲ್ಲ ಸಮ್ಮೇಳನಗಳನ್ನು ನಿಷ್ಪ್ರಭೆಗೊಳಿಸಿತು. ಹಿಂದೂಸ್ಥಾನದ ವಿವಿಧ ನಗರಗಳ ಪ್ರತಿಷ್ಠಿತ ವ್ಯಕ್ತಿಗಳು ಈ ಸಮ್ಮೇಳನದಲ್ಲಿ ಉಪಸ್ಥಿತರಿದ್ದರು. ನಮ್ಮ ಮದ್ರಾಸ್ ಪ್ರಾಂತ್ಯದವರು ಸಹ ಇದರಲ್ಲಿ ಭಾಗವಹಿಸಿದ್ದರು ಎಂದು ಹೇಳಲು ನಾವು ಸಂತೋಷಪಡುತ್ತೇವೆ. ಸಮ್ಮೇಳನದ ಬಗ್ಗೆ ಆಸಕ್ತಿ ಎಷ್ಟು ಹೆಚ್ಚಾಯಿತೆಂದರೆ ಪ್ರಕಟಿಸಲಾದ ಮೂರು ದಿನಗಳ ಕಾರ್ಯಕ್ರಮಗಳನ್ನು ಇನ್ನೊಂದು ದಿನದ ತನಕ ಮುಂದುವರಿಸಲಾಯಿತು. ಸಮ್ಮೇಳನ ಜರಗಿಸಲು ವ್ಯವಸ್ಥಾಪಕ ಸಮಿತಿ ಲಾಹೋರಿನ ಅತ್ಯಂತ ದೊಡ್ಡ ಸಭಾ ಭವನವಾದ ಇಸ್ಲಾಮಿಯಾ ಕಾಲೇಜಿನ ಸಭಾಭವನವನ್ನು ಆಯ್ಕೆ ಮಾಡಿತು. ಆದರೆ ಜನಜಂಗುಳಿ ಎಷ್ಟು ಹೆಚ್ಚು ಇತ್ತೆಂದರೆ ಸಭಾಭವನದ ವೈಶಾಲ್ಯ

ಅದಕ್ಕೆ ಸಾಕಾಗಲಿಲ್ಲ. ಈ ಸಮ್ಮೇಳನದಲ್ಲಿ ಪಂಜಾಬಿನ ಪ್ರಮುಖರಲ್ಲದೆ ಅಲಾಹಾಬಾದ್‌ನ ಚೀಫ್‌ಕೋರ್ಟ್ ಮತ್ತು ಹೈಕೋರ್ಟಿನ ಜಡ್ಜರಾದ ಬಾಬೂ ಪ್ರತೂಲ್ ಚಂದರ್ ಮತ್ತು ಮಿಸ್ಟರ್ ಬ್ಯಾನರ್ಜಿ ಅತ್ಯಂತ ಸಂತೋಷದಿಂದ ಭಾಗವಹಿಸಿದ್ದುದು ಈ ಸಮ್ಮೇಳನದ ಮಹತ್ವವನ್ನು ಸಾಬೀತುಗೊಳಿಸುತ್ತದೆ."

ಲಾಹೋರಿನ ಸರ್ವಧರ್ಮ ಮಹಾ ಸಮ್ಮೇಳನದ ವರದಿಯಲ್ಲಿ ಈ ಭಾಷಣ ಸಂಪೂರ್ಣವಾಗಿ ಮೊತ್ತಮೊದಲು ಪ್ರಕಟವಾಯಿತು. ಅಹ್ಮದಿಯಾ ಜಮಾಅತ್ ಈ ಭಾಷಣವನ್ನು ಉರ್ದುವಿನಲ್ಲಿ "ಇಸ್ಲಾಮೀ ಉಸೂಲ್ ಕೀ ಫಿಲಾಸಫೀ" ಎಂಬ ಶೀರ್ಷಿಕೆಯಲ್ಲಿ ಪುಸ್ತಕ ರೂಪವಾಗಿ ಅನೇಕ ಬಾರಿ ಪ್ರಕಟಿಸಿದೆ. ಇಂಗ್ಲಿಷ್ ಆವೃತ್ತಿಗಳು ಸಹ ಅನೇಕ ಬಾರಿ ಮುದ್ರಿತವಾಗಿವೆ. ಫ್ರೆಂಚ್, ಡಚ್, ಸ್ಪಾನಿಶ್, ಅರಬಿ, ಜರ್ಮನ್ ಮೊದಲಾದ ಭಾಷೆಗಳಲ್ಲಿ ಸಹ ಇದರ ಭಾಷಾಂತರಗಳು ಪ್ರಕಟವಾಗಿವೆ. ಈ ಭಾಷಣದ ಬಗ್ಗೆ ವಿದೇಶಿ ಪತ್ರಿಕೆಗಳು ಮತ್ತು ನಿಯತಕಾಲಿಕೆಗಳ ಸಂಪಾದಕರು ಸಹ ಅತ್ಯಂತ ಉತ್ತಮ ವಿಮರ್ಶೆ ಬರೆದಿದ್ದಾರೆ. ಪಾಶ್ಚಿಮಾತ್ಯ ಚಿಂತಕರೂ ಈ ಪುಸ್ತಕದ ಬಗ್ಗೆ ಬಹಳ ಮೆಚ್ಚಿಗೆ ಸೂಚಿಸಿ ಬರೆದಿದ್ದಾರೆ. ಉದಾಹರಣೆಗೆ:

1. **"ಬ್ರಿಸ್ಟಲ್ ಟೈಮ್ಸ್ ಆ್ಯಂಡ್ ಮಿರರ್"** ಹೀಗೆ ಬರೆಯಿತು: "ಪಾಶ್ಚಿಮಾತ್ಯ ರಾಷ್ಟ್ರಗಳನ್ನು ಈ ರೀತಿ ಸಂಬೋಧಿಸುತ್ತಿರುವವರು ನಿಶ್ಚಯವಾಗಿಯೂ ಒಬ್ಬ ಸಾಮಾನ್ಯ ವ್ಯಕ್ತಿಯಲ್ಲ."

2. **"ಸ್ಪಿರಿಚ್ಯುವಲ್ ಜರ್ನಲ್, ಬೋಸ್ಟನ್"** ಹೀಗೆ ಬರೆಯಿತು: "ಇದು ಶುದ್ಧ ಸುವಾರ್ತೆಯಾಗಿದೆ."

3. **"ತಿಯೋಸಫಿಕಲ್ ಬುಕ್ ನೋಟ್ಸ್"** ಹೀಗೆ ಬರೆಯಿತು: "ಇದು ಮುಹಮ್ಮದರ ಧರ್ಮದ ಬಗ್ಗೆ ಇರುವ ಅತ್ಯುತ್ತಮ ಮತ್ತು ಅತ್ಯಂತ ಆಕರ್ಷಕ ನಿರೂಪಣೆಯಾಗಿದೆ."

4. **"ದಿ ಇಂಡಿಯನ್ ರಿವ್ಯೂ"** ಹೀಗೆ ಬರೆಯಿತು: "ಈ ಗ್ರಂಥದಲ್ಲಿ ಪ್ರಕಟಿಸಲಾದ ವಿಚಾರಗಳು ಸ್ಪಷ್ಟವೂ ಪರಿಪೂರ್ಣವೂ ಜಾಣ್ಮೆಭರಿತವೂ ಆಗಿದ್ದು ಓದುವವನ ಬಾಯಿಯಿಂದ ಸಹಜವಾಗಿ ಅದರ ಬಗ್ಗೆ ಪ್ರಶಂಸೆ ಹೊರಬರುವಂತೆ ಇದೆ."

5. **"ದಿ ಮುಸ್ಲಿಮ್ ರಿವ್ಯೂ"** ಹೀಗೆ ಬರೆಯಿತು: "ಈ ಗ್ರಂಥವನ್ನು ಗಮನವಿಟ್ಟು ಓದಿದರೆ ಇಸ್ಲಾಮಿನ ಕುರಿತು ಇರುವ ಅನೇಕ ತಪ್ಪು ಗ್ರಹಿಕೆಗಳು ದೂರ ಸರಿಯುವುವು."

(ಮೇಲಿನ ಎಲ್ಲ ಉಲ್ಲೇಖಗಳನ್ನು ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹೇಬ್ ಎಂ.ಎ. ಅವರ ಗ್ರಂಥವಾದ "ಸಿಲ್‌ಸಿಲ ಅಹ್ಮದಿಯಾ"ದಿಂದ ತೆಗೆದುಕೊಳ್ಳಲಾಗಿದೆ).

ಈ ಪ್ರಬಂಧದಲ್ಲಿ ಇತರ ಮತ ಧರ್ಮಗಳ ವಿರುದ್ಧ ಯಾವುದೇ ಆಕ್ಷೇಪ ಸೂಚಿಸಿಲ್ಲ ಎಂಬುದು ಅದರ ಒಂದು ವೈಶಿಷ್ಟ್ಯವಾಗಿದೆ. ಇದರಲ್ಲಿ ಇಸ್ಲಾಮಿನ ಉಪದೇಶಗಳ ಶ್ರೇಷ್ಠತೆಗಳನ್ನು ವಿವರಿಸಲಾಗಿದೆ. ಸಮ್ಮೇಳನ ಸಮಿತಿ ಪ್ರಕಟಿಸಿದ ಪ್ರಶ್ನೆಗಳಿಗೆ ಉತ್ತರವನ್ನು ಪವಿತ್ರ ಖುರ್‌ಆನಿನ ಆಧಾರಗಳ ಮೂಲಕ ಮಾತ್ರ ನೀಡಲಾಗಿದೆ. ಉತ್ತರ ಹೇಗಿದೆ ಎಂದರೆ ಇಸ್ಲಾಮ್ ಧರ್ಮ ಇತರ ಎಲ್ಲ ಧರ್ಮಗಳಿಗಿಂತ ಅತ್ಯಂತ ಪರಿಪೂರ್ಣ ಮತ್ತು ಅತ್ಯುತ್ತಮವೆಂದು ಅದರಿಂದ ಸಾಬೀತಾಗುತ್ತದೆ.

**– ಮೌಲಾನಾ ಜಲಾಲುದ್ದೀನ್ ಶಮ್ಸ್**

# ಅನುವಾದಕರ ನುಡಿ

ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್(ಅ) ಉರ್ದುವಿನಲ್ಲಿ ಬರೆದ ಈ ಪ್ರಬಂಧವನ್ನು 1896ನೇ ಇಸವಿ ಡಿಸೆಂಬರ್ 26ರಿಂದ 29ರ ವರೆಗೆ ಲಾಹೋರಿನಲ್ಲಿ ಜರುಗಿದ "ಸರ್ವಧರ್ಮ ಸಮ್ಮೇಳನ"ದಲ್ಲಿ, ಅವರ ಪ್ರಮುಖ ಶಿಷ್ಯರಾದ ಮೌಲವಿ ಅಬ್ದುಲ್ ಕರೀಂ ಸಿಯಾಲ್‌ಕೋಟಿ ಅವರು ಓದಿದರು.

ಈ ಉಪನ್ಯಾಸವು ಪುಸ್ತಕ ರೂಪದಲ್ಲಿ ಭಾರತದ ಅನೇಕ ಭಾಷೆಗಳಲ್ಲಿ ಮಾತ್ರವಲ್ಲ, ಅರಬಿ, ಫಾರ್ಸಿ, ಚೀನಿ, ಬರ್ಮೀ, ಮಲಾಯಿ, ಪಶ್ತೋ, ಇಂಗ್ಲಿಷ್, ಫ್ರೆಂಚ್, ಜರ್ಮನಿ, ಸ್ಪಾನಿಷ್, ಸ್ವಾಹಿಲಿ, ಯೋರುಬಾ, ಲುಗಾಂಡಾ ಮುಂತಾದ ಭಾಷೆಗಳಲ್ಲಿಯೂ ಅನುವಾದಿಸಲ್ಪಟ್ಟಿದೆ. ಇದರ ಇಂಗ್ಲಿಷ್ ಭಾಷಾಂತರ "The Teachings of Islam" ಅನ್ನು ಕರ್ನಾಟಕ ವಿಶ್ವ ವಿದ್ಯಾಲಯವು 1973 – 74ರ ಸಾಲಿನಲ್ಲಿ ಬಿ.ಎ. ತರಗತಿಗಾಗಿ ಧಾರ್ಮಿಕ ವಿಷಯಗಳ ಪೈಕಿ ಇಸ್ಲಾಮಿನ ಅಧ್ಯಯನಕ್ಕೆ ಆಯ್ಕೆಮಾಡಿತ್ತು. ಇತ್ತೀಚೆಗೆ ಇದರ ಇಂಗ್ಲಿಷ್ ಭಾಷಾಂತರದ ಒಂದು ಲಕ್ಷ ಪ್ರತಿಗಳು ರಬ್ವಾದಿಂದ (ಪಾಕಿಸ್ತಾನ) ಪ್ರಕಾಶಿಸಲ್ಪಟ್ಟಿವೆ.

ಈ ಪುಸ್ತಕ ಪವಿತ್ರ ಖುರ್‌ಆನಿನ ಒಂದು ವ್ಯಾಖ್ಯಾನ ಸಂಗ್ರಹವನ್ನು ನೀಡುತ್ತದೆ. ಇದರಲ್ಲಿ ಉದ್ಧರಿಸಲಾದ ಹೆಚ್ಚಿನ ಖುರ್‌ಆನ್ ವಚನಗಳಿಗೆ ಗ್ರಂಥಕರ್ತರು ಶಬ್ದಾರ್ಥವನ್ನಲ್ಲ, ಭಾವಾರ್ಥವನ್ನು ಕೊಟ್ಟಿರುವರು. ನಿಷ್ಪಕ್ಷಪಾತದಿಂದಲೂ ನೀತಿಪ್ರಜ್ಞೆಯಿಂದಲೂ ಈ ಗ್ರಂಥವನ್ನು ಸಂಪೂರ್ಣವಾಗಿ ಓದುವ ಯಾರಿಗೂ ಇದರಲ್ಲಿ ಪವಿತ್ರ ಖುರ್‌ಆನಿನ ಅಧ್ಯಾಪನೆಗಳ ಮನೋಹರತೆ ಗೋಚರಿಸಬಹುದು.

ಅಹ್ಮದಿಯಾ ಸಂಘಟನೆಯ ಕನ್ನಡ ಮುಖವಾಣಿ "ಯುಗರಶ್ಮಿ"ಯ ಪುಸ್ತಕ ವಿಭಾಗದಲ್ಲಿ ಸೆಪ್ಟೆಂಬರ್ 1978ರಿಂದ ಮಾರ್ಚ್ 1982ರ ವರೆಗೆ ಈ ಮೊದಲು ಇದು ಪ್ರಕಟವಾಗಿರುತ್ತದೆ. ಆಗ, ನನ್ನ ಹಿರಿಯ ಸಹೋದರ ಜನಾಬ್ ಯಮ್. ಉಬೈದುಲ್ಲಾ ಸಾಹೇಬರು ಇದರ ಮೊದಲ ಕೆಲವು ಭಾಗಗಳನ್ನು ಮತ್ತು ಈಗ, ನನ್ನ ಮಿತ್ರರಾದ ಜನಾಬ್ ಎಂ.ಪಿ. ಇಬ್ರಾಹೀಂ ಸಾಹೇಬರು ಆಮೂಲಾಗ್ರವಾಗಿ ಈ ಭಾಷಾಂತರವನ್ನು ಪರಿಶೀಲಿಸಿ ಯೋಗ್ಯ ಸಲಹೆ ಸೂಚನೆಗಳನ್ನಿತ್ತು ನನಗೆ ನೆರವಾಗಿದ್ದಾರೆ. ನಾನು ಅವರೀರ್ವರಿಗೂ ಕೃತಜ್ಞನಾಗಿದ್ದೇನೆ. ಅಲ್ಲಾಹನು ಅವರಿಗೆ ತಕ್ಕ ಪ್ರತಿಫಲವನ್ನು ನೀಡಲಿ.

**ಮುಹಮ್ಮದ್ ಯೂಸುಫ್, ಮಂಗಳೂರು**

**15/3/1993**

بسم الله الرّحمٰن الرّحيم
نحمده ونصلّي على رسوله الكريم

# ಇಸ್ಲಾಂ ಧರ್ಮ ತತ್ವಜ್ಞಾನ

## ವಾದಗಳ ಮೂಲಾಧಾರ ದೈವಿಕ ಗ್ರಂಥಗಳಿಂದ ಆರಿಸಲ್ಪಡಬೇಕು

ವಿವಿಧ ಮತಪ್ರತಿನಿಧಿಗಳು ನಿರ್ದಿಷ್ಟ ಪ್ರಶ್ನೆಗಳನ್ನನುಸರಿಸಿ ತಮ್ಮ ತಮ್ಮ ಧರ್ಮಗಳ ವಿಶೇಷತೆಗಳ ಕುರಿತು ಪ್ರತಿಪಾದಿಸುವ ಉದ್ದೇಶದಿಂದ ಉಪಸ್ಥಿತರಾಗಿರುವ ಈ ಭವ್ಯ ಸರ್ವಧರ್ಮ ಸಮ್ಮೇಳನದಲ್ಲಿ ನಾನು ಇಸ್ಲಾಂ ಧರ್ಮದ ಪ್ರತಿನಿಧಿಯೆಂಬ ನೆಲೆಯಲ್ಲಿ ಅದರ ಮಹತ್ವವನ್ನೂ ಉತ್ಕೃಷ್ಟತೆಯನ್ನೂ ವಿಶದೀಕರಿಸುವೆನು. ವಿಷಯವನ್ನು ಆರಂಭಿಸುವ ಮೊದಲಾಗಿ, ನಾನು ಇದರಲ್ಲಿ ಪ್ರತಿಪಾದಿಸುವ ಸಂಗತಿಗಳೆಲ್ಲವೂ ದೈವಿಕ ಗ್ರಂಥವಾದ ಪವಿತ್ರ ಖುರ್‌ಆನಿನಿಂದ ಸಂಗ್ರಹಿಸಲ್ಪಟ್ಟವುಗಳಾಗಿವೆಯೆಂದು ವ್ಯಕ್ತಪಡಿಸಲು ಇಚ್ಛಿಸುತ್ತೇನೆ. ಪ್ರತಿಯೊಬ್ಬ ಪ್ರತಿನಿಧಿಯೂ ತತ್ವ ಪ್ರತಿಪಾದನೆಗೆ ಆವಶ್ಯಕವಾದ ಎಲ್ಲ ಆಧಾರಗಳನ್ನೂ ತಾನು ದೈವಿಕವೆಂದು ನಂಬುವ ಪವಿತ್ರ ಗ್ರಂಥದಿಂದ ಮಾತ್ರವೇ ಉದ್ಧರಿಸಬೇಕಾದದ್ದೂ ಅದಕ್ಕೆ ವ್ಯತಿರಿಕ್ತವಾಗಿ ಹೊಸ ಒಂದು ಗ್ರಂಥವನ್ನು ರಚಿಸುವ ರೀತಿಯಲ್ಲಿ ತಾನು ನಂಬುವ ಪವಿತ್ರ ಗ್ರಂಥಕ್ಕೆ ಹೊರತಾದ ಹೊಸ ಆದರ್ಶಗಳನ್ನೂ ಹೊಸ ಆಧಾರಗಳನ್ನೂ ಅವಲಂಬಿಸಿ ತನ್ನ ಪ್ರಾತಿನಿಧ್ಯಾಧಿಕಾರವನ್ನು ಉಲ್ಲಂಘಿಸದಿರಬೇಕಾದದ್ದೂ ಅತ್ಯಾವಶ್ಯಕವಾಗಿದೆ. ಆದುದರಿಂದ ಪವಿತ್ರ ಖುರ್‌ಆನಿನ ಮಹಿಮಾ ವಿಶೇಷತೆಗಳನ್ನು ಸಮರ್ಥಿಸಲಿಕ್ಕೂ ಅದರ ಶ್ರೇಷ್ಠತೆಯನ್ನು ಸ್ಪಷ್ಟಪಡಿಸಲಿಕ್ಕೂ ಉದ್ದೇಶಿಸುವ ನಾನು ಅದರಿಂದ ವ್ಯಕ್ತವಾಗುವ ತತ್ವಗಳನ್ನು ಮಾತ್ರವೇ ಅವಲಂಬಿಸಿ ವಿಷಯ ಪ್ರತಿಪಾದನೆಯನ್ನು ಆ ಪವಿತ್ರ ಖುರ್‌ಆನಿನ ಪರಿಧಿಯೊಳಗೆ ನಿಯಂತ್ರಿಸುವೆನು. ಇತರ ಪ್ರತಿನಿಧಿಗಳೂ ಈ

ನಿಯಮವನ್ನನುಸರಿಸಿ ನಡೆಯುವವರಾದರೆ ವಿವೇಕಿಗಳಿಗೆ ಮತಗಳ ತಾರತಮ್ಯತೆಯನ್ನು ತಿಳಿದು ಅವುಗಳ ಮಹತ್ವವನ್ನು ನಿರ್ಣಯಿಸಲು ಸಾಧ್ಯವಾಗುವುದು. ಹೀಗೆ ಎಲ್ಲ ಪ್ರತಿನಿಧಿಗಳೂ ತಮ್ಮ ತಮ್ಮ ಧರ್ಮಗ್ರಂಥಗಳನ್ನು ಮಾತ್ರ ಆಧಾರವಾಗಿಟ್ಟುಕೊಂಡು ಆಯಾಯ ಗ್ರಂಥದ ವಚನಗಳನ್ನು ಮಾತ್ರ ಸಾಕ್ಷ್ಯವಾಗಿ ಉದ್ಧರಿಸಬೇಕಾದುದರಿಂದ ನಾನು ಮುಹಮ್ಮದ್ ಪೈಗಂಬರರ(ಸ) ವಚನವನ್ನಾಗಲಿ ಇಲ್ಲಿ ಆಧಾರವಾಗಿ ಉದ್ಧರಿಸುವುದಿಲ್ಲ. ಯಥಾರ್ಥ ಪೈಗಂಬರರ ವಚನಗಳಲ್ಲಿ ಅಡಕವಾಗಿರುವ ಬೋಧನೆಗಳು ಪರಿಪೂರ್ಣವೂ ಅಂತಿಮವೇದವೂ ಆದ ಪವಿತ್ರ ಖುರ್‌ಆನಿನಿಂದ ಸಂಗ್ರಹಿಸಲ್ಪಟ್ಟವುಗಳೇ ಆಗಿದೆ. ಸಂಕ್ಷಿಪ್ತವಾಗಿ, ಇಂದು ಪವಿತ್ರ ಖುರ್‌ಆನಿನ ಮಹತ್ವ ಪ್ರಕಾಶಿತವಾಗುವ ಶುಭದಿನವಾಗಿದೆ. ಈ ಸುಕೃತ್ಯವನ್ನು ನಿರ್ವಹಿಸಲು ಅಲ್ಲಾಹನು ನನಗೆ ಸಹಾಯವನ್ನೀಯಲಿ – ಆಮೀನ್.

**ಪ್ರಥಮ ಪ್ರಶ್ನೆ:**

# ಮಾನವನ ಶಾರೀರಿಕ, ನೈತಿಕ ಮತ್ತು ಆಧ್ಯಾತ್ಮಿಕ ಸ್ಥಿತಿಗಳು

ಪ್ರಾರಂಭದಲ್ಲಿ ಪ್ರಸ್ತಾಪಿಸಲ್ಪಡುವ ಕೆಲವು ಸಂಗತಿಗಳು ಪ್ರತಿಪಾದನೀಯ ವಿಷಯಕ್ಕೆ ಸಂಬಂಧಿಸಿದ್ದಲ್ಲವೆಂದು ಮೊದಲನೆಯ ನೋಟದಲ್ಲಿ ಕೆಲವರಿಗೆ ಭಾಸವಾಗಬಹುದು. ಆದರೆ, ವಿಷಯವನ್ನು ಪೂರ್ಣವಾಗಿ ಗ್ರಹಿಸಲಿಕ್ಕೆ ಅವು ಅತ್ಯಗತ್ಯವಾದ ಸಂಗತಿಗಳಾದುದರಿಂದ ಅವುಗಳನ್ನು ಇಲ್ಲಿ ಸೇರಿಸಲು ನಾನು ಪ್ರೇರಿತನಾಗಿದ್ದೇನೆ.

ಮೊದಲನೆಯ ಪ್ರಶ್ನೆ ಮನುಷ್ಯನ ಶಾರೀರಿಕ, ನೈತಿಕ ಹಾಗೂ ಆಧ್ಯಾತ್ಮಿಕ ಸ್ಥಿತಿಗಳ ಕುರಿತಾಗಿದೆ. ಪವಿತ್ರ ಖುರ್‌ಆನ್ ಈ ಮೂರು ಅವಸ್ಥೆಗಳಿಗೂ ಬೇರೆ ಬೇರೆ ಉಗಮ ಸ್ಥಾನಗಳನ್ನು ನಿಶ್ಚಯಿಸಿದೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಈ ಮೂರು ಸ್ಥಿತಿಗಳು ಬೇರೆ ಬೇರೆಯಾಗಿ ಹೊರಹೊಮ್ಮುವ ಮೂರು ಉದ್ಭವ ಸ್ಥಾನಗಳನ್ನು ಅದು ಸೂಚಿಸುತ್ತದೆ.

## ಮೊದಲನೆಯ ಸ್ಥಿತಿ – ಶಾರೀರಿಕಾವಸ್ಥೆ

ಮೊದಲನೆಯದಾದ ಶಾರೀರಿಕಾವಸ್ಥೆ ಅಥವಾ ಪ್ರಾಕೃತಿಕಾವಸ್ಥೆಯ ಉದ್ಭವ ಸ್ಥಾನವನ್ನು **"ನಫ್ಸ್ ಅಮ್ಮಾರ"** ಅಥವಾ **"ದುಷ್ಪ್ರೇರಕ ಆತ್ಮ"** ಎಂದು ಪವಿತ್ರ ಖುರ್‌ಆನ್ ನಾಮಕರಣ ಮಾಡಿರುತ್ತದೆ. ಖುರ್‌ಆನ್ ಹೀಗೆನ್ನುತ್ತದೆ:

اِنَّ النَّفۡسَ لَاَمَّارَةٌۢ بِالسُّوۡٓءِ

> ನಫ್ಸ್ ಅಮ್ಮಾರ ಎಂದರೆ ಮನುಷ್ಯನನ್ನು ಅವನ ಪರಿಪೂರ್ಣತೆಗೂ ಧಾರ್ಮಿಕೋನ್ನತಿಗೂ ಹಾನಿಕರವಾದ ದುರ್ಮಾರ್ಗಕ್ಕೆ ಪ್ರೇರೇಪಿಸುವ ಹಾಗೂ ಅಹಿತವೂ ಧರ್ಮವಿರುದ್ಧವೂ ಆದ ಮಾರ್ಗದಲ್ಲಿ ಅವನನ್ನು ನಡೆಸುವ ಸ್ವಭಾವದ ಆತ್ಮವಾಗಿದೆ. **(12:54)**

ಸಂಕ್ಷಿಪ್ತವಾಗಿ, ದುರ್ಮಾರ್ಗಕ್ಕೂ ಅನೀತಿಗೂ ಪ್ರೇರೇಪಿಸುವ ಈ ಸ್ವಭಾವವು ಮನುಷ್ಯ ಸಹಜವಾದುದಾಗಿದೆ. ನೈತಿಕಾವಸ್ಥೆಯು ಉದ್ಭವಿಸುವ ಮೊದಲು ಮನುಷ್ಯನಲ್ಲಿ ಈ ತಾಮಸಗುಣವನ್ನು ಸ್ಪಷ್ಟವಾಗಿ ಕಾಣಬಹುದು. ವಿವೇಕ ಹಾಗೂ

ದೈವಿಕ ಜ್ಞಾನದ ಪ್ರಕಾಶದಲ್ಲಿ ನಡೆಯದೆ, ಮೃಗಗಳಂತೆ ಕೇವಲ ತಿನ್ನುವುದು, ಕುಡಿಯುವುದು, ನಿದ್ರಿಸುವುದು, ಕೋಪಗೊಳ್ಳುವುದು, ಉದ್ವೇಗಗೊಳ್ಳುವುದು ಮೊದಲಾದ ಸಹಜ ಸ್ವಭಾವಗಳಿಗೆ ಮನುಷ್ಯನು ಅಧೀನನಾಗಿರುವ ತನಕ ಅವನಲ್ಲಿ ಈ ಪ್ರಾಕೃತಿಕಾವಸ್ಥೆಯು ಗೋಚರಿಸುತ್ತದೆ.

ಮನುಷ್ಯನು ವಿವೇಚನೆಯಿಂದಲೂ ವಿವೇಕದಿಂದಲೂ ತನ್ನ ಇಚ್ಛೆಗಳನ್ನು ನಿಯಂತ್ರಿಸಿ, ಮಿತವನ್ನು ಅಭ್ಯಸಿಸುವಾಗ ಅವನ ಸ್ವಭಾವಗಳು ಪ್ರಾಕೃತಿಕಾವಸ್ಥೆಯನ್ನು ಬಿಟ್ಟು ನೈತಿಕಾವಸ್ಥೆಯನ್ನು ಪ್ರವೇಶಿಸುವುವು. ಎಂದರೆ, ಮೃಗ ತುಲ್ಯವಾದ ಸ್ವಭಾವದಿಂದ ಸದಾಚಾರಕ್ಕೆ ಪರಿವರ್ತಿತವಾಗುವುದು.

## ಎರಡನೆಯ ಸ್ಥಿತಿ – ನೈತಿಕಾವಸ್ಥೆ

ಎರಡನೆಯ ಹಂತವಾದ ಈ ನೈತಿಕಾವಸ್ಥೆಯ ಉದ್ಭವಸ್ಥಾನಕ್ಕೆ **“ನಫ್ಸ್ ಲವ್ವಾಮ”** ಅಥವಾ “ಸ್ವಯಂ ದೂಷಿಸುವ ಆತ್ಮ” ಎಂದಾಗಿದೆ ಹೆಸರು. ಪವಿತ್ರ ಖುರ್‌ಆನ್ ಹೀಗೆನ್ನುತ್ತದೆ:

وَلَآ أُقۡسِمُ بِٱلنَّفۡسِ ٱللَّوَّامَةِ

ನಾನು ಅಪರಾಧಗಳ ಮತ್ತು ದುಷ್ಕೃತ್ಯಗಳ ಕುರಿತು ಸ್ವಯಂ ದೂಷಿಸುವ ಆತ್ಮದ ಪ್ರಮಾಣ ಮಾಡುತ್ತೇನೆ. **(75:3)**

ನೈತಿಕಾವಸ್ಥೆಯ ಉದ್ಭವ ಸ್ಥಾನವಾದ ಈ ನಫ್ಸ್ ಲವ್ವಾಮವು ಮನುಷ್ಯಾವಸ್ಥೆಯ ಎರಡನೇ ಹಂತವಾಗಿದೆ. ಈ ಸ್ಥಿತಿಯನ್ನು ಪಡೆಯುವ ಮನುಷ್ಯನು ಮೃಗೀಯ ಸ್ವಭಾವದಿಂದ ಮುಕ್ತಿಯನ್ನು ಪಡೆಯುವನು. ಇಲ್ಲಿ ಸ್ವಯಂ ದೂಷಿಸುವ ಆತ್ಮದ ಆಣೆಯನ್ನು ಹಾಕಿದ್ದು ಅದನ್ನು ಗೌರವಿಸುವುದಕ್ಕೋಸ್ಕರವಾಗಿದೆ. ಅನಿಯಂತ್ರಿತ ಸ್ವಭಾವ ಸ್ಥಿತಿಯಿಂದ, ತಪ್ಪನ್ನು ಅರಿತು ಸ್ವಯಂ ದೂಷಿಸುವ ಸ್ಥಿತಿಗೆ ಪರಿವರ್ತನೆಗೊಳ್ಳುವುದು ಯಥಾರ್ಥವಾದ ಆತ್ಮಪರಿಶುದ್ಧತೆಯನ್ನು ಸೂಚಿಸುವುದರಿಂದ ಅದು ದೇವದೃಷ್ಟಿಯಲ್ಲಿ ಮಾನ್ಯತೆಗೆ ಪಾತ್ರವಾಗುವುದು. “ಲವ್ವಾಮ” ಎಂಬ ಪದದ ಅರ್ಥವೇ “ಸ್ವಯಂ ದೂಷಿಸುವಂಥದ್ದು” ಎಂದಾಗಿದೆ. “ನಫ್ಸ್ ಲವ್ವಾಮ” – ಸ್ವಯಂ ದೂಷಿಸುವ ಆತ್ಮ – ಎಂದು ಈ ಅವಸ್ಥೆಯನ್ನು ಹೆಸರಿಸಿದ್ದು ಏಕೆಂದರೆ ಅದು ಗೈದ ಅಪಕೃತ್ಯಗಳ ಕುರಿತು ಸ್ವಯಂ ಪಶ್ಚಾತ್ತಾಪಪಡುತ್ತದೆ. ಮಾತ್ರವಲ್ಲ, ಅದು ಅನಿಯಂತ್ರಿತ ಭಾವಾವೇಶಗಳನ್ನೂ ಮೃಗೀಯವಾದ ಇಚ್ಛೆಗಳನ್ನೂ ಇಷ್ಟಪಡುವುದಿಲ್ಲ. ಉತ್ಕೃಷ್ಟ ಸ್ವಭಾವಗಳನ್ನು ಮತ್ತು ಸದ್ಗುಣಗಳನ್ನು ಮನುಷ್ಯನಲ್ಲಿ ಉತ್ಪಾದಿಸಲಿಕ್ಕೂ ಯಾವುದೇ

ರೀತಿಯ ದುಷ್ಕೃತ್ಯವೂ ಅವನಿಂದ ಉಂಟಾಗದೆ ಜೀವಿತವನ್ನು ಸಮಗ್ರವಾಗಿ ಸ್ವಾಧೀನಪಡಿಸಲಿಕ್ಕೂ ವಿಷಯಾಸಕ್ತಿಗಳನ್ನು ವಿವೇಕದಿಂದ ನಿಯಂತ್ರಿಸಲಿಕ್ಕೂ ಅದು ಇಚ್ಛಿಸುತ್ತದೆ. ಹೀಗೆ "ನಫ್ಸ್ ಲವ್ವಾಮ" ದೈಹಿಕೇಚ್ಛೆಗಳನ್ನು ದ್ವೇಷಿಸಿ, ಅಪರಾಧಗಳನ್ನು ಸ್ವಯಂ ದೂಷಿಸುವುದಾದರೂ ಅದು ಇಚ್ಛೆಗಳನ್ನು ಸಂಪೂರ್ಣವಾಗಿ ನಿಯಂತ್ರಿಸಲೂ ಸುಕೃತ್ಯಗಳನ್ನು ಮಾತ್ರವೇ ಗೈಯಲೂ ಶಕ್ತಿಯುತವಲ್ಲ. ಕೆಲವು ಸಂದರ್ಭಗಳಲ್ಲಿ ದೈಹಿಕೇಚ್ಛೆಗಳು ಅದನ್ನು ಮೆಟ್ಟಿನಿಲ್ಲುವುದರಿಂದಾಗಿ, ಅದು ದುಷ್ಕೃತ್ಯಗಳಿಗೆ ಅಧೀನ ವಾಗಿ ಬಿಡುತ್ತದೆ. ಆತ್ಮದ ಈ ದುರ್ಬಲತೆಯು ಬಾಲ್ಯಾವಸ್ಥೆಯ ಬಲಹೀನತೆಗೆ ಸದೃಶವಾಗಿದೆ. ಮಗುವು ಬೀಳಲು ಇಚ್ಛಿಸುವುದಿಲ್ಲವಾದರೂ ಅದರ ಕಾಲುಗಳ ಶಕ್ತಿಹೀನತೆಯ ಕಾರಣದಿಂದ ಅದು ಮುಗ್ಗರಿಸಿ ಬೀಳುತ್ತದೆ. ಅದು ತನ್ನ ಅಶಕ್ತಿಯ ಕುರಿತು ಮನಸ್ತಾಪಪಡುತ್ತದೆ. ಇದೇ ಪ್ರಕಾರ, ಈ ಅವಸ್ಥೆಯಲ್ಲಿರುವ ಆತ್ಮವು ಅದಕ್ಕೆ ಸಂಭವಿಸುವ ಪ್ರತಿಯೊಂದು ಮಾರ್ಗಭ್ರಂಶದ ನಂತರ ಪಶ್ಚಾತ್ತಾಪಪಡುತ್ತದೆ. ಅದು ಈ ಹಂತದಲ್ಲಿ ಉತ್ಕೃಷ್ಟ ಗುಣಗಳನ್ನು ಪಡೆದು, ಮೊದಲನೆಯ ಶಾರೀರಿಕಾವಸ್ಥೆಯ ಆಜ್ಞಾಲಂಘನ ಸ್ವಭಾವವನ್ನು ದ್ವೇಷಿಸುತ್ತದೆ. ಆದರೂ ಪೂರ್ಣವಾದ ನಿಯಂತ್ರಣವು ಸಾಧ್ಯವಾಗುವುದಿಲ್ಲವಾದ್ದರಿಂದ ಅದು ಕೆಲವೊಮ್ಮೆ ತನ್ನ ಕರ್ತವ್ಯದ ಮಾರ್ಗದಿಂದ ವ್ಯತಿಕ್ರಮಿಸುತ್ತದೆ.

## ಮೂರನೆಯ ಸ್ಥಿತಿ – ಆಧ್ಯಾತ್ಮಿಕಾವಸ್ಥೆ

ಮನುಷ್ಯನ ಮೂರನೆಯ ಹಂತವನ್ನು ಆಧ್ಯಾತ್ಮಿಕ ಗುಣಗಳ ಉದ್ಭವ ಸ್ಥಾನ ವೆಂದು ಹೇಳಬಹುದು. ಈ ಅವಸ್ಥೆಯನ್ನು ಪಡೆಯುವ ಆತ್ಮಕ್ಕೆ ಪವಿತ್ರ ಖುರ್‌ಆನ್ **"ನಫ್ಸ್ ಮುತ್ಮಇನ್ನ"** ಎಂದು ಹೆಸರನ್ನಿತ್ತಿದೆ. ಅದರ ಅರ್ಥ "ಶಾಂತಿಯನ್ನು ಗಳಿಸಿದ ಆತ್ಮ" ಎಂದಾಗಿದೆ. ಆ ಪವಿತ್ರ ಗ್ರಂಥ ಹೀಗೆನ್ನುತ್ತದೆ:

يَاَيَّتُهَا النَّفْسُ الْمُطْمَئِنَّةُ ارْجِعِيْٓ اِلٰى رَبِّكِ رَاضِيَةً مَّرْضِيَّةً

فَادْخُلِيْ فِيْ عِبَادِيْ وَادْخُلِيْ جَنَّتِيْ

ಎಲೈ ಪರಮಾತ್ಮನಿಂದ ಶಾಂತಿಯನ್ನು ಗಳಿಸಿದ ಆತ್ಮವೇ, ನೀನು ಅವನಲ್ಲಿ ಸಂತುಷ್ಟನಾಗಿಯೂ ಅವನು ನಿನ್ನಲ್ಲಿ ಸಂಪ್ರೀತನಾದ ನೆಲೆಯಲ್ಲೂ ನಿನ್ನ ಸಂರಕ್ಷಕನ ಕಡೆಗೆ ಹಿಂತಿರುಗು; ನನ್ನ ಭಕ್ತದಾಸರ ಜೊತೆಯಲ್ಲಿ ಸೇರಿ ನನ್ನ ಸ್ವರ್ಗದಲ್ಲಿ ಪ್ರವೇಶಿಸು. **(89:28–31)**

ಈ ಉನ್ನತ ಘಟ್ಟದಲ್ಲಿ ಆತ್ಮವು ಸಕಲ ವಿಧದ ದುರ್ಬಲತೆಗಳಿಂದಲೂ ನ್ಯೂನತೆಗಳಿಂದಲೂ ಮುಕ್ತವಾಗಿ ಆಧ್ಯಾತ್ಮಿಕ ಶಕ್ತಿಯಿಂದ ಭರಿತವಾಗುತ್ತದೆ. ಆಗ ಅದಕ್ಕೆ ಪರಮಾತ್ಮನೊಡನೆ ಅವಿಭಾಜ್ಯವಾದ ಒಂದು ಸಂಬಂಧ ಉಂಟಾಗಿ, ಅವನ ಹೊರತು ಜೀವಿಸಲು ಅದಕ್ಕೆ ಅಸಾಧ್ಯವಾಗುವುದು. ಯಾವ ರೀತಿಯಲ್ಲಿ ಮೇಲಿನಿಂದ ನೀರು ಭರದಿಂದ ಯಾವುದೇ ಅಡೆತಡೆಗಳಿಲ್ಲದೆ ಕೆಳಗೆ ಹರಿಯುತ್ತದೋ ಅದೇ ರೀತಿಯಲ್ಲಿ ಆತ್ಮವು ಈ ಘಟ್ಟದಲ್ಲಿ ಎಲ್ಲ ಅಡಚಣೆಗಳನ್ನು ಅವಗಣಿಸಿ ತನ್ನ ಸೃಷ್ಟಿಕರ್ತನ ಸನ್ನಿಧಿಗೆ ಪ್ರವಹಿಸುತ್ತದೆ. ಮೇಲೆ ಹೇಳಿದ "ಎಲೈ ಪರಮಾತ್ಮನಿಂದ ಶಾಂತಿಯನ್ನು ಪಡೆದ ಆತ್ಮವೇ, ನೀನು ನಿನ್ನ ಸಂರಕ್ಷಕನ ಕಡೆಗೆ ಹಿಂತಿರುಗು" ಎಂಬ ದೇವವಾಕ್ಯವು ಸೂಚಿಸುವುದು ಇದನ್ನೇ ಆಗಿದೆ. ಆದ್ದರಿಂದ ಇದೇ ಜೀವಿತದಲ್ಲಿಯೇ ಆತ್ಮಕ್ಕೆ ಮಹತ್ತರವಾದ ಪರಿವರ್ತನೆಯುಂಟಾಗಿ, ಇಹಲೋಕದಲ್ಲೇ ಅದಕ್ಕೆ ಸ್ವರ್ಗಾನುಭೂತಿಯು ಸಿದ್ಧಿಸುತ್ತದೆ. ಈ ಹಂತದಲ್ಲಿ ಆತ್ಮವು ತನ್ನ ರಕ್ಷಕನ ಕಡೆಗೆ ಹಿಂತಿರುಗಲು ಆಜ್ಞಾಪಿಸಲ್ಪಟ್ಟಿರುವುದರಿಂದ ಈಗ ಅದರ ಪರಿಪಾಲನೆಯೂ ರಕ್ಷಣೆಯೂ ಪರಮಾತ್ಮನ ಕೈಯಲ್ಲಾಗಿದೆ ಎಂದು ಸ್ಪಷ್ಟವಾಗುತ್ತದೆ. ಈ ಉತ್ಕೃಷ್ಟ ಸ್ಥಿತಿಯಲ್ಲಿ ಪರಮಾತ್ಮನ ಪ್ರೀತಿಯೇ ಅದರ ಆಹಾರವಾಗಿ, ಈ ಜೀವದಾಯಕ ಸರೋವರದಿಂದಲೇ ನೀರನ್ನು ಕುಡಿದು, ಹಾಗೆ ಮೃತ್ಯುವಿನಿಂದ ಮುಕ್ತಿಯನ್ನು ಪಡೆಯುತ್ತದೆ. ಇದರ ಕುರಿತು ಪವಿತ್ರ ಖುರ್‌ಆನ್ ಇನ್ನೊಂದೆಡೆಯಲ್ಲಿ ಹೀಗೆನ್ನುತ್ತದೆ:

قَدْ أَفْلَحَ مَنْ زَكّٰهَا - وَقَدْ خَابَ مَنْ دَسّٰهَا

ಯಾವೊಬ್ಬನು ತನ್ನ ಇಂದ್ರಿಯೇಚ್ಛೆಗಳನ್ನು ನಿಗ್ರಹಿಸಿ ಆತ್ಮವನ್ನು ಶುದ್ಧೀಕರಿಸಿದನೋ ಅವನು ವಿಜಯಿಯಾದನು; ಅವನು ನಾಶ ಹೊಂದಲಿಕ್ಕಿಲ್ಲ. ಯಾವೋರ್ವನು ತನ್ನ ಆತ್ಮವನ್ನು ಅನಿಯಂತ್ರಿಕವಾದ ಇಂದ್ರಿಯೇಚ್ಛೆಗಳಲ್ಲಿ ನಿಮಗ್ನವಾಗುವಂತೆ ಮಾಡಿದನೋ ಅವನು ಪರಾಜಿತನಾದನು; ಅವನು ಜೀವನದಲ್ಲಿ ನಿರಾಶೆಗೊಳ್ಳುವನು. **(91:10–11)**

ಸಂಕ್ಷಿಪ್ತವಾಗಿ, ಆತ್ಮದ ಈ ಮೂರು ಸ್ಥಿತಿಗಳನ್ನು ಶಾರೀರಿಕ, ನೈತಿಕ ಮತ್ತು ಆಧ್ಯಾತ್ಮಿಕ ಎಂದು ಹೆಸರಿಸಬಹುದು. ದೈಹಿಕೇಚ್ಛೆಗಳನ್ನು ನೆರವೇರಿಸುವುದರಲ್ಲಿ ಆಸಕ್ತಿಯುಳ್ಳ ಮೊದಲನೆಯ ಹಂತವಾದ ಪ್ರಾಕೃತಿಕವಾಸ್ಥೆಯು ಬಲಗೊಂಡಾಗ ತುಂಬಾ ಹಾನಿಕರವಾಗಿ ಪರಿಣಮಿಸಿ ಆತ್ಮೋನ್ನತಿಯನ್ನು ತಡೆದು ನೈತಿಕ ಹಾಗೂ ಆಧ್ಯಾತ್ಮಿಕ ಸದ್ಗುಣಗಳನ್ನು ನಾಶಪಡಿಸುವುದು. ಆದ್ದರಿಂದ ಆತ್ಮದ ಈ ಸ್ಥಿತಿಗೆ "ನಫ್ಸ್ ಅಮ್ಮಾರ" (ದುಷ್ಪ್ರೇರಕ ಆತ್ಮ) ಎಂದು ಪವಿತ್ರ ಖುರ್‌ಆನ್ ಹೆಸರನ್ನಿತ್ತಿದೆ.

ಇನ್ನು ಈ ಸಹಜಾವಸ್ಥೆಯ ಮೇಲೆ ಪವಿತ್ರ ಖುರ್‌ಆನಿನ ಸ್ವಾಧೀನ ಶಕ್ತಿ ಎಷ್ಟರ ಮಟ್ಟಿಗಿದೆಯೆಂಬುದನ್ನೂ ತತ್ಸಂಬಂಧವಾಗಿ ಆ ಪವಿತ್ರ ಗ್ರಂಥ ನಿರ್ದೇಶಿಸುವ ಉಪದೇಶಗಳೇನೆಂಬುದನ್ನೂ ನೈಸರ್ಗಿಕ ಉದ್ವೇಗಗಳಿಗೆ ಅದು ನಿಶ್ಚಯಿಸಿದ ಪರಿಮಿತಿ ಎಷ್ಟೆಂಬುದನ್ನೂ ಪರ್ಯಾಲೋಚಿಸೋಣ. ಮನುಷ್ಯನ ಈ ಪ್ರಾಕೃತಿಕಾವಸ್ಥೆಗೆ ನೈತಿಕವೂ ಆಧ್ಯಾತ್ಮಿಕವೂ ಆದ ಅವಸ್ಥೆಗಳೊಂದಿಗೆ ಸುದೃಢವಾದ ಸಂಬಂಧವಿದೆಯೆಂಬುದಾಗಿ ಪವಿತ್ರ ಖುರ್‌ಆನಿನಿಂದ ತಿಳಿದುಬರುತ್ತದೆ. ಎಷ್ಟರ ಮಟ್ಟಿಗೆಂದರೆ, ಆಹಾರ ಪಾನೀಯಾದಿಗಳನ್ನು ಸೇವಿಸುವ ಕ್ರಮಗಳು ಸಹ ಮನುಷ್ಯನ ನೈತಿಕ ಹಾಗೂ ಆಧ್ಯಾತ್ಮಿಕ ಗುಣಗಳನ್ನು ರೂಪಿಸುವುದರಲ್ಲಿ ಪಾತ್ರವಹಿಸುತ್ತವೆ. ಸಹಜ ಗುಣಗಳನ್ನೂ ಶಕ್ತಿಗಳನ್ನೂ ಧರ್ಮಶಾಸ್ತ್ರದ (ಶರೀಅತ್) ನಿಯಮ ನಿರ್ದೇಶಗಳನ್ನನುಸರಿಸಿ ಉಪಯೋಗಪಡಿಸುವುದಾದರೆ ಉಪ್ಪಿನ ಗಣಿಯಲ್ಲಿ ಬಿದ್ದ ಪ್ರತಿಯೊಂದು ವಸ್ತು ಉಪ್ಪೇ ಆಗುವ ಹಾಗೆ ಅವು ಸಹ ನೈತಿಕ ಗುಣಗಳಾಗಿ ಪರಿವರ್ತಿತವಾಗಿ ಆಧ್ಯಾತ್ಮಿಕಾವಸ್ಥೆಯ ಮೇಲೆ ಪ್ರಭಾವವನ್ನು ಬೀರುತ್ತವೆ. ಈ ಕಾರಣದಿಂದಲೇ ಸಕಲ ಆರಾಧನಾ ಕರ್ಮಗಳಿಗೂ ಆಂತರಿಕ ಪರಿಶುದ್ಧತೆಯ ಉದ್ದೇಶಗಳಿಗೂ ಆಂತರಿಕ ವಿನಮ್ರತೆಗೂ ಶಾರೀರಿಕ ಶುಚಿತ್ವ ಮತ್ತು ಬಾಹ್ಯ ಶಿಷ್ಟಾಚಾರಗಳಿಗೆ ಪವಿತ್ರ ಖುರ್‌ಆನ್ ಬಹಳ ಒತ್ತುನೀಡಿದೆ. ಬಾಹ್ಯೇಂದ್ರಿಯಗಳ ವಿವಿಧ ಚಟುವಟಿಕೆಗಳನ್ನೂ ಅವು ಮನುಷ್ಯನ ಆತ್ಮದ ಮೇಲೆ ಉಂಟುಮಾಡುವ ಪ್ರಭಾವದ ಕುರಿತೂ ಗಾಢವಾಗಿ ಆಲೋಚಿಸಿದರೆ, ಮನುಷ್ಯ ಶರೀರಕ್ಕೂ ಆತ್ಮಕ್ಕೂ ಇರುವ ನಿಕಟ ಸಂಬಂಧವು ವ್ಯಕ್ತವಾಗುತ್ತದೆ. ನಮ್ಮ ಬಾಹ್ಯ ಚಟುವಟಿಕೆಗಳು ಶರೀರಕ್ಕೆ ಸಂಬಂಧಿಸಿವೆಯಾದರೂ ಅವು ಆತ್ಮದ ಸ್ಥಿತಿಯನ್ನು ಸಂಪೂರ್ಣವಾಗಿ ಸ್ವಾಧೀನಪಡಿಸುತ್ತವೆ ಎಂಬುದನ್ನು ಕಾಣಬಹುದು. ಉದಾಹರಣೆಗೆ, ನಾವು ಅಳಲು ಪ್ರಾರಂಭಿಸಿದಾಗ, ಅದು ಕೃತ್ರಿಮವಾಗಿದ್ದರೂ ಸರಿ, ಆ ಕಣ್ಣೀರಿನ ಪ್ರಭಾವ ಶೀಘ್ರವಾಗಿ ಹೃದಯದಲ್ಲಿ ಉಂಟಾಗುತ್ತದೆ; ಹೃದಯವು ಕಣ್ಣುಗಳನ್ನು ಅನುಸರಿಸಿ ದುಃಖಭರಿತವಾಗುತ್ತದೆ. ಕೃತ್ರಿಮವಾಗಿ ನಗುವುದಾದರೂ ಸರಿ, ಆ ಕಾರಣದಿಂದ ಹೃದಯವು ಹರ್ಷಭರಿತವಾಗುತ್ತದೆ. ಇದೇ ಪ್ರಕಾರ, ಪ್ರಾರ್ಥನೆಯಲ್ಲಿ ಮಾಡುವ ಶಾರೀರಿಕ ಪ್ರಣಾಮವು ಆತ್ಮದಲ್ಲೂ ಭಕ್ತಿ ವಿನಯಾದಿ ನಮ್ರಭಾವಗಳನ್ನು ಉಂಟುಮಾಡುತ್ತದೆ. ತದ್ವಿರುದ್ಧವಾಗಿ, ಎದೆಯನ್ನು ಮುಂದಕ್ಕೆ ದೂಡಿ, ಕತ್ತನ್ನು ನೇರವಾಗಿ ನಿಲ್ಲಿಸಿ ನಡೆಯುವುದಾದರೆ ಅದು ಅಹಂಭಾವವನ್ನೂ ದುರಭಿಮಾನವನ್ನೂ ಉಂಟುಮಾಡುವುದು. ಈ ಉದಾಹರಣೆಗಳಿಂದ ಬಾಹ್ಯಾಂಗಗಳ ಚಟುವಟಿಕೆಗಳು ಆತ್ಮದ ಸ್ಥಿತಿಯನ್ನು ತದನುಸಾರವಾಗಿ ಸ್ವಾಧೀನಪಡಿಸುತ್ತವೆಯೆಂದು ಸ್ಪಷ್ಟವಾಗುತ್ತದೆ. ಇದೇ ಪ್ರಕಾರವೇ ವಿವಿಧ ತರದ ಆಹಾರ ಪದಾರ್ಥಗಳು ಸಹ

ಹೃದಯ ಮತ್ತು ಮಾನಸಿಕ ಶಕ್ತಿಗಳ ಮೇಲೆ ಪ್ರಭಾವವನ್ನು ಬೀರುತ್ತವೆಯೆಂಬುದು ಅನುಭವದಿಂದ ತಿಳಿಯಬಹುದು. ಉದಾಹರಣೆಗಾಗಿ, ಮಾಂಸಾಹಾರವನ್ನು ಸಂಪೂರ್ಣವಾಗಿ ತ್ಯಜಿಸುವ ಸಸ್ಯಾಹಾರಿಗಳ ಧೈರ್ಯಶಕ್ತಿಯು ಕ್ರಮೇಣ ಕುಂದುತ್ತಾ ಅವರು ಅಧೈರ್ಯವಂತರಾಗಿ ಕೊನೆಗೆ ಶೌರ್ಯದಂತಹ ದೇವದತ್ತವಾದ ಪ್ರಶಂಸನೀಯ ಗುಣವನ್ನು ಕಳೆದುಕೊಳ್ಳುವರು. ಇದಕ್ಕೆ ಪ್ರಕೃತಿಯಲ್ಲಿ ಧಾರಾಳ ಉದಾಹರಣೆಗಳನ್ನು ಕಾಣಬಹುದು. ಮಾಂಸಾಹಾರಿ ಮೃಗಗಳಿಗಿರುವಷ್ಟು ಧೈರ್ಯ ಸಸ್ಯಾಹಾರಿ ಮೃಗಗಳಿಗಿರುವುದಿಲ್ಲ. ಪಕ್ಷಿಗಳಿಗೆ ಸಂಬಂಧಿಸಿಯೂ ಇದೇ ಪ್ರಕಾರದ ಸ್ವಭಾವಗುಣವನ್ನು ನಾವು ಕಾಣುತ್ತಿದ್ದೇವೆ. ಆದುದರಿಂದ ಆಹಾರ ಕ್ರಮದಿಂದಾಗಿ ಸ್ವಭಾವದಲ್ಲಿ ವ್ಯತ್ಯಾಸವುಂಟಾಗುತ್ತದೆ ಎಂಬುದರಲ್ಲಿ ಸಂಶಯವಿಲ್ಲ. ಮಾಂಸಾಹಾರವನ್ನು ತ್ಯಜಿಸಿದ ಕಾರಣದಿಂದ ಕೆಲವು ನ್ಯೂನತೆಗಳು ಉಂಟಾಗುವಂತೆಯೇ, ಅದನ್ನು ಮಿತಿಮೀರಿ ತಿಂದರೂ ಸ್ವಭಾವವು ಹಾನಿಕಾರವಾಗುತ್ತದೆ. ಸಸ್ಯಾಹಾರವನ್ನು ಬಹಳ ಕಡಿಮೆ ಮಾಡಿ ಮಾಂಸಾಹಾರವನ್ನು ಅಧಿಕವಾಗಿ ಭಕ್ಷಿಸಿದರೆ ಸಹನೆ, ಸೌಮ್ಯತೆ ಎಂಬೀ ಗುಣಗಳು ಕುಂದಿಹೋಗುತ್ತವೆ. ಆದರೆ ಆಹಾರ ಸೇವನಾಕ್ರಮದಲ್ಲಿ ಒಂದು ಮಧ್ಯನೆಲೆಯನ್ನು ಕೈಗೊಳ್ಳುವವರಿಗೆ, ಧೈರ್ಯವಿದ್ದ ಹಾಗೆಯೇ ಸಹನೆ, ಸೌಮ್ಯತೆ ಎಂಬೀ ಗುಣಗಳೂ ಇರುತ್ತವೆ. ಈ ತತ್ವವನ್ನು ಪರಿಗಣಿಸಿ ಪವಿತ್ರ ಖುರ್‌ಆನ್ ಹೀಗೆ ಉಪದೇಶಿಸುತ್ತದೆ:

كُلُوا وَاشْرَبُوا وَلَا تُسْرِفُوا

"ತಿನ್ನಿರಿ, ಕುಡಿಯಿರಿ; ಆದರೆ ಮಿತಿಮೀರಬೇಡಿರಿ" (7:32). ಅಂದರೆ, ಮಾಂಸವನ್ನೂ ಮತ್ತಿತರ ಆಹಾರ ಪದಾರ್ಥಗಳನ್ನೂ ತಿನ್ನಿರಿ; ಆದರೆ ಸ್ವಭಾವವೂ ಆರೋಗ್ಯವೂ ಹಾನಿಗೊಳಗಾಗದಿರಲು ಯಾವುದೇ ವಸ್ತುವನ್ನೂ ಅಮಿತವಾಗಿ ಸೇವಿಸಬೇಡಿರಿ.

ಶಾರೀರಿಕ ಚಟುವಟಿಕೆಗಳೂ ಕ್ರಿಯೆಗಳೂ ಆತ್ಮದ ಮೇಲೆ ಪ್ರಭಾವವನ್ನು ಬೀರುವಂತೆಯೇ, ಆತ್ಮಶಕ್ತಿಯೂ ಶರೀರದ ಮೇಲೆ ಪ್ರಭಾವವನ್ನು ಬೀರುತ್ತದೆ. ದುಃಖಭರಿತ ವ್ಯಕ್ತಿಯ ಕಣ್ಣುಗಳು ಕಣ್ಣೀರಿನಿಂದ ತುಂಬುವ ರೀತಿಯಲ್ಲೇ ಸಂತೋಷ ವುಂಟಾಗುವಾಗ ಅವನು ಮಂದಸ್ಮಿತನಾಗುತ್ತಾನೆ. ಹಾಗೆಯೇ ತಿನ್ನುವುದು, ಕುಡಿಯುವುದು, ನಿದ್ರಿಸುವುದು, ಎಚ್ಚರಗೊಳ್ಳುವುದು, ಚಲಿಸುವುದು, ಶ್ರಮಪಡುವುದು, ವಿಶ್ರಾಂತಿ ಪಡೆಯುವುದು, ಸ್ನಾನ ಮಾಡುವುದು ಮುಂತಾದ ಶಾರೀರಿಕವಾದ ಎಲ್ಲ ಕ್ರಿಯೆಗಳೂ ದಿಟವಾಗಿಯೂ ನಮ್ಮ ಆತ್ಮದ ಮೇಲೆ ವಿವಿಧ ರೀತಿಯ ಪರಿಣಾಮಗಳನ್ನು ಉಂಟುಮಾಡುತ್ತವೆ. ನಮ್ಮ ಶರೀರ ರಚನೆಯು ನಮ್ಮ ಮಾನವೀಯತೆಯೊಂದಿಗೆ

ಅತಿ ನಿಕಟ ಸಂಬಂಧ ಹೊಂದಿರುತ್ತದೆ. ಮಿದುಳಿನ ಒಂದು ಭಾಗದ ಮೇಲೆ ಏಟು ಬಿದ್ದರೆ ಜ್ಞಾಪಕ ಶಕ್ತಿಯು ನಷ್ಟವಾಗುತ್ತದೆ. ಇನ್ನೊಂದು ಭಾಗದ ಮೇಲೆ ಏಟು ಬಿದ್ದರೆ ಪ್ರಜ್ಞೆ ತಪ್ಪುತ್ತದೆ. ಪ್ಲೇಗಿನಂತಹ ಸಾಂಕ್ರಾಮಿಕ ರೋಗದ ವಿಷಾಣುಗಳು ಬೆರೆತ ವಾಯು ಮೊದಲು ಶರೀರವನ್ನು ಪ್ರವೇಶಿಸಿ ನಂತರ ಮನಸ್ಸನ್ನು ಬಾಧಿಸಿ ಕೆಲವು ಘಂಟೆಗಳೊಳಗೆ ಅದು ನೈತಿಕ ಗುಣಗಳ ವಾಸಸ್ಥಳವಾದ ಆಂತರಿಕ ವ್ಯವಸ್ಥೆಯನ್ನು ಅಲ್ಲೋಲಕಲ್ಲೋಲ ಮಾಡುತ್ತದೆ. ಕೊನೆಗೆ ಆ ರೋಗಪೀಡಿತನು ಹುಚ್ಚನಂತಾಗಿ ಸ್ವಲ್ಪ ಹೊತ್ತಿನೊಳಗೆ ಮರಣವನ್ನಪ್ಪುವನು. ಸಂಕ್ಷಿಪ್ತವಾಗಿ, ಶಾರೀರಿಕ ಪೀಡೆಗಳು ವಿವಿಧ ರೀತಿಯ ಆಂತರಿಕ ಪರಿಣಾಮಗಳಿಗೆ ಕಾರಣವಾಗುತ್ತವೆ. ಶರೀರಕ್ಕೂ ಆತ್ಮಕ್ಕೂ ಪರಸ್ಪರ ಗೂಢವಾದೊಂದು ದೃಢ ಸಂಬಂಧವಿದೆಯೆಂದೂ ಈ ರಹಸ್ಯವನ್ನು ಬೇಧಿಸಲು ಮಾನವನು ಶಕ್ತನಲ್ಲವೆಂದೂ ಇದರಿಂದ ವ್ಯಕ್ತವಾಗುತ್ತದೆ.

## ಆತ್ಮದ ಉಗಮ

ಆತ್ಮಕ್ಕೂ ಶರೀರಕ್ಕೂ ಅನ್ಯೋನ್ಯವಿರುವ ಈ ಸಂಬಂಧವನ್ನು ರುಜುಪಡಿಸಲು ಬಲವತ್ತಾದ ಇನ್ನೊಂದು ಸಾಕ್ಷ್ಯ – ಶರೀರವು ಆತ್ಮದ ಜನ್ಮದಾತೆಯೆಂಬ ಸಿದ್ಧಾಂತವಾಗಿದೆ. ಆತ್ಮವೆಂದರೆ ಅಂತರಿಕ್ಷದಿಂದಲೋ ಅಥವಾ ಬೇರೆಲ್ಲಿಂದಲೋ ಬಂದು ಗರ್ಭಿಣಿಯ ಉದರದಲ್ಲಿ ಪ್ರವೇಶಿಸುವ ವಸ್ತುವಲ್ಲ. ಅದು ಬೀಜದಲ್ಲಿ ಗುಪ್ತವಾಗಿ ಅಡಗಿರುವಂತಹ ಹಾಗೂ ಗರ್ಭಾಶಯದಲ್ಲಿ ಮಾಂಸಪಿಂಡದ ಬೆಳವಣಿಗೆಯೊಂದಿಗೆ ಬೆಳೆಯುತ್ತಾ ಬರುವ ಒಂದು ತೇಜಸ್ಸಾಗಿದೆ. ಆತ್ಮವೆಂದರೆ ಮಾತೃಗರ್ಭದಲ್ಲಿ ಬೀಜದಿಂದ ತಯಾರಾಗಿ ಮಾಂಸಪಿಂಡದಲ್ಲಿ ಪ್ರಕಾಶಿಸಿ ಬರುವ ಒಂದು ಶಕ್ತಿಯಾಗಿದೆ ಎಂದು ಪವಿತ್ರ ಖುರ್‌ಆನ್ ಹೇಳುತ್ತದೆ. ಅದು ಹೀಗೆನ್ನುತ್ತದೆ:

ثُمَّ اَنْشَاْنٰهُ خَلْقًا اٰخَرَ ؕ فَتَبٰرَكَ اللّٰهُ اَحْسَنُ الْخٰلِقِيْنَ

> ನಂತರ ಗರ್ಭಾಶಯದಲ್ಲಿ ರೂಪಿಸಲ್ಪಟ್ಟ ಪಿಂಡವನ್ನು ನಾವು ಇನ್ನೊಂದು ಮಾದರಿಯಲ್ಲಿ ರೂಪಿಸಿ ಆತ್ಮವೆಂಬ ಒಂದು ಸೃಷ್ಟಿಯನ್ನು ಬಹಿರಂಗಪಡಿಸುತ್ತೇವೆ; ಅತುಲ್ಯನೂ ಸೃಷ್ಟಿಕರ್ತನೂ ಆಗಿರುವ ಅಲ್ಲಾಹನು ಉತ್ಕೃಷ್ಟನು. **(23:15)**

ಈ ಖುರ್‌ಆನ್ ವಚನದಲ್ಲಿ ಶರೀರದಿಂದಲೇ ಇನ್ನೊಂದು ಸೃಷ್ಟಿಯನ್ನು ಬಹಿರಂಗಪಡಿಸಲಾಗುವುದೆಂದು ಪ್ರಸ್ತಾಪಿಸಿದುದರಲ್ಲಿ, ಆತ್ಮದ ಯಥಾರ್ಥ ಸ್ವರೂಪ ವನ್ನು ತೋರಿಸುವ ಹಾಗೂ ಶರೀರಕ್ಕೂ ಆತ್ಮಕ್ಕೂ ಪರಸ್ಪರ ಇರುವ ಗಾಢವಾದ ಸಂಬಂಧವನ್ನು ಸೂಚಿಸುವ ಒಂದು ತತ್ವವು ಅಡಕವಾಗಿದೆ. ಮನುಷ್ಯನ ಪ್ರತಿಯೊಂದು

ಕೃತ್ಯ, ಮಾತು ಮತ್ತು ಶಾರೀರಿಕ ಚಲನವಲನ ಪರಮಾತ್ಮನಿಗಾಗಿ ಅವನ ಪರಿಶುದ್ಧ ನಿಯಮಕ್ಕೆ ಅನುಸಾರವಾಗಿರುವಾಗ ಅದು ಇದೇ ತತ್ವಕ್ಕೆ ಅಧೀನವಾಗಿರುವುದೆಂದು ಇದು ತಿಳಿಸಿಕೊಡುತ್ತದೆ. ಅಂದರೆ, ಮನುಷ್ಯನ ಬೀಜದಲ್ಲಿ ಅಡಗಿರುವಂತಹ ಒಂದು ತೇಜಸ್ಸು ನಿಷ್ಠೆಯಿಂದ ಕೂಡಿದ ಅವನ ಎಲ್ಲ ಕ್ರಿಯೆಗಳಲ್ಲೂ ಅಡಗಿರುತ್ತದೆ. ಸತ್ಕರ್ಮ ಚಟುವಟಿಕೆಗಳಿಂದ ಕೂಡಿದ ಶರೀರವು ಕ್ರಮೇಣ ಬೆಳೆಯುತ್ತಿದ್ದಂತೆಯೇ ಅದರ ತೇಜಸ್ಸು ಪೂರ್ಣ ಪ್ರಭಾವದಿಂದ ಪ್ರಕಾಶಿಸಿ ಜ್ಯೋತಿರ್ಮಯವಾದ ಶಕ್ತಿಯನ್ನು ಪ್ರಕಟಪಡಿಸುತ್ತದೆ. ಹೀಗೆ ದೇಹವು ಪೂರ್ಣ ಬೆಳವಣಿಗೆಯನ್ನು ಪಡೆದಾಗ ಅಂತರಂಗದಿಂದ ಮಿಂಚಿನಂತೆ ಒಂದು ಪ್ರಕಾಶವು ಥಟ್ಟನೆ ತೋರಲಾರಂಭಿಸುತ್ತದೆ. ಈ ಸ್ಥಿತಿಯ ಕುರಿತು ಉಪಮಾ ರೂಪದಲ್ಲಿ ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೀಗೆನ್ನುತ್ತಾನೆ:

فَإِذَا سَوَّيْتُهُۥ وَنَفَخْتُ فِيهِ مِن رُّوحِى فَقَعُوا۟ لَهُۥ سَٰجِدِينَ

> ನಾನು ಆ ಶರೀರವನ್ನು ರೂಪಿಸಿ, ಮಹತ್ತಾದ ಪ್ರಕಾಶಗಳನ್ನು ಅದರಲ್ಲಿ ಸಮೀಕರಿಸಿ, ಅದರಲ್ಲಿ ನನ್ನ ಆತ್ಮವನ್ನು ಊದಿರುವುದರಿಂದ ನೀವೆಲ್ಲರೂ ಅದಕ್ಕಾಗಿ ವಿನಯದಿಂದ ಸಾಷ್ಟಾಂಗವೆರಗಿರಿ. **(15:30)**

ಸತ್ಕರ್ಮದಿಂದ ಕೂಡಿದ ಶರೀರವು ಪೂರ್ಣ ರೂಪವನ್ನು ಪಡೆದಾಗ ಅಂತರಂಗದಿಂದ ಒಂದು ಆತ್ಮ ತೇಜಸ್ಸು ಪ್ರಕಾಶಿಸಲು ತೊಡಗುತ್ತದೆಯೆಂಬ ಸಂಗತಿಯನ್ನೇ ಈ ವಾಕ್ಯ ಸೂಚಿಸುತ್ತದೆ. ಲೌಕಿಕ ವ್ಯವಹಾರಗಳಿಂದ ಮನುಷ್ಯನು ಸಂಪೂರ್ಣವಾಗಿ ವಿಮುಕ್ತನಾದ ನಂತರ ರೂಪಿಸಲ್ಪಡುವುದರಿಂದಲೇ ಅದರಿಂದ ಪ್ರಕಟವಾಗುವ ತೇಜಸ್ಸಿಗೆ ಪರಮಾತ್ಮನು ತನ್ನೊಂದಿಗೆ ಸಂಬಂಧವನ್ನು ಕಲ್ಪಿಸಿರುವನು. ಮೊದಲು ಮಂದವಾಗಿದ್ದ ಆ ದೈವಿಕ ಪ್ರಕಾಶವು ಈ ಘಟ್ಟದಲ್ಲಿ ಪ್ರಜ್ವಲಿಸುತ್ತದೆ. ದೇವನ ಈ ಮಹತ್ವದ ಮುಂದೆ ಎಲ್ಲರೂ ಸಾಷ್ಟಾಂಗವೆರಗಲು ನಿರ್ಬಂಧಿತರಾಗಿರುತ್ತಾರೆ. ಆದ್ದರಿಂದ ಈ ದಿವ್ಯ ತೇಜಸ್ಸು ಪ್ರಕಟವಾಗುವಾಗ ಅಂಧಕಾರದ ಪ್ರೇಮಿಯಾದ ದುರಾತ್ಮ (ಇಬ್ಲೀಸ್) ಹೊರತು ಸಕಲರೂ ಅದರೆಡೆಗೆ ಆಕರ್ಷಿತರಾಗಿ ಅದಕ್ಕೆ ಶಿರಬಾಗುವರು.

ಇಲ್ಲಿ ಇನ್ನೊಂದು ಸೂಕ್ಷ್ಮ ವಿಷಯದ ಕುರಿತು ವಿವರಿಸುವುದು ನಿಷ್ಪ್ರಯೋಜಕವಲ್ಲ. ಅದೇನೆಂದರೆ, ಗರ್ಭಾಶಯದಲ್ಲಿ ಹುಟ್ಟಿದ ಭ್ರೂಣವು ನಾಲ್ಕು ತಿಂಗಳು ಹತ್ತು ದಿನಗಳ ನಂತರ ಚಟುವಟಿಕೆ ಆರಂಭಿಸುತ್ತದೆ. ಈ ಕಾಲ ಭ್ರೂಣವು ಗರ್ಭಾಶಯದೊಳಗೆ ಇರುವ ಅವಧಿಯ ಸುಮಾರು ಅರ್ಧದಷ್ಟಾಗುತ್ತದೆ. ಗರ್ಭಾಶಯದೊಳಗೆ ಭ್ರೂಣವು

ನಾಲ್ಕನೇ ತಿಂಗಳಲ್ಲಿ ಹೇಗೆ ತನ್ನ ಅಸ್ತಿತ್ವದ ಕುರುಹನ್ನು ತೋರಿಸುತ್ತದೋ ಹಾಗೂ ಜಡ ಸ್ಥಿತಿಯಿಂದ ಚಲನೆಯ ಸ್ಥಿತಿಗೆ ಬರುತ್ತದೋ ಅದೇ ರೀತಿಯ ನಿಸರ್ಗ ನಿಯಮ ಆಧ್ಯಾತ್ಮಿಕತೆಯ ಹುಟ್ಟಿನಲ್ಲೂ ಅನ್ವಯಿಸುತ್ತದೆ. ಬೇರೆ ಮಾತಿನಲ್ಲಿ ಹೇಳುವುದಾದರೆ, ಭ್ರೂಣವು ಗರ್ಭಾಶಯದ ಗುಪ್ತ ಭಾಗದಲ್ಲಿ ಸುಮಾರು ಅರ್ಧಾಂಶ ಕಾಲವನ್ನು ಜಡತ್ವದಿಂದ ಕಳೆದ ನಂತರ ತನ್ನ ಅಸ್ತಿತ್ವದ ಚಿಹ್ನೆಗಳನ್ನು ತೋರಿಸುವ ಪ್ರಕಾರವೇ ಆಧ್ಯಾತ್ಮಿಕ ಜೀವನಕ್ಕೂ ವಿಧಿಸಲ್ಪಟ್ಟಿದೆ. ಮನುಷ್ಯನಿಗೆ ಮುಪ್ಪು ಬಾಧಿಸುವುದಕ್ಕಿಂತ ಮುಂಚಿನ ಅವನ ಜೀವನದ ಉತ್ತಮ ಅಂಶ ಸುಮಾರು ಎಂಬತ್ತು ವರ್ಷಗಳಾಗಿವೆ. ಅದರ ಅರ್ಧ ನಲ್ವತ್ತು ವರ್ಷಗಳು. ನಾಲ್ಕು ತಿಂಗಳ ಬಳಿಕ ಗರ್ಭಾಶಯದಲ್ಲಿರುವ ಭ್ರೂಣವು ತನ್ನ ಅಸ್ತಿತ್ವದ ಸೂಚನೆಯನ್ನು ತೋರಿಸುವುದರೊಂದಿಗೆ ಇದಕ್ಕೆ ತುಂಬಾ ಸಾಮ್ಯತೆ ಇದೆ. ಅನುಭವದಿಂದ ತಿಳಿದುಬರುವುದೇನೆಂದರೆ, ಮನುಷ್ಯನು ತನ್ನ ಉತ್ತಮ ಜೀವಮಾನದ ಅರ್ಧಾಂಶ, ಅಂದರೆ ನಲ್ವತ್ತು ವರ್ಷ (ಅದು ಗರ್ಭಾಶಯದಲ್ಲಿರುವ ಭ್ರೂಣದ ನಾಲ್ಕು ತಿಂಗಳಿಗೆ ಸಮಾನ) ಕಳೆದಾಗ, ಅವನಲ್ಲಿ ಸತ್ಯ ಮನೋಧರ್ಮವಿದ್ದರೆ, ಅದು ಚೇತನಗೊಂಡು ಈ ವಿಶಿಷ್ಟ ಸಂದರ್ಭದಲ್ಲಿ ತನ್ನ ಅಸ್ತಿತ್ವವನ್ನು ತಿಳಿಯಪಡಿಸುತ್ತದೆ.

ಸಾಮಾನ್ಯವಾಗಿ ಮನುಷ್ಯನು ತನ್ನ ಪ್ರಾಯ ನಲ್ವತ್ತು ವರ್ಷಕ್ಕೆ ಮೊದಲು ಪಕ್ವತೆ ಹೊಂದಿರುವುದಿಲ್ಲ. ಮೊದಲಿನ ಏಳೆಂಟು ವರ್ಷಗಳು ಬಾಲ್ಯಾವಸ್ಥೆಯಲ್ಲಿ ಕಳೆಯುತ್ತದೆ. ಅನಂತರ ಸುಮಾರು 25, 26 ವರ್ಷ ಪ್ರಾಯದ ವರೆಗೆ ವಿದ್ಯಾರ್ಜನೆ, ಆಟೋಟ, ವಿನೋದಗಳಲ್ಲಿ ಕಳೆಯುತ್ತದೆ. ಆ ಬಳಿಕ ವಿವಾಹ, ಪತ್ನಿ – ಮಕ್ಕಳ ಪೋಷಣೆ ಅಥವಾ ಸಂಪತ್ತು ಮತ್ತು ಗೌರವ ಸಂಪಾದಿಸುವುದರಲ್ಲಿ ತೀವ್ರವಾಗಿ ಪ್ರಯತ್ನಪಡುತ್ತಾನೆ. ಈ ಸಂದರ್ಭದಲ್ಲಿ ಅವನು ದೇವನೆಡೆಗೆ ತಿರುಗಿದರೂ ಭೌತಿಕ ಲಾಲಸೆಗಳು ಜೊತೆಗೂಡಿರುತ್ತವೆ. ಅವನು ಹೆಚ್ಚಾಗಿ ಲೌಕಿಕ ಗಳಿಕೆಗೋಸ್ಕರ ಪ್ರಾರ್ಥಿಸುತ್ತಾನೆ. ಅವನ ರೋದನಗಳು ಕೆಲವು ಪ್ರಾಪಂಚಿಕ ಅಭಿಲಾಷೆಗಳಿಂದ ಕೂಡಿರುತ್ತವೆ. ಮರಣಾನಂತರ ಜೀವನದ ಕುರಿತು ಅವನಿಗೆ ಬಲಹೀನವಾದ ವಿಶ್ವಾಸವಿರುತ್ತದೆ. ಮೃತ್ಯು ಬಹಳ ದೂರವಿರುವುದಾಗಿ ಅವನು ಭಾವಿಸುತ್ತಾನೆ. ಅಣೆಕಟ್ಟು ಒಡೆದು ಹೋಗಿ ಸುತ್ತಮುತ್ತಲಿನ ಭೂಪ್ರದೇಶಗಳು ನಾಶವಾಗುವ ರೀತಿಯಲ್ಲಿ ಇಂದ್ರಿಯ ಲೋಲುಪತೆಯ ಪ್ರವಾಹ ಮನುಷ್ಯನ ಜೀವನಕ್ಕೆ ಅಪಾಯ ಒಡ್ಡುತ್ತದೆ. ಈ ಸ್ಥಿತಿಯಲ್ಲಿ ಅವನು ಮರಣಾನಂತರ ಜೀವನದ ಸೂಕ್ಷ್ಮಾತಿಸೂಕ್ಷ್ಮ ವಿಚಾರಗಳನ್ನು ಹೇಗೆ ನಂಬುತ್ತಾನೆ? ಬದಲಿಗೆ, ಧರ್ಮದ ಬಗ್ಗೆ ಅವನು ಅಪಹಾಸ್ಯ ಮಾಡುತ್ತಾನೆ ಮತ್ತು ತನ್ನ ಒಣ ತರ್ಕ ಮತ್ತು ಸಿದ್ಧಾಂತವನ್ನು ಮುಂದಿಡುತ್ತಾನೆ.

ಹೌದು, ಅವನು ಸುಸ್ವಭಾವಿಯಾಗಿದ್ದರೆ ದೇವವಿಶ್ವಾಸಿ ಸಹ ಆಗುತ್ತಾನೆ. ಆದರೆ ಹೃತ್ಪೂರ್ವಕವಾಗಿ ಮತ್ತು ಪ್ರಾಮಾಣಿಕವಾಗಿ ಅಲ್ಲ; ಬರೇ ತನ್ನ ವಿಜಯಪ್ರಾಪ್ತಿಯ ಶರತ್ತಿನಲ್ಲಿ, ತನ್ನ ಲೌಕಿಕ ಆಶಾಭಿಲಾಷೆಗಳು ಸಿದ್ಧಿಸಿದರೆ ದೇವನ ಕಡೆಗೆ; ಇಲ್ಲವಾದರೆ ಶೈತಾನನ ಕಡೆಗೆ.

ಸಂಕ್ಷಿಪ್ತವಾಗಿ, ಒಬ್ಬನ ಯೌವ್ವನ ಪ್ರಾಯದಲ್ಲಿ ಬಹಳ ವಿಷಮಾವಸ್ಥೆ ಉಂಟಾಗುತ್ತದೆ. ದೇವಕೃಪೆ ಇಲ್ಲದಿದ್ದರೆ ಅವನು ನರಕದ ಗುಂಡಿಯಲ್ಲಿ ಬೀಳುತ್ತಾನೆ. ವಾಸ್ತವದಲ್ಲಿ ಇದೇ ಪ್ರಾಯ ಎಲ್ಲ ಕೆಡುಕುಗಳ ಬೇರಾಗಿದೆ. ಇದೇ ಪ್ರಾಯದಲ್ಲಿ ಮನುಷ್ಯನು ಬಾಹ್ಯರೋಗಗಳಿಗೂ ಗುಪ್ತ ರೋಗಗಳಿಗೂ ತುತ್ತಾಗುತ್ತಾನೆ. ಇದೇ ಅಪಕ್ವ ಪ್ರಾಯದ ತಪ್ಪುಗಳಿಂದ ಕೆಲವೊಮ್ಮೆ ಸತ್ಯ ಮತ್ತು ನಿರ್ವಿಕಲ್ಪ ದೇವನಿಂದ ಮುಖ ತಿರುಗಿಸುತ್ತಾನೆ. ಈ ಪ್ರಾಯದಲ್ಲಿ ದೇವಭಯ ಕಮ್ಮಿ ಮತ್ತು ಇಂದ್ರಿಯ ಸುಖದ ಹುಡುಕಾಟ ಹೆಚ್ಚು ಇದ್ದು ಸ್ವಾರ್ಥವು ವಿಜಯ ಸಾಧಿಸುತ್ತದೆ. ಅವನು ಯಾರ ಹಿತೋಪದೇಶವನ್ನೂ ಆಲಿಸುವುದಿಲ್ಲ. ಅವನು ಈ ಪ್ರಾಯದ ಕೆಡುಕುಗಳ ಪರಿಣಾಮಗಳನ್ನು ತನ್ನ ಉಳಿದ ಜೀವಿತಾವಧಿಯಲ್ಲಿ ಅನುಭವಿಸುತ್ತಾನೆ. ಪ್ರಾಯ ನಲ್ವತ್ತು ಸಮೀಪಿಸುವಾಗ ಯೌವ್ವನದ ಹುಚ್ಚಾಟ ಸ್ವಲ್ಪ ಸ್ವಲ್ಪ ಕುಂದಲು ತೊಡಗುತ್ತದೆ. ಅವನು ತನ್ನಿಂದಾದ ಪ್ರಮಾದಗಳಿಗೆ ಪಶ್ಚಾತ್ತಾಪಪಡುತ್ತಾನೆ. ಆ ಬಗ್ಗೆ ಅವನನ್ನು ಉಪದೇಶಿಸುತ್ತಿದ್ದವರು ಸೋತಿದ್ದರು. ಅವನ ಪ್ರಾಯ ಹೆಚ್ಚುತ್ತಾ ಹೋದಂತೆ ಅವನ ದೇಹಸ್ಥಿತಿ ಕುಸಿದು ಇಂದ್ರಿಯೇಚ್ಛೆಗಳು ತನ್ನಿಂತಾನೇ ಕಡಿಮೆಯಾಗಲು ತೊಡಗುತ್ತವೆ. ಆ ಬಿಸಿ ರಕ್ತ ಈಗೆಲ್ಲಿ? ಅಂಗಾಂಗಗಳ ಶಕ್ತಿ ಮತ್ತು ಯೌವ್ವನದ ಪ್ರಮತ್ತ ಭೋಗವಿಲಾಸ ಈಗೆಲ್ಲಿ? ಈಗ ಅವನತಿ ಮತ್ತು ದುರ್ಬಲತೆಯ ಕಾಲ ಸಮೀಪಿಸುತ್ತಿದೆ. ಈ ಹಂತದಲ್ಲಿ ಪದೇ ಪದೇ ತನ್ನ ಹಿರಿಯರ ಮೃತ್ಯುವನ್ನು ಕಾಣಬೇಕಾಗುತ್ತದೆ. ಕೆಲವು ಸಲ ತನಗಿಂತ ಕಿರಿಯರು ಸಹ ವಿಧಿವಶರಾಗುವುದನ್ನು ಕಂಡು ಕಂಗಾಲಾಗುತ್ತಾನೆ. ಪ್ರಾಯಶಃ ಅವನ ಮಾತಪಿತರು ಸಹ ಆಗ ಮರಣಪಟ್ಟಿರುತ್ತಾರೆ. ಲೋಕದ ನಶ್ವರತೆಯ ಅನೇಕ ಉದಾಹರಣೆಗಳು ಗೋಚರಿಸುತ್ತವೆ. ದೇವನು ಅವನ ಮುಂದೆ ಒಂದು ಕನ್ನಡಿಯನ್ನು ಇಟ್ಟು, 'ನೋಡು, ಇದು ಲೋಕದ ಕಥೆಯಾಗಿದೆ. ಅದಕ್ಕೋಸ್ಕರ ನೀನು ಜೀವ ಬಿಡುತ್ತೀ, ಅದರ ಪರಿಣಾಮ ಇದಾಗಿದೆ' ಎಂದು ಸೂಚಿಸುತ್ತಾನೆ. ಆಗ ಅವನು ತಾನು ಮಾಡಿದ ತಪ್ಪಿಗೋಸ್ಕರ ಪಶ್ಚಾತ್ತಾಪಪಡುತ್ತಾನೆ ಮತ್ತು ಒಂದು ದೊಡ್ಡ ಬದಲಾವಣೆ ಅವನಲ್ಲಿ ಉಂಟಾಗುತ್ತದೆ. ಒಂದು ಹೊಸ ಲೋಕ ಶುರುವಾಗುತ್ತದೆ. ಪ್ರಾಮಾಣಿಕತೆ ಮತ್ತು ಆಜ್ಞಾಪಾಲನೆಯ ಸ್ವಭಾವ ಅವನಲ್ಲಿ ಉಂಟಾಗುತ್ತದೆ. ಈ ಬಗ್ಗೆ ಅಲ್ಲಾಹನು ಹೀಗೆ ಹೇಳುತ್ತಾನೆ:

وَوَصَّيْنَا الْإِنسَانَ بِوَالِدَيْهِ إِحْسَانًا ۖ حَمَلَتْهُ أُمُّهُ كُرْهًا وَوَضَعَتْهُ كُرْهًا ۖ وَحَمْلُهُ وَفِصَالُهُ
ثَلَاثُونَ شَهْرًا ۚ حَتَّىٰ إِذَا بَلَغَ أَشُدَّهُ وَبَلَغَ أَرْبَعِينَ سَنَةً قَالَ رَبِّ أَوْزِعْنِي أَنْ أَشْكُرَ نِعْمَتَكَ
الَّتِي أَنْعَمْتَ عَلَيَّ وَعَلَىٰ وَالِدَيَّ وَأَنْ أَعْمَلَ صَالِحًا تَرْضَاهُ وَأَصْلِحْ لِي فِي ذُرِّيَّتِي ۖ إِنِّي تُبْتُ
إِلَيْكَ وَإِنِّي مِنَ الْمُسْلِمِينَ

ಮನುಷ್ಯನು ತನ್ನ ತಂದೆತಾಯಂದಿರಿಗೆ ಒಳಿತು ಮಾಡಬೇಕೆಂದು ನಾವು ಆಜ್ಞಾಪಿಸಿದ್ದೇವೆ. ನೋಡು, ನಿನ್ನ ತಾಯಿ ನಿನಗೋಸ್ಕರ ಎಷ್ಟೆಲ್ಲ ಕಷ್ಟ ಅನುಭವಿಸಿ ಗರ್ಭ ಹೊತ್ತಿದ್ದಾಳೆ ಹಾಗೂ ಎಷ್ಟೆಲ್ಲ ಕಷ್ಟ ಸಹಿಸಿ ಹೆತ್ತಿದ್ದಾಳೆ. ಅವಳು ನಿನ್ನ ಗರ್ಭಧಾರಣೆ ಮತ್ತು ಹಾಲೂಡಿಸಲಿಕ್ಕೆ ಮೂವತ್ತು ಮಾಸಗಳಷ್ಟು ಕಾಲ ತೊಂದರೆ ಅನುಭವಿಸಿದಳು. (ಮತ್ತೆ ಅಲ್ಲಾಹನು ಹೇಳುತ್ತಾನೆ:) ಸಜ್ಜನನಾದ ಮನುಷ್ಯನಿಗೆ ನಲ್ವತ್ತು ವರ್ಷ ಪ್ರಾಯವಾಗಿ ಪಕ್ವ ಬುದ್ಧಿಯನ್ನು ಪಡೆಯುವಾಗ ಅಲ್ಲಾಹನ ಆಜ್ಞೆ ನೆನಪಿಗೆ ಬರುತ್ತದೆ. ಅವನು ಹೇಳುತ್ತಾನೆ: "ನನ್ನ ಪ್ರಭೂ, ನೀನು ನನಗೆ ಮತ್ತು ನನ್ನ ಮಾತಾಪಿತರಿಗೆ ನೀಡಿದ ಅನುಗ್ರಹಗಳಿಗೆ ಕೃತಜ್ಞತೆ ಸೂಚಿಸಲಿಕ್ಕೂ ನೀನು ಇಷ್ಟಪಡುವ ಸತ್ಕರ್ಮಗಳನ್ನು ಮಾಡಲಿಕ್ಕೂ ನನಗೆ ಶಕ್ತಿಯನ್ನು ದಯಪಾಲಿಸು. ನನಗೋಸ್ಕರ ನನ್ನ ಸಂತತಿಗಳನ್ನು ಧರ್ಮ ನಿಷ್ಠರನ್ನಾಗಿ ಮಾಡು. ಅಂದರೆ, ನಾನು ನನ್ನ ಮಾತಾಪಿತರಿಗೆ ಸಲ್ಲಿಸತಕ್ಕ ಕರ್ತವ್ಯದಲ್ಲಿ ಲೋಪ ಉಂಟಾಗಿದ್ದರೆ ನನ್ನ ಸಂತತಿ ಹಾಗೆ ಮಾಡದಿರಲಿ. ನಾನು ಸತ್ಪಥದಿಂದ ದೂರಸರಿದಿದ್ದರೆ ಅವರು ಹಾಗೆ ಆಗದಿರಲಿ. ನನ್ನ ದೇವಾ, ನಾನು ಈಗ ಪಶ್ಚಾತ್ತಾಪಪಡುತ್ತೇನೆ. ನಾನು ನಿನಗೆ ಶರಣಾಗುವವರೊಂದಿಗೆ ಸೇರಿದ್ದೇನೆ. **(46:16)**

ಹೀಗೆ ದೇವನು ಈ ವಚನದಲ್ಲಿ ಸ್ಪಷ್ಟಪಡಿಸುವುದೇನೆಂದರೆ, ನಲ್ವತ್ತನೆಯ ವಯಸ್ಸು ಸಜ್ಜನರಿಗೆ ಅನುಗ್ರಹದಾಯಕವಾಗಿದೆ. ಸತ್ಯದ ಅಂತಃಕರಣ ನಲ್ವತ್ತನೆಯ ಪ್ರಾಯದಲ್ಲಿ ಸಚೇತನಗೊಳ್ಳುತ್ತದೆ. ದೇವನ ಪ್ರವಾದಿಗಳ ಪೈಕಿ ಹೆಚ್ಚಿನವರು ಇದೇ ನಲ್ವತ್ತನೆಯ ವಯಸ್ಸಿನಲ್ಲಿ ನಿಯುಕ್ತರಾಗಿದ್ದಾರೆ. ನಮ್ಮ ನೇತಾರರಾದ ಹಝ್‌ರತ್ ಮುಹಮ್ಮದ್ ಮುಸ್ತಫಾ (ಸಲ್ಲಲ್ಲಾಹು ಅಲೈಹಿ ವಸಲ್ಲಮ್) ಸಹ ನಲ್ವತ್ತನೆಯ ವರ್ಷ ಪ್ರಾಯದಲ್ಲಿ ಮನುಷ್ಯ ಕುಲದ ಸುಧಾರಣೆಗೋಸ್ಕರ ನಿಯೋಜಿಸಲ್ಪಟ್ಟರು.

# ಆತ್ಮವು ಒಂದು ಸೃಷ್ಟಿ

ಇನ್ನು ಮೊದಲ ವಿಷಯದ ಕಡೆಗೆ ಹಿಂದಿರುಗೋಣ. ಆತ್ಮವೆಂದರೆ ಗರ್ಭಾಶಯದಲ್ಲಿ ಬೆಳೆಯುತ್ತಿರುವ ಮಾಂಸಪಿಂಡದಿಂದ ಉದ್ಭವಿಸುವ ಒಂದು ತೇಜಸ್ಸಾಗಿದೆಯೆಂದು ಮೇಲೆ ಪ್ರಸ್ತಾಪಿಸಲಾಗಿದೆಯಷ್ಟೆ. ಇಲ್ಲಿ "ಉದ್ಭವಿಸುವುದು" ಎಂಬುದರ ತಾತ್ಪರ್ಯ ಮೊದಲು ನಿಗೂಢವೂ ಅವ್ಯಕ್ತವೂ ಆಗಿರುವ ಆ ಶಕ್ತಿಯು ಶರೀರದ ಪೂರ್ಣ ಬೆಳವಣಿಗೆಯೊಂದಿಗೆ ಕ್ರಮೇಣ ಪ್ರತ್ಯಕ್ಷವಾಗುತ್ತದೆ ಎಂದಾಗಿದೆ. ಮೊದಲು ಅದು ಬೀಜದಲ್ಲೇ ಅಡಗಿರುತ್ತದೆ. ಬೀಜದೊಂದಿಗೆ ಅದಕ್ಕಿರುವ ವರ್ಣನಾತೀತವಾದ ಸಂಬಂಧ ದೇವೇಚ್ಛೆಗೂ ನಿಯಂತ್ರಣಕ್ಕೂ ಅಧೀನವಾಗಿರುತ್ತದೆ. ಆದುದರಿಂದ ಆತ್ಮವೆಂದರೆ ಬೀಜದಲ್ಲೇ ಇರುವ ಒಂದು ತೇಜಸ್ವಿ ಸತ್ವವಾಗಿದೆ. ಒಂದು ವಸ್ತು ಇನ್ನೊಂದು ವಸ್ತುವಿನ ಅಂಶವೆಂಬ ರೀತಿಯಲ್ಲಿ ಅದನ್ನು ಬೀಜದ ಅಂಶವೆಂದು ಹೇಳಲಾಗುವುದಿಲ್ಲ. ಅಥವಾ ಅದು ಹೊರಗಿನಿಂದ ಬಂದು ಸೇರುವುದೆಂದಾಗಲೀ, ಅಂತರಿಕ್ಷದಿಂದ ಭೂಮಿಯ ಮೇಲೆ ಬಿದ್ದು ಬೀಜದೊಂದಿಗೆ ವಿಲೀನವಾಗುವುದೆಂದಾಗಲೀ ಹೇಳಲಾಗುವುದಿಲ್ಲ. ಅದು ಚಕಮುಕಿ ಕಲ್ಲಿನಲ್ಲಿ ಅಗ್ನಿಯು ಅಂತರ್ಗತವಾಗಿರುವಂತೆ ಬೀಜದಲ್ಲಿ ಅಗೋಚರವಾಗಿದ್ದುಕೊಂಡಿರುತ್ತದೆ. ಆತ್ಮವು ಬೇರೊಂದು ವಿಧಾನದಲ್ಲಿ ಆಕಾಶದಿಂದ ಅವತರಿಸುವುದು ಅಥವಾ ಅಂತರಿಕ್ಷದಿಂದ ಭೂಮಿಯ ಮೇಲೆ ಬಿದ್ದು ಯಾವುದಾದರೊಂದು ರೂಪದಲ್ಲಿ ಬೀಜದೊಂದಿಗೆ ಸಂಯೋಜಿಸಿ ಗರ್ಭಾಶಯದಲ್ಲಿ ಪ್ರವೇಶಿಸುವುದೆಂಬ ಅಭಿಪ್ರಾಯವನ್ನು ದೈವಿಕ ಗ್ರಂಥವಾದ ಖುರ್‌ಆನ್ ಒಪ್ಪುವುದಿಲ್ಲ. ಮಾತ್ರವಲ್ಲ, ಆ ಭಾವನೆಯು ಅಸಂಬದ್ಧವೂ ಪ್ರಕೃತಿ ನಿಯಮಕ್ಕೆ ವಿರುದ್ಧವೂ ಆಗಿದೆ. ಕೊಳೆತ ಆಹಾರ ಪದಾರ್ಥಗಳಲ್ಲಿಯೂ ಕೊಳಕು ವ್ರಣಗಳಲ್ಲಿಯೂ ಸಹಸ್ರಾರು ಕ್ರಿಮಿಕೀಟಗಳು ಉಂಟಾಗುವುದನ್ನೂ ಮಲಿನ ಬಟ್ಟೆಗಳಲ್ಲಿ ಹಲವಾರು ಕ್ರಿಮಿಕೀಟಗಳು ಉದ್ಭವಗೊಳ್ಳುವುದನ್ನೂ ಮನುಷ್ಯನ ಜಠರದಲ್ಲಿ ಅನೇಕ ಹುಳಗಳು ಉಂಟಾಗುವುದನ್ನೂ ನಾವು ಕಾಣುತ್ತಿದ್ದೇವೆ. ಈ ಕ್ರಿಮಿಕೀಟಗಳು ಹೊರಗಿನಿಂದ ಬರುತ್ತವೆಯೇ ಅಥವಾ ಆಕಾಶದಿಂದ ಅವತರಿಸುತ್ತವೆಯೇ ಎಂಬುದನ್ನು ಹೇಳಲು ಅಸಾಧ್ಯ. ಆದ್ದರಿಂದ ಆತ್ಮವೆಂದರೆ ಶರೀರದಿಂದಲೇ ಉದ್ಭವಿಸುವ ಒಂದು ಶಕ್ತಿಯೆಂಬ ಸಿದ್ಧಾಂತವು ಸರಿಯಾದುದಾಗಿದೆ. ಇದೇ ಆಧಾರದಿಂದ ಅದೊಂದು ಸೃಷ್ಟಿಯೆಂಬುದು ಸಹ ಸ್ಪಷ್ಟವಾಗುತ್ತದೆ.

ಸರ್ವಶಕ್ತನಾದ ಪರಮಾತ್ಮನು ಶರೀರದಿಂದ ಆತ್ಮವನ್ನು ಸೃಷ್ಟಿಸಿದ ಪ್ರಕಾರ ಅದಕ್ಕೆ ಶರೀರದಿಂದಲೇ ಎರಡನೆಯ ಸೃಷ್ಟಿಯನ್ನು ಸಹ ನೀಡಲು ಉದ್ದೇಶಿಸಿರುವನೆಂದು

ಈ ಮೇಲಿನ ವಿವರಣೆಗಳಿಂದ ತಿಳಿದುಕೊಳ್ಳಬೇಕಾಗಿದೆ. ಆತ್ಮದ ಚಲನವಲನಗಳು ಶರೀರದ ಚಲನವಲನಗಳನ್ನು ಅವಲಂಬಿಸಿವೆ. ನಾವು ಯಾವ ಕಡೆಗೆ ಶರೀರವನ್ನು ತಿರುಗಿಸುತ್ತೇವೆಯೋ ಅದೇ ಕಡೆಗೆ ಆತ್ಮ ಸಹ ತಿರುಗುತ್ತದೆ. ಮನುಷ್ಯನ ಶಾರೀರಿಕಾವಸ್ಥೆಗೆ ಆತ್ಮದೊಂದಿಗಿರುವ ಸಂಬಂಧದ ಪ್ರಾಧಾನ್ಯವನ್ನು ಪರಿಗಣಿಸಿ ದೈವೋಕ್ತ ಧರ್ಮಗ್ರಂಥ ಈ ವಿಷಯದಲ್ಲಿ ಮಾರ್ಗದರ್ಶನವನ್ನೀಯುವುದು ಅತ್ಯಾವಶ್ಯಕವಾಗಿದೆ. ಆದ ಕಾರಣ ಪವಿತ್ರ ಖುರ್‌ಆನ್ ಮನುಷ್ಯನ ಪ್ರಾಕೃತಿಕ ಜೀವಿತವನ್ನು ಪರಿಷ್ಕರಿಸುವ ಕಾರ್ಯದಲ್ಲಿ ತುಂಬಾ ಶ್ರದ್ಧೆವಹಿಸಿರುವುದನ್ನು ಕಾಣಬಹುದು. ಮಾನವನಿಗೆ ಸಂಬಂಧಿಸಿದ ಎಲ್ಲ ಮುಖ್ಯ ಕಾರ್ಯಗಳಲ್ಲೂ ಆ ಪವಿತ್ರ ಗ್ರಂಥ ಅಮೂಲ್ಯ ನಿರ್ದೇಶಗಳನ್ನು ನೀಡುತ್ತದೆ. ಮಾನವನ ಸುಖ, ದುಃಖ, ಭೋಜನ, ಪಾನೀಯ, ಉಡುಪು, ನಿದ್ರೆ, ಮಾತು, ಮೌನ, ವಿವಾಹ, ಏಕಾಂತತೆ, ನಡೆಯುವುದು, ನಿಲ್ಲುವುದು, ಶುಚಿಗೊಳಿಸುವುದು, ಸ್ನಾನ ಮಾಡುವುದು ಮೊದಲಾದ ಕಾರ್ಯಗಳ ಸಂಬಂಧಿಸಿ ವಿಧಿಗಳನ್ನೂ ಆರೋಗ್ಯಾವಸ್ಥೆಯಲ್ಲಿ ಪಾಲಿಸಬೇಕಾದ ನಿರ್ದಿಷ್ಟ ನಿಯಮಗಳನ್ನೂ ಪವಿತ್ರ ಖುರ್‌ಆನ್ ಸ್ಪಷ್ಟವಾಗಿ ಉಪದೇಶಿಸಿರುತ್ತದೆ. ಹೀಗೆ ಅದು ಮನುಷ್ಯನ ದಿನಚರ್ಯೆಗಳಿಗೆ ಸಂಬಂಧಿಸಿದ ಸಕಲ ವಿಷಯಗಳಲ್ಲೂ ಅನುಷ್ಠಾನ ಕ್ರಮಗಳನ್ನು ನಿರ್ದೇಶಿಸಿ, ಶಾರೀರಿಕಾವಸ್ಥೆಗೆ ಆಧ್ಯಾತ್ಮಿಕ ಸ್ಥಿತಿಯ ಮೇಲೆ ಎಷ್ಟರ ಮಟ್ಟಿಗೆ ಸ್ವಾಧೀನ ಶಕ್ತಿ ಇದೆಯೆಂಬುದನ್ನು ತಿಳಿಸಿಕೊಡುತ್ತದೆ. ಈ ವಿಷಯದಲ್ಲಿ ಪವಿತ್ರ ಖುರ್‌ಆನ್ ನೀಡುವ ನಿರ್ದೇಶಗಳನ್ನು ಸವಿಸ್ತಾರವಾಗಿ ಪ್ರತಿಪಾದಿಸಲಿಕ್ಕೆ ಇಲ್ಲಿ ಸಮಯಾವಕಾಶವಿಲ್ಲ.

## ಮನುಷ್ಯನ ಅನುಕ್ರಮವಾದ ಮುನ್ನಡೆ

ಮನುಷ್ಯನನ್ನು ಪ್ರಾಕೃತಾವಸ್ಥೆಯಿಂದ ಉದ್ಧರಿಸಿ ಕ್ರಮೇಣ ಆತನನ್ನು ಹಂತ ಹಂತವಾಗಿ ಅತ್ಯುತ್ಕೃಷ್ಟವಾದ ಆಧ್ಯಾತ್ಮಿಕಾವಸ್ಥೆಯ ಮಟ್ಟಕ್ಕೆ ತಲುಪಿಸಲು ಪವಿತ್ರ ಖುರ್‌ಆನ್ ನೀಡುವ ನಿರ್ದೇಶಗಳೇನೆಂದು ಪರಿಶೋಧಿಸಿದಾಗ ನನಗೆ ಕಾಣಲು ಸಾಧ್ಯವಾದ ವಿವೇಕಯುತವಾದ ವ್ಯವಸ್ಥೆಗಳು ಇವು: ಒಂದನೆಯದಾಗಿ, ಅಲ್ಲಾಹನು ಮನುಷ್ಯನಿಗೆ ಸಾಮೂಹಿಕ ಜೀವಿತಕ್ಕೆ ಆವಶ್ಯಕವಾದ ವ್ಯವಹಾರ ಸಂಪ್ರದಾಯಗಳನ್ನೂ ದಿನಚರ್ಯೆಗಳನ್ನೂ ಕ್ರಮಪಡಿಸುವ ವಿಧಾನಗಳನ್ನು ನಿರ್ದೇಶಿಸಿ – ಅಂದರೆ ತಿನ್ನುವ, ಕುಡಿಯುವ, ಮಾತನಾಡುವ, ಕುಳಿತುಕೊಳ್ಳುವ, ನಿಂತುಕೊಳ್ಳುವ ಮೊದಲಾದ ಎಲ್ಲ ಸಾಮಾಜಿಕ ಸಭ್ಯತೆಗಳನ್ನು ಕಲಿಸಿ – ಆತನನ್ನು ಕಿರಾತತನದಿಂದ ಉದ್ಧರಿಸಲು ಬಯಸುತ್ತಾನೆ. ಈ ಘಟ್ಟದಲ್ಲಿ ಅಲ್ಲಾಹನು ಅವನನ್ನು ಮೃಗೀಯತೆಯಿಂದ

ವಿಮುಕ್ತನನ್ನಾಗಿ ಮಾಡಿ ಸಭ್ಯಾಚಾರದ ಪ್ರಥಮ ಹಂತದ ನೀತಿಗುಣಗಳನ್ನು ಬೋಧಿಸುತ್ತಾನೆ. ಅವನು ಮನುಷ್ಯನ ಈ ಸ್ವಾಭಾವಿಕ ಗುಣಗಳನ್ನು ಮತ್ತೂ ಸುಧಾರಿಸಿ ಉತ್ಕೃಷ್ಟ ಧಾರ್ಮಿಕ ಗುಣಗಳನ್ನು ಅನುಗ್ರಹಿಸಲು ಉದ್ದೇಶಿಸುತ್ತಾನೆ. ಈ ಎರಡೂ ವಿಧಾನಗಳು ಶಾರೀರಿಕಾವಸ್ಥೆಯನ್ನು ಸಂಸ್ಕರಿಸುವವುಗಳಾದುದರಿಂದ ಯಥಾರ್ಥದಲ್ಲಿ ಒಂದೇ ಆಗಿದ್ದರೂ ಅವುಗಳ ಸ್ಥಿತಿಭೇದವು ಅವನ್ನು ಎರಡಾಗಿ ವಿಭಾಗಿಸುತ್ತದೆ. ಹೀಗೆ ಮನುಷ್ಯನು ಕೆಳಮಟ್ಟದಿಂದ ಬಹಳ ಉತ್ಕೃಷ್ಟ ಮಟ್ಟಕ್ಕೆ ತಲುಪಲು ಸಾಧ್ಯವಾಗುವಂತೆ ಸರ್ವಜ್ಞನಾದ ಸೃಷ್ಟಿಕರ್ತನು ನೈತಿಕ ವ್ಯವಸ್ಥೆಯನ್ನು ಅನುಕ್ರಮವಾಗಿ ನಿರ್ದೇಶಿಸಿರುವುದನ್ನು ಕಾಣಬಹುದು.

ಪುರೋಗತಿಯ ಮೂರನೆಯ ಹಂತವಾಗಿ, ಮನುಷ್ಯನು ತನ್ನ ಸೃಷ್ಟಿಕರ್ತನಾದ ಪರಮಾತ್ಮನೊಡನಿರುವ ಅನುರಾಗದಿಂದಲೂ ಅನುಸರಣೆಯಿಂದಲೂ ಮಗ್ನನಾಗಿ, ತನ್ನ ಜೀವಿತ ಸರ್ವಸ್ವವನ್ನೂ ಪರಮಾತ್ಮನಿಗೆ ಸಮರ್ಪಿಸಬೇಕೆಂದು ನಿರ್ದೇಶಿಸಲಾಗಿದೆ. ತ್ಯಾಗದಿಂದ ಕೂಡಿದ ಈ ಉಚ್ಚಸ್ಥಾನವನ್ನು ಜ್ಞಾಪಕದಲ್ಲಿಟ್ಟುಕೊಳ್ಳಲಿಕ್ಕಾಗಿ ಮುಸ್ಲಿಮರ ಧರ್ಮಕ್ಕೆ “ಇಸ್ಲಾಂ” ಎಂದು ನಾಮಕರಣ ಮಾಡಲಾಗಿದೆ. ಏಕೆಂದರೆ ಇಸ್ಲಾಂ ಎಂಬುದರ ಅರ್ಥ ಸಂಪೂರ್ಣವಾಗಿ ದೇವೇಚ್ಛೆಗೆ ವಿಧೇಯನಾಗಿ ಸರ್ವಸ್ವವನ್ನೂ ದೇವನಿಗಾಗಿ ಸಮರ್ಪಿಸುವುದಾಗಿದೆ. ಇದರ ಕುರಿತು ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹನು ಹೀಗೆನ್ನುತ್ತಾನೆ:

بَلَىٰ مَنْ أَسْلَمَ وَجْهَهُ لِلَّهِ وَهُوَ مُحْسِنٌ فَلَهُ أَجْرُهُ عِندَ رَبِّهِ

وَلَا خَوْفٌ عَلَيْهِمْ وَلَا هُمْ يَحْزَنُونَ

ತನ್ನ ಸರ್ವಸ್ವವನ್ನೂ ಪರಮಾತ್ಮನಿಗರ್ಪಿಸಿ ಅವನ ಇಚ್ಛೆಗೆ ಸಂಪೂರ್ಣ ವಿಧೇಯನಾಗುವವನು, ವಾಕ್‌ಮಾತ್ರದ ವಿಶ್ವಾಸದಿಂದ ತೃಪ್ತಿಪಡದೆ ಅದನ್ನು ಸತ್ಕರ್ಮಗಳ ಮೂಲಕ ಸಾಕ್ಷ್ಯಪಡಿಸುವವನು ಖಂಡಿತವಾಗಿಯೂ ಮುಕ್ತಿಯನ್ನು ಪಡೆದವನು. ಅವನಿಗೆ ತನ್ನ ಒಡೆಯನಿಂದ ಪ್ರತಿಫಲವು ಲಭಿಸುವುದು; ಅಂತಹವರಿಗೆ ಯಾವ ಭೀತಿಯೂ ಇಲ್ಲ; ಅವರು ದುಃಖಕ್ಕೀಡಾಗಲಾರರು. **(2:113)**

قُلْ إِنَّ صَلَاتِي وَنُسُكِي وَمَحْيَايَ وَمَمَاتِي لِلَّهِ رَبِّ الْعَالَمِينَ -

لَا شَرِيكَ لَهُ وَبِذَٰلِكَ أُمِرْتُ وَأَنَا أَوَّلُ الْمُسْلِمِينَ

ಹೇಳು – ನನ್ನ ಪ್ರಾರ್ಥನೆ, ನನ್ನ ತ್ಯಾಗ, ನನ್ನ ಜೀವಿತ, ನನ್ನ ಮರಣ ಎಲ್ಲವನ್ನೂ ಲೋಕಾಧಿಪತಿಯಾದ ಪರಮಾತ್ಮನಿಗೆ ಸಮರ್ಪಿಸುತ್ತೇನೆ. ಅವನಿಗೆ

ಸಹಭಾಗಿಯಾಗಿ ಯಾರೂ ಇಲ್ಲ. ಇದಕ್ಕಾಗಿಯೇ ನಾನು ಆಜ್ಞಾಪಿಸಲ್ಪಟ್ಟಿರುವೆನು. ಇಸ್ಲಾಂ ಎಂಬ ಪದದ ಅರ್ಥವನ್ನು ಗ್ರಹಿಸಿ ಜೀವಿಸುವವರಲ್ಲಿ, ಅಂದರೆ ದೇವಮಾರ್ಗದಲ್ಲಿ ಸ್ವಯಂ ಅರ್ಪಿಸುವವರಲ್ಲಿ ನಾನು ಮೊದಲಿಗನು.

**(6:163, 164)**

وَاَنَّ هٰذَا صِرَاطِيْ مُسْتَقِيْمًا فَاتَّبِعُوْهُ ۚ

وَلَا تَتَّبِعُوا السُّبُلَ فَتَفَرَّقَ بِكُمْ عَنْ سَبِيْلِهٖ

ಇದು ನನ್ನ ಸನ್ಮಾರ್ಗವಾಗಿದೆ. ಆದುದರಿಂದ ಬನ್ನಿರಿ; ನನ್ನ ಮಾರ್ಗವನ್ನು ಅನುಸರಿಸಿರಿ; ಬೇರೆ ಮಾರ್ಗವನ್ನು ಅನುಸರಿಸದಿರಿ; ಅದು ನಿಮ್ಮನ್ನು ಪರಮಾತ್ಮನಿಂದ ದೂರವಿಡುವುದು. **(6: 154)**

قُلْ اِنْ كُنْتُمْ تُحِبُّوْنَ اللّٰهَ فَاتَّبِعُوْنِيْ يُحْبِبْكُمُ اللّٰهُ

وَيَغْفِرْ لَكُمْ ذُنُوْبَكُمْ ؕ وَاللّٰهُ غَفُوْرٌ رَّحِيْمٌ

(ಪ್ರವಾದಿಯೇ) ಹೇಳು: ನಿಮಗೆ ದೇವನೊಡನೆ ಪ್ರೀತಿಯಿದ್ದರೆ ನನ್ನನ್ನು ಅನುಸರಿಸಿರಿ. ಆಗ ದೇವನು ನಿಮ್ಮನ್ನು ಪ್ರೀತಿಸುವನು ಮತ್ತು ನಿಮ್ಮ ಅಪರಾಧಗಳನ್ನು ಕ್ಷಮಿಸುವನು; ಅವನು ಕ್ಷಮಿಸುವವನೂ ಕರುಣೆಯುಳ್ಳವನೂ ಆಗಿದ್ದಾನೆ. **(3:32)**

## ಪ್ರಾಕೃತಿಕಾವಸ್ಥೆ ಮತ್ತು ನೈತಿಕಾವಸ್ಥೆಗಳ ಅಂತರ

ಇನ್ನು, ಮೇಲೆ ಹೇಳಿದ ಮೂರು ಸ್ಥಿತಿಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ವಿವರಿಸಬಹುದು. ಅದನ್ನು ಆರಂಭಿಸುವ ಮೊದಲು ಒಂದು ವಿಷಯವನ್ನು ಇಲ್ಲಿ ವಿಶದೀಕರಿಸಬೇಕಾದುದು ಅತ್ಯಾವಶ್ಯಕವಾಗಿದೆ. ಅದೇನೆಂದರೆ, ದುಷ್ಕೃತ್ಯಗಳಿಗೆ ಪ್ರೇರೇಪಿಸುವ ಆತ್ಮಸ್ಥಿತಿಯ ಪ್ರಕಟರೂಪವಾದ ಪ್ರಾಕೃತಿಕಾವಸ್ಥೆಯು ಪವಿತ್ರ ಖುರ್‌ಆನಿನ ಸಿದ್ಧಾಂತ ಪ್ರಕಾರ ನೈತಿಕಾವಸ್ಥೆಯಿಂದ ಭಿನ್ನವಾದುದಲ್ಲ. ಪವಿತ್ರ ಖುರ್‌ಆನ್ ಮನುಷ್ಯನ ಸ್ವಾಭಾವಿಕ ಗುಣಗಳನ್ನೂ ದೈಹಿಕೇಚ್ಛೆಗಳನ್ನೂ ಆಕಾಂಕ್ಷೆಗಳನ್ನೂ ಪ್ರಾಕೃತಿಕಾವಸ್ಥೆಯ ವರ್ಗಕ್ಕೆ ಸೇರಿಸಿದೆ. ಈ ನೈಸರ್ಗಿಕ ಗುಣಗಳನ್ನು ಸರಿಯಾದ ರೀತಿಯಲ್ಲಿ ಕ್ರಮಪಡಿಸಿ ಯಥೋಚಿತವಾಗಿ ವಿನಿಯೋಗಿಸಿದಾಗ ಅವು ಉತ್ಕೃಷ್ಟ ನೈತಿಕ ಗುಣಗಳಾಗಿ ಮಾರ್ಪಡುತ್ತವೆ. ಅದೇ ಪ್ರಕಾರ ನೈತಿಕಾವಸ್ಥೆಯು

ಆಧ್ಯಾತ್ಮಿಕಾವಸ್ಥೆಯಿಂದ ಭಿನ್ನವಾದುದಲ್ಲ. ಓರ್ವನು ದೇವಭಕ್ತಿಯಲ್ಲಿ ತಲ್ಲೀನನಾಗಿ, ಆತ್ಮಶುದ್ಧಿಯಿಂದ ಎಲ್ಲ ದುಷ್ಕೃತ್ಯಗಳಿಂದ ಮುಕ್ತನಾಗಿ ದೇವಪ್ರೀತಿಯಲ್ಲೂ ದೇವವಿಚಾರದಲ್ಲೂ ಮಗ್ನನಾಗಿ ಅಚಂಚಲವಾದ ದೇವವಿಶ್ವಾಸದಿಂದಲೂ ಶಾಂತಿ – ಸಮಾಧಾನದಿಂದಲೂ ಜೀವಿಸುತ್ತಾ ದೇವನಿಗೆ ಸಂಪೂರ್ಣ ವಿಧೇಯತೆಯನ್ನು ತೋರಿಸುವಾಗ ನೈತಿಕಾವಸ್ಥೆಯಿಂದ ಆಧ್ಯಾತ್ಮಿಕಾವಸ್ಥೆಯ ಮಟ್ಟಕ್ಕೇರುವನು.

ಶಾರೀರಿಕಾವಸ್ಥೆಯು ಎಷ್ಟರ ವರೆಗೆ ನೈತಿಕಾವಸ್ಥೆಯಾಗಿ ರೂಪಾಂತರ ಗೊಳ್ಳುವುದಿಲ್ಲವೋ ಅಷ್ಟರ ವರೆಗೆ ಮಾನವನು ಪ್ರಶಂಸಾರ್ಹನಲ್ಲ. ಏಕೆಂದರೆ, ಇಂತಹ ಶಾರೀರಿಕ ಗುಣಗಳು ಮೃಗಗಳಲ್ಲಿ ಮಾತ್ರವಲ್ಲ, ಜಡ ವಸ್ತುಗಳಲ್ಲಿ ಕೂಡ ಕಂಡುಬರುತ್ತವೆ. ಹಾಗೆಯೇ ಕೇವಲ ನೈತಿಕ ಗುಣಗಳನ್ನು ಗಳಿಸಿದ ಮಾತ್ರದಿಂದಲೇ ಆಧ್ಯಾತ್ಮಿಕ ಗುಣಗಳು ಲಭಿಸಲಾರವು. ದೇವನ ಅಸ್ತಿತ್ವವನ್ನು ಅಲ್ಲಗಳೆಯುವ ನಾಸ್ತಿಕನಿಗೆ ಕೂಡ ಕೆಲವು ಸದ್ಗುಣಗಳನ್ನು ತೋರ್ಪಡಿಸಲು ಸಾಧ್ಯವಿದೆ. ಸೌಮ್ಯತೆ, ಸಹನೆ, ಸಮಾಧಾನಶೀಲತೆ, ಅಹಿಂಸೆ ಮೊದಲಾದ ಗುಣಗಳು ಮೋಕ್ಷ ಮಾರ್ಗದ ಕುರಿತು ಅರಿವಿಲ್ಲದ ಸಾಮಾನ್ಯನಿಗೆ ಸಹ ಇರುತ್ತವೆ. ನಿರುಪದ್ರವಿಗಳಾದ, ಸೌಮ್ಯ ಸ್ವಭಾವದ, ಪಳಗಿಸಿದರೆ ಪಳಗುವ ಹಲವಾರು ಮೃಗಗಳನ್ನು ನಾವು ಕಾಣುತ್ತೇವೆ. ಅವುಗಳನ್ನು ಎಷ್ಟು ಹೊಡೆದರೂ ಅವು ಪ್ರತೀಕಾರವನ್ನು ತೋರಿಸುವುದಿಲ್ಲ. ಆದರೆ ಅವುಗಳನ್ನು ಯಾರೂ ಮನುಷ್ಯ ವರ್ಗಕ್ಕೆ ಸೇರಿಸಲಿಕ್ಕಿಲ್ಲ. ಅಂತೆಯೇ ದುರ್ಮಾರ್ಗದಲ್ಲಿಯೂ ದುಷ್ಕೃತ್ಯಗಳಲ್ಲಿಯೂ ಮುಳುಗಿರುವವರು ಕೂಡ ಇಂತಹ ಸ್ವಭಾವಗಳನ್ನು ತೋರಿಸಬಹುದು. ತನ್ನ ವ್ರಣದಲ್ಲಿರುವ ಕೀಟಗಳನ್ನಾಗಲೀ ತಲೆಗೂದಲಿನಲ್ಲಿರುವ ಹೇನುಗಳನ್ನಾಗಲೀ ಜಠರದಲ್ಲಿ ಅಥವಾ ಕರುಳಿನಲ್ಲಿರುವ ಹುಳಗಳನ್ನಾಗಲೀ ನಾಶಪಡಿಸಲು ಸಮ್ಮತಿಸದಂತಹ ದಯಾಬುದ್ಧಿಯುಳ್ಳವರು ಇರಬಹುದು. ಜೇನು ನೊಣಗಳನ್ನು ಗೂಡಿನಿಂದ ಓಡಿಸಿಯೂ ಹಲವನ್ನು ಕೊಂದೂ ಲಭಿಸುವ ಜೇನನ್ನು ಸೇವಿಸದಿರುವಷ್ಟು, ಕಸ್ತೂರಿಮೃಗವನ್ನು ಕೊಂದು ಅದರ ಮರಿಗಳನ್ನು ತಾಯಿಯಿಂದ ಬೇರ್ಪಡಿಸಿ, ದುಃಖಕ್ಕೆ ಗುರಿಮಾಡಿ ಲಭಿಸುವ ಕಸ್ತೂರಿಯನ್ನು ಉಪಯೋಗಿಸದಿರುವಷ್ಟು ದಯಾರ್ದ್ರತೆ ಕೆಲವರಿಗೆ ಇರಬಹುದು. ಬಡಹುಳಗಳನ್ನು ಕೊಲ್ಲುವುದರ ಮೂಲಕ ಮುತ್ತುಗಳೂ ರೇಷ್ಮೆಯೂ ದೊರೆಯುವುದರಿಂದಾಗಿ ಅವುಗಳನ್ನು ಉಪಯೋಗಿಸದಂತಹ ಕರುಣೆಯುಳ್ಳವರೂ ಇರಬಹುದು. ಹಾಗೆಯೇ ವ್ರಣಕ್ಕೆ ಮದ್ದನ್ನು ಹಚ್ಚಿದರೆ ಕ್ರಿಮಿಗಳು ನಶಿಸುವುದರಿಂದಾಗಿ, ಅದಕ್ಕೊಪ್ಪದೆ ಸ್ವತಃ ವೇದನೆಯನ್ನು ಸಹಿಸಲು ಸಿದ್ಧರಿರುವವರು ಕೂಡ ಇರಬಹುದೆಂಬುದನ್ನು ನಾನು ಅಲ್ಲಗಳೆಯುವುದಿಲ್ಲ. ಇಷ್ಟು ಮಾತ್ರವಲ್ಲ, ಕೆಲವರು ನೀರಿನಲ್ಲಿರುವ ಕ್ರಿಮಿಗಳನ್ನು

ಕಾಪಾಡುವ ಉದ್ದೇಶದಿಂದ ನೀರನ್ನೇ ಕುಡಿಯದೆ ಸ್ವಯಂ ನಾಶವನ್ನು ಪಡೆಯುವ ಪೂರ್ಣ ದಯಾಳುಗಳಿರಬಹುದೆಂಬುದನ್ನು ನಾನು ಇಲ್ಲವೆನ್ನುವುದಿಲ್ಲ. ಆದರೆ ಈ ಸಹಜ ಸ್ವಭಾವಗಳನ್ನು ನೈತಿಕ ಗುಣಗಳೆಂದು ಸಮ್ಮತಿಸಲಾಗದು. ಪರಮಾತ್ಮನೊಡನೆ ಸಂಬಂಧವನ್ನು ಸ್ಥಾಪಿಸಲು ಪ್ರತಿಬಂಧಕಗಳಾದ ಆಂತರಿಕ ಮಾಲಿನ್ಯಗಳನ್ನು ಅವು ಹೋಗಲಾಡಿಸುತ್ತವೆಯೆಂದು ಕೂಡ ಒಪ್ಪಲು ಸಾಧ್ಯವಿಲ್ಲ. ಮನುಷ್ಯರಲ್ಲಿ ಸಾಮಾನ್ಯ ವಾಗಿ ಕಂಡುಬರುವುದಕ್ಕಿಂತ ಹೆಚ್ಚಾಗಿ ಕೆಲವು ಮೃಗಗಳಲ್ಲಿಯೂ ಪಕ್ಷಿಗಳಲ್ಲಿಯೂ ಕಂಡುಬರುವಂತಹ ಅಬಾಧಕತೆ ಅಥವಾ ಸೌಮ್ಯತೆಯನ್ನು ಹೊಂದುವುದು ಮಾನವೀಯತೆಯ ಉತ್ತಮ ಮಾದರಿಯೆಂದು ನಾನು ಎಂದಿಗೂ ಒಪ್ಪಲಾರೆ. ತದ್ವಿರುದ್ಧವಾಗಿ, ಹಾಗೆ ವರ್ತಿಸುವುದು ಪ್ರಕೃತಿಯೊಡನೆ ಹೋರಾಡುವುದೂ ದೇವೇಚ್ಛೆಗೆ ವಿರೋಧವನ್ನು ತೋರಿಸುವುದೂ ಪ್ರಕೃತಿಯ ಅನುಗ್ರಹಗಳನ್ನು ನಿರಾಕರಿಸುವುದೂ ಆಗಿದೆ. ಪ್ರತಿಯೊಂದು ನೈತಿಕ ಗುಣವನ್ನೂ ಸಂದರ್ಭೋಚಿತವಾಗಿ ವಿನಿಯೋಗಿಸಿ, ದೇವಪಥದಲ್ಲಿ ನಿಷ್ಕಳಂಕ ಭಕ್ತಿಯಿಂದ ಚಲಿಸಿ, ದೇವೇಚ್ಛೆಗೆ ಬೇಕಾಗಿ ತನ್ನ ಸರ್ವಸ್ವವನ್ನೂ ಅರ್ಪಿಸುವುದರಿಂದ ಮಾತ್ರವೇ ಆಧ್ಯಾತ್ಮಿಕ ಪರಿಪೂರ್ಣತೆ ಪ್ರಾಪ್ತವಾಗುವುದು. ಯಾವೊಬ್ಬನು ದೇವಪಥದಲ್ಲಿ ಆತ್ಮ ಸಮರ್ಪಣೆ ಮಾಡುವನೋ ಅವನಿಗೆ ಪರಮಾತ್ಮನನ್ನು ಬಿಟ್ಟು ಬದುಕಲು ಸಾಧ್ಯವಾಗದು. ಅಂತಹ ಭಕ್ತನು ಪರಮಾತ್ಮನ ದಿವ್ಯಹಸ್ತದಿಂದ ಬಲಿಯರ್ಪಿಸಲ್ಪಟ್ಟ ಮೀನಿಗೆ ಸಮಾನನು. ದೇವಾನುರಾಗವೇ ಅದರ ಜಲ.

## ತ್ರಿವಿಧ ಸಂಸ್ಕಾರ ಘಟ್ಟಗಳು

ಇನ್ನು ಮೊದಲಿನ ವಿಷಯದತ್ತ ಹಿಂತಿರುಗೋಣ, ದುಷ್ಪ್ರೇರಕ ಆತ್ಮ (ನಫ್ಸ್ ಅಮ್ಮಾರ), ಸ್ವಯಂ ದೂಷಿಸುವ ಆತ್ಮ (ನಫ್ಸ್ ಲವ್ವಾಮ), ಶಾಂತಿಯನ್ನು ಹೊಂದಿರುವ ಆತ್ಮ (ನಫ್ಸ್ ಮುತ್ಮಇನ್ನ) ಎಂಬೀ ಮನುಷ್ಯನ ವಿವಿಧ ಸ್ಥಿತಿಗಳಿಗೆ ಮೂರು ಉದ್ಭವ ಸ್ಥಾನಗಳಿವೆಯೆಂದು ನಾನು ವಿವರಿಸಿರುವೆನಷ್ಟೇ. ಅವುಗಳಿಗೆ ಅನುಸಾರವಾದ ಮೂರು ಸುಧಾರಣೆಯ ವಿಧಾನಗಳನ್ನು ಸಹ ಪವಿತ್ರ ಖುರ್‌ಆನ್ ನಿರ್ದೇಶಿಸಿರುತ್ತದೆ. ಪ್ರಥಮವಾಗಿ, ಅಪರಿಷ್ಕೃತರಾದ ಕಿರಾತರನ್ನು ಭೋಜನ ಕ್ರಮ, ವಿವಾಹ ಸಂಪ್ರದಾಯ ಮೊದಲಾದ ನಾಗರಿಕ ವ್ಯವಹಾರ ಧರ್ಮಗಳಿಗೆ ವಿಧೇಯರನ್ನಾಗಿ ಮಾಡಿ ಮನುಷ್ಯರಂತೆ ಜೀವಿಸಲು ಕಲಿಸುವುದಾಗಿದೆ. ಅದು ಹೇಗೆಂದರೆ, ನಗ್ನರಾಗಿ ತಿರುಗಾಡದಿರುವುದು, ನಾಯಿಗಳಂತೆ ಹೆಣಗಳನ್ನು ತಿನ್ನದಿರುವುದು, ಅಸಭ್ಯವಾಗಿ ವರ್ತಿಸದಿರುವುದು ಮುಂತಾದ ಪ್ರಾಥಮಿಕ

ಸದಾಚಾರಗಳನ್ನು ಅವರಿಗೆ ಬೋಧಿಸುವುದಾಗಿದೆ. ಅನಾಗರಿಕರಾದ ಕಿರಾತರನ್ನು ಸುಧಾರಿಸಲು ಮೊದಲನೆಯದಾಗಿ ಅವರನ್ನು ಈ ವಿಧಾನದ ಮೂಲಕ ನಡೆಸಿ ಸಾಮೂಹಿಕ ವ್ಯವಹಾರ ಧರ್ಮಗಳ ಹಾಗೂ ಮೊದಲ ಹಂತದ ನೈತಿಕ ಗುಣಗಳ ತರಬೇತಿಯನ್ನು ಕೊಡಬೇಕಾಗಿದೆ. ಬಾಹ್ಯವಾದ ಈ ಸಾಮಾಜಿಕ ಧರ್ಮಗಳನ್ನು ಸರಿಯಾದ ಕ್ರಮದಲ್ಲಿ ಅನುಸರಿಸಿದವರು ಎರಡನೇ ಸುಧಾರಣಾ ವಿಧಾನದಲ್ಲಿ ಪ್ರವೇಶಿಸಲು ಅರ್ಹರಾಗುತ್ತಾರೆ. ಈ ಎರಡನೆಯ ಘಟ್ಟದಲ್ಲಿ ಅವರಿಗೆ ಉತ್ಕೃಷ್ಟವಾದ ನೈತಿಕ ಪಾಠಗಳನ್ನೂ ಮಾನವನಲ್ಲಿ ನಿಗೂಢವಾಗಿರುವ ವಿಶಿಷ್ಟ ಶಕ್ತಿಗಳನ್ನು ಸಂದರ್ಭಾನುಸಾರವಾಗಿ ವಿನಿಯೋಗಿಸುವುದನ್ನೂ ಕಲಿಸಲಾಗುವುದು. ಹೀಗೆ ಉತ್ಕೃಷ್ಟ ನೈತಿಕ ಗುಣಗಳನ್ನು ಪಡೆದವರು ಮೂರನೇ ಸುಧಾರಣಾ ಘಟ್ಟವನ್ನು ಪ್ರವೇಶಿಸಲು ಅರ್ಹರಾಗುತ್ತಾರೆ. ಆಗ ಅವರಿಗೆ ದೇವಪ್ರೇಮ ಮತ್ತು ದೇವದರ್ಶನದ ಪಾನೀಯವನ್ನು ಆಸ್ವಾದಿಸಲು ಕೊಡಬೇಕಾಗಿದೆ. ಇವು ಪವಿತ್ರ ಖುರ್‌ಆನ್ ನಿರ್ದೇಶಿಸುವ ಮೂರು ರೀತಿಯ ಸುಧಾರಣೆಯ ವಿಧಾನಗಳಾಗಿವೆ.

## ಹಝ್ರತ್ ಪೈಗಂಬರರ(ಸ) ಆವಿರ್ಭಾವ

ಪ್ರವಾದಿಶ್ರೇಷ್ಠರಾದ ಮುಹಮ್ಮದ್ ಪೈಗಂಬರರು (ಅಲ್ಲಾಹನು ಅವರ ಮೇಲೆ ತನ್ನ ಇಷ್ಟಾಶೀರ್ವಾದಗಳನ್ನೂ ಅನುಗ್ರಹಗಳನ್ನೂ ಸುರಿಸಲಿ) ಆವಿರ್ಭವಿಸಿದ್ದು ಪ್ರಪಂಚ ಅಜ್ಞಾನ ಹಾಗೂ ಅಧರ್ಮದಿಂದ ಅಂಧಕಾರಾವೃತವಾದ ಸಮಯದಲ್ಲಾಗಿತ್ತು. ಇದರ ಕುರಿತು ಅಲ್ಲಾಹನು ಹೀಗೆನ್ನುತ್ತಾನೆ:

ظَهَرَ الْفَسَادُ فِي الْبَرِّ وَالْبَحْرِ

ಭೂಮಿಯಲ್ಲೂ ಸಮುದ್ರದಲ್ಲೂ ಅಧರ್ಮವು ವ್ಯಾಪಿಸಿತ್ತು. **(30:42)**

ಈ ರೂಪಕ ವಾಕ್ಯವು ಸೂಚಿಸುವುದೇನೆಂದರೆ, ದೇವೋಕ್ತ ಗ್ರಂಥದ ಅನುಗ್ರಹವನ್ನು ಪಡೆದಿರುವವರೂ ಪಡೆಯದಿರುವವರೂ ಒಂದೇ ರೀತಿಯಲ್ಲಿ ಕೆಟ್ಟುಹೋಗಿದ್ದರೆಂದು. ಹೀಗೆ ನಿರ್ಜೀವ ಜನರನ್ನು ಪುನರುಜ್ಜೀವನಗೊಳಿಸುವುದಾಗಿದೆ ಪವಿತ್ರ ಖುರ್‌ಆನಿನ ಉದ್ದೇಶ. ಖುರ್‌ಆನ್ ಹೇಳುವುದನ್ನು ನೋಡಿರಿ:

اِعْلَمُوْٓا اَنَّ اللّٰهَ يُحْيِ الْاَرْضَ بَعْدَ مَوْتِهَا ؕ

ನಿರ್ಜೀವಿಯಾಗಿರುವ ಭೂಮಿಯನ್ನು ಪರಮಾತ್ಮನು ಪುನರುಜ್ಜೀವನಗೊಳಿಸಲು ತೊಡಗಿರುವುದನ್ನು ತಿಳಿಯಿರಿ. **(57:18)**

ಆ ಕಾಲದಲ್ಲಿ ಅರಬ್ ರಾಜ್ಯದಲ್ಲಿಡೀ ಅತ್ಯಂತ ಕೀಳುಮಟ್ಟದ ಅನಾಗರಿಕತೆ ವ್ಯಾಪಿಸಿತ್ತು. ಯಾವುದೇ ಸಾಮಾಜಿಕ ನಿಯಮವನ್ನು ಅವರು ಅನುಸರಿಸುತ್ತಿರಲಿಲ್ಲ. ಎಲ್ಲ ವಿಧ ಪಾಪಕೃತ್ಯಗಳೂ ದುರಾಚಾರಗಳೂ ಅವರ ದೃಷ್ಟಿಯಲ್ಲಿ ಅಭಿಮಾನಕರವಾಗಿದ್ದವು. ಒಬ್ಬೊಬ್ಬನು ಅಸಂಖ್ಯ ಸ್ತ್ರೀಯರನ್ನು ವರಿಸುತ್ತಿದ್ದನು. ದುಷ್ಟಾರ್ಜನೆ ಅವರಿಗೆ ಬಹಳ ಇಷ್ಟವಾಗಿತ್ತು. ತಾಯಂದಿರನ್ನು ವರಿಸುವುದು ಕೂಡ ಯುಕ್ತವೆಂದು ಅವರು ಪರಿಗಣಿಸಿದ್ದರು. ಈ ನಿಂದ್ಯ ಸಂಪ್ರದಾಯವನ್ನು ನಿರೋಧಿಸುವುದಕ್ಕಾಗಿ ಅಲ್ಲಾಹನು ಪವಿತ್ರ ಖುರ್ಆನಿನಲ್ಲಿ:

حُرِّمَتْ عَلَيْكُمْ أُمَّهَٰتُكُمْ

"ನಿಮ್ಮ ತಾಯಂದಿರು ನಿಮಗೆ ನಿಷಿದ್ಧ" **(4:24)** ಎಂದು ವಿಧಿಸಿದನು. ಅವರು ಹೆಣಗಳನ್ನು ಭಕ್ಷಿಸಲು ಹಿಂಜರಿಯುತ್ತಿರಲಿಲ್ಲ. ನರಭಕ್ಷಕರು ಸಹ ಅವರೆಡೆಯಲ್ಲಿದ್ದರು. ಅವರು ಮಾಡಿರದ ಯಾವುದೇ ಪಾಪಕೃತ್ಯ ಬಾಕಿಯುಳಿದಿರಲಿಲ್ಲ. ಅವರಲ್ಲಿ ಹೆಚ್ಚಿನವರು ಪರಲೋಕ ಜೀವಿತದಲ್ಲಿ ವಿಶ್ವಾಸವಿಲ್ಲದವರಾಗಿದ್ದರು. ದೇವನ ಅಸ್ತಿತ್ವವನ್ನು ಅಲ್ಲಗಳೆಯುವವರು ಬಹುಸಂಖ್ಯೆಯಲ್ಲಿದ್ದರು. ಹೆಣ್ಣು ಮಕ್ಕಳನ್ನು ತಮ್ಮ ಸ್ವಂತ ಕೈಯಿಂದಲೇ ಕೊಲ್ಲುತ್ತಿದ್ದರು. ಅನಾಥ ಮಕ್ಕಳನ್ನು ಕೊಂದು ಅವರ ಸಂಪತ್ತನ್ನು ವಶಪಡಿಸುತ್ತಿದ್ದರು. ಹೊರನೋಟಕ್ಕೆ ಅವರು ಮನುಷ್ಯರಾಗಿ ತೋರಿದರೂ ಯಥಾರ್ಥದಲ್ಲಿ ವಿವೇಕ, ಮರ್ಯಾದೆ, ಲಜ್ಜೆ, ಅಭಿಮಾನ ಮೊದಲಾದ ಮನುಷ್ಯ ಗುಣಗಳು ಅವರಲ್ಲಿ ಕಂಡುಬರುತ್ತಿರಲಿಲ್ಲ. ಅವರು ಮದ್ಯಪಾನದಲ್ಲಿ ಅತ್ಯಾಸಕ್ತರಾಗಿದ್ದರು. ವ್ಯಭಿಚಾರದಲ್ಲಿ ಅಗ್ರಸ್ಥಾಣಿ ಅವರಲ್ಲಿ ಶ್ರೇಷ್ಠನೆನಿಸಿಕೊಳ್ಳುತ್ತಿದ್ದನು. ಅಜ್ಞತೆ ಅವರಲ್ಲಿ ಎಷ್ಟರ ಮಟ್ಟಿಗೆ ವ್ಯಾಪಿಸಿತ್ತೆಂದರೆ, ನೆರೆರಾಜ್ಯದವರು ಅವರನ್ನು "ಉಮ್ಮಿ" (ಅನಕ್ಷರಸ್ಥರು) ಎಂದು ಕರೆಯುತ್ತಿದ್ದರು. ಅಂತಹ ಕಾಲಘಟ್ಟದಲ್ಲಿ ಆ ಜನಾಂಗದ ಸುಧಾರಣೆಗಾಗಿ ಪ್ರವಾದಿ ಶ್ರೇಷ್ಠರಾದ ಮುಹಮ್ಮದ್ ಪೈಗಂಬರರು(ಸ) ಮಕ್ಕ ಪಟ್ಟಣದಲ್ಲಿ ಆವಿರ್ಭವಿಸಿದರು. ಮೇಲೆ ಹೇಳಿರುವ ತ್ರಿವಿಧ ಸಂಸ್ಕಾರಗಳ ಸರಿಯಾದ ಸಂದರ್ಭವು ಇದೇ ಆಗಿತ್ತು. ಆದುದರಿಂದಲೇ ಪವಿತ್ರ ಖುರ್ಆನ್, ಅದು ಇತರ ಮಾರ್ಗದರ್ಶಕ ಗ್ರಂಥಗಳಿಗಿಂತ ಪರಿಪೂರ್ಣವೂ ಅನ್ಯೂನವೂ ಆಗಿದೆಯೆಂದು ವಾದಿಸುತ್ತದೆ. ಈ ಗ್ರಂಥದ ಹೊರತು ಬೇರೊಂದು ಧರ್ಮಗ್ರಂಥಕ್ಕೆ ಈ ಮೂರು ವಿಧ ಸುಧಾರಣೆಗಳ ಸಂದರ್ಭ ದೊರೆಯಲಿಲ್ಲ. ನಾಗರಿಕತೆಯಿಲ್ಲದೆ ಪಶುಸಮಾನರಾಗಿದ್ದವರನ್ನು ಮನುಷ್ಯರನ್ನಾಗಿಯೂ ಮನುಷ್ಯರನ್ನು ನೀತಿವಂತರನ್ನಾಗಿಯೂ ನೀತಿವಂತರನ್ನು ದೇವಭಕ್ತರನ್ನಾಗಿಯೂ ಮಾಡಿ ಅಧ್ಯಾತ್ಮದ ಉತ್ಕೃಷ್ಟ ಸ್ಥಾನಕ್ಕೆ ತಲಪಿಸುವುದೇ ಪವಿತ್ರ

ಖುರ್‌ಆನಿನ ಉದ್ದೇಶವಾಗಿದೆ. ಆ ಕಾರಣದಿಂದ ಈ ಮೂರು ಸಂಗತಿಗಳ ಕುರಿತು ಅದು ಧಾರಾಳವಾಗಿ ಪ್ರಸ್ತಾಪಿಸಿರುತ್ತದೆ.

ಪ್ರಸ್ತುತ ಮೂರು ವಿಧಾನಗಳ ಕುರಿತು ಸವಿಸ್ತಾರವಾಗಿ ಪ್ರತಿಪಾದಿಸುವ ಮೊದಲು ಒಂದು ವಿಷಯವನ್ನು ಇಲ್ಲಿ ತಿಳಿಸುವುದು ಅತ್ಯಾವಶ್ಯಕವೆಂದು ನಾನು ಭಾವಿಸುತ್ತೇನೆ. ಅದೇನೆಂದರೆ, ಪವಿತ್ರ ಖುರ್‌ಆನಿನಲ್ಲಿ ಒತ್ತಾಯದಿಂದ ಒಪ್ಪಿಕೊಳ್ಳಬೇಕಾದ ಸಂಗತಿ ಯಾವುದೂ ಇಲ್ಲ. ಆ ಪವಿತ್ರ ಗ್ರಂಥದ ಉದ್ದೇಶ ಈ ತ್ರಿವಿಧ ಸುಧಾರಣೆಗಳು ಮಾತ್ರವಾಗಿದೆ. ಅದರ ಎಲ್ಲ ತತ್ವೋಪದೇಶಗಳು ಈ ಸುಧಾರಣೆಗಳ ಕುರಿತಾಗಿವೆ. ಇತರ ನಿಯಮ ವ್ಯವಸ್ಥೆಗಳೆಲ್ಲವೂ ಈ ಉದ್ದೇಶವನ್ನು ಸಾಧಿಸಲಿಕ್ಕಿರುವ ಮಾಧ್ಯಮಗಳಾಗಿವೆ. ಶಾರೀರಿಕ ರೋಗಗಳನ್ನು ಗುಣಪಡಿಸಲಿಕ್ಕಾಗಿ ಕೆಲವೊಮ್ಮೆ ಡಾಕ್ಟರ್ ಶಸ್ತ್ರಕ್ರಿಯೆಯನ್ನು ಮಾಡುವನು. ಕೆಲವೊಮ್ಮೆ ಲೇಪನವನ್ನು ಹಚ್ಚುವನು. ಅಂತೆಯೇ ಪವಿತ್ರ ಖುರ್‌ಆನ್ ಸಹ ಮನುಷ್ಯರ ಒಳಿತಿಗಾಗಿ ಇದೇ ವಿಧಾನಗಳನ್ನು ಯಥೋಚಿತವಾಗಿ ನಿರ್ದೇಶಿಸಿರುತ್ತದೆ. ಅದರ ಎಲ್ಲ ತತ್ವೋಪದೇಶಗಳ, ಸಿದ್ಧಾಂತಗಳ ಮತ್ತು ಧರ್ಮಬೋಧನೆಗಳ ಮುಖ್ಯೋದ್ದೇಶ ಮನುಷ್ಯನನ್ನು ಮೃಗೀಯ ಶಾರೀರಿಕಾವಸ್ಥೆಯಿಂದ ನೈತಿಕ ಮಟ್ಟಕ್ಕೂ ಅಲ್ಲಿಂದ ಎಲ್ಲೆ ಇಲ್ಲದ ಆಧ್ಯಾತ್ಮಿಕ ಮಟ್ಟಕ್ಕೂ ಎತ್ತುವುದಾಗಿದೆ.

## ನೈತಿಕ ಗುಣಗಳ ನಿರೂಪಣೆ

ಶಾರೀರಿಕಾವಸ್ಥೆ ನೈತಿಕಾವಸ್ಥೆಯಿಂದ ಭಿನ್ನವಾದುದಲ್ಲವೆಂದು ಮೊದಲು ಪ್ರಸ್ತಾಪಿಸಲಾಗಿದೆ. ಶಾರೀರಿಕಾವಸ್ಥೆಯ ಚಟುವಟಿಕೆಗಳನ್ನು ವಿವೇಕದಿಂದಲೂ ಸಂದರ್ಭೋಚಿತವಾಗಿಯೂ ಕ್ರಮಪಡಿಸುವಾಗ ಅವು ನೈತಿಕ ಗುಣಗಳಾಗಿ ಮಾರ್ಪಡುತ್ತವೆ. ನೈತಿಕ ಗುಣಗಳಿಗೆ ಬಹಳವಾಗಿ ಹೋಲುವ ಕರ್ಮವು ಒಬ್ಬನಿಂದ ಪ್ರಕಟಿಸಲ್ಪಡುವುದಾದರೂ ಅದು ವಿವೇಕಶೂನ್ಯವೂ ಅನಿಯಂತ್ರಿತವೂ ಆಗಿದ್ದರೆ ಅದು ಸದ್ಗುಣವೆಂದು ಪರಿಗಣಿಸಲ್ಪಡಲಾರದು. ಅದು ಕೇವಲ ಅವನ ಸ್ವಾಭಾವಿಕ ಪ್ರೇರಣೆಯ ಫಲವಾಗಿದೆ. ಉದಾಹರಣೆಗೆ, ಒಂದು ನಾಯಿ ಅಥವಾ ಒಂದು ಆಡು ತನ್ನ ಯಜಮಾನನೊಡನೆ ತೋರಿಸುವ ಸ್ನೇಹ ಮತ್ತು ವಿಧೇಯತೆಯನ್ನು ಸದ್ಗುಣವೆಂದಾಗಲೀ ಸದಾಚಾರವೆಂದಾಗಲೀ ಹೇಳಲು ಸಾಧ್ಯವಿಲ್ಲ. ಹಾಗೆಯೇ ತೋಳ ಅಥವಾ ಸಿಂಹದ ಕ್ರೂರ ಸ್ವಭಾವವನ್ನು ದುರ್ಗುಣವೆಂದು ತಿಳಿಯಲಾಗದು. ಮೊದಲು ಪ್ರಸ್ತಾಪಿಸಿದಂತೆ, ಯಾವುದೇ ಕಾರ್ಯವನ್ನೂ ಸಂದರ್ಭೋಚಿತವಾಗಿಯೂ ವಿವೇಕದಿಂದಲೂ ಮಾಡುವ ಘಟ್ಟದಲ್ಲಿ ನೈತಿಕಾವಸ್ಥೆ ಆರಂಭವಾಗುತ್ತದೆ. ತನ್ನ

ಪ್ರವೃತ್ತಿಗಳಲ್ಲಿ ಬುದ್ಧಿಯನ್ನೂ ವಿವೇಕವನ್ನೂ ಉಪಯೋಗಿಸದವನನ್ನು ಬುದ್ಧಿ ಪಕ್ವವಾಗದ ಶಿಶುವಿಗೋ ಅಥವಾ ಹತಬುದ್ಧಿಯ ಹುಚ್ಚನಿಗೋ ಹೋಲಿಸಬಹುದು. ಮಗುವಿನ ಅಥವಾ ಹುಚ್ಚನ ವರ್ತನೆಗಳು ಕೆಲವೊಮ್ಮೆ ಸತ್ಕರ್ಮಗಳಿಗೆ ಸದೃಶವಾಗಿ ತೋರಬಹುದು. ಆದರೆ ಅವು ಸಂದರ್ಭಾನುಸಾರವಾಗಿಯಾಗಲೀ ವಿವೇಕಪೂರ್ಣವಾಗಿಯಾಗಲೀ ಇಲ್ಲದಿರುವುದರಿಂದ ಅವನ್ನು ವಿವೇಕಶಾಲಿಗಳ್ಯಾರೂ ಸದಾಚಾರಗುಣಗಳೆಂದು ಪರಿಗಣಿಸಲಾರರು. ಅವು ಕೇವಲ ಸ್ವಾಭಾವಿಕ ಗುಣ ಗಳಾಗಿವೆ. ಉದಾಹರಣೆಗೆ, ಶಿಶುವು ಜನ್ಮವೆತ್ತಿದ ಕೂಡಲೇ ತಾಯಿಯ ಸ್ತನಗಳೆಡೆಗೆ ಮುಖವನ್ನು ತಿರುಗಿಸುತ್ತದೆ. ಕೋಳಿಮರಿ ಮೊಟ್ಟೆಯೊಡೆದು ಹೊರಗೆ ಬಂದಾಕ್ಷಣ ಕಾಳನ್ನು ಹೆಕ್ಕಲು ಓಡುತ್ತದೆ. ಜಿಗಳೆಯ ಮರಿ ಜಿಗಳೆಯ ಸ್ವಭಾವವನ್ನು ಪಡೆದಿರುತ್ತದೆ. ಸರ್ಪದ ಮರಿಯು ಅದರ ಗುಣವನ್ನು ಪ್ರಕಟಿಸುತ್ತದೆ. ಸಿಂಹದ ಮರಿಯು ಅದರ ಸ್ವಭಾವವನ್ನು ತೋರಿಸುತ್ತದೆ. ಒಂದು ಮಾನವ ಶಿಶುವನ್ನು ನಾವು ಪರಿಶೀಲಿಸುವುದಾದರೆ, ಅದು ಜನ್ಮ ತಾಳಿದ ಕೂಡಲೇ ಮನುಷ್ಯ ಸ್ವಭಾವವನ್ನು ಪ್ರಕಟಿಸಲು ತೊಡಗಿ, ಬೆಳೆಯುತ್ತಾ ಹೋದಂತೆ ಆ ಸ್ವಭಾವಗುಣಗಳು ಹೆಚ್ಚು ಹೆಚ್ಚು ಸ್ಪಷ್ಟವಾಗಿ ಗೋಚರಿಸುತ್ತವೆ. ಮಗುವಿಗೆ ಒಂದು ಅಥವಾ ಒಂದೂವರೆ ವರ್ಷ ಪ್ರಾಯವಾಗುವಾಗ ಅದು ಮೊದಲಿಗಿಂತ ಜೋರಾಗಿ ಅಳುತ್ತದೆ. ಮೊದಲಿನ ಮುಗುಳ್ನಗೆಯ ಬದಲು ಈಗ ಗಟ್ಟಿಯಾಗಿ ನಗುತ್ತದೆ. ಅದರ ಕಣ್ಣುಗಳಲ್ಲಿ ಉದ್ದೇಶಿತ ನೋಟದ ಚಿಹ್ನೆಗಳು ತೋರುವುವು. ಅದು ತನ್ನ ಇಷ್ಟಾನಿಷ್ಟಗಳನ್ನು ಅವಯವಗಳ ಮುಖಾಂತರ ಪ್ರಕಟಿಸುತ್ತದೆ. ಕೆಲವೊಮ್ಮೆ ಅದು ಹೊಡೆಯಲಿಕ್ಕೆ ಕೈಯೆತ್ತುತ್ತದೆ. ಕೆಲವೊಮ್ಮೆ ಅದು ಏನನ್ನಾದರೂ ಕೊಡಲಿಕ್ಕೆ ಕೈ ನೀಡುತ್ತದೆ. ಆದರೆ ಯಥಾರ್ಥದಲ್ಲಿ ಈ ಎಲ್ಲ ಚೇಷ್ಟೆಗಳೂ ಸ್ವಾಭಾವಿಕವಾಗಿವೆ. ಬೌದ್ಧಿಕವಾಗಿ ಅಪೂರ್ಣಾವಸ್ಥೆಯಲ್ಲಿರುವ ಅನಾಗರಿಕ ಮನುಷ್ಯನ ಸ್ಥಿತಿಯೂ ಈ ಮಗುವಿನ ಸ್ಥಿತಿಯಂತಾಗಿರುತ್ತದೆ. ಅವನು ತನ್ನ ಮಾತಿನಲ್ಲೂ ಪ್ರವೃತ್ತಿಯಲ್ಲೂ ಚಲನವಲನಗಳಲ್ಲೂ ಮೌನದಲ್ಲೂ ಸ್ವಾಭಾವಿಕತೆಯನ್ನು ತೋರಿಸುತ್ತಾನೆ. ಅವನು ಸದಾ ಸ್ವಾಭಾವಿಕ ಉದ್ವೇಗಕ್ಕೆ ಅಧೀನನಾಗಿರುತ್ತಾನೆ. ಅವನ ಯಾವುದೇ ವರ್ತನೆ ಅಂತಃಕರಣದ ಪ್ರಚೋದನೆಯ ಪರಿಣಾಮದಿಂದ ಆಗಿರಲಿಕ್ಕಿಲ್ಲ. ಬದಲಾಗಿ, ಬಾಹ್ಯ ಪ್ರೇರಣೆಗಳುಂಟಾಗುವಾಗ ಅವನ ಅಂತರಂಗದಲ್ಲಿ ಅಡಗಿದ ಭಾವಗಳು ಹೊರ ಬೀಳುವುವು. ಹೀಗೆ ಸ್ವಭಾವ ಪ್ರೇರಿತವಾದ ಅವನ ವರ್ತನೆಗಳೆಲ್ಲ ದೋಷಯುತವಾಗಿರಬೇಕೆಂದಿಲ್ಲ. ಅವನ ಕೆಲವು ವರ್ತನೆಗಳು ವಿವೇಕಿಯ ಸದಾಚಾರಕ್ಕೆ ಸಮಾನವಾಗಿರಬಹುದು. ಆದರೆ ಅವು ಬುದ್ಧಿಪೂರ್ವಕವಾದ ವಿವೇಚನೆಯ ಫಲದಿಂದ ಉಂಟಾದುದಲ್ಲ. ಅವನ

ವರ್ತನೆಯಲ್ಲಿ ತುಸು ಮಾತ್ರವಾದ ವಿವೇಕದ ಲಕ್ಷಣಗಳು ಕಂಡುಬಂದರೂ ಅವು ಹೆಚ್ಚಾಗಿ ಸ್ವಭಾವ ಪ್ರೇರಿತಗಳಾಗಿರುವುದರಿಂದ ಅವುಗಳನ್ನು ಸದಾಚಾರಗಳೆಂದು ಪರಿಗಣಿಸಲು ಸಾಧ್ಯವಿಲ್ಲ. ಆಧಿಕ್ಯವನ್ನು ನೋಡಿಯಲ್ಲವೇ ಯಾವುದನ್ನೂ ನಿರ್ಣಯಿಸುವುದು.

ಸಂಕ್ಷಿಪ್ತವಾಗಿ, ಪ್ರಾಣಿಗಳಂತೆಯೋ ಶಿಶುಗಳಂತೆಯೋ ಹುಚ್ಚರಂತೆಯೋ ಸ್ವಾಭಾವಿಕ ಉದ್ವೇಗಗಳಿಗೆ ಅಧೀನನಾಗಿ ವರ್ತಿಸುತ್ತಾ ಹೆಚ್ಚು ಕಮ್ಮಿ ಮೃಗೀಯವಾಗಿ ಜೀವಿಸುತ್ತಿರುವವನ ಚೇಷ್ಟೆಗಳನ್ನು ಯಥಾರ್ಥ ಸದ್ಗುಣಗಳೆಂದು ಪರಿಗಣಿಸಲು ಸಾಧ್ಯವಿಲ್ಲ. ಒಬ್ಬನಿಗೆ ಒಳಿತು ಕೆಡುಕುಗಳ ವ್ಯತ್ಯಾಸವನ್ನು ಅರಿತುಕೊಳ್ಳಲಿಕ್ಕೂ ದುರ್ಗುಣಗಳ ಅಥವಾ ಸದ್ಗುಣಗಳ ಪರಸ್ಪರ ತಾರತಮತೆಯನ್ನು ವಿವೇಚಿಸಲಿಕ್ಕೂ ಬೇಕಾದ ಬುದ್ಧಿ ಪಕ್ವವಾಗುವಾಗ ಅವನ ನಡವಳಿಕೆ ಸತ್ಕೃತ್ಯವೋ ದುಷ್ಕೃತ್ಯವೋ ಎಂದು ಬೇರ್ಪಟ್ಟು ಕಾಣುವ ಕಾಲವು ಆರಂಭವಾಗುವುದು. ಈ ಘಟ್ಟದಲ್ಲಿ ಅವನು ಸದ್ಗುಣಗಳನ್ನು ಉಪೇಕ್ಷಿಸಿದುದಕ್ಕಾಗಿ ವ್ಯಸನಪಡುವನು. ದುಷ್ಕೃತ್ಯಗಳನ್ನು ಗೈದುದಕ್ಕಾಗಿ ಪಶ್ಚಾತ್ತಾಪಪಡುವನು. ಇದು ಪವಿತ್ರ ಖುರ್‌ಆನ್ "ನಫ್ಸ್ ಲವ್ವಾಮ" (ಸ್ವಯಂ ದೂಷಿಸುವ ಅವಸ್ಥೆ) ಎಂಬ ಹೆಸರಿನಿಂದ ವಿಶ್ಲೇಷಿಸಿರುವ ಮನುಷ್ಯ ಜೀವಿತದ ಎರಡನೆಯ ಪರಿಣಾಮ ಘಟ್ಟವಾಗಿದೆ. ಆದರೆ ತೀರಾ ಅಪರಿಷ್ಕೃತನೊಬ್ಬನನ್ನು ಸ್ವಯಂ ದೂಷಿಸುವ ಅಥವಾ ಪಶ್ಚಾತ್ತಾಪ ಪ್ರಜ್ಞೆಯನ್ನು ಪ್ರೇರೇಪಿಸುವ ಪರಿವರ್ತನ ಘಟ್ಟಕ್ಕೆ ತಲುಪಿಸಲು ಬರೇ ಉಪದೇಶಗಳು ಮಾತ್ರವೇ ಸಾಕಾಗಲಾರದು. ತನ್ನ ಜನ್ಮ ನಿರರ್ಥಕವೋ ನಿರುಪಯೋಗವೋ ಅಲ್ಲವೆಂದು ಅವನು ತಿಳಿದಿರಲಿಕ್ಕಾಗಿಯಾದರೂ ದೈವಿಕಜ್ಞಾನವು ಅವನಿಗೆ ಸಿದ್ಧಿಸಬೇಕಾದದ್ದು ಅಗತ್ಯವಾಗಿದೆ. ಅದು ಅವನಲ್ಲಿ ಯಥಾರ್ಥ ನೈತಿಕ ಗುಣಗಳನ್ನು ಸೃಷ್ಟಿಸಲು ಕಾರಣೀಭೂತವಾಗುತ್ತದೆ. ಆದ್ದರಿಂದಲೇ ಪವಿತ್ರ ಖುರ್‌ಆನ್ ತತ್ತ್ವೋಪದೇಶಗಳನ್ನು ನೀಡುವುದರೊಂದಿಗೆ ಪದೇ ಪದೇ ಪರಮಾತ್ಮನಿಗೆ ಸಂಬಂಧಿಸಿ ಯಥಾರ್ಥ ಜ್ಞಾನವನ್ನು ಅರುಹಿ ಒಳ್ಳೆಯ ಅಥವಾ ಕೆಟ್ಟ ಪ್ರತಿಯೊಂದು ಕಾರ್ಯವೂ ಐಹಿಕ ಜೀವಿತದಲ್ಲಿ ಮನುಷ್ಯನಿಗೆ ಅಧ್ಯಾತ್ಮ ಸುಖ ಅಥವಾ ದುಃಖವನ್ನು ನೀಡುವ ಪ್ರತಿಫಲಕ್ಕೆ ಹೇತುವಾಗುವುದೆಂದೂ ಇದರ ಪರಿಣಾಮ ಪಾರತ್ರಿಕ ಜೀವಿತದಲ್ಲಿ ಪ್ರತ್ಯಕ್ಷರೂಪದಲ್ಲಿ ಅನುಭವವಾಗುವುದೆಂದೂ ಬೋಧಿಸಿರುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಸ್ವಯಂ ದೂಷಿಸುವ ಈ ಅವಸ್ಥೆಯನ್ನು ಒಬ್ಬನು ಪಡೆಯುವಾಗ, ದೋಷಕರವಾದ ಎಲ್ಲ ಕೃತ್ಯಗಳ ಬಗ್ಗೆ ಪಶ್ಚಾತ್ತಾಪಪಟ್ಟು, ಸತ್ಕರ್ಮದಲ್ಲಿ ಆಸಕ್ತಿಯನ್ನು ತೋರಿಸುವ ರೀತಿಯಲ್ಲಿ ಅವನ ಬುದ್ಧಿಯೂ ಜ್ಞಾನವೂ ಮನಃಸಾಕ್ಷಿಯೂ ವಿಕಾಸಗೊಂಡಿರುತ್ತವೆ. ಈ ಘಟ್ಟದಲ್ಲಿ ಅವನು ಉತ್ಕೃಷ್ಟ ನೈತಿಕ ಗುಣಗಳನ್ನು ಗಳಿಸುತ್ತಾನೆ.

ಇಲ್ಲಿ “ಖಲ್ಖ್” (خَلْق) ಮತ್ತು “ಖುಲ್ಖ್” (خُلُق) ಎಂಬ ಅರಬಿ ಪದಗಳ ಕುರಿತು ಸ್ವಲ್ಪ ವಿವರಿಸಬೇಕಾದುದು ಅತ್ಯಾವಶ್ಯಕವಾಗಿದೆ. ಅರಬಿ ಭಾಷೆಯಲ್ಲಿ ಬರೆಯುವಾಗ ಸ್ವರ ಚಿಹ್ನೆಗಳಲ್ಲಿ ಹೊರತು ರೂಪದಲ್ಲಿ ವ್ಯತ್ಯಾಸವಿಲ್ಲದ ಈ ಎರಡು ಪದಗಳಲ್ಲಿ ‘ಖಲ್ಖ್’ ಬಾಹ್ಯಸೃಷ್ಟಿಯನ್ನೂ ‘ಖುಲ್ಖ್’ ಆಂತರಿಕ ಸೃಷ್ಟಿಯನ್ನೂ ಸೂಚಿಸುತ್ತದೆ. ಈ ಆಂತರಿಕ ಸೃಷ್ಟಿ ಅಥವಾ ಆತ್ಮ ಸಂಸ್ಕರಣ ಪ್ರಾಪ್ತವಾಗುವುದು ವಿವೇಕಯುತವಾದ ಸತ್ಕರ್ಮಗಳ ಮೂಲಕವಾಗಿದೆ; ಕೇವಲ ಆವೇಗಭರಿತ ವರ್ತನೆಗಳಿಂದಲ್ಲ. ಆದ್ದರಿಂದ ಪ್ರಸ್ತುತ ಶಬ್ದ ನೈತಿಕ ಗುಣಗಳ ಹೊರತು ಸ್ವಾಭಾವಿಕ ಸಂವೇಗಗಳ ಕುರಿತು ಪ್ರಯೋಗಿಸಲ್ಪಟ್ಟಿಲ್ಲ. ಸದ್ಗುಣಗಳೆಂದರೆ ಸಹಿಷ್ಣುತೆ, ಸೌಮ್ಯತೆ, ವಿನಯ ಎಂಬಿತ್ಯಾದಿ ಮಾತ್ರವೆಂಬ ರೂಢಿಯಲ್ಲಿರುವ ಅಭಿಪ್ರಾಯವು ಸರಿಯಲ್ಲವೆಂದು ಸಹ ಇಲ್ಲಿ ಹೇಳಬೇಕಾಗಿದೆ. ಮನುಷ್ಯನ ಪ್ರತಿಯೊಂದು ಬಾಹ್ಯ ಚಟುವಟಿಕೆಗೂ ಹೃದಯಾಂತರಾಳದಲ್ಲಿ ಒಂದೊಂದು ಸಹಜ ಗುಣವು ನಿಕ್ಷಿಪ್ತವಾಗಿರುತ್ತದೆ. ಈ ಅಂತಃಶಕ್ತಿಯೇ ಔಚಿತ್ಯಪೂರ್ಣವಾಗಿ ಪ್ರಕಟಗೊಂಡಾಗ ನೈತಿಕ ಗುಣವೆಂದು ಗಣಿಸಲ್ಪಡುವುದು. ಉದಾಹರಣೆಗಾಗಿ, ಅಳುವವನ ಕಣ್ಣುಗಳಿಂದ ಬಾಹ್ಯದಲ್ಲಿ ಕಣ್ಣೀರು ಸುರಿಯುತ್ತದೆ. ಅದೇ ಸಂದರ್ಭದಲ್ಲಿ ಅವನ ಹೃದಯಾಂತರಾಳದಲ್ಲಿ ದುಃಖ ಉಮ್ಮಳಿಸುತ್ತದೆ. ವಿವೇಕಿಯಾದ ಮನುಷ್ಯನು ಅದನ್ನು ತಕ್ಕುದಾದ ಸಂದರ್ಭದಲ್ಲಿ ತೋರ್ಪಡಿಸುವಾಗ ಅದೊಂದು ‘ಖುಲ್ಖ್’ ಅಥವಾ ನೈತಿಕ ಗುಣವಾಗುತ್ತದೆ. ಹಾಗೆಯೇ ಶತ್ರುವನ್ನೆದುರಿಸಲು ಮನುಷ್ಯನು ಕೈಗಳನ್ನು ಪ್ರಯೋಗಿಸುವಾಗ, ಈ ಬಾಹ್ಯೇಂದ್ರಿಯ ಕ್ರಿಯೆಗನುರೂಪವಾಗಿ ಹೃದಯದಲ್ಲಿ ನಿಕ್ಷಿಪ್ತವಾಗಿರುವ ಧೈರ್ಯವೆಂಬ ಶಕ್ತಿಯು ಚುರುಕುಗೊಳ್ಳುತ್ತದೆ. ಈ ಶಕ್ತಿಯನ್ನು ಸರಿಯಾದ ಸಂದರ್ಭದಲ್ಲಿ ವಿನಿಯೋಗಿಸಿದಾಗ, ಇದು ಸಹ ಸದ್ಗುಣವಾಗಿ ಪರಿಣಮಿಸುತ್ತದೆ. ಹಾಗೆಯೇ ಮನುಷ್ಯನು ಕೆಲವೊಮ್ಮೆ ತನ್ನ ಕೈಗಳಿಂದ, ದುರ್ಜನರಿಂದ ಹಿಂಸೆ ಪಡುವವರನ್ನು ರಕ್ಷಿಸಲು ತಯಾರಾಗುವಾಗಲೂ ನಿರ್ಗತಿಕರಿಗೆ ಮತ್ತು ಹಸಿವೆಯಿಂದ ಕಂಗಾಲಾದವರಿಗೆ ದಾನಮಾಡಲಿಚ್ಛಿಸುವಾಗಲೂ ಅಥವಾ ಮತ್ತಿತ್ತರ ರೀತಿಯಲ್ಲಿ ಮಾನವ ಜನಾಂಗದ ಸೇವೆ ಮಾಡಲು ಬಯಸುವಾಗಲೂ ಅವನ ಹೃದಯದಲ್ಲಿ ಅನುಕಂಪವೆಂಬ ಅಂತಃಶಕ್ತಿಯು ಚೇತನಗೊಳ್ಳುತ್ತದೆ. ಕೆಲವೊಮ್ಮೆ ಮನುಷ್ಯನು ತನ್ನ ಕೈಗಳಿಂದ ದುರ್ಜನರನ್ನು ಶಿಕ್ಷಿಸಲು ಬಯಸುತ್ತಾನೆ. ಆಗ ಅದಕ್ಕೆ ಅನುಗುಣವಾಗಿ ಅವನ ಹೃದಯದಲ್ಲಿ ಸಹ ‘ಪ್ರತೀಕಾರ’ ಎಂಬ ಒಂದು ಶಕ್ತಿ ಉದಯಗೊಳ್ಳುತ್ತದೆ. ಕೆಲವು ಸಂದರ್ಭಗಳಲ್ಲಿ ಅವನು ತನ್ನ ಶತ್ರುವಿನಿಂದ ಹಿಂಸೆಯನ್ನನುಭವಿಸಿದರೂ ಪ್ರತೀಕಾರವನ್ನು ಮಾಡುವುದಿಲ್ಲ. ಆಗ ಹೃದಯದಲ್ಲುಂಟಾಗುವ ಗುಣವನ್ನು ಕ್ಷಮೆ ಅಥವಾ ಸಹನೆ ಎನ್ನುತ್ತಾರೆ. ಕೆಲವು ಸಂದರ್ಭಗಳಲ್ಲಿ ಮನುಷ್ಯನು ತನ್ನ ಕೈಕಾಲುಗಳನ್ನೂ ಮನಸ್ಸನ್ನೂ ಬುದ್ಧಿಶಕ್ತಿಯನ್ನೂ

ಮನುಷ್ಯ ಸಮುದಾಯದ ಕ್ಷೇಮಾಭಿವೃದ್ಧಿಗಾಗಿ ವಿನಿಯೋಗಿಸುತ್ತಾನೆ. ಅವರ ಸುಖಾಭಿವೃದ್ಧಿಗಾಗಿ ತನ್ನ ಸಂಪತ್ತನ್ನು ಖರ್ಚು ಮಾಡುತ್ತಾನೆ. ಆಗ ಅದಕ್ಕನುಗುಣವಾಗಿ ಅವನ ಹೃದಯದಲ್ಲಿ ಉದಾರತೆ ಎಂಬ ಆಂತರಿಕ ಗುಣವು ಪ್ರವರ್ತಿಸುತ್ತದೆ. ಮೇಲೆ ವಿವರಿಸಿದಂತೆ ಮಾನವನು ಈ ಅಂತಃಶಕ್ತಿಗಳನ್ನೆಲ್ಲ ಸಂದರ್ಭೋಚಿತವಾಗಿ ವಿನಿಯೋಗಿಸಿದರೆ ಮಾತ್ರ ಅವು 'ಖುಲ್ಕ್' ಅಥವಾ ನೈತಿಕ ಗುಣವೆಂಬ ಹೆಸರಿಗೆ ಅರ್ಹವಾಗುತ್ತವೆ. ಮಹಾಮಹಿಮನಾದ ಅಲ್ಲಾಹನು ನಮ್ಮ ಪ್ರವಾದಿವರ್ಯರಾದ ಮುಹಮ್ಮದ್ ಪೈಗಂಬರರನ್ನು[ಸ] ಸಂಬೋಧಿಸಿ ಈ ರೀತಿ ಹೇಳುತ್ತಾನೆ:

إِنَّكَ لَعَلَىٰ خُلُقٍ عَظِيمٍ

ನಿಶ್ಚಯವಾಗಿಯೂ ನೀನು ಅತ್ಯುತ್ತಮವಾದ ನೈತಿಕ ಗುಣವನ್ನು ಹೊಂದಿರುವಿ.

**(68:5)**

ಅಂದರೆ, ಉದಾರತೆ, ಧೈರ್ಯ, ನ್ಯಾಯ ನಿಷ್ಠೆ, ದಯೆ, ಪರೋಪಕಾರ, ಸತ್ಯಸಂಧತೆ, ಕ್ಷಮೆ ಮುಂತಾದ ಸಕಲ ಉತ್ಕೃಷ್ಟ ನೈತಿಕ ಗುಣಗಳು ನಿನ್ನಲ್ಲಿ ಸಮ್ಮಿಳಿತವಾಗಿವೆ.

ಸಂಕ್ಷಿಪ್ತವಾಗಿ, ಮನುಷ್ಯ ಹೃದಯದಲ್ಲಿರುವ ವಿನಯ, ಲಜ್ಜೆ, ಪ್ರಾಮಾಣಿಕತೆ, ಕೃಪೆ, ಅಭಿಮಾನ, ಸ್ಥೈರ್ಯ, ನಿರ್ಮಲತೆ, ಭಕ್ತಿ, ಸೌಮ್ಯತೆ, ಆರ್ದ್ರತೆ, ಅನುಕಂಪ, ಧೀರತೆ, ಉದಾರತೆ, ಕ್ಷಮೆ, ಸಹನೆ, ಪರೋಪಕಾರ, ಸತ್ಯಸಂಧತೆ, ನಿಷ್ಠೆ ಎಂಬೀ ಸಹಜಗುಣಗಳು ಸಂದರ್ಭೋಚಿತವಾಗಿಯೂ ವಿವೇಕಪೂರ್ಣವಾಗಿಯೂ ಪ್ರಕಟಗೊಳ್ಳುವಾಗ ಅವು ಸದ್ಗುಣಗಳಾಗಿ ಪರಿಣಮಿಸುತ್ತವೆ. ಈ ಸಕಲ ಸದ್ಗುಣಗಳು ವಾಸ್ತವದಲ್ಲಿ ಮನುಷ್ಯನ ಸಹಜ ಸ್ವಭಾವಗಳಾಗಿವೆ. ಸಂದರ್ಭವನ್ನರಿತು ಅವುಗಳನ್ನು ಬುದ್ಧಿಪೂರ್ವಕವಾಗಿ ವಿನಿಯೋಗಿಸಿದಾಗ ಮಾತ್ರ ಅವು ನೈತಿಕ ಗುಣಗಳೆಂಬ ಹೆಸರಿನಿಂದ ಕರೆಯಲ್ಪಡಲು ಅರ್ಹವಾಗುತ್ತವೆ. ಅಭಿವೃದ್ಧಿಶೀಲತೆ ಮಾನವನ ಸಹಜ ಗುಣಗಳಲ್ಲಿ ಒಂದು. ಆದ್ದರಿಂದ ಅವನು ಸತ್ಯಧರ್ಮಾವಲಂಬಿಯಾಗಿ ಸತ್ಯಸಂಧರ ಸಹವಾಸದಲ್ಲಿದ್ದುಕೊಂಡು ಸದ್ಬೋಧನೆಗಳ ಮುಖಾಂತರ ತನ್ನ ಸ್ವಾಭಾವಿಕ ಗುಣಗಳನ್ನು ನೈತಿಕ ಗುಣಗಳನ್ನಾಗಿ ರೂಪಾಂತರಿಸಲು ಶಕ್ತಿಯುಳ್ಳವನಾಗಿದ್ದಾನೆ. ಈ ಸೌಭಾಗ್ಯವು ಮನುಷ್ಯ ವರ್ಗಕ್ಕೆ ಹೊರತು ಬೇರಾವ ಜೀವರಾಶಿಗೂ ದಯಪಾಲಿಸಲ್ಪಟ್ಟಿಲ್ಲ.

## ಶಾರೀರಿಕ ಸ್ಥಿತಿ

ಇನ್ನು ನಾನು ಖುರ್‌ಆನ್ ನಿರ್ದೇಶಿಸುವ ಮೂರು ವಿಧ ಪರಿಷ್ಕರಣ ವಿಧಾನಗಳ ಪೈಕಿ ಪ್ರಥಮ ಹಂತದ ಶಾರೀರಿಕಾವಸ್ಥೆಯ ಕುರಿತು ವಿವರಿಸುವೆನು. ಈ ಘಟ್ಟದಲ್ಲಿ ಖುರ್‌ಆನ್ **'ಅದಬ್'** ಅಥವಾ 'ಸಭ್ಯತೆ'ಯ ವ್ಯವಸ್ಥೆಯನ್ನು ಕಲಿಸುತ್ತದೆ. ಅದೇನೆಂದರೆ, ಭಕ್ಷಣಕ್ರಮ ಮುಂತಾದ ದಿನಚರ್ಯೆಗಳನ್ನೂ ವಿವಾಹ ಮೊದಲಾದ ಸಾಮೂಹಿಕ ಕಾರ್ಯಗಳನ್ನೂ ನಿಯಂತ್ರಿಸುವ ಹಾಗೂ ಅನಾಗರಿಕ ಜೀವಿತದಿಂದ ಮನುಷ್ಯನನ್ನು ವಿಮುಕ್ತಿಗೊಳಿಸಿ ಪರಿಷ್ಕೃತವಾದ ನಾಗರಿಕ ಜೀವನದೆಡೆಗೆ ಕೊಂಡೊಯ್ಯುವ ನಿಯಮ ನಿರ್ದೇಶನಗಳನ್ನು ಅದು ದಯಪಾಲಿಸುತ್ತದೆ. ಅಲ್ಲಾಹನು ಖುರ್‌ಆನಿನಲ್ಲಿ ಹೀಗೆ ಹೇಳುತ್ತಾನೆ:

حُرِّمَتۡ عَلَيۡكُمۡ اُمَّهٰتُكُمۡ وَبَنٰتُكُمۡ وَاَخَوٰتُكُمۡ وَعَمّٰتُكُمۡ وَخٰلٰتُكُمۡ وَبَنٰتُ الۡاَخِ
وَبَنٰتُ الۡاُخۡتِ وَاُمَّهٰتُكُمُ الّٰتِىۡۤ اَرۡضَعۡنَكُمۡ وَاَخَوٰتُكُمۡ مِّنَ الرَّضَاعَةِ وَاُمَّهٰتُ
نِسَآئِكُمۡ وَرَبَآئِبُكُمُ الّٰتِىۡ فِىۡ حُجُوۡرِكُمۡ مِّنۡ نِّسَآئِكُمُ الّٰتِىۡ دَخَلۡتُمۡ بِهِنَّ فَاِنۡ لَّمۡ
تَكُوۡنُوۡا دَخَلۡتُمۡ بِهِنَّ فَلَا جُنَاحَ عَلَيۡكُمۡ وَحَلَآئِلُ اَبۡنَآئِكُمُ الَّذِيۡنَ مِنۡ اَصۡلَابِكُمۡ
وَاَنۡ تَجۡمَعُوۡا بَيۡنَ الۡاُخۡتَيۡنِ اِلَّا مَا قَدۡ سَلَفَ

ನಿಮಗೆ ನಿಮ್ಮ ತಾಯಂದಿರೊಡನೆ (ವಿವಾಹ) ನಿಷೇಧಿಸಲ್ಪಟ್ಟಿರುತ್ತದೆ; ಹಾಗೆಯೇ ನಿಮ್ಮ ಪುತ್ರಿಯರು, ನಿಮ್ಮ ಸಹೋದರಿಯರು, ನಿಮ್ಮ ತಂದೆಯ ಸಹೋದರಿಯರು, ನಿಮ್ಮ ತಾಯಿಯ ಸಹೋದರಿಯರು, ನಿಮ್ಮ ಸಹೋದರ ಪುತ್ರಿಯರು, ನಿಮ್ಮ ಸಹೋದರಿ ಪುತ್ರಿಯರು, ನಿಮಗೆ ಮೊಲೆಯುಣ್ಣಿಸಿದ ಸಾಕುತಾಯಂದಿರು, ಆಕೆಯ ಪುತ್ರಿಯರು, ನಿಮ್ಮ ಅತ್ತೆಯಂದಿರು (ಹೆಂಡತಿಯ ತಾಯಂದಿರು), ನಿಮ್ಮ ಪತ್ನಿಯ ಮುಂಚಿನ ಪತಿಯ ಪುತ್ರಿಯಂದಿರು – ಆದರೆ ಮದುವೆಯಾದ ನಂತರ ದೈಹಿಕ ಸಂಬಂಧವನ್ನು ಹೊಂದದೆ ಅವಳೊಂದಿಗೆ ವಿವಾಹವಿಚ್ಛೇದನ ಮಾಡಿದ್ದರೆ ಪಾಪವಿಲ್ಲ – ನಿಮ್ಮ ಪುತ್ರರ ಪತ್ನಿಯರು ಮತ್ತು ಒಂದೇ ಸಂದರ್ಭದಲ್ಲಿ ಇಬ್ಬರು ಸಹೋದರಿಯರು (ಇವರೊಡನೆಲ್ಲ ವಿವಾಹ) ನಿಮಗೆ ನಿಷೇಧಿಸಲ್ಪಟ್ಟಿದೆ. ಹಿಂದೆ ಕಳೆದುದು ಕಳೆಯಿತು. **(4:24)**

لَا يَحِلُّ لَكُمۡ اَنۡ تَرِثُوا النِّسَآءَ كَرۡهًا

ಸ್ತ್ರೀಯರ ಇಚ್ಛೆಗೆದುರಾಗಿ ಒತ್ತಾಯದಿಂದ ಅವರ ಸೊತ್ತಿನ ವಾರಸುತನ ಹೊಂದುವುದು ನಿಮಗೆ ಯುಕ್ತವಲ್ಲ. **(4:20)**

وَلَا تَنكِحُوا مَا نَكَحَ آبَاؤُكُم مِّنَ النِّسَاءِ إِلَّا مَا قَدْ سَلَفَ

ನಿಮ್ಮ ಪಿತರು ವಿವಾಹವಾದ ಸ್ತ್ರೀಯರನ್ನು ನೀವು ವಿವಾಹವಾಗಬಾರದು. ಹಿಂದೆ ಆದುದು ಆಗಿಹೋಯಿತು. **(4:23)**

أُحِلَّ لَكُمُ الطَّيِّبَاتُ - وَالْمُحْصَنَاتُ مِنَ الْمُؤْمِنَاتِ وَالْمُحْصَنَاتُ مِنَ الَّذِينَ أُوتُوا الْكِتَابَ
مِن قَبْلِكُمْ إِذَا آتَيْتُمُوهُنَّ أُجُورَهُنَّ مُحْصِنِينَ غَيْرَ مُسَافِحِينَ وَلَا مُتَّخِذِي أَخْدَانٍ

ಉತ್ತಮ ಹಾಗೂ ಶುದ್ಧವಾದ ಎಲ್ಲವೂ ನಿಮಗೆ ಅನುಮತಿಸಲ್ಪಟ್ಟಿದೆ.... ವಿಶ್ವಾಸಿನಿಯರಾದ ಚಾರಿತ್ರವತಿಯರನ್ನೂ ನಿಮಗಿಂತ ಮೊದಲು ಗ್ರಂಥ ನೀಡಲ್ಪಟ್ಟವರ ಪೈಕಿಯ ಸುಶೀಲವತಿಯರನ್ನೂ ವಿವಾಹ ಮಾಡಲು ನಿಮಗೆ ಅನುಮತಿಯಿದೆ. ನೀವು ಅವರಿಗೆ ವಿವಾಹಧನ (ಮಹರ್) ಕೊಟ್ಟು ಅವರನ್ನು ವಿವಾಹವಾಗುವುದಲ್ಲದೆ, ವ್ಯಭಿಚಾರ ಮಾಡುವುದನ್ನಾಗಲೀ ಉಪಪತ್ನಿಯರಂತೆ ಇಟ್ಟುಕೊಳ್ಳುವುದನ್ನಾಗಲೀ ನಿಷೇಧಿಸಲಾಗಿದೆ. **(5:6)**

ಸಂತಾನವುಂಟಾಗದ ಪುರುಷನ ಪತ್ನಿ ಸಂತಾನ ಲಾಭಾರ್ಥ ಪರಪುರುಷನನ್ನು ಹೊಂದುವ ಸಂಪ್ರದಾಯ ತಿಳಿಗೇಡಿಯರಾದ ಕೆಲವು ಅರಬಿಗಳೆಡೆಯಲ್ಲಿ ರೂಢಿಯಲ್ಲಿತ್ತು. **'ಮುಸಾಫಿಹತ್'** ಎಂದು ಕರೆಯಲ್ಪಡುವ ಈ ದುಷ್ಟ ಸಂಪ್ರದಾಯವನ್ನು ಮೇಲಿನ ವಾಕ್ಯವು ನಿಷೇಧಿಸಿದೆ. ಖುರ್‌ಆನಿನಲ್ಲಿ ಇನ್ನೂ ಹೇಳಲಾಗಿದೆ:

وَلَا تَقْتُلُوا أَنفُسَكُمْ

ನೀವು ಆತ್ಮಹತ್ಯೆ ಮಾಡಬೇಡಿರಿ. **(4:30)**

وَلَا تَقْتُلُوا أَوْلَادَكُمْ

ನಿಮ್ಮ ಸಂತಾನಗಳನ್ನು ನೀವು ಕೊಲ್ಲಬೇಡಿರಿ. **(6:152)**

لَا تَدْخُلُوا بُيُوتًا غَيْرَ بُيُوتِكُمْ حَتَّىٰ تَسْتَأْنِسُوا وَتُسَلِّمُوا عَلَىٰ أَهْلِهَا - فَإِن لَّمْ تَجِدُوا فِيهَا
أَحَدًا فَلَا تَدْخُلُوهَا حَتَّىٰ يُؤْذَنَ لَكُمْ ۖ وَإِن قِيلَ لَكُمُ ارْجِعُوا فَارْجِعُوا ۖ هُوَ أَزْكَىٰ لَكُمْ

ಅನಾಗರಿಕರಂತೆ ಅನ್ಯರ ಮನೆಗಳಲ್ಲಿ ಅನುಮತಿಯಿಲ್ಲದೆ ಮತ್ತು ಅವರಿಗೆ 'ಸಲಾಂ' ಹೇಳದೆ ('ನಿಮ್ಮ ಮೇಲೆ ಶಾಂತಿಯಿರಲಿ' ಎಂಬ ಅಭಿವಾದನ) ಪ್ರವೇಶಿಸಬಾರದು. ಅನುಮತಿ ಕೇಳುವುದು ಅಗತ್ಯ. ಅಲ್ಲಿ ನೀವು ಯಾರನ್ನೂ ಕಾಣದಿದ್ದರೆ ಗೃಹಸ್ಥನು ಬಂದು ನಿಮಗೆ ಅನುಮತಿ ನೀಡುವ ತನಕ ಒಳಗೆ ಪ್ರವೇಶಿಸಬೇಡಿರಿ; ಮನೆಯವನು ನಿಮ್ಮೊಡನೆ ಹಿಂತಿರುಗಿ ಹೋಗಲು ಹೇಳುವನಾದರೆ ಹಿಂತಿರುಗಿ ಹೋಗಿರಿ; ಅದು ನಿಮಗೆ ಅತ್ಯಂತ ಉಚಿತ. **(24:28, 29)**

وَأْتُوا الْبُيُوتَ مِنْ أَبْوَابِهَا

ಮನೆಗಳೊಳಗೆ ಅವುಗಳ ಬಾಗಿಲುಗಳ ಮೂಲಕ ಪ್ರವೇಶಿಸಿರಿ. ಗೋಡೆಗಳನ್ನು ಹಾರಿ ಪ್ರವೇಶಿಸಬೇಡಿರಿ. **(2:190)**

وَإِذَا حُيِّيتُم بِتَحِيَّةٍ فَحَيُّوا بِأَحْسَنَ مِنْهَا أَوْ رُدُّوهَا

ನಿಮ್ಮೊಡನೆ ಯಾರಾದರೂ ಸಲಾಂ ಹೇಳಿದರೆ (ಶುಭ ಹಾರೈಸಿದರೆ) ಅದಕ್ಕಿಂತಲೂ ಉತ್ತಮವಾದ ವಚನದಿಂದ ನೀವು ಸಹ ಸಲಾಂ ಹೇಳಿರಿ. ಅಲ್ಲವಾದರೆ ಸಮಾನವಾದ ರೀತಿಯಲ್ಲಾದರೂ ಶುಭ ಹಾರೈಸಿರಿ. **(4:87)**

إِنَّمَا الْخَمْرُ وَالْمَيْسِرُ وَالْأَنصَابُ وَالْأَزْلَامُ رِجْسٌ مِّنْ عَمَلِ الشَّيْطَانِ فَاجْتَنِبُوهُ لَعَلَّكُمْ تُفْلِحُونَ

ಮದ್ಯಪಾನ, ಜೂಜಾಟ, ಮೂರ್ತಿಪೂಜೆ, ಶಕುನ ನೋಡುವುದು ಇವೆಲ್ಲ ಅಶುದ್ಧ ಹಾಗೂ ಪೈಶಾಚಿಕ ಕರ್ಮಗಳಾಗಿವೆ. ನೀವು ವಿಜಯಿಗಳಾಗಬೇಕಾದರೆ ಅವುಗಳನ್ನು ವರ್ಜಿಸಿರಿ. **(5:91)**

حُرِّمَتْ عَلَيْكُمُ الْمَيْتَةُ وَالدَّمُ وَلَحْمُ الْخِنزِيرِ وَمَا أُهِلَّ لِغَيْرِ اللَّهِ بِهِ وَالْمُنْخَنِقَةُ وَالْمَوْقُوذَةُ وَالْمُتَرَدِّيَةُ وَالنَّطِيحَةُ وَمَا أَكَلَ السَّبُعُ إِلَّا مَا ذَكَّيْتُمْ وَمَا ذُبِحَ عَلَى النُّصُبِ

ತನ್ನಷ್ಟಕ್ಕೆ ಸತ್ತ ಪ್ರಾಣಿ, ರಕ್ತ, ಹಂದಿಮಾಂಸ, ಅಲ್ಲಾಹನ ಹೊರತು ಬೇರೆಯವರ ಹೆಸರಿನಲ್ಲಿ ಅರ್ಪಿಸಲ್ಪಟ್ಟದ್ದು, ಹಿಸುಕಿ ಕೊಲ್ಲಲ್ಪಟ್ಟದ್ದು, ಹೊಡೆತದಿಂದ, ಆಘಾತ ದಿಂದ ಅಥವಾ ಕೊಂಬಿನ ಪೆಟ್ಟಿನಿಂದ ಸತ್ತದ್ದು, ವನ್ಯಪ್ರಾಣಿಗಳು ತಿಂದು ಬಾಕಿಯಾದದ್ದು, (ಅವು ಪ್ರಾಣ ಬಿಡುವ ಮೊದಲು) ನೀವು ವಿಧಿ ಪ್ರಕಾರ ಕೊಯ್ದರೆ ಹೊರತು, ವಿಗ್ರಹಗಳಿಗೆ ಬಲಿಯರ್ಪಿಸಿದ್ದು ನಿಮಗೆ ನಿಷೇಧಿಸಲ್ಪಟ್ಟಿವೆ. ಏಕೆಂದರೆ ಇವೆಲ್ಲ ಹೆಣಕ್ಕೆ ಹೋಲುತ್ತವೆ. **(5:4)**

يَسْـَٔلُوْنَكَ مَاذَآ اُحِلَّ لَهُمْ ؕ قُلْ اُحِلَّ لَكُمُ الطَّيِّبٰتُ

ತಮಗೆ ಭುಜಿಸಲು ಅನುಮತಿಯಿರುವುದು ಯಾವುದೆಂದು ಅವರು ನಿನ್ನೊಡನೆ ಕೇಳಿದರೆ ಹೇಳು: ಉತ್ತಮ ಹಾಗೂ ಶುದ್ಧವಾಗಿರುವ ಸಕಲವನ್ನೂ ನಿಮಗೆ ಅನುಮತಿಸಲಾಗಿದೆ. ಹೆಣ ಮತ್ತು ಹೆಣಕ್ಕೆ ತುಲ್ಯವಾಗಿರುವ ಅಶುದ್ಧ ವಸ್ತುಗಳು ಮಾತ್ರ ನಿಷಿದ್ಧ. **(5:5)**

اِذَا قِيْلَ لَكُمْ تَفَسَّحُوْا فِى الْمَجٰلِسِ فَافْسَحُوْا -

وَاِذَا قِيْلَ انْشُزُوْا فَانْشُزُوْا

ಸಭೆಗಳಲ್ಲಿ ಇತರರಿಗೆ ಬೇಕಾಗಿ ಸ್ಥಳ ಬಿಟ್ಟುಕೊಡಲು ನಿಮ್ಮೊಡನೆ ಅಪೇಕ್ಷಿಸಲ್ಪಟ್ಟರೆ ನೀವು ಸ್ಥಳವನ್ನು ಬಿಟ್ಟುಕೊಡಿರಿ..... ನಿಮ್ಮೊಡನೆ ಎದ್ದೇಳಲು ಅಗತ್ಯಪಡಿಸಿದರೆ ಎದ್ದೇಳಿರಿ. **(58:12)**

كُلُوْا وَاشْرَبُوْا وَلَا تُسْرِفُوْا

ನಿರ್ದೋಷವಾದುದನ್ನು ಭಕ್ಷಿಸಿರಿ; ಕುಡಿಯಿರಿ. ಯಾವುದರಲ್ಲೂ ಮಿತಿಮೀರಬಾರದು. ಅಂದರೆ ದೋಷರಹಿತವೂ ವಿಹಿತವೂ ಆದ ಮಾಂಸಾಹಾರವನ್ನೂ ಸಸ್ಯಾಹಾರವನ್ನೂ ಭಕ್ಷಿಸಿರಿ. ಆದರೆ ಎಲ್ಲೆ ಮೀರದಿರಲಿ. **(7:32)**

وَقُوْلُوْا قَوْلًا سَدِيْدًا

ನಿಷ್ಪ್ರಯೋಜಕ ಮಾತುಗಳನ್ನು ಆಡದಿರಿ; ಸಂದರ್ಭವನ್ನರಿತು ಯುಕ್ತವಾಗಿ ಮಾತನಾಡಿರಿ. **(33:71)**

وَثِيَابَكَ فَطَهِّرْ - وَالرُّجْزَ فَاهْجُرْ

ನಿಮ್ಮ ವಸ್ತ್ರಗಳನ್ನು ಶುಚಿಯಾಗಿರಿಸಿರಿ; ಮಾಲಿನ್ಯವನ್ನು ಹೋಗಲಾಡಿಸಿರಿ. **(74:5, 6)** ಅಂದರೆ, ವಸ್ತ್ರಗಳನ್ನು ಶುಚಿಯಾಗಿಡುವುದಲ್ಲದೆ. ಶರೀರವನ್ನೂ ಮನೆಯನ್ನೂ ಪರಿಸರವನ್ನೂ ಉಪಯೋಗಿಸುವ ಸಾಧನ ಸಾಮಗ್ರಿಗಳನ್ನೂ ಶುಚಿಯಾಗಿಡಬೇಕಾಗಿದೆ.

وَاقْصِدْ فِىْ مَشْيِكَ وَاغْضُضْ مِنْ صَوْتِكَ

ಅಗತ್ಯವಿರುವ ಸಮಯದಲ್ಲಿ ಹೊರತು ಅಧಿಕ ವೇಗವಾಗಿ ಅಥವಾ ಅಧಿಕ

ನಿಧಾನವಾಗಿ ನಡೆಯದೆ ನಿಮ್ಮ ನಡೆಯಲ್ಲಿ ಮಧ್ಯನೆಲೆಯನ್ನು ಕೈಗೊಳ್ಳಿರಿ. ಹಾಗೆಯೇ ನಿಮ್ಮ ಸ್ವರ ಅಧಿಕ ಉಚ್ಚವಾಗಲೀ ಅಧಿಕ ತಗ್ಗಾಗಲೀ ಆಗಿರದೆ ಮಧ್ಯ ನೆಲೆಯಲ್ಲಿರಲಿ. **(31:20)**

تَزَوَّدُوا فَإِنَّ خَيْرَ الزَّادِ التَّقْوٰى

ನೀವು ಯಾತ್ರೆ ಹೊರಡುವಾಗ ಬೇಕಾದ ಎಲ್ಲ ಏರ್ಪಾಡುಗಳನ್ನು ಮಾಡಿಡಿ. ಅದು ಭಿಕ್ಷೆಬೇಡುವುದರಿಂದ ನಿಮ್ಮನ್ನು ರಕ್ಷಿಸಬಹುದು. **(2:198)**

وَإِنْ كُنْتُمْ جُنُبًا فَاطَّهَّرُوا

ನೀವು ಸಂಭೋಗ ಮಾಡಿದರೆ, ಸ್ನಾನ ಮಾಡಿ ದೇಹವನ್ನು ಶುಚಿಗೊಳಿಸಿರಿ **(5:7)**

وَفِيٓ أَمْوَالِهِمْ حَقٌّ لِّلسَّآئِلِ وَالْمَحْرُومِ

ಅವರ ಧನದಲ್ಲಿ ಯಾಚಿಸುವವರಿಗೂ ಯಾಚಿಸಲು ಸಾಧ್ಯವಿಲ್ಲದ ಜೀವಿಗಳಿಗೂ ಹಕ್ಕುಂಟು **(51:20)** ಎಂದರೆ, ನಿಮ್ಮ ಆಹಾರದಿಂದ ನಿರ್ಗತಿಕರಿಗೂ ಯಾಚಕರಿಗೂ ದಾನಮಾಡುವುದಲ್ಲದೆ, ಸಂದರ್ಭೋಚಿತವಾಗಿ ನಾಯಿಗಳಿಗೂ ಇತರ ಮೃಗ–ಪಕ್ಷಿಗಳಿಗೂ ನೀಡಬೇಕಾಗಿದೆ.

وَإِنْ خِفْتُمْ أَلَّا تُقْسِطُوا فِي الْيَتٰمٰى فَانْكِحُوا مَا طَابَ لَكُمْ مِّنَ النِّسَآءِ مَثْنٰى وَثُلٰثَ وَرُبٰعَ ۚ فَإِنْ خِفْتُمْ أَلَّا تَعْدِلُوا فَوَاحِدَةً أَوْ مَا مَلَكَتْ أَيْمَانُكُمْ ۚ ذٰلِكَ أَدْنٰىٓ أَلَّا تَعُولُوا - وَاٰتُوا النِّسَآءَ صَدُقٰتِهِنَّ نِحْلَةً

(ನಿಮ್ಮ ರಕ್ಷಣೆಯಲ್ಲಿರುವ ಅನಾಥೆಯರನ್ನು ನೀವು ವಿವಾಹವಾಗುವುದರಲ್ಲಿ ವಿರೋಧವಿಲ್ಲ; ಆದರೆ ಅವರಿಗೆ ನಿಮ್ಮ ಹೊರತು ಬೇರೆ ರಕ್ಷಕರು ಇಲ್ಲದಿರುವ ಕಾರಣ) ನೀವು ಅವರೊಡನೆ ನ್ಯಾಯಬಾಹಿರವಾಗಿ ವರ್ತಿಸಲು ಎಡೆಯಾಗುವುದೆಂದು ನಿಮಗೆ ಸಂಶಯವಿದ್ದರೆ (ರಕ್ಷಕರಿರುವ) ಇತರ ಸ್ತ್ರೀಯರನ್ನು ವಿವಾಹವಾಗಿರಿ. ಅವರೊಡನೆ ಎಲ್ಲ ರೀತಿಯಲ್ಲೂ ನ್ಯಾಯವಾಗಿ ವರ್ತಿಸಲು ಸಾಧ್ಯವಿದ್ದರೆ ಎರಡು, ಮೂರು ಅಥವಾ ನಾಲ್ಕರ ತನಕ ವಿವಾಹ ಮಾಡಿಕೊಳ್ಳಬಹುದು. ಅವರೆಡೆಯಲ್ಲಿ ನ್ಯಾಯಪಾಲಿಸಲು ನಿಮಗೆ ಸಾಧ್ಯವಿಲ್ಲವೆಂದು ಶಂಕೆಯಿದ್ದರೆ ಆವಶ್ಯವಿದ್ದರೂ ನೀವು ಒಬ್ಬಳನ್ನು ಮಾತ್ರ ವಿವಾಹವಾಗುವುದರಲ್ಲಿ ತೃಪ್ತಿಪಡಿರಿ.... ಸ್ತ್ರೀಯರಿಗೆ ಅವರ ಹಕ್ಕಿನ ವಿವಾಹ ಮೌಲ್ಯವನ್ನು ನೀಡಿರಿ. **(4:4,5)**

ಸಂದರ್ಭ ಒದಗಿ ಬಂದರೆ ಬಹುಪತ್ನಿತ್ವವನ್ನು ಕೈಗೊಳ್ಳಬಹುದೆಂದು ಅನುಮತಿಯನ್ನು ನೀಡುವುದರೊಂದಿಗೆ ಪವಿತ್ರ ಖುರ್‌ಆನ್ ಅದಕ್ಕೊಂದು ಮಿತಿ ಯನ್ನೂ ನಿರ್ಣಯಿಸಿದೆ. ಏಕಪತ್ನೀತ್ವವನ್ನು ಮಾತ್ರ ನಿಷ್ಕರ್ಷಿಸುವುದಾದರೆ ಅದು ವ್ಯಭಿಚಾರಕ್ಕೆ ಎಡೆಕೊಡುವುದು. ಅದೇ ರೀತಿ, ಮಿತಿಯಿಲ್ಲದ ಬಹುಪತ್ನೀತ್ವವನ್ನು ಅನುಮತಿಸುವುದಾದರೆ ಅಜ್ಞಾನ ಕಾಲದ ಸಂಪ್ರದಾಯವನ್ನನುಸರಿಸಿ ಅಸಂಖ್ಯಾತ ಹೆಂಡಿರನ್ನು ವರಿಸುವುದಕ್ಕೆ ಎಡೆಯಾಗುವುದರಿಂದ ಅದಕ್ಕೂ ಮಿತಿಯನ್ನು ಇರಿಸಲಾಗಿದೆ.

ಸಂಕ್ಷಿಪ್ತವಾಗಿ, ಇದು ಮನುಷ್ಯನ ಅನಾಗರಿಕ ಶಾರೀರಿಕಾವಸ್ಥೆಯನ್ನು ಉದ್ಧರಿಸಿ ಮಾನವೀಯತೆಯಿಂದ ಕೂಡಿದ ಸಭ್ಯ ನಿಯಂತ್ರಿತ ಜೀವನ ನಡೆಸಲು ಪವಿತ್ರ ಖುರ್‌ಆನ್ ಬೋಧಿಸಿದ ಮೊದಲನೆಯ ಸುಧಾರಣೆಯ ವ್ಯವಸ್ಥೆಯಾಗಿದೆ. ಈ ಬೋಧನೆಗಳಲ್ಲಿ ಮಾನವೀಯತೆಯ ಸಭ್ಯ ನಡತೆಗಳಿಗೆ ಹಾಗೂ ಸಾಮಾಜಿಕ ಜೀವನಕ್ಕೆ ಸಂಬಂಧಿಸಿದ ವಿಷಯಗಳ ಹೊರತು ನೈತಿಕ ಜೀವನಕ್ಕೆ ಆವಶ್ಯಕವೆನಿಸಿದ ಉತ್ಕೃಷ್ಟ ಸದ್ಗುಣಗಳ ಕುರಿತು ಯಾವ ನಿರ್ದೇಶನವೂ ಒಳಗೊಂಡಿಲ್ಲ. ಪ್ರವಾದಿವರ್ಯರಾದ ಮುಹಮ್ಮದ್ ಪೈಗಂಬರರ(ಸ) ಆವಿರ್ಭಾವದ ಪ್ರಥಮ ಉದ್ದೇಶವು ಯಾವ ಜನತೆಯ ಪುನರುದ್ಧಾರಕ್ಕಾಗಿತ್ತೋ ಅವರು ವಾಸ್ತವದಲ್ಲಿ ಇತರ ಜನತೆಗಳಿಗಿಂತ ಅತ್ಯಂತ ಅನಾಗರಿಕತೆಯಲ್ಲಿದ್ದುದರಿಂದ ಮಾನವೀಯತೆಯ ಯಾವ ನಿಯಮವನ್ನೂ ಅವರು ಪಾಲಿಸುತ್ತಿರಲಿಲ್ಲ. ನಾಗರಿಕ ಜೀವನಕ್ಕೆ ಸಹಾಯಕವಾದ ನಿಯಮಗಳನ್ನು ಮೊದಲ ಹಂತದಲ್ಲೇ ಅವರಿಗೆ ಕಲಿಸಬೇಕಾಗಿದ್ದ ಕಾರಣದಿಂದ ಪವಿತ್ರ ಖುರ್‌ಆನ್ ಆರಂಭದಲ್ಲೇ ಬಾಹ್ಯ ಶಿಷ್ಟಾಚಾರಗಳನ್ನು ಬೋಧಿಸಿತು.

## ಹಂದಿಮಾಂಸ ನಿಷಿದ್ಧ

'ಖಿನ್‌ಜ಼ೀರ್'(خِنزِير) ಅಥವಾ ಹಂದಿ ಅಭಕ್ಷ್ಯವೆಂದು ನಿರೋಧಿಸಲ್ಪಟ್ಟಿರುವ ಒಂದು ಪ್ರಾಣಿಯಾಗಿದೆ. ಜಿಗುಪ್ಸೆ ಹುಟ್ಟಿಸುವ ಈ ಜೀವಿಯ ಮಾಂಸವು ನಿಷಿದ್ಧವೆಂಬುದಕ್ಕೆ ಅದರ ಹೆಸರಿನಲ್ಲೇ ಸೂಚನೆಯಿದೆ ಎಂಬ ಸಂಗತಿ ಇಲ್ಲಿ ಗಮನಿಸತಕ್ಕದ್ದಾಗಿದೆ. 'ಬಹಳ ಹೀನ' ಎಂದರ್ಥವುಳ್ಳ 'ಖಿನ್‌ಜ಼್' (خِنز) ಹಾಗೂ 'ನಾನು ಕಾಣುತ್ತೇನೆ' ಎಂದರ್ಥವುಳ್ಳ 'ಅರ್' (ار) ಎಂಬೀ ಎರಡು ಪದಗಳು ಸೇರಿ ಉಂಟಾದ ಸಂಯುಕ್ತ ಪದವಾಗಿದೆ ಖಿನ್‌ಜ಼ೀರ್. ಹಾಗೆ ಈ ಹೆಸರಿನ ಅರ್ಥ: "ನಾನು ಅದನ್ನು ಬಹಳ ಹೀನವಾಗಿ ಅಥವಾ ಕೆಟ್ಟದ್ದಾಗಿ ಕಾಣುತ್ತೇನೆ" ಎಂದಾಯಿತು. ಹೀಗೆ ಪ್ರಾರಂಭದಲ್ಲೇ ದೇವನು ಈ ಪ್ರಾಣಿಗೆ ಇಟ್ಟಿರುವ ಹೆಸರೇ

ಅದರ ಅಶುದ್ಧತೆಯನ್ನು ಪ್ರಕಟಗೊಳಿಸುತ್ತದೆ. ಹಿಂದಿ ಭಾಷೆಯಲ್ಲಿ ಈ ಪ್ರಾಣಿಗೆ ಹೇಳುವ **'ಸೂಅರ್'** ಎಂಬ ಹೆಸರು ಸಹ ಇದೇ ಅರ್ಥವನ್ನು ಕೊಡುತ್ತದೆಯೆಂಬುದು ಕುತೂಹಲಕಾರಿಯಾಗಿದೆ. ಈ ಪದ ಸಹ 'ಸೂ' ಮತ್ತು 'ಅರ್' ಎಂಬ ಎರಡು ಪದಗಳ ಸಂಯೋಗದಿಂದುಂಟಾಗಿದೆ. ಈ ಸಂಯುಕ್ತ ಪದದ ಕೊನೆಯ ಭಾಗವೂ ಮೊದಲು ಹೇಳಿದ ಅರಬಿ ಪದದ ಕೊನೆಯ ಭಾಗವೂ ಒಂದೇ ಆಗಿರುವ ರೀತಿಯಲ್ಲೇ ಇದರ ಮೊದಲನೆಯ ಭಾಗವಾದ 'ಸೂ' ಶಬ್ದ ಅರಬಿ ಪದದ ಮೊದಲನೆಯ ಭಾಗದ ಪರ್ಯಾಯ ಪದವಾಗಿದೆ. ಹೀಗೆ ಈ ಹಿಂದಿ ಪದದ ಅರ್ಥ ಸಹ "ನಾನು ಅದನ್ನು ಬಹಳ ಕೆಟ್ಟದ್ದಾಗಿ ಕಾಣುತ್ತೇನೆ" ಎಂದಾಗಿದೆ. ಹಿಂದಿ ಹೆಸರಿನ 'ಸೂ' ಶಬ್ದ ಅರಬಿಯಾಗುವುದು ಹೇಗೆಂದು ವಿಸ್ಮಯಪಡಬೇಕಾಗಿಲ್ಲ. ಅರಬಿ ಭಾಷೆಯು ಇತರ ಎಲ್ಲ ಭಾಷೆಗಳ ಮಾತೆಯೆಂದು ನಾನು ನನ್ನ **'ಮಿನನುರ್ರಾಹ್ಮಾನ್'** ಎಂಬ ಗ್ರಂಥದಲ್ಲಿ ರುಜುಪಡಿಸಿರುವೆನು. ಅರಬಿ ಭಾಷೆಯ ಧಾತು ಪದಗಳು ಇತರ ಭಾಷೆಗಳಲ್ಲೆಲ್ಲ ಧಾರಾಳವಾಗಿ ಬೆರೆತಿವೆಯೆಂಬುದು ವಾಸ್ತವ. 'ಸೂ' ಶಬ್ದ ಅರಬಿಯೇ ಆಗಿದೆ. ಹಿಂದಿಯಲ್ಲಿ ಇದರ ಪರ್ಯಾಯ ಪದ **'ಬದ್'** ಎಂದಾಗಿದೆ. 'ಕೆಟ್ಟದ್ದು' ಎಂಬರ್ಥವುಳ್ಳ ಈ **'ಬದ್'** ಶಬ್ದವು ಆ ಪ್ರಾಣಿಯ ಸಂಜ್ಞೆಯಾಗಿಯೂ ಪ್ರಯೋಗಿಸಲ್ಪಡುತ್ತದೆ. ಪ್ರಪಂಚಾದ್ಯಂತ ಅರಬಿ ಭಾಷೆ ಪ್ರಚಲಿತವಿದ್ದ ಪ್ರಾರಂಭ ಘಟ್ಟದಲ್ಲಿ ಈ ಪ್ರಾಣಿಗಿದ್ದ 'ಖಿನ್‌ಜೀರ್' ಎಂಬ ಹೆಸರಿನ ಸಮಾನಾರ್ಥವನ್ನು ನೀಡುವ **'ಸೂಅರ್'** ಎಂಬ ಹೆಸರು ಅರಬಿಯಲ್ಲೇ ಈ ರಾಜ್ಯದಲ್ಲೂ ವಾಡಿಕೆಯಲ್ಲಿದ್ದು ರೂಪಾಂತರ ಹೊಂದದೆ ಇಂದಿನ ತನಕ ಬಾಕಿಯುಳಿದಿದೆಯೆಂದು ಭಾವಿಸುವುದು ಅಸಂಗತವಲ್ಲ. ಈ ಹೆಸರಿನೊಂದಿಗೆ ಹೆಚ್ಚುಕಮ್ಮಿ ಸಾಮ್ಯವುಳ್ಳ ಸಂಸ್ಕೃತ ಪದವು ಇದರದ್ದೇ ತದ್ಭವವಾಗಿರಬಹುದು. ಪ್ರಸ್ತುತ ಪ್ರಾಣಿಗೆ ಈ ಹೆಸರು ಬರಲು ಕಾರಣವೇನೆಂದು ಈ ಪದದ ಅರ್ಥದಿಂದ ವ್ಯಕ್ತವಾಗುವುದರಿಂದ ಮೂಲ ಸಂಜ್ಞೆ ಇದೇ ಆಗಿರಬೇಕೆಂದು ತೀರ್ಮಾನಿಸಬೇಕಾಗಿದೆ. ಇದಕ್ಕೆ 'ಖಿನ್‌ಜೀರ್' ಎಂಬ ಪದವು ಉತ್ತಮ ಸಾಕ್ಷ್ಯವಾಗಿದೆ. ಬಹಳ ಕೆಟ್ಟದ್ದು ಎಂಬರ್ಥ ಕೊಡುವ ಈ ಪದ ಈ ಪ್ರಾಣಿಯ ಸ್ವಭಾವಕ್ಕೆ ಅನುಯೋಜ್ಯವೆಂಬುದು ಸ್ಪಷ್ಟ. ಅದು ಅತ್ಯಂತ ಹೊಲಸನ್ನು ತಿಂದು ಜೀವಿಸುವ ಹಾಗೂ ಇತರ ಪ್ರಾಣಿಗಳಲ್ಲಿ ಗೋಚರಿಸದ ಜಿಗುಪ್ಸೆ ಹುಟ್ಟಿಸುವ ಅಸಭ್ಯ ಸ್ವಭಾವದಿಂದ ಕೂಡಿದ ಒಂದು ಜೀವಿಯೆಂಬುದು ಸರ್ವ ವಿದಿತ. ತನ್ಮೂಲಕ ಅದರ ಮಾಂಸ ಏಕೆ ನಿಷಿದ್ಧವೆಂದು ಸ್ಪಷ್ಟವಾಗುತ್ತದೆ. ಹೀಗೆ ಅಶುದ್ಧವೂ ಮಲಿನವೂ ಆದ ಮೃಗದ ಮಾಂಸ ತಿನ್ನುವುದು ಶರೀರಕ್ಕೂ ಆತ್ಮಕ್ಕೂ ದೋಷಕರವೆಂಬುದು ನೈಸರ್ಗಿಕ ತತ್ವವಾಗಿದೆ. ಭಕ್ಷ್ಯ ಕ್ರಮವು ಆಂತರಿಕ ವ್ಯವಸ್ಥೆಯನ್ನು

ಪ್ರಭಾವಿತಗೊಳಿಸುವುದೆಂದು ಮೊದಲು ರುಜುಪಡಿಸಲಾಗಿದೆಯಷ್ಟೆ. ಒಟ್ಟಾರೆ, ಇಷ್ಟು ಕೆಟ್ಟದ್ದರ ಫಲವು ಕೆಟ್ಟದ್ದಾಗಿಯೇ ಇರಬಹುದೆಂದು ನಿಸ್ಸಂಶಯವಾಗಿ ಹೇಳಬಹುದು. ಈ ಪ್ರಾಣಿಯ ಮಾಂಸ ಮುಖ್ಯವಾಗಿ ಲಜ್ಜೆಯನ್ನು ಕಡಿಮೆ ಮಾಡುವುದೆಂದೂ ಅಸಭ್ಯತೆಯನ್ನು ಹೆಚ್ಚಿಸುವುದೆಂದೂ ಇಸ್ಲಾಮಿಗೆ ಮೊದಲಿನ ಯುನಾನಿ (ಗ್ರೀಕ್) ವೈದ್ಯ ಶಾಸ್ತ್ರಜ್ಞರು ಅಭಿಪ್ರಾಯಪಟ್ಟಿರುವರು.

ಶವ ಅಥವಾ ಸತ್ತ ಮೃಗದ ಮಾಂಸ ತಿನ್ನಬಾರದೆಂದು ಪವಿತ್ರ ಖುರ್‌ಆನ್ ವಿಧಿಸಿರುವುದು, ಅದು ಶಾರೀರಿಕ ಆರೋಗ್ಯದ ಹಾಗೆಯೇ ಮಾನಸಿಕ ಆರೋಗ್ಯಕ್ಕೂ ನೈತಿಕತೆಗೂ ಹಾನಿಕರವಾಗಿರುವುದರಿಂದಾಗಿದೆ. ಹಿಸುಕಿ ಕೊಂದ ಅಥವಾ ಹೊಡೆದು ಕೊಂದ ಪ್ರಾಣಿಗಳ ಮಾಂಸ ಸಹ, ರಕ್ತ ಹೊರಗೆ ಹರಿದು ಹೋಗದುದರಿಂದ ಯಥಾರ್ಥದಲ್ಲಿ ಶವದ ವರ್ಗದಲ್ಲಿ ಒಳಪಡುತ್ತದೆ. ಸತ್ತ ಪ್ರಾಣಿಯ ಶರೀರವು, ಒಳಗೆ ರಕ್ತ ತಡೆದು ನಿಲ್ಲುವುದರಿಂದ ಬೇಗನೇ ಹಾಳಾಗುತ್ತದೆ. ಮಾತ್ರವಲ್ಲ, ರಕ್ತದ ಜೀವಾಣುಗಳು ಬೇಗನೇ ಸತ್ತು ಒಳಗೆಯೇ ಕೊಳೆಯುವುದರಿಂದ ಅದರಿಂದ ಉದ್ಭವಿಸುವ ವಿಷಮಯವಾದ ದುರ್ಗಂಧ ಆ ಶರೀರದಲ್ಲೆಲ್ಲೂ ವ್ಯಾಪಿಸುತ್ತದೆ.

## ಮಾನವನ ನೈತಿಕ ಸ್ಥಿತಿ

ಶಾರೀರಿಕ ಸ್ಥಿತಿಯನ್ನು ಅನುಯೋಜ್ಯವಾದ ನಿಯಮಗಳ ಮುಖಾಂತರ ನಿಯಂತ್ರಿಸಿ ಉತ್ಕೃಷ್ಟವಾದ ನೈತಿಕ ಸ್ಥಿತಿಗೆ ಪರಿವರ್ತಿಸುವುದಾಗಿದೆ ಪವಿತ್ರ ಖುರ್‌ಆನಿನ ಎರಡನೇ ಸುಧಾರಣೆಯ ಕ್ರಮ. ಈ ನೈತಿಕ ಸುಧಾರಣೆಯ ವಿಷಯವು ಬಹಳ ವಿಪುಲವಾದುದು. ಇದರ ಕುರಿತು ಪವಿತ್ರ ಖುರ್‌ಆನ್ ನಿರ್ದೇಶಿಸುವುದನ್ನೆಲ್ಲ ಇಲ್ಲಿ ಸವಿಸ್ತಾರವಾಗಿ ಪ್ರತಿಪಾದಿಸುವುದಕ್ಕೆ ಅವಕಾಶವಿಲ್ಲ. ಆದುದರಿಂದ ಉದಾಹರಣೆಗೆ ಕೆಲವು ಉತ್ಕೃಷ್ಟ ನೈತಿಕ ಗುಣಗಳ ಕುರಿತು ಮಾತ್ರ ಇಲ್ಲಿ ಪ್ರಸ್ತಾಪಿಸುತ್ತೇನೆ.

ನೈತಿಕ ಗುಣಗಳನ್ನು ಎರಡಾಗಿ ವಿಭಾಗಿಸಬಹುದು. 1. ಅಹಿಂಸಾತ್ಮಕ. ಎಂದರೆ ಯಾರಿಗೂ ಕೇಡನ್ನು ಬಗೆಯದ ರೀತಿಯಲ್ಲಿ ದುಷ್ಟ ಸ್ವಭಾವವನ್ನು ವರ್ಜಿಸುವುದಕ್ಕೆ ಮನುಷ್ಯನನ್ನು ಶಕ್ತನನ್ನಾಗಿ ಮಾಡುವ ಸದ್ಗುಣಗಳು. 2. ಪರೋಪಕಾರಾತ್ಮಕ. ಎಂದರೆ ಜೀವಜಾಲಗಳಿಗೆ ಸದಾ ಒಳಿತನ್ನು ಮಾಡುವ ಸ್ವಭಾವವನ್ನು ಬೆಳೆಸಲು ಮನುಷ್ಯನನ್ನು ಪ್ರಾಪ್ತನನ್ನಾಗಿ ಮಾಡುವ ಸದ್ಗುಣಗಳು.

ಅಹಿಂಸಾತ್ಮಕ ಸ್ವಭಾವದಲ್ಲಿ, ನಾಲಗೆಯಿಂದ, ಕೈಯಿಂದ, ಕಣ್ಣಿನಿಂದ ಅಥವಾ ಇತರ ಅವಯವಗಳಿಂದ ಅನ್ಯರ ಧನಕ್ಕೋ, ಅಭಿಮಾನಕ್ಕೋ, ಜೀವಕ್ಕೋ

ಹಾನಿಕರವಾದ ಏನನ್ನೂ ಮಾಡದಿರಲಿಕ್ಕೂ ಹಾಗೆ ಉದ್ದೇಶಿಸದಿರಲಿಕ್ಕೂ ಓರ್ವನನ್ನು ಪ್ರಾಪ್ತನನ್ನಾಗಿ ಮಾಡುವ ಸಕಲ ಸದ್ಗುಣಗಳು ಒಳಗೊಂಡಿವೆ. ಪರೋಪಕಾರಾತ್ಮಕ ಸ್ವಭಾವದಲ್ಲಿ ನಾಲಗೆಯಿಂದ, ಕೈಯಿಂದ, ಧನದಿಂದ, ವಿದ್ಯೆಯಿಂದ ಅಥವಾ ಇನ್ನಿತರ ರೀತಿಯಿಂದ ಅನ್ಯರಿಗೆ ಉಪಕಾರವನ್ನು ಮಾಡಲು ಪ್ರಯತ್ನಿಸುವುದಕ್ಕೂ ಹಾಗೂ ಅವರ ಮಾನ, ಮಹಿಮೆಗಳನ್ನು ಪ್ರಕಟಿಸಲು ಶ್ರಮಿಸುವುದಕ್ಕೂ ಶಕ್ತನನ್ನಾಗಿ ಮಾಡುವ ಗುಣಗಳೆಲ್ಲ ಒಳಗೊಂಡಿವೆ. ಮಾತ್ರವಲ್ಲ, ದ್ರೋಹ ಮಾಡಿದವನನ್ನು ಕ್ಷಮಿಸಿ, ತಕ್ಕುದಾದ ಶಾರೀರಿಕ, ಆರ್ಥಿಕ ಶಿಕ್ಷೆಯಿಂದ ಅವನನ್ನು ವಿಮುಕ್ತಗೊಳಿಸಿ ಉಪಕಾರ ಮಾಡುವುದು ಅಥವಾ ದ್ರೋಹಿಗೆ ಶಿಕ್ಷೆ ಯಥಾರ್ಥದಲ್ಲಿ ಅನುಗ್ರಹವಾಗಿ ಪರಿಣಮಿಸುವ ರೀತಿಯಲ್ಲಿ ಶಿಕ್ಷಿಸುವುದು ಸಹ ಈ ವರ್ಗದ ಸ್ವಭಾವದಲ್ಲಿ ಒಳಪಡುತ್ತದೆ.

## ಚಾರಿತ್ರ್ಯ ಶುದ್ಧಿ

ಮನುಷ್ಯನ ವಿಚಾರಗತಿಗಳನ್ನೂ ನಡವಳಿಕೆಗಳನ್ನೂ ನೈತಿಕ ಗುಣಗಳನ್ನೂ ಕೇವಲ ಒಂದು ಪದದಿಂದ ಸೂಚಿಸುವಷ್ಟು ಶಬ್ದ ಬಾಹುಲ್ಯಯುಳ್ಳ ಅರಬಿ ಭಾಷೆಯಲ್ಲಿ ಅಹಿಂಸಾತ್ಮಕ ಸ್ವಭಾವವನ್ನು ಗಳಿಸುವುದಕ್ಕೆ ಪರಮಾತ್ಮನು ನಿರ್ದೇಶಿಸಿರುವ ನೈತಿಕ ಗುಣಗಳು ನಾಲ್ಕು ವಿವಿಧ ಹೆಸರುಗಳಿಂದ ವಿವರಿಸಲ್ಪಟ್ಟಿರುತ್ತವೆ. ಇವುಗಳ ಪೈಕಿ ಒಂದನೆಯದನ್ನು احصان **'ಇಹ್‌ಸಾನ್'** (ಚಾರಿತ್ರ್ಯ ಶುದ್ಧಿ) ಎಂದು ಹೆಸರಿಸಲಾಗಿದೆ. ಈ ಪದವು ಸ್ತ್ರೀ ಪುರುಷರ ಸಂತಾನೋತ್ಪತ್ತಿ ಶಕ್ತಿಗೆ ಸಂಬಂಧಿಸಿದ ಪರಿಶುದ್ಧತೆಯನ್ನು ಸೂಚಿಸುತ್ತದೆ. ಒಬ್ಬ ಪುರುಷನನ್ನು 'ಮುಹ್‌ಸಿನ್' (ಚಾರಿತ್ರ್ಯವಂತ) ಎಂದಾಗಲೀ ಓರ್ವ ಸ್ತ್ರೀಯನ್ನು 'ಮುಹ್‌ಸಿನ' (ಚಾರಿತ್ರ್ಯವತಿ) ಎಂದಾಗಲೀ ಹೇಳುವುದು ಈರ್ವರಿಗೂ ಇಹದಲ್ಲಿ ಅಪಮಾನವೂ ನಾಶವೂ ಪರಲೋಕದಲ್ಲಿ ಭಯಂಕರ ಶಿಕ್ಷೆಗೆ ಕಾರಣವಾಗುವಂತಹ ಹಾಗೂ ಸಂಬಂಧಿಕರಿಗೆ ಅಪಕೀರ್ತಿಯನ್ನೂ ನಷ್ಟವನ್ನೂ ಉಂಟುಮಾಡುವ ವ್ಯಭಿಚಾರದಿಂದಲೂ ಅದರ ಸನ್ನಾಹಗಳಿಂದಲೂ ದೂರವಿದ್ದು ಸಚ್ಚಾರಿತ್ರ್ಯರಾಗಿರುವಾಗ ಮಾತ್ರವಾಗಿದೆ. ಒಬ್ಬನು ಅನ್ಯನೊಬ್ಬನ ಪತ್ನಿಯೊಂದಿಗೆ ಅನೈತಿಕ ಸಂಬಂಧವಿರಿಸುವುದಾಗಲೀ ವ್ಯಭಿಚಾರದ ಸನ್ನದ್ಧತೆಯಲ್ಲಿರುವುದಾಗಲೀ ವ್ಯಭಿಚರಿಸುವುದಾಗಲೀ ಬಯಲಾದರೆ ಆಕೆಯ ಪತಿ ವಿವಾಹ ವಿಚ್ಛೇದ ಮಾಡಬೇಕಾಗುತ್ತದೆ. ಅವಳಿಗೆ ಸಂತಾನಗಳಿದ್ದರೆ ಪರಸ್ಪರ ಅಗಲಿಕೆ, ಹಾಗೂ ತನ್ಮೂಲಕ ಮನೆಯಲ್ಲಿ ಅಸಮಾಧಾನವೂ ಉಂಟಾಗುತ್ತದೆ. ಗೃಹಸ್ಥನು ಈ ಕಷ್ಟನಷ್ಟಗಳನ್ನೆಲ್ಲ ಆ ನೀಚನ ಹೇತುವಿನಿಂದ ಅನುಭವಿಸಬೇಕಾಗುತ್ತದೆ.

ಅಪರಾಧಗಳನ್ನು ಮಾಡಲು ಪ್ರಕೃತಿದತ್ತವಾದ ಶಕ್ತಿಯಿರುವವನು ಆ ರೀತಿಯ ಹೀನಕೃತ್ಯಗಳಿಂದ ಸ್ವಯಂ ದೂರವಿದ್ದುಕೊಂಡಿರುವ ಘಟ್ಟದಲ್ಲಿ ಇಹ್‌ಸಾನ್ ಅಥವಾ ಚಾರಿತ್ರ್ಯಶುದ್ಧಿ ಎಂಬ ಗುಣ ಯಥಾರ್ಥ ನೈತಿಕ ಗುಣವಾಗಿ ಪರಿಣಮಿಸುತ್ತದೆ. ಹಾಗಲ್ಲದೆ, ಎಳೆಯ ಪ್ರಾಯದ ಕಾರಣದಿಂದಲೋ, ಧಾತುಕ್ಷಯದಿಂದಲೋ, ನಪುಂಸಕತ್ವದಿಂದಲೋ, ಮುದಿತನದ ಕಾರಣದಿಂದಲೋ ಒಬ್ಬನಿಗೆ ಶಕ್ತಿ ನಷ್ಟವಾಗಿದ್ದರೆ ಅವನ ವಿಷಯವಿರಕ್ತಿಯನ್ನು 'ಇಹ್‌ಸಾನ್' ಅಥವಾ 'ಇಫ್ಫತ್' **(عفّت)** ಎಂಬ ನೈತಿಕ ಗುಣವೆಂದು ಹೇಳಲು ಸಾಧ್ಯವಿಲ್ಲ. ಬದಲಾಗಿ, ಅದು ಅವನ ಸ್ವಾಭಾವಿಕ ಸ್ಥಿತಿಯೆಂದು ಹೇಳಬೇಕಾಗುತ್ತದೆ. ಇಂತಹ ಸ್ವಾಭಾವಿಕ ಸ್ಥಿತಿಯನ್ನು ನೈತಿಕ ಗುಣವೆಂದು ಪರಿಗಣಿಸಲಾಗದೆಂದು ಮೊದಲು ವಿವರಿಸಲಾಗಿದೆಯಷ್ಟೇ. ಸಹಜ ಗುಣಗಳು ವಿವೇಚನಾ ಬುದ್ಧಿಯ ಪ್ರಕಾಶದಲ್ಲಿ ಸಂದರ್ಭೋಚಿತವಾಗಿ ಪ್ರಕಟಗೊಳ್ಳುವುದಾದರೆ, ಅಥವಾ ಪ್ರಕಟಗೊಳ್ಳಲು ಶಕ್ತವೆಂದಾದರೆ ಮಾತ್ರ ಅವು ನೈತಿಕ ಗುಣಗಳಾಗುತ್ತವೆ. ಆದುದರಿಂದ ಮೊದಲು ಪ್ರಸ್ತಾಪಿಸಿದಂತೆ, ಕಿರಿಯರೂ ಧಾತುಶಕ್ತಿ ನಷ್ಟಹೊಂದಿದವರೂ ನಪುಂಸಕರೂ ಪ್ರತ್ಯಕ್ಷದಲ್ಲಿ ಕಾಮವಿಕಾರ ವಿರಕ್ತರಾಗಿ ಪರಿಶುದ್ಧತೆಯಿಂದ ಜೀವಿಸುವರಾದರೂ ಅವರ ಈ ಗುಣ ಚಾರಿತ್ರ್ಯಶುದ್ಧಿಯ ನೈತಿಕ ಗುಣದ ಅರ್ಹತೆಯನ್ನು ಪಡೆಯುವುದಿಲ್ಲ. ಅವರ ಭೋಗ ವಿರಕ್ತಭಾವವನ್ನು ಶಕ್ತಿಯ ಅಭಾವದಿಂದುಂಟಾದ ಒಂದು ಸ್ವಾಭಾವಿಕ ಸ್ಥಿತಿಯೆಂದಲ್ಲದೆ ಸದ್ಗುಣವೆಂದು ಹೇಳಲಾಗುವುದಿಲ್ಲ.

ಚಾರಿತ್ರ್ಯವನ್ನು ಹಾಳುಗೆಡಹುವ ದುರ್ವರ್ತನೆ ಮತ್ತು ಅದರ ಸನ್ನಾಹ ಪುರುಷರಿಂದುಂಟಾಗುವಂತೆ ಸ್ತ್ರೀಯರಲ್ಲಿ ಸಹ ಉಂಟಾಗುವುದರಿಂದ ಪವಿತ್ರ ಖುರ್‌ಆನ್ ಪುರುಷರಿಗೂ ಸ್ತ್ರೀಯರಿಗೂ ಈ ಕೆಳಗಿನಂತೆ ಆಜ್ಞಾಪಿಸಿದೆ:

قُلْ لِّلْمُؤْمِنِيْنَ يَغُضُّوْا مِنْ اَبْصَارِهِمْ وَيَحْفَظُوْا فُرُوْجَهُمْ ۭ ذٰلِكَ اَزْكٰى لَهُمْ - وَقُلْ لِّلْمُؤْمِنٰتِ يَغْضُضْنَ مِنْ اَبْصَارِهِنَّ وَيَحْفَظْنَ فُرُوْجَهُنَّ وَلَا يُبْدِيْنَ زِيْنَتَهُنَّ اِلَّا مَا ظَهَرَ مِنْهَا وَلْيَضْرِبْنَ بِخُمُرِهِنَّ عَلٰى جُيُوْبِهِنَّ ۠ - وَلَا يَضْرِبْنَ بِاَرْجُلِهِنَّ لِيُعْلَمَ مَا يُخْفِيْنَ مِنْ زِيْنَتِهِنَّ ۭ وَتُوْبُوْٓا اِلَى اللّٰهِ جَمِيْعًا اَيُّهَ الْمُؤْمِنُوْنَ لَعَلَّكُمْ تُفْلِحُوْنَ -

ವಿಶ್ವಾಸಿಗಳಾದ ಪುರುಷರೊಡನೆ ಅವರ ದೃಷ್ಟಿಯನ್ನು ಪರಸ್ತ್ರೀ ದರ್ಶನದಿಂದ ತಡೆಯಲಿಕ್ಕೂ ಕಾಮವಿಕಾರಗಳನ್ನು ಉಂಟುಮಾಡಲು ಕಾರಣವಾಗುವ ಸ್ತ್ರೀಯರನ್ನು

ನೋಡದಿರಲಿಕ್ಕೂ ಬೇಕಾಗಿ ತಮ್ಮ ನೋಟವನ್ನು ಅಧೋಮುಖವಾಗಿರಿಸಲಿಕ್ಕೆ; ತಮ್ಮ ರಹಸ್ಯಾಂಗಗಳನ್ನು ರಕ್ಷಿಸಲಿಕ್ಕೆ; ಹಾಗೆಯೇ ತಮ್ಮ ಕಿವಿಗಳನ್ನು ಅನ್ಯ ಸ್ತ್ರೀಯರ ಮಧುರ ಗಾನಗಳನ್ನೂ ಮೃದುಲ ಸ್ವರಗಳನ್ನೂ ಶೃಂಗಾರ ಕಥೆಗಳನ್ನೂ ಕೇಳುವುದರಿಂದ ತಡೆಯಲಿಕ್ಕೆ ಹೇಳು. ಇದು ದೃಷ್ಟಿಯನ್ನೂ ಹೃದಯವನ್ನೂ ಪರಿಶುದ್ಧವಾಗಿರಿಸಲು ಉತ್ತಮ ಮಾರ್ಗವಾಗಿದೆ...... ಹಾಗೆಯೇ ವಿಶ್ವಾಸಿಗಳಾದ ಸ್ತ್ರೀಯರೊಡನೆ ಅವರ ಕಣ್ಣುಗಳನ್ನು ಪರಪುರುಷರ ದರ್ಶನದಿಂದ ತಡೆಯಲಿಕ್ಕೂ ಅವರ ವ್ಯಾಮೋಹ ಸ್ವರಗಳನ್ನು ಆಲಿಸದಿರಲಿಕ್ಕೂ ತಮ್ಮ ಗುಪ್ತಾಂಗಗಳನ್ನು ಕಾಪಾಡಲಿಕ್ಕೂ ತಮ್ಮ ಸೌಂದರ್ಯವನ್ನು– ಸ್ವಯಂ ಪ್ರಕಟವಾಗುವಂಥವು ಹೊರತು– ಅನ್ಯರಿಗೆ ತೋರಿಸದಿರಲಿಕ್ಕೂ ತಮ್ಮ ಎದೆ, ಕಿವಿ, ಕಪೋಲ ಮತ್ತು ತಲೆ ಆಚ್ಛಾದಿಸಲ್ಪಡುವಂತೆ ಮುಸುಕನ್ನು ಧರಿಸಲಿಕ್ಕೂ...... ನರ್ತಕಿಯರ ಹಾಗೆ ಪಾದಗಳನ್ನು ನೆಲಕ್ಕೆ ಬಡಿದು ನಡೆಯದಿರಲಿಕ್ಕೂ ಹೇಳು. ಇದು ಅಪಾವಿತ್ರ್ಯವನ್ನು ತಡೆಯುವ ಒಂದು ಮಾರ್ಗವಾಗಿದೆ. **(24: 31, 32)**

ಇನ್ನೊಂದು ಮಾರ್ಗ ಪರಮಾತ್ಮನ ಕಡೆಗೆ ತಿರುಗಿ ಸಕಲ ವಿಧ ನ್ಯೂನತೆಗಳಿಂದ ಮತ್ತು ಚಪಲತೆಗಳಿಂದ ರಕ್ಷಿಸಲ್ಪಡಲು ಪ್ರಾರ್ಥಿಸುವುದಾಗಿದೆ.

وَلَا تَقْرَبُوا الزِّنَىٰٓ إِنَّهُۥ كَانَ فَاحِشَةً ۖ وَسَآءَ سَبِيلًا

ನೀವು ವ್ಯಭಿಚಾರದ ಸಮೀಪಕ್ಕೆ ಹೋಗಬೇಡಿರಿ. **(17:33)** ಅಂದರೆ, ವ್ಯಭಿಚಾರಕ್ಕೆ ಎಡೆಕೊಡುವ ಸಂದರ್ಭಗಳಿಂದಲೂ ಆ ಪಾಪ ಕೃತ್ಯ ಸಂಭವಿಸಬಹುದಾದ ಮಾರ್ಗಗಳಿಂದಲೂ ದೂರವಿರಿ. ವ್ಯಭಿಚಾರವು ಒಂದು ಘೋರ ಅಪರಾಧವಾಗಿದೆ. ಅದು ನಮ್ಮ ಜೀವನೋದ್ದೇಶದ ಲಕ್ಷ್ಯವನ್ನು ಸಾಧಿಸದಂತೆ ತಡೆಯುವ ಮತ್ತು ನಮ್ಮ ಜೀವನದ ಅಂತಿಮ ಗುರಿ ಸಾಧನೆಗೆ ಹಾನಿಕರವಾದ ದುರ್ಮಾರ್ಗವಾಗಿದೆ.

وَلْيَسْتَعْفِفِ الَّذِينَ لَا يَجِدُونَ نِكَاحًا

ವಿವಾಹ ಮಾಡಿಕೊಳ್ಳಲು ಸಾಧ್ಯವಿಲ್ಲದವರು ವ್ರತಾನುಷ್ಠಾನದಿಂದಲೋ ಭಕ್ಷಣ (ಆಹಾರ) ಲಘೂಕರಣದಿಂದಲೋ ಕಠಿಣ ಶ್ರಮದಿಂದಲೋ ತನ್ನ ಚಾರಿತ್ರ್ಯವನ್ನು ಸಂರಕ್ಷಿಸಲಿ. **(24:34)**

وَرَهْبَانِيَّةً ابْتَدَعُوهَا مَا كَتَبْنَاهَا عَلَيْهِمْ إِلَّا ابْتِغَآءَ رِضْوَانِ اللَّهِ

فَمَا رَعَوْهَا حَقَّ رِعَايَتِهَا ۖ

ವಿವಾಹ ರಹಿತವಾದ ಜೀವನ ಅಥವಾ ಪುಂಸತ್ವವನ್ನು ನಾಶಪಡಿಸಿಕೊಂಡು ಕೆಲವರು ಸನ್ಯಾಸವನ್ನು ಸ್ವೀಕರಿಸಿರುತ್ತಾರೆ. ಆದರೆ ನಾವು ಅವರಿಗೆ ಆ ರೀತಿ ಮಾಡಲು ಆಜ್ಞಾಪಿಸಲಿಲ್ಲ. ಆದ್ದರಿಂದಲೇ ಈ ನೂತನ ಸಂಪ್ರದಾಯವನ್ನು ಪೂರ್ಣರೀತಿಯಲ್ಲಿ ಅನುಷ್ಠಿಸಲು ಅವರಿಗೆ ಸಾಧ್ಯವಾಗಲಿಲ್ಲ. **(57:28)**

ಜನರು ಸನ್ಯಾಸವನ್ನು ಸ್ವೀಕರಿಸಲಿಕ್ಕೆ ದೇವನು ವಿಧಿಸಿರಲಿಲ್ಲವೆಂದು ಪವಿತ್ರ ಖುರ್‌ಆನ್ ಹೇಳುತ್ತಾ ಹಾಗೆ ಅವನು ವಿಧಿಸಿದ್ದರೆ ಸಕಲ ಮನುಷ್ಯರು ಅದನ್ನು ಅನುಸರಿಸಲು ಬದ್ಧರಾಗುವರೆಂದೂ ಅದರ ಫಲವಾಗಿ ಮನುಷ್ಯವರ್ಗದ ಸಂತಾನೋತ್ಪತ್ತಿ ಕ್ರಿಯೆ ನಿಂತುಹೋಗಿ ಬಹಳ ಮೊದಲೇ ಮನುಷ್ಯ ವಂಶ ಅಂತ್ಯ ಗೊಳ್ಳುತ್ತಿತ್ತೆಂದೂ ಸೂಚಿಸುತ್ತದೆ. ಹಾಗೆಯೇ ಚಾರಿತ್ರ್ಯವನ್ನು ಕಾಪಾಡಲು ಪುಂಸತ್ವವನ್ನು ನಾಶಪಡಿಸುವಂತಹ ಮಾರ್ಗವನ್ನು ಕೈಗೊಳ್ಳುವುದಾದರೆ ಅದು ಆ ಶಕ್ತಿಯನ್ನು ನೀಡಿದ ಸೃಷ್ಟಿಕರ್ತನಿಗೆ ವಿರುದ್ಧವಾದ ವರ್ತನೆಯಾಗುತ್ತದೆ. ಶಕ್ತಿಯಿದ್ದು ಸಹ ಓರ್ವನು ಪರಮಾತ್ಮನಲ್ಲಿರುವ ಭಯ ಭಕ್ತಿಯ ಕಾರಣದಿಂದ ದುಷ್ಟ ಪ್ರೇರಣೆಗಳನ್ನೂ ದುರ್ವಿಕಾರಗಳನ್ನೂ ದಮನಗೊಳಿಸುವುದರಲ್ಲಿ ಜಯಶೀಲನಾಗುವನಾದರೆ ಅದರಲ್ಲಿ ಪುಣ್ಯವಿದೆ. ಹಾಗೆ ಅವನು ತನ್ನ ಶಕ್ತಿಯನ್ನು ಯಥಾತಥವಾಗಿ ವಿನಿಯೋಗಿಸಿಯೂ ವಿನಿಯೋಗಿಸದೆಯೂ ಇರುವುದರಿಂದ ಎರಡು ವಿಧ ಪುಣ್ಯಕ್ಕೆ ಪಾತ್ರನಾಗುವನು. ತನ್ನ ಪುಂಸತ್ವವನ್ನು ನಾಶಪಡಿಸಿದವನಿಗೆ ಈ ಎರಡು ವಿಧ ಪ್ರತಿಫಲ ನಷ್ಟವಾಗುತ್ತದೆ. ಶಕ್ತಿಯ ಸಾನ್ನಿಧ್ಯದಿಂದ ಉಂಟಾಗುವ ದುಷ್ಟ ಪ್ರೇರಣೆಗಳನ್ನು ಎದುರಿಸಿ ಜಯಗೊಳಿಸುವುದರಿಂದ ಪುಣ್ಯ ಲಭಿಸುತ್ತದೆ. ಆದರೆ ಪ್ರಾಯ ತುಂಬಿರದ ಬಾಲಕನಂತೆ ಯಾರಲ್ಲಿ ಈ ಶಕ್ತಿ ಇರುವುದಿಲ್ಲವೋ, ಅವನಿಗೆ ಹೇಗೆ ಪುಣ್ಯ ಲಭಿಸುವುದು? ಅವನಿಗೆ ದುರ್ವಿಮೋಹವನ್ನು ಜಯಿಸುವ ಅಥವಾ ತನ್ನ ಶಕ್ತಿಯನ್ನು ಯಥಾವಕಾಶ ಉಪಯೋಗಿಸುವ ಸಂದರ್ಭ ಲಭಿಸುವುದಿಲ್ಲವಾದುದರಿಂದ ಅದಕ್ಕೆ ಸಂಬಂಧಿಸಿದ ಪುಣ್ಯಫಲ ಸಹ ಲಭಿಸಲಿಕ್ಕಿಲ್ಲ.

## ಚಾರಿತ್ರ್ಯ ಶುದ್ಧಿಗೆ ಐದು ಸೂತ್ರಗಳು

ಮೇಲೆ ಉದ್ಧರಿಸಿದ ಖುರ್‌ಆನಿನ ವಾಕ್ಯಗಳಲ್ಲಿ ಚಾರಿತ್ರ್ಯ (ಇಹ್‌ಸಾನ್) ಎಂಬ ನೈತಿಕ ಗುಣವನ್ನು ಗಳಿಸಲು ಉತ್ಕೃಷ್ಟವಾದ ಉಪದೇಶಗಳು ಅಡಕವಾಗಿವೆ. ಮಾತ್ರವಲ್ಲ, ಈ ಸದ್ಗುಣಗಳು ಮನುಷ್ಯನಲ್ಲಿ ನಿರ್ಬಾಧಿತವಾಗಿ ನೆಲೆಗೊಳ್ಳಲು ಐದು ಉಪಾಯಗಳನ್ನು ಸಹ ಸೂಚಿಸಲಾಗಿದೆ. 1. ದೃಷ್ಟಿಯನ್ನು ನಿಯಂತ್ರಿಸುವುದು. 2. ವಿಕಾರಜನ್ಯವಾದ ಮಧುರಸ್ವರ ಕೇಳುವುದರಿಂದ ಕಿವಿಗಳನ್ನು ನಿಯಂತ್ರಿಸುವುದು.

3. ಶೃಂಗಾರ ಕಥೆಗಳನ್ನು ಕೇಳದಿರುವುದು. 4. ದುರ್ವೃತ್ತಿಗೆ ಪ್ರೇರಕವಾಗುವಂತಹ ಸನ್ನಿವೇಶಗಳಿಂದ ದೂರವಿರುವುದು. 5. ಅವಿವಾಹಿತರು ಉಪವಾಸವನ್ನು ಅನುಷ್ಠಿಸುವುದು ಇತ್ಯಾದಿ.

ಚಾರಿತ್ರ್ಯ ಸಂರಕ್ಷಣೆಗೆ ಮೇಲೆ ಪ್ರಸ್ತಾಪಿಸಲಾದ ಇಚ್ಛಾನಿರೋಧ ಕ್ರಮಗಳನ್ನೊಳಗೊಂಡ ಉತ್ಕೃಷ್ಟವಾದ ಉಪದೇಶಗಳು ಪವಿತ್ರ ಖುರ್‌ಆನಿನಲ್ಲಿ ಅಡಕವಾಗಿರುವುದು ಇಸ್ಲಾಮಿನ ಒಂದು ವೈಶಿಷ್ಟವೆಂದು ನಿಸ್ಸಂಶಯವಾಗಿ ಹೇಳಬಹುದು. ಇಲ್ಲಿ ಒಂದು ವಿಷಯ ಸ್ಮರಣಾರ್ಹವಾಗಿದೆ. ಕಾಮವಿಕಾರಗಳ ಉದ್ಭವ ಸ್ಥಾನವಾಗಿರುವ ಹಾಗೂ ಪರಿಪೂರ್ಣವಾದ ಪರಿವರ್ತನೆಯಿಂದಲ್ಲದೆ ವರ್ಜಿಸಲು ಅಸಾಧ್ಯವಾಗಿರುವ ಮನುಷ್ಯನ ಪ್ರಾಕೃತಾವಸ್ಥೆಯ ಇಚ್ಛೆಯು ಸಂದರ್ಭವಶಾತ್ ಚುರುಕುಗೊಂಡು ಅವನನ್ನು ಅಪಾಯದೆಡೆಗೆ ಕೊಂಡೊಯ್ಯುತ್ತದೆ. ಆ ಕಾರಣದಿಂದಲೇ, ಸರ್ವಜ್ಞನಾದ ಪರಮಾತ್ಮನು, ಸದುದ್ದೇಶದಿಂದಾದರೆ ಪರಸ್ತ್ರೀಯರನ್ನು ನೋಡಬಹುದೆಂದಾಗಲೀ ಅವರ ಸೌಂದರ್ಯವನ್ನು ದರ್ಶಿಸಬಹುದೆಂದಾಗಲೀ ಅವರ ನೃತ್ಯ ನಾಟ್ಯ ಮುಂತಾದುವನ್ನು ನೋಡಿ ಆನಂದಿಸಬಹುದೆಂದಾಗಲೀ ಅಪ್ಪಣೆ ಕೊಡಲಿಲ್ಲ. ಹಾಗೆಯೇ ಅನ್ಯ ಸ್ತ್ರೀಯರ ಮಧುರ ಗಾನಗಳನ್ನಾಗಲೀ ಶೃಂಗಾರ ಕಥೆಗಳನ್ನಾಗಲೀ ಸದುದ್ದೇಶದಿಂದಾದರೆ ಶ್ರವಿಸಬಹುದೆಂದು ಕಲಿಸಲಿಲ್ಲ. ಬದಲಾಗಿ, ಸದ್ಭಾವದಿಂದಾಗಲೀ ದುರ್ಭಾವದಿಂದಾಗಲೀ ಅವರ ಮಧುರ ಗಾನಗಳನ್ನೋ ಶೃಂಗಾರ ಕಥೆಗಳನ್ನೋ ಕೇಳಬಾರದೆಂದು ಪವಿತ್ರ ಖುರ್‌ಆನ್ ಶಕ್ತಿಯುತವಾಗಿ ಉಪದೇಶಿಸಿರುತ್ತದೆ. ಒಟ್ಟಾರೆ, ನಾವು ಎಡವಿ ಬೀಳದಿರಲಿಕ್ಕೆ ಅವರ ಸೌಂದರ್ಯ ದರ್ಶನವನ್ನೂ ಅವರ ಮಧುರಸ್ವರವನ್ನು ಕೇಳುವುದನ್ನೂ ಮನಸಾ ದ್ವೇಷಿಸಬೇಕು. ಏಕೆಂದರೆ ಅನಿಯಂತ್ರಿತವಾದ ದೃಷ್ಟಿ ಸನ್ಮಾರ್ಗ ಭ್ರಂಶಕ್ಕೆ ಕಾರಣವಾಗುವುದೆಂಬುದು ನಿಸ್ಸಂದೇಹ. ನಮ್ಮ ಕಣ್ಣು ಮತ್ತು ಹೃದಯವನ್ನು ಸದಾ ಪಾವನವಾಗಿಡುವುದಕ್ಕೋಸ್ಕರ ಈ ಮಹತ್ತಾದ ಉಪದೇಶವನ್ನು ನೀಡಲಾಗಿದೆ. ಹಸಿದ ಒಂದು ನಾಯಿಯ ಮುಂದೆ ರೊಟ್ಟಿಯನ್ನಿಟ್ಟು ಅದಕ್ಕೆ ರೊಟ್ಟಿಯ ವಿಚಾರವಾಗಲೀ ಮನಸ್ಸಿನಲ್ಲಿ ಉಂಟಾಗಲಿಕ್ಕಿಲ್ಲವೆಂದು ಹೇಳುವುದು ತಪ್ಪಭಿಪ್ರಾಯವಾಗಿದೆ. ಒಟ್ಟಾರೆ, ವಿಷಯಾಸಕ್ತಿಗೆ ಗೂಢವಾಗಿಯಾದರೂ ಚುರುಕುಗೊಳ್ಳುವ ಸಂದರ್ಭ ಲಭಿಸದಿರಲಿಕ್ಕೂ ದುರ್ವಿಮೋಹಕ್ಕೆ ಪ್ರೇರಣೆಯನ್ನುಂಟುಮಾಡುವ ಅವಕಾಶ ಉಂಟಾಗದಿರಲಿಕ್ಕೂ ಪವಿತ್ರ ಖುರ್‌ಆನ್ ಉದ್ದೇಶಿಸುತ್ತದೆ.

ಇಸ್ಲಾಂ ನಿಶ್ಚಯಿಸಿದ ಪರದಾ ಪದ್ಧತಿಯ ತತ್ವರಹಸ್ಯ ಈ ಮೇಲೆ ಹೇಳಿದುದೇ ಆಗಿದೆ. ಪರಮಾತ್ಮನ ಪವಿತ್ರ ಗ್ರಂಥವಾದ ಖುರ್‌ಆನಿನಲ್ಲಿ ಹೇಳಲಾದ ಪರದಾ

ವ್ಯವಸ್ಥೆಯ ಉದ್ದೇಶ ಸ್ತ್ರೀಯರನ್ನು ಕೈದಿಗಳಂತೆ ಮನೆಯೊಳಗಿರಿಸಬೇಕೆಂದಲ್ಲ. ಅದು ಇಸ್ಲಾಮಿಕ ಅಧ್ಯಾಪನೆಗಳ ಕುರಿತು ಅರಿವಿಲ್ಲದ ತಿಳಿಗೇಡಿಗಳ ಅಭಿಪ್ರಾಯವಾಗಿದೆ. ಆದರೆ ಇಸ್ಲಾಂ ನಿರ್ದೇಶಿಸುವ ಪರದಾ ಪದ್ಧತಿಯ ಉದ್ದೇಶ ಸ್ತ್ರೀ ಪುರುಷರ ಸ್ವಚ್ಛಂದವಾದ ಪರಸ್ಪರ ವೀಕ್ಷಣೆ ಮತ್ತು ಸೌಂದರ್ಯ ಪ್ರದರ್ಶನವನ್ನು ತಡೆಯುವುದಾಗಿದೆ. ಈ ವ್ಯವಸ್ಥೆ ಸ್ತ್ರೀ–ಪುರುಷ ಈರ್ವರಿಗೂ ಗುಣಕರವಾಗಿದೆ. ದರ್ಶನಯೋಗ್ಯವಾದುದನ್ನು ನೋಡುವುದು ಹಾಗೂ ಅನುಚಿತ ಸಂದರ್ಭಗಳಲ್ಲಿ ದೃಷ್ಟಿಯನ್ನು ಕೆಳಗಡೆ ತಿರುಗಿಸುವುದಕ್ಕೆ ಅರಬಿ ಭಾಷೆಯಲ್ಲಿ 'ಗ್‌ರ್ಝ್ಝೀ ಬಸರ್' (ನೋಟವನ್ನು ಅಧೋಮುಖವಾಗಿರಿಸುವುದು) ಎಂದು ಹೇಳುತ್ತಾರೆ. ಹೃದಯವನ್ನು ಪರಿಶುದ್ಧವಾಗಿಡಲು ಇಚ್ಛಿಸುವ ಯಾರೇ ಆಗಲಿ, ತೋರುವ ದಿಕ್ಕಿಗೆಲ್ಲ ಪಶುಗಳಂತೆ ದೃಷ್ಟಿಹರಿಸಬಾರದು. ಮಾತ್ರವಲ್ಲ, ಆತನು ಈ ಸಾಮಾಜಿಕ ಜೀವನದಲ್ಲಿ ದೃಷ್ಟಿಯನ್ನು ಕೆಳಗಡೆ ತಿರುಗಿಸುವ ಅಭ್ಯಾಸ ಮಾಡಬೇಕಾದುದು ಅಗತ್ಯ. ಈ ಶ್ಲಾಘನೀಯ ಸ್ವಭಾವವು ಆತನ ಸಾಮಾಜಿಕ ವ್ಯವಹಾರದಲ್ಲಿ ಯಾವ ರೀತಿಯಲ್ಲೂ ಅಡಚಣೆಯಾಗಲಾರದು. ಮಾತ್ರವಲ್ಲ, ಈ ಕಾರಣದಿಂದ ಆತನ ಒಂದು ಸಹಜ ಸ್ವಭಾವವು ಉತ್ಕೃಷ್ಟ ನೈತಿಕ ಸ್ವಭಾವವಾಗಿ ಪರಿವರ್ತಿತವಾಗುವುದು. ಇಹ್‌ಸಾನ್, ಇಫ್ಫತ್ ಅಥವಾ ಚಾರಿತ್ರ್ಯಶುದ್ಧಿ ಎಂದು ಹೇಳುವ ಸ್ತುತ್ಯರ್ಹ ನೈತಿಕ ಗುಣ ಇದೇ ಆಗಿದೆ.

## ಪ್ರಾಮಾಣಿಕತೆ

ಅಹಿಂಸಾತ್ಮಕ ಸ್ವಭಾವಗಳ ಯಾದಿಯಲ್ಲಿ ಸೇರಿದ ಎರಡನೆಯ ಸದ್ಗುಣಕ್ಕೆ ಅರಬಿ ಭಾಷೆಯಲ್ಲಿ **'ಅಮಾನತ್'** ಎಂದೂ **'ದಿಯಾನತ್'** ಎಂದೂ ಹೇಳುತ್ತಾರೆ. ಇದಕ್ಕೆ ವಿಶ್ವಸ್ತತೆ ಅಥವಾ ಪ್ರಾಮಾಣಿಕತೆ ಎಂದು ಅರ್ಥ ಕೊಡಬಹುದು. ಇದು ಅನ್ಯರ ಸಂಪತ್ತನ್ನು ವಂಚನೆಯಿಂದಲೋ ಅನ್ಯಾಯವಾಗಿಯೋ ಸ್ವಾಧೀನಪಡಿಸಿ ದ್ರೋಹವನ್ನುಂಟು ಮಾಡುವುದಕ್ಕೊಪ್ಪದ ಸದ್ಗುಣವಾಗಿದೆ. ಇದು ಸಹ ಮನುಷ್ಯನ ಸಹಜಗುಣಗಳಲ್ಲೊಂದು ಎಂಬುದನ್ನು ಮರೆಯಬಾರದು. ದುಸ್ವಭಾವಗಳಿಗೆ ಬಲಿಯಾಗದ ಶುದ್ಧ ಪ್ರಕೃತಿಯ ಮೊಲೆಯುಣ್ಣುವ ಮಗು ತನ್ನ ತಾಯಿಯ ಹೊರತು ಅನ್ಯ ಸ್ತ್ರೀಯ ಎದೆಹಾಲು ಕುಡಿಯುವುದಕ್ಕೆ ವೈಮನಸ್ಯ ತೋರಿಸಿ ಅನ್ಯರ ವಸ್ತುವಿನಲ್ಲಿ ವಿರಕ್ತಿಯನ್ನು ತೋರಿಸುತ್ತದೆ. ಶಿಶುವಿಗೆ ಪರಿಚಯ ಜ್ಞಾನ ಉಂಟಾಗುವ ಮೊದಲೇ ದಾದಿಯನ್ನು ನೇಮಿಸದಿದ್ದರೆ, ಸರಿಯಾದ ಪರಿಚಯ ಜ್ಞಾನ ಬಂದ ನಂತರ ಅದಕ್ಕೆ ಅನ್ಯ ಸ್ತ್ರೀಯ ಮೊಲೆಯುಣ್ಣಿಸುವುದು ಬಹಳ ಕಷ್ಟವಾಗಬಹುದು. ಅನ್ಯ ಸ್ತ್ರೀಯ ಮೊಲೆ ಹಾಲನ್ನು ದ್ವೇಷಿಸುವುದರಿಂದಾಗಿ ಮಗುವು ಕ್ಲೇಶ ಮತ್ತು ಹಸಿವೆಯಿಂದ

ಕಷ್ಟಪಡುವುದನ್ನು ಕಾಣಬಹುದು. ಇಷ್ಟರ ಮಟ್ಟಿಗೆ ಮಗು ವಿರಕ್ತಿ ತೋರಿಸುವುದರ ರಹಸ್ಯವೇನಿರಬಹುದು? ತನ್ನ ತಾಯಿಯ ಹೊರತು ಬೇರೆ ಯಾರ ವಸ್ತುವನ್ನಾಗಲಿ ಸ್ವಾಭಾವಿಕವಾಗಿ ಆ ಮಗು ದ್ವೇಷಿಸುತ್ತದೆಂಬುದೇ ಅದರ ರಹಸ್ಯ. ಶಿಶುವಿನ ಈ ಶುದ್ಧ ಸ್ವಭಾವದ ಕುರಿತು ಗಾಢವಾಗಿ ಪರ್ಯಾಲೋಚನೆ ಮಾಡುವುದಾದರೆ, ಅನ್ಯರ ವಸ್ತುಗಳನ್ನು ದ್ವೇಷಿಸಿ ಸ್ವತಃ ಕಷ್ಟವನ್ನು ಸಹಿಸುವ ಈ ಸ್ವಭಾವ 'ಪ್ರಾಮಾಣಿಕತೆ' ಎಂದು ಹೆಸರಿಸಬಹುದಾದ ನೈತಿಕ ಗುಣದ ಮೂಲರೂಪವೆಂದು ತಿಳಿಯಬಹುದು. ಅನ್ಯರ ವಸ್ತುಗಳ ಮೇಲೆ ಈ ಶಿಶು ತೋರಿಸುವಂತಹ ನಿಜವಾದ ವಿರಕ್ತಿಭಾವ ಓರ್ವನ ಹೃದಯದಲ್ಲಿ ಉಂಟಾಗದಿರುವ ತನಕ ಅವನು ಈ ಪ್ರಾಮಾಣಿಕ ಸ್ವಭಾವದಲ್ಲಿ ಸಾಚಾತನವುಳ್ಳವನಾಗಲಾರ. ಆದರೆ ಶಿಶು ವಿರಕ್ತಿ ತೋರಿಸುವುದು ಯಥೋಚಿತವಾಗಿಯೋ, ವಿವೇಚನೆಯಿಂದಲೋ ಅಲ್ಲವಾದುದರಿಂದ ಅದರ ಈ ವರ್ತನೆ ನೈತಿಕ ಗುಣವೆಂದು ಪರಿಗಣಿಸಲ್ಪಡಲಾರದು. ಅದು ಬರೇ ಸ್ವಾಭಾವಿಕ ಪ್ರೇರಣೆಯ ಮತ್ತು ವಿವೇಕ ರಹಿತ ಪ್ರವೃತ್ತಿಯಾದುದರಿಂದ ಶಿಶು ವೃಥಾ ಕಷ್ಟವನ್ನನುಭವಿಸುತ್ತದೆ. ಆದರೂ ಈ ಸ್ವಾಭಾವಿಕ ಪ್ರಜ್ಞೆಯೇ ಪ್ರಾಮಾಣಿಕತೆ ಅಥವಾ 'ಅಮಾನತ್' ಎಂಬ ಉತ್ಕೃಷ್ಟ ನೈತಿಕ ಗುಣದ ಉದ್ಭವ ಸ್ಥಾನ. ಶಿಶು ತನ್ನ ವಿವೇಚನಾ ರಹಿತವಾದ ಚೇಷ್ಟೆಯ ಕಾರಣದಿಂದ ನೀತಿ ಮತ್ತು ಪ್ರಾಮಾಣಿಕತೆಯಿರುವ ಉತ್ಕೃಷ್ಟಧರ್ಮಿಯಾಗಿ ಗಣಿಸಲ್ಪಡದಿರುವ ರೀತಿಯಲ್ಲಿಯೇ, ಈ ಪ್ರಕೃತಿಜನ್ಯ ಗುಣವನ್ನು ವಿವೇಚನೆಯಿಂದಲೂ ಸಂದರ್ಭಾನುಸಾರವಾಗಿಯೂ ಪ್ರಯೋಗಿಸದ ವ್ಯಕ್ತಿ ಸಹ ಈ ವಿಶಿಷ್ಟ ಸದ್ಗುಣ ಉಳ್ಳವನು ಎಂದು ಗಣಿಸಲ್ಪಡಲಾರನು. ಪ್ರಾಮಾಣಿಕನೂ ಸತ್ಯವಂತನೂ ಆಗುವುದು ಸುಲಭಸಾಧ್ಯ ಕೆಲಸವಲ್ಲ. ಸತ್ಯಸಂಧತೆಯ ವಿವಿಧ ಅಂಶಗಳನ್ನು ಪೂರ್ಣ ರೀತಿಯಲ್ಲಿ ಪಾಲಿಸದಿದ್ದರೆ ಯಾರೂ ಯಥಾರ್ಥ ಪ್ರಾಮಾಣಿಕನೂ ಸತ್ಯವಂತನೂ ಆಗಲಾರನು. ಈ ಸದ್ಗುಣದ ಸಂಸ್ಕರಣಕ್ಕಾಗಿ ಪವಿತ್ರ ಖುರ್‌ಆನ್ ನಿರ್ದೇಶಿಸುವ ಮಾರ್ಗವನ್ನು ಕೆಳಗೆ ಉದ್ಧರಿಸುವ ವಾಕ್ಯಗಳಿಂದ ಉದಾಹರಿಸಬಹುದು:

وَلَا تُؤْتُوا السُّفَهَآءَ اَمْوَالَكُمُ الَّتِىْ جَعَلَ اللّٰهُ لَكُمْ قِيٰمًا وَّارْزُقُوْهُمْ فِيْهَا وَاكْسُوْهُمْ
وَقُوْلُوْا لَهُمْ قَوْلًا مَّعْرُوْفًا - وَابْتَلُوا الْيَتٰمٰى حَتّٰٓى اِذَا بَلَغُوا النِّكَاحَ ۚ فَاِنْ اٰنَسْتُمْ مِّنْهُمْ
رُشْدًا فَادْفَعُوْٓا اِلَيْهِمْ اَمْوَالَهُمْ ۚ وَلَا تَاْكُلُوْهَآ اِسْرَافًا وَّبِدَارًا اَنْ يَّكْبَرُوْا ۗ وَمَنْ كَانَ
غَنِيًّا فَلْيَسْتَعْفِفْ ۚ وَمَنْ كَانَ فَقِيْرًا فَلْيَاْكُلْ بِالْمَعْرُوْفِ ۗ فَاِذَا دَفَعْتُمْ اِلَيْهِمْ اَمْوَالَهُمْ
فَاَشْهِدُوْا عَلَيْهِمْ ۗ وَكَفٰى بِاللّٰهِ حَسِيْبًا - وَلْيَخْشَ الَّذِيْنَ لَوْ تَرَكُوْا مِنْ خَلْفِهِمْ ذُرِّيَّةً

ضِعٰفًا خَافُوْا عَلَيْهِمْ ۪ فَلْيَتَّقُوا اللّٰهَ وَلْيَقُوْلُوْا قَوْلًا سَدِيْدًا - اِنَّ الَّذِيْنَ يَاْكُلُوْنَ اَمْوَالَ الْيَتٰمٰى ظُلْمًا اِنَّمَا يَاْكُلُوْنَ فِيْ بُطُوْنِهِمْ نَارًا ؕ وَسَيَصْلَوْنَ سَعِيْرًا -

ನಿಮ್ಮ ಪೈಕಿ ರಕ್ಷಕರಿಲ್ಲದ, ವಿವೇಚನಾ ಶಕ್ತಿಯಿಲ್ಲದ ಎಳೇವಯಸ್ಸಿನ ಐಶ್ವರ್ಯವಂತರು ತಮ್ಮ ಸಂಪತ್ತನ್ನು ನಷ್ಟಪಡಿಸುವರೆಂದು ಶಂಕೆಯಿದ್ದರೆ, ನೀವು ಆ ಐಶ್ವರ್ಯವನ್ನೆಲ್ಲ ರಕ್ಷಣಾಧಿಕಾರಿ (ಕೋರ್ಟ್ ಓಫ್ ವಾರ್ಡ್ಸ್) ಎಂಬ ರೀತಿಯಲ್ಲಿ ನಿಮ್ಮ ಸ್ವಾಧೀನದಲ್ಲಿರಿಸಿರಿ. ವ್ಯಾಪಾರ ಮತ್ತು ಉಪಜೀವನ ಮಾರ್ಗಕ್ಕಿರುವ ಸಾಮಾನು ಸರಂಜಾಮುಗಳನ್ನು ಅವರ ವಶಕ್ಕೊಪ್ಪಿಸದೆ, ಅವರ ಆಹಾರಕ್ಕೂ ವಸ್ತ್ರಕ್ಕೂ ಅಗತ್ಯವಿರುವ ಖರ್ಚನ್ನು ಮಾತ್ರ ಕೊಡಿರಿ. ಅವರಿಗೆ ಪ್ರಯೋಜನಕರವಾದ ಸದುಪದೇಶಗಳನ್ನು ಹೇಳಿಕೊಡಿರಿ. (ಅಂದರೆ, ಅವರ ಬುದ್ಧಿಯೂ ಗ್ರಹಣಶಕ್ತಿಯೂ ತೀಕ್ಷ್ಣವಾಗಲಿಕ್ಕಾಗಿ, ಹಾಗೂ ಅವರು ಅಜ್ಞರೂ ಅನನುಭವಸ್ಥರೂ ಆಗದೆ ತಮ್ಮ ಸ್ಥಿತಿಗಳಿಗೆ ಯೋಗ್ಯರಾಗಲಿಕ್ಕಾಗಿ ಅವರಿಗೆ ಉಪದೇಶವೀಯಬೇಕು. ವ್ಯಾಪಾರಿಯ ಮಕ್ಕಳಾದರೆ ಅವರಿಗೆ ವ್ಯಾಪಾರದ ಕುರಿತು ಕಲಿಸಿರಿ; ಬೇರೆ ಯಾವುದಾದರೂ ಕೆಲಸಗಾರನ ಮಕ್ಕಳಾದರೆ ಆ ಕೆಲಸದಲ್ಲಿ ಅವರನ್ನು ಸಾಮರ್ಥ್ಯವುಳ್ಳವರನ್ನಾಗಿ ಮಾಡಿರಿ). ನೀವು ಅವರಿಗೆ ತರಬೇತಿ ಕೊಡುವುದರೊಂದಿಗೆ, ಅವರು ಅದನ್ನು ಸರಿಯಾಗಿ ಗ್ರಹಿಸಿರುವರೋ ಎಂದು ನೋಡುವುದಕ್ಕಾಗಿ ಆಗಿಂದಾಗ್ಗೆ ಅವರನ್ನು ಪರೀಕ್ಷಿಸಿರಿ. ನಂತರ ಅವರಿಗೆ ವಿವಾಹ ಮಾಡಿಕೊಳ್ಳುವ ವಯಸ್ಸಾದರೆ (ಸುಮಾರು 18 ವರ್ಷ ಪ್ರಾಯವಾದರೆ) ತಮ್ಮ ಕಾರಭಾರಗಳನ್ನು ನಡೆಸಲು ವಿವೇಕವೂ ಸಾಮರ್ಥ್ಯವೂ ಅವರಲ್ಲಿದೆಯೆಂದು ನಿಮಗೆ ತೋರುವುದಾದರೆ ಅವರ ಸಂಪತ್ತನ್ನೆಲ್ಲ ಅವರಿಗೆಯೇ ಕೊಡಿರಿ. ಅವರ ಐಶ್ವರ್ಯವನ್ನು ನೀವು ದುರ್ವ್ಯಯ ಮಾಡಬಾರದು. ಪ್ರಾಯಕ್ಕೆ ಬಂದರೆ ಅವರು ಸೊತ್ತನ್ನು ಹಿಂತಿರುಗಿ ಪಡೆಯುವರೆಂಬ ಭೀತಿಯಿಂದ ನೀವು ಅವರ ಸೊತ್ತಿಗೆ ನಷ್ಟವನ್ನುಂಟುಮಾಡಬಾರದು. ರಕ್ಷಣಾಧಿಕಾರಿ ಸಂಪನ್ನನಾಗಿದ್ದರೆ ಅವರ ಸೊತ್ತಿನಿಂದ ಆತನು ತನ್ನ ಸೇವೆಯ ಪ್ರತಿಫಲವಾಗಿ ಏನನ್ನೂ ಪಡೆಯದಿರಲಿ; ಆದರೆ ದರಿದ್ರನಾಗಿದ್ದರೆ ನ್ಯಾಯವಾದ ಪ್ರತಿಫಲ ಪಡೆಯಬಹುದು. (ರಕ್ಷಣಾಧಿಕಾರಿಗಳು ತಮ್ಮ ಸಂರಕ್ಷಣೆಯಲ್ಲಿರುವ ಅನಾಥ ಮಕ್ಕಳ ಸೊತ್ತಿನಿಂದ ಪ್ರತಿಫಲವನ್ನು ಪಡೆಯಲು ಇಚ್ಛಿಸುವಾಗ, ಮೂಲ ಧನವನ್ನು ಸ್ಪರ್ಶಿಸದೆ, ಅದರ ವರಮಾನದಿಂದ ಮಾತ್ರ ಪಡೆಯುವ ಪದ್ಧತಿ ಅರಬಿಯರೆಡೆಯಲ್ಲಿ ಪ್ರಚಲಿತವಾಗಿತ್ತು. ಹೀಗೆ ನ್ಯಾಯವಾದ ರೀತಿಯಲ್ಲಿ ಪ್ರಯತ್ನದ ಪ್ರತಿಫಲವನ್ನು

ಪಡೆಯಲು ಅನುಮತಿ ಇದೆಯೆಂದು ಈ ವಾಕ್ಯ ಸೂಚಿಸುತ್ತದೆ). ನೀವು ಅನಾಥರಿಗೆ ಅವರ ಸೊತ್ತನ್ನು ಸಾಕ್ಷಿಗಳ ಮುಖಾಂತರ ಬಿಟ್ಟುಕೊಡಿರಿ. ಅಲ್ಲಾಹನು ನಿಮ್ಮ ಕ್ರಿಯೆಗಳನ್ನು ಪೂರ್ಣವಾಗಿ ಲೆಕ್ಕ ಹಾಕುತ್ತಾನೆ. ಸಣ್ಣ ಪ್ರಾಯದ ಹಾಗೂ ದುರ್ಬಲರಾದ ಸಂತಾನವಿರುವವರು, ತಮಗೆ ಮೃತ್ಯು ಸಮೀಪಿಸಿದರೆ, ಆ ಮಕ್ಕಳ ಹಕ್ಕಿಗೆ ಹಾನಿಯುಂಟಾಗದ ರೀತಿಯಲ್ಲಿ ಉಯಿಲು ಸಿದ್ಧಪಡಿಸಿಡಬೇಕಾಗಿದೆ. ಅನ್ಯಾಯವಾಗಿ ಅನಾಥರ ಸಂಪತ್ತನ್ನು ತಿನ್ನುವವರು ಅಗ್ನಿಯನ್ನು ಭುಜಿಸಿದಂತೆ. ಕಟ್ಟಕಡೆಗೆ ಅವರು ಪ್ರಜ್ವಲಿಸುವ ಅಗ್ನಿಯನ್ನು ಸೇರುತ್ತಾರೆ. **(4: 6.7,10,11)**

ಪ್ರಾಮಾಣಿಕತೆಯ ಯಾವ್ಯಾವ ಅಂಶಗಳನ್ನು ಪವಿತ್ರ ಖುರ್‌ಆನ್ ಮೇಲಿನ ವಾಕ್ಯಗಳಲ್ಲಿ ತೋರಿಸಿಕೊಟ್ಟಿದೆಯೆಂಬುದನ್ನು ನೋಡಿರಿ. ವಿವಿಧ ಅಂಶಗಳಿಂದ ಕೂಡಿದ ಈ ಸತ್ಯನಿಷ್ಠೆಯನ್ನು ಪಾಲಿಸುವುದೇ ಯಥಾರ್ಥ ಪ್ರಾಮಾಣಿಕತೆಯಾಗಿದೆ. ವಿವೇಚನಾ ಬುದ್ಧಿಯಿಂದ ಪ್ರಾಮಾಣಿಕತೆಯ ನಿಬಂಧನೆಗಳನ್ನನುಸರಿಸಿ ವರ್ತಿಸದಿದ್ದರೆ, ವಿಶ್ವಾಸ ವಂಚನೆಯ ವಿಭಿನ್ನರೂಪಗಳು ಮರೆಯಲ್ಲಿದ್ದುಕೊಂಡು ಪ್ರಭಾವ ಬೀರುವುವು. ಪವಿತ್ರ ಖುರ್‌ಆನ್ ಇನ್ನೊಂದು ಕಡೆಯಲ್ಲಿ ಹೀಗೆ ಹೇಳುತ್ತದೆ:

وَلَا تَأْكُلُوٓا أَمْوَالَكُمْ بَيْنَكُمْ بِالْبَاطِلِ وَتُدْلُوا بِهَآ إِلَى الْحُكَّامِ لِتَأْكُلُوا فَرِيقًا مِّنْ أَمْوَالِ
النَّاسِ بِالْإِثْمِ وَأَنْتُمْ تَعْلَمُونَ

ನಿಮ್ಮ ಸಂಪತ್ತುಗಳನ್ನು ಅನ್ಯಾಯವಾದ ರೀತಿಯಲ್ಲಿ ನೀವು ಪರಸ್ಪರ ತಿನ್ನಬಾರದು. ಅನ್ಯರ ಸಂಪತ್ತಿನಲ್ಲೊಂದು ಅಂಶವನ್ನು ಕೈವಶಪಡಿಸಲಿಕ್ಕಾಗಿ ನೀವು ಅಧಿಕಾರಸ್ಥರಿಗೆ ಲಂಚ ಕೊಡಲೂ ಬಾರದು. **(2:189)**

إِنَّ اللّٰهَ يَأْمُرُكُمْ أَنْ تُؤَدُّوا الْأَمٰنٰتِ إِلَىٰٓ أَهْلِهَا

ವಿಶ್ವಾಸಾರ್ಪಿತ ವಸ್ತುಗಳನ್ನು ಅವುಗಳ ಹಕ್ಕುದಾರರಿಗೆ ಹಿಂತಿರುಗಿಸಿ ಕೊಡಲು ಅಲ್ಲಾಹನು ನಿಮಗೆ ಆಜ್ಞಾಪಿಸುತ್ತಾನೆ. **(4:59)**

إِنَّ اللّٰهَ لَا يُحِبُّ الْخَآئِنِينَ

ಅಲ್ಲಾಹನು ವಿಶ್ವಾಸ ವಂಚಕರನ್ನು ಪ್ರೀತಿಸುವುದಿಲ್ಲ. **(8:59)**

وَأَوْفُوا الْكَيْلَ إِذَا كِلْتُمْ وَزِنُوا بِالْقِسْطَاسِ الْمُسْتَقِيمِ

ನೀವು ಅಳೆದು ಕೊಡುವಾಗ ಸರಿಯಾಗಿ ಅಳೆದು ಕೊಡಿರಿ; ತೂಕ ಮಾಡುವಾಗ

ಸರಿಯಾದ ತಕ್ಕಡಿಯಲ್ಲಿ ತೂಕಮಾಡಿ ಕೊಡಿರಿ. **(17:36)**

وَلَا تَبْخَسُوا النَّاسَ أَشْيَآءَهُمْ وَلَا تَعْثَوْا فِي الْأَرْضِ مُفْسِدِينَ

ಯಾವ ರೀತಿಯಲ್ಲೂ ಜನರ ವಸ್ತುಗಳಿಗೆ ಹಾನಿಯನ್ನುಂಟುಮಾಡಬೇಡಿರಿ. ದುರುದ್ದೇಶದಿಂದ (ಎಂದರೆ ಕಳ್ಳತನ, ಕೊಳ್ಳೆಹೊಡೆಯುವುದು, ಕಿಸೆಗಳ್ಳತನ ಅಥವಾ ಬೇರೆ ಯಾವ ಮಾರ್ಗದಿಂದಲೂ ಅನ್ಯರ ಸಂಪತ್ತನ್ನು ವಶಪಡಿಸುವ ಉದ್ದೇಶದಿಂದ) ನೀವು ಭೂಮಿಯ ಮೇಲೆ ಸಂಚರಿಸಬೇಡಿರಿ. **(26:184)**

وَلَا تَتَبَدَّلُوا الْخَبِيثَ بِالطَّيِّبِ

ನೀವು ಒಳ್ಳೆಯ ವಸ್ತುಗಳ ಬದಲಿಗೆ ಹಾಳು ವಸ್ತುಗಳನ್ನು ಕೊಡಬಾರದು. ಅರ್ಥಾತ್, ಅನ್ಯರ ವಸ್ತುಗಳನ್ನು ಅಪಹರಿಸುವಂತೆಯೇ, ಅಯೋಗ್ಯ ವಸ್ತುಗಳನ್ನು ಮಾರುವುದು ಮತ್ತು ಒಳ್ಳೆಯದರ ಬದಲಿಗೆ ಕೆಟ್ಟದ್ದನ್ನು ಕೊಡುವುದು ಸಹ ಅನ್ಯಾಯವಾಗಿದೆ. **(4:3)**

ಈ ಮೇಲಿನ ವಾಕ್ಯಗಳಲ್ಲಿ ವಿಶ್ವಾಸವಂಚನೆಯ ಸಕಲ ವಿಧಗಳನ್ನೂ ವಿವರಿಸಲಾಗಿದೆ. ಯಾವ ಬಗೆಯ ವಂಚನೆಯನ್ನೂ ಹೊರತುಪಡಿಸದ ರೀತಿ ಯಲ್ಲಿ ಸಂಪೂರ್ಣವಾದೊಂದು ವಿವರಣೆ ಅವುಗಳಲ್ಲಿ ಅಡಕವಾಗಿದೆ. ಕಳ್ಳತನ ಮಾಡಬಾರದೆಂದು ಮಾತ್ರ ಹೇಳಿದ್ದರೆ, ಅದು ಹೊರತು ಬೇರೆಲ್ಲ ಅಹಿತ ಮತ್ತು ಅನ್ಯಾಯದ ಅಪಹರಣದ ರೀತಿಗಳನ್ನು ಯೋಗ್ಯಮಾರ್ಗಗಳೆಂದು ಅಜ್ಞರು ತಿಳಿದುಕೊಳ್ಳುವ ಅವಕಾಶವಿದೆ. ಆದ್ದರಿಂದಲೇ, ಸಕಲ ವಿಧ ಅಪಹರಣಗಳನ್ನೂ ಅನ್ಯಾಯವನ್ನೂ ವಿರೋಧಿಸಿ ವ್ಯಾಪಕಾರ್ಥವುಳ್ಳ ವಚನಗಳು ಪ್ರಯುಕ್ತವಾಗಿವೆ. ಸಂಕ್ಷಿಪ್ತವಾಗಿ, ಓರ್ವನು ತನ್ನ ಪ್ರಾಮಾಣಿಕತೆಯ ಸ್ವಭಾವವನ್ನು ಅದರ ಅಂಶಗಳನ್ನು ಗಮನಿಸಿ ವಿವೇಚನೆಯಿಂದ ಪ್ರಕಟಿಸದೆ ಕೆಲವು ಸಂಗತಿಗಳಲ್ಲಿ ಮಾತ್ರ ಪ್ರಾಮಾಣಿಕತೆಯನ್ನು ತೋರಿಸುವನಾದರೆ, ಅದನ್ನು ಯಥಾರ್ಥದಲ್ಲಿ ನೈತಿಕ ಗುಣವೆಂದು ಪರಿಗಣಿಸಲಾಗದು. ಅದು ವಿವೇಕಯುತ ವಿವೇಚನೆಯಿಲ್ಲದ ಸ್ವಭಾವ ಪ್ರಕಟನೆ ಮಾತ್ರವೇ ಆಗುವುದು.

## ಸೌಮ್ಯಶೀಲತೆ

ಅಹಿಂಸಾತ್ಮಕ ಸ್ವಭಾವ ವರ್ಗದಲ್ಲಿ ಒಳಗೊಂಡ ಮೂರನೆಯ ನೈತಿಕ ಗುಣವನ್ನು ಅರಬಿ ಭಾಷೆಯಲ್ಲಿ 'ಹುದ್ನ್' (هدنة) ಎಂದೂ 'ಹೌನ್' (هون)

ಎಂದೂ ಹೇಳುತ್ತಾರೆ. ಇತರರಿಗೆ ದೈಹಿಕವಾಗಿ ಯಾವ ಉಪದ್ರವನ್ನೂ ಮಾಡದೆ ಸೌಮ್ಯತೆಯಿಂದಲೂ ಸಮಾಧಾನದಿಂದಲೂ ಜೀವಿಸುವುದು ಎಂದಾಗಿದೆ ಈ ಪದಗಳ ಅರ್ಥ. ಈ ಸೌಮ್ಯಶೀಲತೆ ಉತ್ಕೃಷ್ಟ ನೈತಿಕಗುಣವೆಂಬುದರಲ್ಲಿ ಸಂಶಯವಿಲ್ಲ. ಮಾತ್ರವಲ್ಲ, ಅದು ಮಾನವತೆಗೆ ಅತ್ಯಾವಶ್ಯಕವೂ ಅನುಗ್ರಹದಾಯಕವೂ ಆದ ಒಂದು ಸುಸ್ವಭಾವವಾಗಿದೆ. ಈ ನೈತಿಕ ಗುಣಕ್ಕೆ ಅನುರೂಪವಾದ ಒಂದು ಸ್ವಾಭಾವಿಕ ಗುಣ ಶಿಶುಗಳಲ್ಲಿ ತೋರಲ್ಪಡುತ್ತದೆ. ಈ ಸಹಜ ಸ್ವಭಾವವನ್ನು ಸರಿಯಾದ ರೀತಿಯಲ್ಲಿ ಕ್ರಮೀಕರಿಸುವುದರಿಂದಾಗಿ ಸೌಮ್ಯಶೀಲವೆಂಬ ನೈತಿಕಗುಣ ಸಿದ್ಧಿಸುತ್ತದೆ. ಮನುಷ್ಯನು ವಿವೇಕಜ್ಞಾನವಿಲ್ಲದ ಸ್ವಾಭಾವಿಕ ಘಟ್ಟದಲ್ಲಿ ಸೌಮ್ಯತೆಯ ಅಥವಾ ಪರಾಕ್ರಮದ ತತ್ವವನ್ನು ಗ್ರಹಿಸಲು ಪ್ರಾಪ್ತನಲ್ಲ. ಆದರೆ ಈ ಸ್ಥಿತಿಯಲ್ಲಿ ಅವನಲ್ಲಿ ಒಂದು ಬಗೆಯ ಶಾಂತತೆಯು ಗೋಚರಿಸುತ್ತದೆ. ಸೌಮ್ಯಶೀಲತೆಯ ಮೂಲ ಇದೇ ಆಗಿದೆ. ಆದರೆ ಅದು ವಿವೇಕಜ್ಞಾನದಿಂದಲೂ ವಿವೇಚನೆಯಿಂದಲೂ ಪ್ರತ್ಯೇಕ ಉದ್ದೇಶದಿಂದಲೂ ಕೈಗೊಂಡದ್ದಲ್ಲವಾದ ಕಾರಣ ಅದನ್ನು ನೈತಿಕ ಗುಣವೆಂದು ಪರಿಗಣಿಸಲಾಗದು. ಓರ್ವನು ಸ್ವ ಇಚ್ಛೆಯಿಂದ ದುಷ್ಕೃತ್ಯಗಳನ್ನು ತ್ಯಜಿಸಿ, ಸೌಮ್ಯಶೀಲತೆಯನ್ನು ಯಥೋಚಿತವಾಗಿ ತೋರಿಸುವಾಗ ಮಾತ್ರ. ಅದು ನೈತಿಕಗುಣವೆಂದು ಪರಿಗಣಿಸಲ್ಪಡುತ್ತದೆ. ಈ ವಿಷಯದಲ್ಲಿ ಅಲ್ಲಾಹನು ಹೀಗೆ ಉಪದೇಶಿಸುತ್ತಾನೆ:

وَاَصْلِحُوْا ذَاتَ بَيْنِكُمْ

ನೀವು ಪರಸ್ಪರ ಸೌಮ್ಯತೆಯಿಂದಲೂ ಸಮಾಧಾನದಿಂದಲೂ ವರ್ತಿಸಿರಿ. **(8:2)**

وَالصُّلْحُ خَيْرٌ

ಸಮಾಧಾನ ಅಥವಾ ಮೈತ್ರಿ ಅತ್ಯುತ್ತಮವಾದುದು. **(4:129)**

وَاِنْ جَنَحُوْا لِلسَّلْمِ فَاجْنَحْ لَهَا

ಅವರು ಸಂಧಾನಕ್ಕೆ ಬಂದರೆ ನೀವು ಸಹ ಅದನ್ನು ಅನುಕೂಲಿಸಿರಿ. **(8:62)**

وَعِبَادُ الرَّحْمٰنِ الَّذِيْنَ يَمْشُوْنَ عَلَى الْاَرْضِ هَوْنًا

ಕರುಣಾನಿಧಿಯಾದ ಪರಮಾತ್ಮನ ಭಕ್ತದಾಸರು ಭೂಮಿಯಲ್ಲಿ ಸಮಾಧಾನ ಮತ್ತು ಸೌಮ್ಯತೆಯಿಂದ ಕೂಡಿದವರಾಗಿ ನಡೆಯುತ್ತಾರೆ. **(25: 64)**

وَاِذَا مَرُّوْا بِاللَّغْوِ مَرُّوْا كِرَامًا

> ಅವರು ಅನುಚಿತ ಮಾತುಗಳನ್ನು ಆಲಿಸಿದರೆ ಅದು ಕಲಹಕ್ಕೆ ನಾಂದಿಯಾಗಬಹುದೆಂದು ಶಂಕಿಸಿ ಗೌರವದಿಂದ ಹಾದು ಹೋಗುತ್ತಾರೆ; ಕ್ಷುಲ್ಲಕ ಕಾರಣಕ್ಕಾಗಿ ಅವರು ಜಗಳಾಡಲಾರರು. **(25:73)**

ಎಂದರೆ, ಅವರಿಗೆ ಹೆಚ್ಚಿಗೆ ತೊಂದರೆಯಾಗದಿದ್ದರೆ ಎದುರಿಸಲು ಅವರು ಇಚ್ಛಿಸುವುದಿಲ್ಲ. ಅಲ್ಪವಿಚಾರಗಳನ್ನು ಗಣ್ಯ ಮಾಡದೆ ಸಹನೆ ತೋರಿಸುವುದು ಸೌಮ್ಯಶೀಲತೆಯ ತತ್ವವಾಗಿದೆ. ಪ್ರಸ್ತುತ ವಾಕ್ಯದಲ್ಲಿ 'ಕ್ಷುಲ್ಲಕ' ಅಥವಾ 'ನಿಷ್ಪ್ರಯೋಜಕ' ಎಂಬ ಅರ್ಥದಲ್ಲಿ ಪ್ರಯೋಗಿಸಲ್ಪಟ್ಟ 'ಲಗ್ವ್' **(لغو)** ಎಂಬ ಶಬ್ದಕ್ಕೆ ಇಲ್ಲಿ ಒಂದು ವಿವರಣೆ ಅತ್ಯಾವಶ್ಯಕವಾಗಿದೆ. ಒಬ್ಬ ವ್ಯಕ್ತಿ ದುರುದ್ದೇಶದಿಂದ ಏನನ್ನಾದರೂ ನುಡಿಯುವನಾದರೂ ಅಥವಾ ಮಾಡುವನಾದರೂ ಅದರಿಂದ ಅವನು ಉದ್ದೇಶಿಸಿದ ದೋಷಫಲ ಸಿದ್ಧಿಸುವುದಿಲ್ಲವೆಂದಾದರೆ, ಅದಕ್ಕೆ ಅರಬಿ ಭಾಷೆಯಲ್ಲಿ 'ಲಗ್ವ್' ಎಂದು ಹೇಳುತ್ತಾರೆ. ಅಂತಹ ತುಚ್ಛವಾದ ಸಂಗತಿಯನ್ನು ಗಮನಿಸದೆ ಘನತೆಯಿಂದ ವರ್ತಿಸುವುದು ಸೌಮ್ಯತೆಯ ಲಕ್ಷಣವಾಗಿದೆ. ಆದರೆ ಆ ಕೃತ್ಯವು ಕ್ಷುಲ್ಲಕವೆಂದು ಗಣಿಸಲು ಸಾಧ್ಯವಿಲ್ಲದ ರೀತಿಯಲ್ಲಿ ಜೀವಕ್ಕೋ ಸಂಪತ್ತಿಗೋ ಮಾನಕ್ಕೋ ಘಾತಕವೆಂದಾದಾಗಲೂ ತೋರಿಸುವ ತಾಳ್ಮೆಗೆ ಸೌಮ್ಯತೆ ಎಂಬ ನೈತಿಕ ಗುಣದೊಡನೆ ಸಂಬಂಧವಿಲ್ಲ. ಅಂಥ ಅಪರಾಧಕ್ಕೆ ಕ್ಷಮೆ ತೋರುವುದನ್ನು 'ಅಫ್ವ್' **(عفو)** ಅಥವಾ 'ಕ್ಷಮಾಗುಣ' ಎಂದು ಹೇಳುತ್ತಾರೆ. ಈ ಸ್ವಭಾವದ ಕುರಿತು ಬೇರೆಡೆಯಲ್ಲಿ ಪ್ರತಿಪಾದಿಸಲಾಗುವುದು.

ಇನ್ನೊಂದೆಡೆಯಲ್ಲಿ ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳಲಾಗಿದೆ:

اِدْفَعْ بِالَّتِيْ هِيَ اَحْسَنُ فَاِذَا الَّذِيْ بَيْنَكَ وَبَيْنَهٗ عَدَاوَةٌ كَاَنَّهٗ وَلِيٌّ حَمِيْمٌ

> ಯಾರಾದರೂ ಕೆಟ್ಟದಾಗಿ ಮಾತನಾಡುವವರಾದರೆ ನೀವು ಉತ್ತಮ ರೀತಿಯಲ್ಲಿ ಸೌಮ್ಯವಾಗಿ ಉತ್ತರಕೊಡಿರಿ; ಈ ಸ್ವಭಾವದಿಂದ ಶತ್ರು ಆಪ್ತ ಮಿತ್ರನಾಗುವನು.
>
> **(41:35)**

ಸಂಕ್ಷಿಪ್ತವಾಗಿ, ಯಥಾರ್ಥದಲ್ಲಿ ಯಾವ ನಷ್ಟವನ್ನೂ ಉಂಟುಮಾಡಲಾರದ, ಕ್ಷುಲ್ಲಕವಾದ ದ್ರೋಹಕೃತ್ಯ ಮಾತ್ರವೇ ಸೌಮ್ಯತೆಯ ತತ್ವ ಪ್ರಕಾರ ಅವಗಣಿಸಲ್ಪಡುತ್ತದೆ.

## ಸಭ್ಯತೆ

ಅಹಿಂಸಾತ್ಮಕ ಸ್ವಭಾವ ಯಾದಿಯಲ್ಲಿ ಒಳಗೊಂಡ ನೈತಿಕ ಗುಣಗಳಲ್ಲಿ ನಾಲ್ಕನೆಯದಕ್ಕೆ ಅರಬಿ ಭಾಷೆಯಲ್ಲಿ 'ರಿಫ್‌ಖ್'(رفق) ಎಂದು ಹೇಳುತ್ತಾರೆ. ಇದಕ್ಕೆ

'ಸಭ್ಯತೆ' ಎಂದು ಅರ್ಥ ಕೊಡಬಹುದು. ಇದರ ಬೀಜರೂಪವೆಂಬಂತೆ ಶಿಶುಗಳಲ್ಲಿ ಗೋಚರಿಸುವ ಸ್ವಾಭಾವಿಕ ಗುಣಕ್ಕೆ 'ತಲಾಖತ್' (**طلاقت**) ಅಥವಾ 'ಪ್ರಸನ್ನ ಭಾವ' ಎಂದು ಹೇಳುತ್ತಾರೆ. ಮಗು ಮಾತನಾಡಲು ಶಕ್ತವಾಗುವ ಮೊದಲು ಸಭ್ಯತೆಯ ಬದಲಿಗೆ ಈ ಪ್ರಸನ್ನ ಭಾವವನ್ನು ಪ್ರದರ್ಶಿಸುವುದನ್ನು ಕಾಣಬಹುದು. ಸಭ್ಯತೆಯ ಮೂಲವಾದ ಶಿಶು ಪ್ರಾಯದ ಈ ಪ್ರಸನ್ನ ಭಾವ ನೈಸರ್ಗಿಕವಾದ ಒಂದು ಗುಣವಾಗಿದೆ. ಶೈಶವಾವಸ್ಥೆಯಲ್ಲೇ ಇರುವ ಈ ಸ್ವಭಾವವನ್ನು ಸಂದರ್ಭೋಚಿತವಾಗಿ ಪ್ರಯೋಗಿಸುವಾಗ ಸಭ್ಯತೆ ಎಂಬ ನೈತಿಕ ಗುಣವು ಸಂಜಾತವಾಗುತ್ತದೆ. ಈ ಬಗ್ಗೆ ಖುರ್‌ಆನಿನಲ್ಲಿ ಹೀಗೆ ಹೇಳಲಾಗಿದೆ:

وَقُوْلُوْا لِلنَّاسِ حُسْنًا

ನೀವು ಜನರೊಡನೆ ಒಳ್ಳೆಯ ಮಾತನ್ನಾಡಿರಿ. **(2:84)**

لَا يَسْخَرْ قَوْمٌ مِّنْ قَوْمٍ عَسٰۤى اَنْ يَّكُوْنُوْا خَيْرًا مِّنْهُمْ وَلَا نِسَآءٌ مِّنْ نِّسَآءٍ عَسٰۤى اَنْ يَّكُنَّ
خَيْرًا مِّنْهُنَّ ۚ وَلَا تَلْمِزُوْۤا اَنْفُسَكُمْ وَلَا تَنَابَزُوْا بِالْاَلْقَابِ

ಒಂದು ಸಮುದಾಯದವರು ಇನ್ನೊಂದು ಸಮುದಾಯದವರನ್ನು ಅಪಹಾಸ್ಯ ಮಾಡದಿರಲಿ; ಅವರು (ಅಪಹಾಸ್ಯಕ್ಕೆ ಗುರಿಯಾದವರು) ಅಪಹಾಸ್ಯ ಮಾಡಿದ ಸಮುದಾಯದವರಿಗಿಂತ ಉತ್ತಮರಾಗಿರಬಹುದು. ಸ್ತ್ರೀಯರು ಇತರ ಸ್ತ್ರೀಯರನ್ನು ಅಪಹಾಸ್ಯ ಮಾಡದಿರಲಿ; ಅಪಹಾಸ್ಯಕ್ಕೆ ಗುರಿಯಾದ ಸ್ತ್ರೀಯರು ಇತರ ಸ್ತ್ರೀಯರಿಗಿಂತ ಉತ್ತಮರಾಗಿರಬಹುದು. ನೀವು ಪರಸ್ಪರ ದೋಷಾರೋಪ ಮಾಡಬೇಡಿರಿ; ಅಡ್ಡ ಹೆಸರಿನಿಂದ ಕರೆಯಬೇಡಿರಿ. **(49:12)**

اِجْتَنِبُوْا كَثِيْرًا مِّنَ الظَّنِّ ۫ اِنَّ بَعْضَ الظَّنِّ اِثْمٌ وَّلَا تَجَسَّسُوْا
وَلَا يَغْتَبْ بَّعْضُكُمْ بَعْضًا ........... وَاتَّقُوا اللّٰهَ ؕ اِنَّ اللّٰهَ تَوَّابٌ رَّحِيْمٌ

ಅತಿಯಾದ ಸಂಶಯವನ್ನು ವರ್ಜಿಸಿರಿ. ಕೆಲವು ಸಂದರ್ಭಗಳಲ್ಲಿ ಸಂಶಯಪಡುವುದು ಪಾಪಕರವಾಗುವುದು. ಇತರರ ನ್ಯೂನತೆಗಳನ್ನು ಕೆದಕಿ ನೋಡಬೇಡಿರಿ. ಅನ್ಯೋನ್ಯ ನಿಂದಿಸಬೇಡಿರಿ. .....ಅಲ್ಲಾಹನಿಗೆ ಭಯಪಡಿರಿ; ಅಲ್ಲಾಹನು ಕ್ಷಮಾಶೀಲನೂ ಕರುಣಾನಿಧಿಯೂ ಆಗಿರುವನು. **(49:13)**

وَلَا تَقْفُ مَا لَيْسَ لَكَ بِهٖ عِلْمٌ ؕ

اِنَّ السَّمۡعَ وَالۡبَصَرَ وَالۡفُؤَادَ كُلُّ اُولٰٓـئِكَ كَانَ عَنۡهُ مَسۡـُٔوۡلًا

ಸರಿಯಾದ ಸಾಕ್ಷ್ಯವಿಲ್ಲದೆ ನೀವು ಯಾರ ಮೇಲೆಯೂ ಆರೋಪಣೆ ಮಾಡಬಾರದು; ಖಂಡಿತವಾಗಿಯೂ ಕಿವಿ, ಕಣ್ಣು ಮತ್ತು ಹೃದಯ ಆ ಬಗ್ಗೆ ಪ್ರಶ್ನೆಗೆ ಗುರಿಯಾಗುವುವು. **(17:37)**

ಅಹಿಂಸಾತ್ಮಕ ಸ್ವಭಾವಗಳ ವರ್ಗದಲ್ಲಿ ಒಳಗೊಂಡ ಸದ್ಗುಣಗಳಿಗೆ ಸಂಬಂಧಿಸಿ ಪ್ರತಿಪಾದಿಸಲಾಯಿತು. ಇನ್ನು ಪರೋಪಕಾರಾತ್ಮಕ ಸ್ವಭಾವಗಳು ಅಡಕವಾದ ಎರಡನೆಯ ವರ್ಗದಲ್ಲಿ ಒಳಗೊಂಡ ನೈತಿಕ ಗುಣಗಳನ್ನು ವಿವರಿಸೋಣ.

## ಕ್ಷಮಾಗುಣ

ಪರೋಪಕಾರಾತ್ಮಕ ವರ್ಗದ ಸದ್ಗುಣಗಳಲ್ಲಿ ಒಂದನೆಯದು **'ಅಫ್‌ವ್' (عفو)** ಅಥವಾ ಕ್ಷಮಾಗುಣವಾಗಿದೆ. ಎಂದರೆ ತಪ್ಪನ್ನು ಕ್ಷಮಿಸುವ ಸ್ವಭಾವ. ಅಪರಾಧಿಯನ್ನು ನ್ಯಾಯವಿಧಿಯ ಮೂಲಕ ಶಿಕ್ಷಿಸಬಹುದು. ಅಥವಾ ಸೆರೆಯಲ್ಲಿಡಬಹುದು. ಅಥವಾ ಅವನಿಗೆ ದಂಡಹೊರಿಸಬಹುದು. ಅಥವಾ ದ್ರೋಹಿತನು ತಾನೇ ಅವನಿಗೆ ತಕ್ಕ ಶಾಸ್ತಿಮಾಡಬಹುದು. ಆದರೆ ಅಪರಾಧವನ್ನು ಕ್ಷಮಿಸುವುದರಿಂದ ಅವನಿಗೆ ಒಳಿತುಂಟಾಗುವುದಾದರೆ, ಪ್ರತೀಕಾರವನ್ನು ಮಾಡದೆ ಕ್ಷಮೆ ನೀಡುವುದು ಯಥಾರ್ಥದಲ್ಲಿ ಅವನಿಗೆ ಮಾಡುವ ಒಂದು ಉಪಕಾರವಾದೀತು. ಇದಕ್ಕೆ ಸಂಬಂಧಿಸಿ ಪವಿತ್ರ ಖುರ್‌ಆನ್ ನೀಡುವ ಪಾಠ ಹೀಗಿದೆ:

وَالۡكٰظِمِيۡنَ الۡغَيۡظَ وَالۡعَافِيۡنَ عَنِ النَّاسِ

ಸಂದರ್ಭ ನೋಡಿ ಕೋಪವನ್ನು ತಡೆಹಿಡಿಯುವವರೂ ಜನರಿಗೆ ಕ್ಷಮೆ ನೀಡುವವರೂ ಸತ್ಕರ್ಮಿಗಳಾಗಿದ್ದಾರೆ. **(3:135)**

وَجَزٰٓؤُا سَيِّئَةٍ سَيِّئَةٌ مِّثۡلُهَا ۚ فَمَنۡ عَفَا وَاَصۡلَحَ فَاَجۡرُهٗ عَلَى اللّٰهِ

ಅಪರಾಧಕ್ಕಿರುವ ಪ್ರತಿಕ್ರಿಯೆ ಅದಕ್ಕೆ ತುಲ್ಯವಾದ ಶಿಕ್ಷೆಯಾಗಿದೆ. ಆದರೆ ಯಾವೊಬ್ಬನು ಕ್ಷಮೆ ನೀಡಿ ಒಳಿತನ್ನುಂಟುಮಾಡುತ್ತಾನೋ – ಕ್ಷಮೆ ನೀಡಬೇಕಾದ ಸರಿಯಾದ ಸಂದರ್ಭದಲ್ಲಿ ಹಾಗೆ ಮಾಡಿದರೆ – ಅವನಿಗೆ ಅಲ್ಲಾಹನಿಂದ ಅದರ ಪ್ರತಿಫಲ ಲಭಿಸುವುದು. **(42:41)**

ಯಾವ್ಯಾವ ಸಂದರ್ಭಗಳಲ್ಲಿ ಅಪರಾಧಗಳನ್ನು ಕ್ಷಮಿಸಬೇಕಾಗಿದೆ ಎಂದು

ಮೇಲಿನ ವಾಕ್ಯಗಳು ಸರಿಯಾದ ಮಾರ್ಗದರ್ಶನ ನೀಡುತ್ತವೆ. ಯಾವುದೇ ಸಂದರ್ಭದಲ್ಲೂ ದುಷ್ಟತೆಯನ್ನು ವಿರೋಧಿಸಬಾರದೆಂದಾಗಲೀ ದುಷ್ಟರನ್ನೂ ದ್ರೋಹಿಗಳನ್ನೂ ಶಿಕ್ಷಿಸಬಾರದೆಂದಾಗಲೀ ಪವಿತ್ರ ಖುರ್‌ಆನ್ ಕಲಿಸುವುದಿಲ್ಲವೆಂಬುದು ಸ್ಪಷ್ಟ. ಅಪರಾಧವು ಕ್ಷಮಾರ್ಹವೇ ಯಾ ಶಿಕ್ಷಾರ್ಹವೇ ಎಂದು ಸಂದರ್ಭವನ್ನೂ ಸ್ಥಿತಿಯನ್ನೂ ನೋಡಿ ನಿರ್ಣಯಿಸಿ ಅದರ ಪ್ರಕಾರ ವರ್ತಿಸಬೇಕೆಂದು ಪವಿತ್ರ ಖುರ್‌ಆನ್ ಉಪದೇಶಿಸುತ್ತದೆ. ಒಟ್ಟಾರೆ, ತಪ್ಪಿತಸ್ಥನ ಮತ್ತು ಇತರರ ಒಳಿತನ್ನು ಮುಂದಿಟ್ಟು ಗುಣಕರವಾದ ಮಾರ್ಗ ಯಾವುದೆಂದು ನೋಡಿ ಅದನ್ನು ಸ್ವೀಕರಿಸಬೇಕಾಗಿದೆ. ಕೆಲವು ಸಂದರ್ಭಗಳಲ್ಲಿ ಅಪರಾಧಿ ಕ್ಷಮಾಧಾನದ ಕಾರಣದಿಂದ ತನ್ನ ಅಪರಾಧಗಳಿಗಾಗಿ ಪಶ್ಚಾತ್ತಾಪಪಟ್ಟು ತನ್ನ ಸ್ವಭಾವದಲ್ಲಿ ಬದಲಾವಣೆಯನ್ನು ಉಂಟುಮಾಡುತ್ತಾನೆ. ಕೆಲವು ಸಂದರ್ಭಗಳಲ್ಲಿ ಕ್ಷಮಾಧಾನದ ಕಾರಣ ಅಪರಾಧಿ ಮೊದಲಿಗಿಂತ ಹೆಚ್ಚು ದುಷ್ಕೃತ್ಯಗಳನ್ನು ಮಾಡಲು ಧೈರ್ಯಪಡುತ್ತಾನೆ. ಆದುದರಿಂದ ಔಚಿತ್ಯವನ್ನು ನೋಡದೆ ಅಂಧವಾದ ರೀತಿಯಲ್ಲಿ ಕ್ಷಮಾಶೀಲವನ್ನು ಕೈಗೊಳ್ಳಬಾರದೆಂದೂ ನಿಜವಾಗಿ ಗುಣಕರ ಕ್ಷಮಿಸುವುದೋ ಶಿಕ್ಷಿಸುವುದೋ ಎಂದು ವಿವೇಚಿಸಿ ಅರ್ಹವಾದ ರೀತಿಯಲ್ಲಿ ವರ್ತಿಸಬೇಕೆಂದೂ ದೇವವಾಕ್ಯ ನಮಗೆ ಬೋಧಿಸುತ್ತದೆ. ಮನುಷ್ಯ ಸ್ವಭಾವ ವಿಭಿನ್ನವಷ್ಟೇ. ಕೆಲವರು, ತಮಗೆ ಮಾತ್ರವಲ್ಲ, ತಮ್ಮ ಅಜ್ಜ ಮುತ್ತಜ್ಜರಿಗೆ ಮಾಡಿದ ಹಾನಿಯನ್ನೂ ಮರೆಯದೆ ಪ್ರತೀಕಾರವನ್ನು ಮಾಡಲು ಬಯಸುವವರಾದರೆ, ಕೆಲವರು ಕ್ಷಮಿಸುವ ಸ್ವಭಾವವನ್ನು ಬಹಳ ಹೆಚ್ಚಾಗಿ ಹಚ್ಚಿಕೊಂಡು ಸೀಮೆಯನ್ನು ಉಲ್ಲಂಘಿಸಿ ವರ್ತಿಸುತ್ತಾರೆ. ಕೆಲವು ಸಂದರ್ಭಗಳಲ್ಲಿ ಅವರು ತಮ್ಮ ಮನೆಯಲ್ಲೇ ನಡೆಯುವ ದುರ್ನಡತೆಗಳನ್ನು ಕೂಡ ನಿರ್ಲಕ್ಷಿಸಿದವರಾಗಿ ಕಾಣಬಹುದು. ಹೀಗೆ ಲಜ್ಜಾಕರವಾದ ರೀತಿಯಲ್ಲಿ ಕ್ಷಮಾಶೀಲತೆಯನ್ನೂ ಅಲಕ್ಷ್ಯತೆಯನ್ನೂ ಪ್ರದರ್ಶಿಸುವುದು ಸ್ವಾಭಿಮಾನಕ್ಕೂ ಗೌರವಕ್ಕೂ ಚಾರಿತ್ರ್ಯಕ್ಕೂ ಹಾನಿಕರವಾಗಿದೆ. ಈ ಸೀಮಾತೀತವಾದ ಕ್ಷಮೆಯ ಅಂತ್ಯಫಲ ಆಪತ್ಕರವಾಗುವುದು. ಈ ಕಾರಣದಿಂದಾಗಿ ಪವಿತ್ರ ಖುರ್‌ಆನ್ ಸದ್ಗುಣಗಳಿಗೆ ಸಂದರ್ಭೌಚಿತ್ಯವನ್ನು ಒಂದು ನಿಬಂಧನೆಯಾಗಿ ನಿಶ್ಚಯಿಸಿ, ಯಥಾರ್ಹವಾಗಿ ತೋರ್ಪಡಿಸದ ಸ್ವಭಾವವನ್ನು ಸದ್ಗುಣವೆಂದು ಅಂಗೀಕರಿಸುವುದಿಲ್ಲ. ಸಂದರ್ಭೋಚಿತವಲ್ಲದ ಕ್ಷಮಾಗುಣವು ಮಕ್ಕಳಲ್ಲಿ ಸಹ ಕಾಣಬಹುದಾದ ಒಂದು ಸಹಜ ಸ್ವಭಾವವಾದುದರಿಂದ ಅದನ್ನು ಒಂದು ನೈತಿಕ ಗುಣವೆಂದು ಪರಿಗಣಿಸಲಾಗದು. ಮಗು ತನಗೆ ನೋಯಿಸಿದವನ ಬಳಿಗೆ ಕೂಡ ಸ್ವಲ್ಪ ಸಮಯದ ನಂತರ, ಆ ವಿಚಾರವನ್ನು ಮರೆತು ಸ್ನೇಹದಿಂದ ಹೋಗುವುದನ್ನು ನಾವು ಕಾಣುತ್ತೇವಷ್ಟೇ. ಆ ಮನುಷ್ಯನು ಮಗುವನ್ನು ಕೊಲ್ಲಲು ಸಿದ್ಧನಾಗಿದ್ದವನಾದರೂ

ಅದು ಅವನ ಮಧುರ ಮಾತಿನಿಂದ ಸಂತುಷ್ಟವಾಗುತ್ತದೆ. ಇಂತಹ ಕ್ಷಮಾಗುಣವು ಯಾವ ರೀತಿಯಲ್ಲೂ ಸದ್ಗುಣವೆಂದು ಎಣಿಸಲ್ಪಡಲಾರದು. ಈ ಗುಣವನ್ನು ವಿವೇಚನೆಯಿಂದ ಯಥೋಚಿತವಾಗಿ ಬಹಿರಂಗಪಡಿಸುವಾಗ ಮಾತ್ರವೇ ಅದು ಸದ್ಗುಣವಾಗುವುದು. ಹಾಗಲ್ಲವಾದರೆ ಅದು ನೈಸರ್ಗಿಕವಾದ ಒಂದು ಸ್ವಭಾವ ಮಾತ್ರವಾಗಿರುತ್ತದೆ. ಸಹಜಗುಣ ಮತ್ತು ಸದ್ಗುಣದ ವ್ಯತ್ಯಾಸವನ್ನು ತಿಳಿಯಬಲ್ಲವರು ಲೋಕದಲ್ಲೇ ಬಹಳ ವಿರಳವೆಂದು ಹೇಳಬಹುದು. ಆದ್ದರಿಂದಲೇ ನಾನು ಈ ಎರಡರೊಳಗಿನ ವ್ಯತ್ಯಾಸವನ್ನು ಪದೇ ಪದೇ ಒತ್ತಿ ಹೇಳಿದ್ದೇನೆ. ಯಥಾರ್ಥ ಸದ್ಗುಣ, ಸ್ಥಳ ಸಂದರ್ಭಗಳ ಔಚಿತ್ಯದಿಂದ ಕೂಡಿ ಪ್ರಕಟವಾಗುತ್ತದೆ. ಆದರೆ ಸಹಜಗುಣ ಯುಕ್ತತೆ – ಅಯುಕ್ತತೆಯ ಪ್ರಜ್ಞೆಯಿಲ್ಲದೆ ಸ್ವಾಭಾವಿಕ ಪ್ರೇರಣೆಯನ್ನನುಸರಿಸಿ ಪ್ರಕಟವಾಗುತ್ತದೆ. ಹಾಗೆ ನೋಡಿದರೆ ಪ್ರಾಣಿಗಳಲ್ಲಿ ಸಹ ನಿರುಪದ್ರವಿಗಳನ್ನೂ ಪ್ರತೀಕಾರ ಸ್ವಭಾವವಿಲ್ಲದವುಗಳನ್ನೂ ನಾವು ಕಾಣುತ್ತೇವೆ. ಉದಾಹರಣೆಗೆ, ಹಸುವನ್ನು ನಿರುಪದ್ರವಿಯೆಂದೂ ಮೇಕೆಯನ್ನು ಸೌಮ್ಯ ಸ್ವಭಾವದ್ದೆಂದೂ ಹೇಳಬಹುದು. ಆದರೆ ಅವುಗಳಿಗೆ ಔಚಿತ್ಯ – ಅನೌಚಿತ್ಯಗಳ ವ್ಯತ್ಯಾಸವನ್ನು ತಿಳಿಯಲು ವಿವೇಕವಿಲ್ಲದುದರಿಂದ ಅವುಗಳ ಈ ರೀತಿಯ ಸ್ವಭಾವವನ್ನು ಸದ್ಗುಣವೆಂದು ಗಣಿಸಲಾಗದು. ಸತ್ಯ ಮತ್ತು ಪರಿಪೂರ್ಣ ದೇವಗ್ರಂಥವಾದ ಪವಿತ್ರ ಖುರ್‌ಆನ್ ಎಲ್ಲ ನೈತಿಕ ಗುಣಗಳು ಸಮಯ ಮತ್ತು ಸಂದರ್ಭ ಸಹಿತ ಬಹಿರಂಗಗೊಳ್ಳಬೇಕೆಂಬ ನಿಬಂಧನೆಯನ್ನು ವಿಧಿಸಿದೆ.

## ಉಪಕಾರಶೀಲತೆ

ಪರೋಪಕಾರಾತ್ಮಕ ಸ್ವಭಾವ ವರ್ಗದಲ್ಲಿ ಒಳಗೊಂಡ ಎರಡನೆಯ ಸದ್ಗುಣ ಅರಬಿ ಭಾಷೆಯಲ್ಲಿ 'ಅದ್‌ಲ್' (عدل) ಎಂದು ಕರೆಯಲ್ಪಡುವ 'ಪ್ರತ್ಯುಪಕಾರ'ವೂ ಮೂರನೆಯದು 'ಇಹ್‌ಸಾನ್' (احسان) ಎಂಬ 'ಔದಾರ್ಯ'ವೂ ನಾಲ್ಕನೆಯದು 'ಈತಾಇ ಧಿಲ್‌ಖುರ್ಬಾ' (اِيتَآءِ ذِى الْقُرْبٰى) ಅಥವಾ 'ಬಂಧು ಬಳಗದೊಡನೆ ಇರುವಂತಹ ಪ್ರೀತಿ'ಯೂ ಆಗಿದೆ. ಈ ವಿಷಯದಲ್ಲಿ ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَآئِ ذِى الْقُرْبٰى

وَيَنْهٰى عَنِ الْفَحْشَآءِ وَالْمُنْكَرِ وَالْبَغْيِ

ಉಪಕಾರಕ್ಕೆ ಪ್ರತ್ಯುಪಕಾರವನ್ನು ಮಾಡಲಿಕ್ಕೂ, ಅದಕ್ಕಿಂತ ಮಿಗಿಲಾಗಿ ಔದಾರ್ಯವನ್ನು ತೋರಿಸುವ ಸಂದರ್ಭ ಬಂದರೆ ಔದಾರ್ಯ ತೋರಿಸಲಿಕ್ಕೂ, ಅದಕ್ಕಿಂತ

ಮೀರಿದ ಬಂಧುತ್ವಪರವಾದ ಅನುಕಂಪವನ್ನು ತೋರಿಸುವ ಅವಕಾಶವೊದಗಿದರೆ ಆ ಮಟ್ಟದ ಸಹಾನುಭೂತಿಯನ್ನು ತೋರಿಸಲಿಕ್ಕೂ ಅಲ್ಲಾಹನು ಆಜ್ಞಾಪಿಸುತ್ತಾನೆ. ನೀತಿ ಧರ್ಮದ ಸೀಮೆಯನ್ನು ಉಲ್ಲಂಘಿಸುವುದನ್ನೂ ಔದಾರ್ಯದ ವಿಷಯದಲ್ಲಿ ಅವಿವೇಕತನವನ್ನು ಪ್ರದರ್ಶಿಸುವುದನ್ನೂ (ಯುಕ್ತವಲ್ಲದ ಸಮಯದಲ್ಲಿ ಒಳಿತುಮಾಡುವ ಉತ್ಸುಕತೆ ಅಥವಾ ಯುಕ್ತ ಸಂದರ್ಭದಲ್ಲಿ ಒಳಿತುಮಾಡಲು ಅನಾಸಕ್ತಿ ತೋರ್ಪಡಿಸುವುದನ್ನೂ) ಬಂಧುತ್ವ ಸಮಾನದ ಸಹತಾಪವನ್ನು ತೋರಿಸಬೇಕಾದ ಸಂದರ್ಭದಲ್ಲಿ ಕೊರತೆಯನ್ನು ಉಂಟುಮಾಡುವುದನ್ನೂ ಅಂತೆಯೇ ಮಿತಿಮೀರಿ ದಯಾರ್ದ್ರತೆಯನ್ನು ಪ್ರಕಟಿಸುವುದನ್ನೂ ಅವನು ವಿರೋಧಿಸುತ್ತಾನೆ. **(16:91)**

ಈ ಪವಿತ್ರ ವಾಕ್ಯ ಉಪಕಾರ ಧರ್ಮದ ಮೂರು ಸ್ಥಾನಗಳನ್ನು ಪ್ರತಿಪಾದಿಸುತ್ತದೆ. ಒಂದನೆಯದು ಒಳಿತಿನ ಬದಲಿಗೆ ಒಳಿತು ಮಾಡುವ ಪ್ರತ್ಯುಪಕಾರ ಸ್ವಭಾವ. ಇದು ಕೆಳಮಟ್ಟದ ಗುಣವಾಗಿದೆ. ತನಗೆ ಉಪಕಾರ ಮಾಡಿದವನಿಗೆ ಪ್ರತ್ಯುಪಕಾರ ಮಾಡುವ ಸ್ವಭಾವ ಒಬ್ಬ ಸಾಮಾನ್ಯನಿಗೆ ಸಹ ಇರಬಹುದು. ಎರಡನೆಯ ಸ್ಥಾನ ಇದಕ್ಕಿಂತ ಪ್ರಯಾಸಕರವಾದುದು. ಪ್ರಥಮದಲ್ಲಿ ತಾನೇ ಉಪಕಾರ ಮಾಡುವ ಹಾಗೂ ಯಾವುದೇ ಋಣಾನುಬಂಧವಿಲ್ಲದೆಯೇ ಇತರರಿಗೆ ಗುಣವನ್ನು ಮಾಡುವ ಈ ಸ್ವಭಾವ ಶ್ಲಾಘನೀಯವಾದರೂ ಮಧ್ಯಮ ಮಟ್ಟದ್ದಾಗಿದೆ. ಹೆಚ್ಚಿನವರು ಬಡ ಜನರಿಗೆ ಔದಾರ್ಯವನ್ನು ತೋರಿಸುವರಾದರೂ ಆ ಸಹಾಯದಲ್ಲಿ ಒಂದು ನ್ಯೂನತೆ ಅಡಕವಾಗಿರುವುದನ್ನು ಕಾಣಬಹುದು. ಸಹಾಯ ಮಾಡಿದವನು ತಾನೊಂದು ಉಪಕಾರವನ್ನು ಮಾಡಿರುವೆನೆಂದು ಭಾವಿಸುತ್ತಾನೆ. ಅದರ ಬದಲಿಗೆ ಕನಿಷ್ಟಪಕ್ಷ ಕೃತಜ್ಞತೆಯನ್ನಾಗಲೀ ಪ್ರಾರ್ಥನೆಯನ್ನಾಗಲೀ ಅಪೇಕ್ಷಿಸುತ್ತಾನೆ. ತನ್ನ ಉಪಕಾರಕ್ಕೆ ಋಣಿಯಾದವನು ಎಂದಾದರೂ ತನಗೆದುರಾಗಿ ವರ್ತಿಸಿದ ಪಕ್ಷದಲ್ಲಿ ಅವನನ್ನು ಉಪಕಾರ ಸ್ಮರಣೆ ಇಲ್ಲದವನೆಂದೂ ಕೃತಘ್ನನೆಂದೂ ಕರೆಯುತ್ತಾನೆ. ತಾನು ಮಾಡಿದ ಉಪಕಾರದ ಹೇತುವಾಗಿ ಅವನು ಕೆಲವು ಬಾರಿ, ಋಣಿಯಾದ ಮನುಷ್ಯನ ಮೇಲೆ ವಹಿಸಲಾಗದ ಭಾರ ಹೊರಿಸಿ ತನ್ನ ಉಪಕಾರದ ಕುರಿತು ಅವನಿಗೆ ನೆನಪನ್ನುಂಟುಮಾಡುತ್ತಾನೆ. ಈ ನ್ಯೂನತೆಯನ್ನು ಹೋಗಲಾಡಿಸಲಿಕ್ಕಾಗಿ ಪವಿತ್ರ ಖುರ್‌ಆನ್ ಉದಾರಿಗಳನ್ನು ಹೀಗೆ ಎಚ್ಚರಿಸುತ್ತದೆ:

لَا تُبْطِلُوا صَدَقٰتِكُمْ بِالْمَنِّ وَالْاَذٰى

ಎಲೈ ಉಪಕಾರಶೀಲರೆ, ನೀವು ಮಾಡಿದ ಉಪಕಾರದ ಕುರಿತು ಉಪಕಾರ

ಪಡೆದವರಿಗೆ ನೆನಪು ಹುಟ್ಟಿಸುತ್ತಾ ದುಃಖವನ್ನು ಕೊಡುತ್ತಾ ನಿಮ್ಮ ದಾನ ಧರ್ಮವನ್ನು ನಿಷ್ಫಲ ಮಾಡಬೇಡಿರಿ. **(2:265)**

ಈ ವಾಕ್ಯದಲ್ಲಿ 'ದಾನಧರ್ಮ' ಎಂದು ಭಾಷಾಂತರಿಸಲ್ಪಟ್ಟ 'ಸದಖಃ' **(صدقه)** ಎಂಬ ಮೂಲ ಪದ 'ಸತ್ಯತೆ' ಎಂಬರ್ಥವುಳ್ಳ 'ಸಿದ್ಖ್' **(صدق)** ಎಂಬ ಧಾತುವಿನಿಂದ ವ್ಯುತ್ಪನ್ನವಾಗಿದೆ. ನಿಷ್ಕಪಟ ಮತ್ತು ನಿಷ್ಕಳಂಕ ಹೃದಯದಿಂದ ಮಾಡಿದ ಸಹಾಯ ಮಾತ್ರವೇ ಯಥಾರ್ಥ ದಾನಧರ್ಮವಾಗುತ್ತದೆ. ಇಲ್ಲವಾದರೆ ಅದು ತೋರಿಕೆ ಮಾತ್ರವಾಗುತ್ತದೆ. ಸಂಕ್ಷಿಪ್ತವಾಗಿ, ಪರೋಪಕಾರಿ ಕೆಲವು ಸಂದರ್ಭಗಳಲ್ಲಿ ತಾನು ಮಾಡಿದ ಉಪಕಾರದ ಕುರಿತು ನೆನಪು ಹುಟ್ಟಿಸುವುದು ಒಂದು ನ್ಯೂನತೆಯಾದುದರಿಂದ ಅದರ ಬಗ್ಗೆ ಖುರ್‌ಆನ್ ವಿಶೇಷ ಎಚ್ಚರಿಕೆಯನ್ನಿತ್ತಿದೆ.

ಪರೋಪಕಾರದ ಮೂರನೆಯ ಸ್ಥಾನ, ಉಪಕಾರ ಮಾಡುವುದೆಂಬ ಭಾವನೆಯಾಗಲಿ, ಕೃತಜ್ಞತೆಯ ಅಪೇಕ್ಷೆಯಾಗಲಿ ಇಲ್ಲದೆ ಅನುಕಂಪದ ಆವೇಶದಿಂದ ನಿಕಟ ಸಂಬಂಧಿಕರಿಗೆಂಬಂತೆ ಪರರಿಗೆ ಒಳಿತುಮಾಡುವುದಾಗಿದೆ. ಪ್ರತಿಫಲವನ್ನು ಇಚ್ಛಿಸದೆ ತಾಯಿ ತನ್ನ ಮಕ್ಕಳಿಗೆ ವಾತ್ಸಲ್ಯದಿಂದ ಸಹಾಯ ಮಾಡುವ ರೀತಿಯಲ್ಲಿ ಅನ್ಯರಿಗೆ ಉಪಕಾರ ಮಾಡುವುದೇ ಪರೋಪಕಾರದ ಅತ್ಯಂತ ಶ್ರೇಷ್ಠ ಸ್ಥಾನವಾಗಿದೆ. ಇದಕ್ಕಿಂತ ಉನ್ನತಿಗೇರಲು ಮನುಷ್ಯನಿಗೆ ಸಾಧ್ಯವಿಲ್ಲ. ಇದನ್ನು 'ಈತಾಇ ಧ಼ಿಲ್ ಖುರ್ಬಾ' (ಬಂಧುತ್ವಪರವಾದ ಸಹಾಯ) ಎಂದು ಹೆಸರಿಸಲಾಗಿದೆ.

ಆದರೆ, ಪರೋಪಕಾರ ಧರ್ಮದ ಈ ಎಲ್ಲ ದರ್ಜೆಗಳ ಮೇಲೆ ಒಂದು ಮುಖ್ಯ ನಿಬಂಧನೆಯನ್ನು ಹೇರಲಾಗಿದೆ. ಆ ನಿಬಂಧನೆಯೇನೆಂದರೆ, ಈ ಪರೋಪಕಾರ ಗುಣವು ಯುಕ್ತ ಸಂದರ್ಭದಲ್ಲಿ ಪ್ರಕಟಗೊಳ್ಳಬೇಕು. ಯಥೋಚಿತವಾಗಿ ಉಪಕಾರ ಮಾಡದಿದ್ದರೆ ಅದು ಅಪಕಾರವಾಗುವುದೆಂದು ಮೇಲಿನ ಪವಿತ್ರ ಖುರ್‌ಆನ್ ವಾಕ್ಯ ವ್ಯಕ್ತಗೊಳಿಸುತ್ತದೆ. 'ಅದ್‌ಲ್' **(عدل)** ಅಥವಾ ಪ್ರತ್ಯುಪಕಾರ 'ಫಹ್‌ಶಾಅ್' **(فحشاء)** ಅಥವಾ ಅಸಭ್ಯತೆಯಾಗಿ ಪರಿಣಮಿಸುತ್ತದೆ. ಹಾಗೆಯೇ 'ಇಹ್‌ಸಾನ್' ಅಥವಾ ಔದಾರ್ಯ ಅನುಚಿತವಾದ ರೀತಿಯಲ್ಲಿ ಮಾಡಲ್ಪಡುವುದಾದರೆ ಅದು 'ಮುಂಕರ್' **(منكر)** ಅಥವಾ ಹೀನಕೃತ್ಯವಾಗುವುದು. ಎಂದರೆ, ಮನಸ್ಸಾಕ್ಷಿ ಇಷ್ಟಪಡದ, ಬುದ್ಧಿ ಸಮ್ಮತಿಸದ ನಿಂದ್ಯಕೃತ್ಯವಾಗುವುದು. 'ಈತಾಇ ಧ಼ಿಲ್‌ಖುರ್ಬಾ' ಅಥವಾ ನಿಕಟ ಬಂಧುಗಳೊಡನೆ ತೋರಿಸುವಂತಹ ಪ್ರೀತಿ ಯಥೋಚಿತ ರಹಿತವಾದರೆ ಅದು 'ಬಗ಼್ಯೀ' **(بغى)** ಅಥವಾ ಪರಪೀಡನೆಯಾದೀತು. 'ಬಗ಼್ಯೀ' ಎಂಬ ಪದದ ಧಾತ್ವರ್ಥ ಬೆಳೆಯ ನಾಶಕ್ಕೆ ಕಾರಣವಾಗುವ 'ಅತಿವೃಷ್ಟಿ' ಎಂದಾಗಿದೆ. ಕರ್ತವ್ಯ ನಿರ್ವಹಣೆಯಲ್ಲಿ

ಅಮಿತ ಅಥವಾ ನ್ಯೂನತೆಯ ನೆಲೆಯನ್ನು ಕೈಗೊಳ್ಳುವುದನ್ನು ಸಹ 'ಬಗ್ಯೀ' ಎಂದು ಹೇಳುತ್ತಾರೆ. ಸಂಕ್ಷಿಪ್ತದಲ್ಲಿ, ಈ ಮೂರು ವರ್ಗಗಳ ಒಳಿತುಗಳು ಯಥೋಚಿತವಾಗಿ ಮಾಡಲ್ಪಡದಿದ್ದರೆ ಅವು ಕೆಡುಕುಗಳಾಗಿ ಪರಿಣಮಿಸುತ್ತವೆ. ಆ ಕಾರಣದಿಂದಲೇ ಈ ಗುಣಕರ್ಮಗಳೊಂದಿಗೆ ಸಂದರ್ಭದ ಔಚಿತ್ಯವನ್ನು ಒಂದು ನಿಬಂಧನೆಯಾಗಿ ನಿಶ್ಚಯಿಸಿರುವುದು. ಸಂದರ್ಭೋಚಿತವಲ್ಲದ ಪ್ರತ್ಯುಪಕಾರವಾಗಲಿ. ಔದಾರ್ಯವಾಗಲಿ, ನಿಕಟ ಸಂಬಂಧಿಕರೊಡನೆ ತೋರಿಸುವಂತಹ ಪ್ರೀತಿಯಾಗಲಿ, ನೈತಿಕ ಗುಣವೆಂದು ಪರಿಗಣಿಸಲ್ಪಡಲಾರದು. ಏಕೆಂದರೆ ಈ ಗುಣಗಳೆಲ್ಲ ವಿವೇಕ ಬುದ್ಧಿ ಪಕ್ವವಾಗುವ ಮೊದಲೇ ಶಿಶುಗಳಲ್ಲಿ ಸಹ ನೈಸರ್ಗಿಕವಾಗಿಯೇ ಗೋಚರಿಸಲ್ಪಡುತ್ತವೆ. ಅವು ನೈತಿಕ ಗುಣಗಳಾಗಬೇಕಾದರೆ ವಿವೇಕ ಬುದ್ಧಿಯ ಸಹಿತ ಅವು ಪ್ರಕಾಶಗೊಳ್ಳಬೇಕಾಗಿವೆ. ಪ್ರತಿಯೊಂದು ಸಹಜಗುಣಗಳನ್ನು ವಿವೇಚನೆ ಸಹಿತವಾಗಿ ಯಥೋಚಿತವಾಗಿ ತೋರ್ಪಡಿಸುವಾಗ ಮಾತ್ರ ಅವು ನೈತಿಕ ಗುಣಗಳಾಗಿ ಮಾರ್ಪಾಟುಗೊಳ್ಳುತ್ತವೆ.

ಪವಿತ್ರ ಖುರ್‌ಆನ್ 'ಇಹ್‌ಸಾನ್' ಎಂಬ ಉದಾರ ಗುಣದ ಕುರಿತು ಇನ್ನೂ ಅತ್ಯಾವಶ್ಯಕ ಉಪದೇಶಗಳನ್ನು ನೀಡುತ್ತದೆ. ಈ ಆದೇಶಗಳೆಲ್ಲ 'ಅಲಿಫ್ ಲಾಂ' (ال) ಸಹಿತ ಪ್ರಯುಕ್ತವಾಗಿದ್ದು ಅವುಗಳ ವಿಶೇಷತೆಯನ್ನೂ ಸಂದರ್ಭೋಚಿತವಾಗಿ ಪ್ರಕಟಿಸಬೇಕಾದ ಔಚಿತ್ಯವನ್ನೂ ಸಂಕೇತಿಸುತ್ತದೆ. ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

يَاأَيُّهَا الَّذِينَ آمَنُوا أَنفِقُوا مِن طَيِّبَاتِ مَا كَسَبْتُمْ .....

وَلَا تَيَمَّمُوا الْخَبِيثَ مِنْهُ

ಎಲೈ ವಿಶ್ವಾಸಿಗಳೇ, ನೀವು ನ್ಯಾಯ ರೀತಿಯಲ್ಲಿ ಸಂಪಾದಿಸಿದ (ಕಳ್ಳತನ, ಲಂಚ, ಮೋಸ, ಅಪಹರಣ ಎಂಬೀ ದಾರಿಯಲ್ಲಿ ಅಥವಾ ಅನ್ಯಾಯವಾದ ಇನ್ನಾವುದೇ ಮಾರ್ಗದಲ್ಲಿ ಸಂಪಾದಿಸಿದ ಏನೂ ಬೆರೆಯದ) ಸಂಪತ್ತಿನಿಂದ ಜನರಿಗೆ ದಾನಧರ್ಮ, ಉಪಕಾರಗಳನ್ನು ಮಾಡಿರಿ. ಅನ್ಯಾಯವಾದ ಸಂಪಾದನೆಯಿಂದ ದಾನಮಾಡುವ ವಿಚಾರ ನಿಮ್ಮ ಹೃದಯದಿಂದ ದೂರವಾಗಿರಲಿ. **(2:268)**

لَا تُبْطِلُوا صَدَقَاتِكُم بِالْمَنِّ وَالْأَذَىٰ كَالَّذِي يُنفِقُ مَالَهُ رِئَاءَ النَّاسِ

ನೀವು ಮಾಡಿದ ದಾನಧರ್ಮಗಳನ್ನು ಕುರಿತು, ನಿಮ್ಮಿಂದ ಉಪಕಾರ ಪಡೆದವರಿಗೆ ನೆನಪು ಉಂಟುಮಾಡುತ್ತಾ ದುಃಖವನ್ನು ಕೊಡುತ್ತಾ ಅವುಗಳನ್ನು ನಿಷ್ಪ್ರಯೋಜಕವನ್ನಾಗಿ ಮಾಡಬೇಡಿರಿ. (ಎಂದರೆ, ನಿಮ್ಮ ನೆರವು ಪಡೆದವರಿಗೆ

ಅದರ ಕುರಿತು ನೆನಪು ಹುಟ್ಟಿಸುತ್ತಾ ಅಥವಾ ಬೇರಾವುದೇ ವಿಧದಲ್ಲಿ ಅವರನ್ನು ದುಃಖಕ್ಕೆ ಈಡುಮಾಡಬಾರದು. ಹಾಗೆ ಮಾಡುವಿರಾದರೆ ನಿಮ್ಮ ಉಪಕಾರ ವ್ಯರ್ಥವಾಗುವುದು); ಅನ್ಯರಿಗೆ ತೋರಿಸುವುದಕ್ಕೋಸ್ಕರ ನಿಮ್ಮ ಧನವನ್ನು ಖರ್ಚು ಮಾಡುವ ಕ್ರಮವನ್ನು ರೂಢಿಸಿಕೊಳ್ಳಬೇಡಿರಿ. **(2:265)**

وَاَحۡسِنُوۡا ۛۚ اِنَّ اللّٰهَ يُحِبُّ الۡمُحۡسِنِيۡنَ

ನೀವು ಜನರಿಗೆ ಒಳಿತನ್ನು ಮಾಡಿರಿ; ಅಲ್ಲಾಹನು ಉದಾರಿಗಳಾದ ಸಜ್ಜನರನ್ನು ಪ್ರೀತಿಸುತ್ತಾನೆ. **(2:196)**

اِنَّ الۡاَبۡرَارَ يَشۡرَبُوۡنَ مِنۡ كَاۡسٍ كَانَ مِزَاجُهَا كَافُوۡرًا

ಯಥಾರ್ಥ ರೀತಿಯಲ್ಲಿ ಉಪಕಾರ ಮಾಡುವ ಸಜ್ಜನರಿಗೆ ಕರ್ಪೂರ ಮಿಶ್ರಿತ ಪಾನೀಯ ಕುಡಿಸಲಾಗುವುದು. **(76:6)** ಎಂದರೆ, ಪ್ರಾಪಂಚಿಕ ಲಾಲಸೆಗಳೂ ಪರಿತಾಪಗಳೂ ಅಶುದ್ಧ ಇಚ್ಛೆಗಳೂ ಅವರ ಹೃದಯದಿಂದ ದೂರೀಕರಿಸಲ್ಪಡುವುವು.

ಕರ್ಪೂರ ಅಥವಾ 'ಕಾಫೂರ್' (كافور) ಎಂಬ ಅರಬಿ ಪದ 'ನಿಗ್ರಹಿಸು' ಮತ್ತು 'ಮುಚ್ಚಿಡು' ಎಂದು ಅರ್ಥ ಕೊಡುವ 'ಕಫರ್' (كفر) ಎಂಬ ಧಾತುವಿನಿಂದ ವ್ಯುತ್ಪನ್ನವಾಗಿದೆ. ಈ ಕರ್ಪೂರ ಪಾನೀಯ ಸೇವನೆಯ ತಾತ್ಪರ್ಯ, ಅವರ ಅನುಚಿತ ಉದ್ವೇಗಗಳು ನಿಗ್ರಹಿಸಲ್ಪಡುವುವೆಂದೂ ಅವರ ಹೃದಯದಿಂದ ಅಶುದ್ಧತೆಗಳೆಲ್ಲ ನೀಗಿಸಲ್ಪಡುವುವೆಂದೂ ದೇವಜ್ಞಾನವೆಂಬ ತಂಪಿನಿಂದ ಅವರು ಶೀತಳೀಕೃತರಾಗುವರೆಂದೂ ಆಗಿದೆ.

عَيۡنًا يَّشۡرَبُ بِهَا عِبَادُ اللّٰهِ يُفَجِّرُوۡنَهَا تَفۡجِيۡرًا

ಆ ಸುಕೃತರಾದ ದೇವದಾಸರು ತಾವೀಗ ತಮ್ಮ ಕೈಗಳಿಂದಲೇ ನಿರ್ಮಿಸಿದ ಚಿಲುಮೆಯಿಂದ ಪುನರುತ್ಥಾನ ದಿನದಂದು ನೀರು ಕುಡಿಯುವರು. **(76:7)**

ಈ ವಾಕ್ಯವು ಸ್ವರ್ಗಕ್ಕೆ ಸಂಬಂಧಿಸಿದ ಗಹನ ತತ್ವರಹಸ್ಯವನ್ನು ಸೂಚಿಸುತ್ತದೆ. ತಿಳಿಯಲು ಇಷ್ಟವುಳ್ಳವರು ತಿಳಿದುಕೊಳ್ಳಲಿ.

ಪವಿತ್ರ ಖುರ್‌ಆನ್ ಮುಂದುವರಿಸುತ್ತಾ ಹೀಗೆ ಹೇಳುತ್ತದೆ:

وَيُطۡعِمُوۡنَ الطَّعَامَ عَلٰى حُبِّهٖ مِسۡكِيۡنًا وَّيَتِيۡمًا وَّاَسِيۡرًا-

إِنَّمَا نُطْعِمُكُمْ لِوَجْهِ اللَّهِ لَا نُرِيدُ مِنكُمْ جَزَاءً وَلَا شُكُورًا

ಸತ್ಕರ್ಮಿಗಳು ಪರಮಾತ್ಮನೊಡನಿರುವ ಪ್ರೀತಿಯಿಂದ ತಾವು ಇಷ್ಟಪಡುವ ಆಹಾರವನ್ನು ಬಡವರಿಗೂ ಅನಾಥರಿಗೂ ಬಂಧನಕ್ಕೊಳಗಾದವರಿಗೂ ನೀಡಿ 'ನಿಮ್ಮ ಮೇಲೆ ನಾವು ಯಾವ ಋಣಾನುಬಂಧವನ್ನೂ ಹೊರಿಸುವುದಿಲ್ಲ; ಇದು ದೇವನು ನಮ್ಮನ್ನು ಪ್ರೀತಿಸಲಿಕ್ಕಾಗಿ ನಾವು ಅವನಿಗೆ ಅರ್ಪಿಸುವ ಸೇವೆಯಾಗಿದೆ; ನಿಮ್ಮಿಂದ ಯಾವ ಪ್ರತಿಫಲವನ್ನಾಗಲೀ ನಾವು ನಿರೀಕ್ಷಿಸುವುದಿಲ್ಲ' ಎಂದು ಹೇಳುವರು. **(76:9.10)**

ಪರೋಪಕಾರದ ಮೂರನೆಯ ಸ್ಥಾನ ಈ ರೀತಿಯಲ್ಲಿ ಪ್ರತಿಫಲವನ್ನು ಬಯಸದ ಬಂಧುತ್ವಪರವಾದ ಅನುಕಂಪವಾಗಿದೆಯೆಂದು ಈ ವಾಕ್ಯಗಳು ಸೂಚಿಸುತ್ತವೆ.

ಇನ್ನೂ ಪವಿತ್ರ ಖುರ್‌ಆನ್ ಹೇಳುತ್ತದೆ:

وَآتَى الْمَالَ عَلَىٰ حُبِّهِ ذَوِي الْقُرْبَىٰ وَالْيَتَامَىٰ وَالْمَسَاكِينَ وَابْنَ السَّبِيلِ وَالسَّائِلِينَ وَفِي الرِّقَابِ

ಯಥಾರ್ಥ ಸದ್ಧರ್ಮಿಗಳು ದೇವನ ಸಂತುಷ್ಟಿಗಾಗಿ ತಮ್ಮ ಧನವನ್ನು ವ್ಯಯಿಸಿ ಬಂಧುಗಳಿಗೆ ನೆರವು ನೀಡುತ್ತಾರೆ; ಅನಾಥ ಮಕ್ಕಳನ್ನು ಸಂರಕ್ಷಿಸುತ್ತಾರೆ. ಅವರ ವಿದ್ಯಾಭ್ಯಾಸಕ್ಕೆ ಏರ್ಪಾಡು ಮಾಡುತ್ತಾರೆ; ನಿರ್ಗತಿಕರನ್ನೂ ದರಿದ್ರರನ್ನೂ ಹಸಿವೆಯಿಂದ ಸಂರಕ್ಷಿಸುತ್ತಾರೆ. ದಾರಿಹೋಕರಿಗೆ ಸಹಾಯ ಮಾಡುತ್ತಾರೆ; ಭಿಕ್ಷುಕರಿಗೆ ದಾನಮಾಡುತ್ತಾರೆ; ಗುಲಾಮರನ್ನೂ ಸಾಲಗಾರರನ್ನೂ ವಿಮುಕ್ತಗೊಳಿಸುತ್ತಾರೆ

**(2:178)**

إِذَا أَنفَقُوا لَمْ يُسْرِفُوا وَلَمْ يَقْتُرُوا وَكَانَ بَيْنَ ذَٰلِكَ قَوَامًا

ಅವರು ಖರ್ಚುಮಾಡುವಾಗ ಮಿತಿಮೀರದೆಯೂ ಜಿಪುಣತೆ ತೋರಿಸದೆಯೂ ಮಧ್ಯಮ ಮಟ್ಟವನ್ನು ಕೈಗೊಳ್ಳುತ್ತಾರೆ. **(25:68)**

وَالَّذِينَ يَصِلُونَ مَا أَمَرَ اللَّهُ بِهِ أَن يُوصَلَ وَيَخْشَوْنَ رَبَّهُمْ

وَيَخَافُونَ سُوءَ الْحِسَابِ

ಸ್ಥಿರಗೊಳಿಸಲು ಅಲ್ಲಾಹನು ಆದೇಶಿಸಿದ ಸಂಬಂಧಗಳನ್ನು ಅವರು ಸ್ಥಿರಗೊಳಿಸುತ್ತಾರೆ. ತಮ್ಮ ಪ್ರಭುವಾದ ಪರಮಾತ್ಮನಿಗೆ ಅವರು ಭಯಪಟ್ಟು,

ಆಪತ್ಕರವಾದ ಲೆಕ್ಕ ತೇಗೆಯುವಿಕೆಯ ಕುರಿತು ಭೀತಿಯುಳ್ಳವರಾಗಿದ್ದಾರೆ **(13:22)**

وَفِيْٓ اَمْوَالِهِمْ حَقٌّ لِّلسَّآئِلِ وَالْمَحْرُوْمِ

ಅವರ ಸಂಪತ್ತಿನಲ್ಲಿ ಯಾಚಿಸುವವರಿಗೂ ಯಾಚಿಸಲಾಗದವರಿಗೂ ಹಕ್ಕಿದೆ. **(51:20)**

ಇಲ್ಲಿ 'ಯಾಚಿಸಲಾಗದವರು' ಎಂಬ ಅರ್ಥವ್ಯಾಪ್ತಿಯಲ್ಲಿ ನಾಯಿ, ಬೆಕ್ಕು, ಪಕ್ಷಿ, ಎತ್ತು, ಕತ್ತೆ, ಆಡು ಮುಂತಾದವು ಹಾಗೂ ಇತರ ಎಲ್ಲ ಮೂಕ ಜೀವಿಗಳೂ ಸೇರುತ್ತವೆ.

الَّذِيْنَ يُنْفِقُوْنَ فِي السَّرَّآءِ وَالضَّرَّآءِ

ಅವರು ತಮ್ಮ ಸಮೃದ್ಧಿಯ ಕಾಲದಲ್ಲೆಂಬಂತೆಯೇ ಸಂಕಷ್ಟ ಕಾಲದಲ್ಲಿಯೂ ತಮ್ಮ ಶಕ್ತ್ಯಾನುಸಾರ ಧಾನಧರ್ಮ ಮಾಡುತ್ತಾರೆ. **(3:135)**

وَاَنْفَقُوْا مِمَّا رَزَقْنٰهُمْ سِرًّا وَّعَلَانِيَةً

ಅವರು ಕೆಲವು ಬಾರಿ ರಹಸ್ಯವಾಗಿಯೂ ಕೆಲವು ಬಾರಿ ಬಹಿರಂಗವಾಗಿಯೂ ದಾನ ಮಾಡುತ್ತಾರೆ. **(13:23)** ಡಾಂಭಿಕತನ ಉಂಟಾಗದಿರಲಿಕ್ಕೆ ರಹಸ್ಯವಾಗಿಯೂ ಇತರರನ್ನು ಸಹ ಪ್ರೇರೇಪಿಸಲಿಕ್ಕಾಗಿ ಬಹಿರಂಗವಾಗಿಯೂ ದಾನಮಾಡುತ್ತಾರೆ.

اِنَّمَا الصَّدَقٰتُ لِلْفُقَرَآءِ وَالْمَسٰكِيْنِ وَالْعٰمِلِيْنَ عَلَيْهَا وَالْمُؤَلَّفَةِ قُلُوْبُهُمْ وَفِي الرِّقَابِ
وَالْغٰرِمِيْنَ وَفِيْ سَبِيْلِ اللّٰهِ وَابْنِ السَّبِيْلِ ؕ فَرِيْضَةً مِّنَ اللّٰهِ ؕ وَاللّٰهُ عَلِيْمٌ حَكِيْمٌ

ಧಾನಧರ್ಮಗಳು ದರಿದ್ರರಿಗೆ ಮತ್ತು ನಿರ್ಗತಿಕರಿಗೆ ಸಹಾಯಮಾಡಲಿಕ್ಕೂ ಪ್ರಸ್ತುತ ಏರ್ಪಾಡುಗಳ ಕಾರ್ಯನಿರ್ವಾಹಕರಿಗೆ ಪ್ರತಿಫಲದ ರೀತಿಯಲ್ಲೂ ದುಷ್ಟವಲಯದಲ್ಲಿ ಸಿಲುಕಿದವರನ್ನು ಅದರಿಂದ ವಿಮೋಚಿಸಲಿಕ್ಕೂ ಗುಲಾಮರನ್ನು ವಿಮುಕ್ತಗೊಳಿಸಲಿಕ್ಕೂ ಸಾಲದಲ್ಲಿ ಮುಳುಗಿದವರನ್ನು ಮತ್ತು ಆಪತ್ತಿಗೆ ಗುರಿಯಾದವರನ್ನು ರಕ್ಷಿಸಲಿಕ್ಕೂ ಪರಮಾತ್ಮನ ಸಂತುಷ್ಟಿಯ ಇತರ ಕಾರ್ಯಗಳಿಗೂ ದಾರಿಹೋಕರಿಗೆ ನೆರವನ್ನೀಯಲಿಕ್ಕೂ ವ್ಯಯಿಸಲ್ಪಡಬೇಕಾಗಿದೆ. ಇದು ದೇವನ ಒಂದು ಆಜ್ಞೆಯಾಗಿದೆ. ದೇವನು ಎಲ್ಲವನ್ನೂ ಬಲ್ಲವನೂ ಅಗಾಧ ಜ್ಞಾನಿಯೂ ಆಗಿದ್ದಾನೆ. **(9:60)**

لَنْ تَنَالُوا الْبِرَّ حَتّٰى تُنْفِقُوْا مِمَّا تُحِبُّوْنَ

ನೀವು ಪ್ರೀತಿಸುವ ಸಂಪತ್ತನ್ನು ಸಹಜೀವಿಗಳ ಸಹಾಯಕ್ಕಾಗಿ ವ್ಯಯಿಸದಿರುವ ತನಕ ನೀವು ಸತ್ಕರ್ಮಿಗಳಾಗಲಾರಿರಿ. **(3:93)**

وَاٰتِ ذَا الْقُرْبٰى حَقَّهٗ وَالْمِسْكِيْنَ وَابْنَ السَّبِيْلِ وَلَا تُبَذِّرْ تَبْذِيْرًا

ಬಂಧುಗಳಿಗೆ ಅವರ ಹಕ್ಕನ್ನು ನೀಡಿರಿ; ಹಾಗೆಯೇ ದರಿದ್ರರಿಗೂ ನಿರ್ಗತಿಕರಿಗೂ ದಾನ ನೀಡಿರಿ; ಯಾತ್ರಿಕರಿಗೆ ನೆರವೀಯಿರಿ; ಆದರೆ ದುರ್ವ್ಯಯ ಮಾಡಿ ಧನವನ್ನು ನಾಶಪಡಿಸಬೇಡಿರಿ. **(17:27)**

ಎಂದರೆ, ಮದುವೆ ಸಮಾರಂಭಗಳಿಗೂ ಆಡಂಬರಕ್ಕಾಗಿಯೂ ಶುಭಸಂದರ್ಭದ ಆಚಾರ ಸಂಪ್ರದಾಯಗಳಿಗಾಗಿಯೂ ಮಾಡಲಾಗುವ ದುಂದುವೆಚ್ಚಗಳಿಂದ ದೂರವಿರಿ.

بِالْوَالِدَيْنِ اِحْسَانًا وَّبِذِى الْقُرْبٰى وَالْيَتٰمٰى وَالْمَسٰكِيْنِ وَالْجَارِ ذِى الْقُرْبٰى وَالْجَارِ الْجُنُبِ
وَالصَّاحِبِ بِالْجَنْبِ وَابْنِ السَّبِيْلِ ۙ وَمَا مَلَكَتْ اَيْمَانُكُمْ ؕ اِنَّ اللّٰهَ لَا يُحِبُّ مَنْ كَانَ مُخْتَالًا
فَخُوْرَا - الَّذِيْنَ يَبْخَلُوْنَ وَيَاْمُرُوْنَ النَّاسَ بِالْبُخْلِ وَيَكْتُمُوْنَ مَآ اٰتٰهُمُ اللّٰهُ مِنْ فَضْلِهٖ

ನೀವು ಮಾತಾಪಿತರಿಗೆ ಒಳಿತುಮಾಡಿರಿ. ಹಾಗೆಯೇ ಸಂಬಂಧಿಕರಿಗೂ ಅನಾಥ ಮಕ್ಕಳಿಗೂ ನಿರ್ಗತಿಕರಿಗೂ ಬಂಧುಗಳಾದ ನೆರೆಕರೆಯವರಿಗೂ ಬಂಧುಗಳಲ್ಲದ ನೆರೆಕರೆಯವರಿಗೂ ಸಹಯಾತ್ರಿಕರಿಗೂ ನಿಮ್ಮ ಅಧೀನದಲ್ಲಿರುವ ನೌಕರ – ಚಾಕರರಿಗೂ, ಕುದುರೆ, ಆಡು, ಹಸು, ಮೊದಲಾದ ಮೃಗಗಳಿಗೆಲ್ಲ ಉಪಕಾರ ಮಾಡಿರಿ. ಈ ಸ್ವಭಾವ ದೇವನಿಗೆ ಪ್ರಿಯಕರವಾಗಿದೆ. ಅವನು ದಿಟವಾಗಿಯೂ ಗರ್ವಿಷ್ಠರನ್ನೂ ಸ್ವಾರ್ಥಿಗಳನ್ನೂ ಪ್ರೀತಿಸುವುದಿಲ್ಲ. ಲೋಭಿಗಳನ್ನೂ ಜನರಿಗೆ ಜಿಪುಣತೆ ಕಲಿಸುವವರನ್ನೂ ಧನವನ್ನು ಅಡಗಿಸಿಟ್ಟು ತಮ್ಮ ಬಳಿ ಏನೂ ಇಲ್ಲವೆಂದು ಬಡವರೊಡನೆ ಹೇಳುವವರನ್ನೂ ಅಲ್ಲಾಹನು ಸ್ನೇಹಿಸುವುದಿಲ್ಲ. **(4:37, 38)**

## ಧೈರ್ಯ

**'ಶುಜಾಅತ್' (شجاعت)** ಅಥವಾ 'ಧೈರ್ಯ' ಎಂಬ ಗುಣದೊಂದಿಗೆ ಸಾದೃಶ್ಯವುಳ್ಳ ಒಂದು ಶಕ್ತಿವಿಶೇಷ ಮನುಷ್ಯ ಸ್ವಭಾವದಲ್ಲಿ ಅಡಗಿರುತ್ತದೆ. ಆ ಅಂತಃಶಕ್ತಿಯ ಪ್ರೇರಣೆಯಿಂದಾಗಿ ಶಿಶು ಕೆಲವು ಬಾರಿ ಪ್ರಜ್ವಲಿಸುತ್ತಿರುವ ಬೆಂಕಿಯಲ್ಲಿ ಕೈ ಹಾಕಲು ತಯಾರಾಗುತ್ತದೆ. ಶಿಶುವಿನ ಈ ಸಹಜ ಶಕ್ತಿ ಪ್ರಬಲಗೊಂಡು,

ವಿವೇಚನಾ ಶಕ್ತಿಯ ಅಭಾವದಿಂದ ಅದು ಯಾವುದಕ್ಕೂ ಹೆದರುವುದಿಲ್ಲ. ಈ ಪ್ರಾಕೃತಿಕ ಸ್ಥಿತಿಯಲ್ಲಿ ಮನುಷ್ಯನು ಹುಲಿ ಮತ್ತು ಇತರ ಕ್ರೂರಪ್ರಾಣಿಗಳೊಡನೆ ಸಹ ನಿರ್ಭಯದಿಂದ ಹೋರಾಡಿ ಶೌರ್ಯವನ್ನು ಪ್ರಕಟಿಸುತ್ತಾನೆ. ಅದೇ ಪ್ರಕಾರ ಅನೇಕರೊಡನೆ ಏಕಾಂಗಿಯಾಗಿ ಹೋರಾಡಲಿಕ್ಕೂ ಅವನು ಸಿದ್ಧನಾಗುತ್ತಾನೆ. ಜನರು ಅವನ ಧೀರತೆಯನ್ನು ಹೊಗಳುತ್ತಾರೆ. ಆದರೆ ಇದು ಕ್ರೂರ ಪ್ರಾಣಿಗಳಲ್ಲೂ ನಾಯಿಗಳಲ್ಲೂ ಸಹ ಕಾಣಲ್ಪಡುವ ಒಂದು ಸಹಜ ಗುಣ ಮಾತ್ರವಾಗಿದೆ. ಈ ಸಹಜ ಗುಣವನ್ನು ವಿವೇಚನೆಯ ಪ್ರಕಾಶದಿಂದ ಔಚಿತ್ಯ ಸಹಿತ ಪ್ರಕಟಿಸುವಾಗ ಅದು ನೈಜವಾದ ಧೈರ್ಯ ಅಥವಾ ಶುಜಾಅತ್ ಆಗುತ್ತದೆ. ಹೀಗೆ ಸ್ಥಳ, ಸಂದರ್ಭಗಳ ಔಚಿತ್ಯವನ್ನು ನೋಡಿ ಪ್ರಕಟಗೊಳ್ಳುವ ಧೈರ್ಯ ಉತ್ಕೃಷ್ಟವಾದ ಸದ್ಗುಣಗಳ ಪೈಕಿ ಒಂದಾಗಿದೆ. ಇದಕ್ಕೆ ಸಂಬಂಧಿಸಿ ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳಲಾಗಿದೆ:

وَالصّٰبِرِيْنَ فِى الْبَاْسَآءِ وَالضَّرَّآءِ وَحِيْنَ الْبَاْسِ

ಕಷ್ಟಕಾಲದಲ್ಲೂ ಆಪತ್ತಿನ ಘಟ್ಟದಲ್ಲೂ ಯುದ್ಧಕಾಲದಲ್ಲೂ ಸಹನೆಯನ್ನು ಕೈಗೊಂಡು ದೃಢ ಮನಸ್ಕರಾಗಿರುವವರೇ ಧೀರರು. **(2:178)**

وَالَّذِيْنَ صَبَرُوا ابْتِغَآءَ وَجْهِ رَبِّهِمْ

ಅವರು (ಆಪತ್ಕಾಲದಲ್ಲೂ ಯುದ್ಧಕಾಲದಲ್ಲೂ) ಸಹನೆ ತೋರಿಸುವುದು ದೇವನ ಸಂಪ್ರೀತಿಗಾಗಿ ಹೊರತು ಶೌರ್ಯವನ್ನು ತೋರ್ಪಡಿಸಲಿಕ್ಕಾಗಿ ಅಲ್ಲ. **(13:23)**

اَلَّذِيْنَ قَالَ لَهُمُ النَّاسُ اِنَّ النَّاسَ قَدْ جَمَعُوْا لَكُمْ فَاخْشَوْهُمْ فَزَادَهُمْ اِيْمَانًا ۖ وَّقَالُوْا حَسْبُنَا اللّٰهُ وَنِعْمَ الْوَكِيْلُ

ನಿಮಗೆ ವಿರುದ್ಧವಾಗಿ ಜನರು ಸಂಘಟಿಸಿದ್ದಾರೆ; ಆದುದರಿಂದ ನೀವು ಅವರಿಗೆ ಹೆದರಿಕೊಂಡು ಇರಿ ಎಂಬ ಬೆದರಿಕೆ ಮಾತು ಅವರನ್ನು ತೀರಾ ಭೀತಿಗೊಳಿಸುವುದಿಲ್ಲ. ಮಾತ್ರವಲ್ಲ, ಅದು ಅವರ ವಿಶ್ವಾಸವನ್ನು ಬಲಗೊಳಿಸುತ್ತದೆ. 'ನಮಗೆ ದೇವನು ಸಾಕು; ಅವನು ಅತ್ಯುತ್ತಮನಾದ ಸಂರಕ್ಷನಾಗಿರುವನು' ಎಂದು ಅವರು ಹೇಳುವರು. **(3:174)**

وَلَا تَكُوْنُوْا كَالَّذِيْنَ خَرَجُوْا مِنْ دِيَارِهِمْ بَطَرًا وَّرِئَآءَ النَّاسِ

ತಮ್ಮ ಮನೆಗಳಿಂದ ಜಂಬದಿಂದಲೂ ಇತರರು ಕಾಣಬೇಕೆಂಬ ಉದ್ದೇಶದಿಂದಲೂ ಹೊರಟವರಂತೆ ನೀವು ಆಗಬಾರದು. **(8:48)**

ಎಂದರೆ, ಅವರ ಧೀರತನ ನಾಯಿಗಳಂತೆ ಅಥವಾ ವನ್ಯ ಮೃಗಗಳಂತೆ ಉದ್ರೇಕ ಪ್ರೇರಿತವಾಗಿ ಒಂದು ದಿಕ್ಕಿಗೆ ಮಾತ್ರ ಪ್ರವಹಿಸುವಂತಹದ್ದಲ್ಲ. ಬದಲಾಗಿ, ಅವರು ಎರಡು ಬಗೆಯಲ್ಲೂ ತಮ್ಮ ಶೌರ್ಯವನ್ನು ಪ್ರದರ್ಶಿಸುವರು. ಒಂದು ಕಡೆಯಲ್ಲಿ ಅವರು ಸ್ವತಃಸಿದ್ಧವಾದ ಮನಃಶಕ್ತಿಯಿಂದ ದೈಹಿಕೇಚ್ಛೆಗಳ ವಿರುದ್ಧ ಹೋರಾಡಿ ಅವುಗಳನ್ನು ಸೋಲಿಸಿ, ಇನ್ನೊಂದು ಕಡೆಯಲ್ಲಿ ಶತ್ರುಗಳ ವಿರುದ್ಧ ಹೋರಾಡುವುದು ಅತ್ಯಾವಶ್ಯಕವೆಂದು ತೋರುವಾಗ, ಉದ್ವೇಗ ಪ್ರೇರಿತರಾಗದೆ, ಸತ್ಯವನ್ನೂ ನ್ಯಾಯವನ್ನೂ ನೆಲೆನಿಲ್ಲಿಸಲಿಕ್ಕಾಗಿ ಮಾತ್ರ ಹೋರಾಡುವರು. ಹೀಗೆ ಅವರು ಧೈರ್ಯವನ್ನು ಪ್ರದರ್ಶಿಸುವುದು ಸ್ವಶಕ್ತಿಯ ವಿಶ್ವಾಸದಿಂದಲ್ಲ, ದೇವನ ಮೇಲಿನ ಭರವಸೆಯಿಂದ ಮಾತ್ರವಾಗಿದೆ. ನೈಜ ಧೈರ್ಯಶಾಲಿಗಳು ಅನ್ಯರಿಗೆ ತೋರಿಸಲಿಕ್ಕಾಗಿ ಅಹಂಕಾರದಿಂದ ಧೈರ್ಯವನ್ನು ಪ್ರದರ್ಶಿಸಲಾರರು. ಅವರು ಉದ್ವೇಗಕ್ಕೆ ಅಧೀನರಾಗದೆ ಯಾವ ವಿಷಯದಲ್ಲೂ ಪರಮಾತ್ಮನ ಸಂತುಷ್ಟಿಯನ್ನು ಗುರಿಯಾಗಿರಿಸಿಕೊಂಡಿರುತ್ತಾರೆ.

ಮೇಲೆ ಉದ್ಧರಿಸಲಾದ ಪವಿತ್ರ ಖುರ್‌ಆನ್ ವಾಕ್ಯಗಳಿಂದ ತಿಳಿದುಬರುವುದೇನೆಂದರೆ, ಯಥಾರ್ಥವಾದ ಧೈರ್ಯದ ಮೂಲ ಸಹನಶಕ್ತಿ ಮತ್ತು ದೃಢಚಿತ್ತತೆಯಾಗಿದೆ. ಶತ್ರುವಿನಂತೆ ಆಕ್ರಮಣ ಮಾಡುವ ದೈಹಿಕೇಚ್ಛೆಗಳನ್ನು ಮತ್ತು ವಿಪತ್ತುಗಳನ್ನು ಎದುರಿಸುವುದೂ ಭೀರುತ್ವದಿಂದ ಹಿಂದಕ್ಕೆ ಸರಿಯದಿರುವುದೂ ನೈಜ ಧೀರತೆಯಾಗಿದೆ. ಒಂದು ಹಿಂಸ್ರ ಪ್ರಾಣಿಯ ಶೌರ್ಯಕ್ಕೂ ಮನುಷ್ಯನ ಧೈರ್ಯಕ್ಕೂ ಬಹಳ ವ್ಯತ್ಯಾಸ ವಿದೆ. ಪ್ರಾಣಿಗಳ ಶೌರ್ಯ ಒಂದು ದಿಕ್ಕನ್ನು ಮಾತ್ರ ಲಕ್ಷ್ಯವಾಗಿಟ್ಟುಕೊಂಡಿರುವ ಕ್ರೋಧಾವೇಶದ ಪ್ರಕಟಣೆಯಾಗಿದೆ. ಆದರೆ ಯಥಾರ್ಥ ಧೈರ್ಯವನ್ನು ಹೊಂದಿರುವ ಮನುಷ್ಯನು, ವಿರೋಧಿಸುವುದು ಅಥವಾ ವಿರೋಧಿಸದಿರುವುದು – ಇವೆರಡರಲ್ಲಿ ಗುಣಕರ ಯಾವುದೆಂದು ವಿವೇಚಿಸಿ ಯಥೋಚಿತವಾಗಿ ವರ್ತಿಸುತ್ತಾನೆ.

## ಸತ್ಯಸಂಧತೆ

ಮನುಷ್ಯನ ಸಹಜಗುಣಗಳಲ್ಲಿ ಒಂದು, ಸತ್ಯಸಂಧತೆಯಾಗಿದೆ. ಅವನು ಸ್ವಾರ್ಥಪರವಾದ ಯಾವುದಾದರೂ ಪ್ರೇರಣೆಯಿಲ್ಲದಿದ್ದರೆ ಸುಳ್ಳು ಹೇಳಲು ಇಚ್ಛಿಸು ವುದಿಲ್ಲ. ಸುಳ್ಳು ಹೇಳುವುದನ್ನು ಅವನು ಸ್ವಾಭಾವಿಕವಾಗಿ ವಿರೋಧಿಸುತ್ತಾನೆ. ಆದ್ದರಿಂದಲೇ ಸುಳ್ಳು ಹೇಳುವವನನ್ನು ಅವನು ತಿರಸ್ಕಾರಭಾವದಿಂದ ನೋಡುತ್ತಾನೆ. ಆದರೆ ಈ ಸಹಜ ಸ್ವಭಾವದ ರೂಪವನ್ನು ಒಂದು ಸದ್ಗುಣವೆಂದು ಪರಿಗಣಿಸಲಾಗದು. ಏಕೆಂದರೆ ಈ ಸ್ಥಿತಿಯನ್ನು ಶಿಶುಗಳಲ್ಲಿಯೂ ಹುಚ್ಚರಲ್ಲಿಯೂ ಕಾಣಬಹುದಾಗಿದೆ.

ಸತ್ಯನಿಷ್ಠೆಗೆ ಭಂಗವನ್ನುಂಟುಮಾಡುವ ಸ್ವಾರ್ಥಪರವಾದ ಉದ್ದೇಶಗಳಿಂದ ಬೇರ್ಪಟ್ಟಿರದ ಕಾಲದವರೆಗೆ ಮನುಷ್ಯನಿಗೆ ಯಥಾರ್ಥದಲ್ಲಿ ಸತ್ಯಸಂಧನಾಗಲಿಕ್ಕೆ ಸಾಧ್ಯವಿಲ್ಲ. ಅವನು ತನಗೆ ಹಾನಿಯಿಲ್ಲದ ಸಂಗತಿಗಳ ಸಂಬಂಧಿಸಿ ಸತ್ಯ ನುಡಿದು, ತನ್ನ ಅಭಿಮಾನಕ್ಕೋ ಸಂಪತ್ತಿಗೋ ಜೀವಕ್ಕೋ ಹಾನಿಯಾಗುವುದೆಂದು ತೋರುವ ಸಂದರ್ಭದಲ್ಲಿ ಸುಳ್ಳು ಹೇಳುವನಾದರೆ ಅಥವಾ ಸತ್ಯ ನುಡಿಯದೆ ಮೌನವನ್ನವಲಂಬಿಸುವನಾದರೆ, ಅವನಿಗೆ ಒಂದು ಶಿಶುವಿಗಿಂತ, ಒಬ್ಬ ಹುಚ್ಚನಿಗಿಂತ ಯಾವುದೇ ಶ್ರೇಷ್ಠತೆ ಇಲ್ಲ. ಹತಬುದ್ಧಿಯ ಹುಚ್ಚನೂ ವಿವೇಕಬುದ್ಧಿ ಪಕ್ವವಾಗದ ಶಿಶುವೂ ಈ ರೀತಿಯಲ್ಲಿ ಸತ್ಯವನ್ನು ಹೇಳುತ್ತಾರಷ್ಟೆ. ಬಾಹ್ಯವಾದ ಯಾವ ಪ್ರೇರಣೆಯೂ ಇಲ್ಲದೆ ಸುಮ್ಮಗೆ ಸುಳ್ಳು ಹೇಳುವ ಯಾರನ್ನೂ ಈ ಪ್ರಪಂಚದಲ್ಲಿ ಕಾಣಲು ಸಾಧ್ಯವಿಲ್ಲ. ಆಪತ್ತು ಉಂಟಾದೀತು ಎಂದು ತೋರುವ ಘಟ್ಟದಲ್ಲಿ ಸತ್ಯನಿಷ್ಠೆಯನ್ನು ತ್ಯಜಿಸುವುದು ಯಥಾರ್ಥ ಸದ್ಗುಣಕ್ಕೆ ವಿರುದ್ಧವಾಗಿದೆ. ತನ್ನ ಜೀವ, ಸಂಪತ್ತು ಅಥವಾ ಅಭಿಮಾನ ಸಂದಿಗ್ಧ ಘಟ್ಟದಲ್ಲಿರುವಾಗಲೇ ಸತ್ಯನಿಷ್ಠೆ ತೋರಿಸಬೇಕಾದ ಅತ್ಯಂತ ಘನವತ್ತಾದ ಮತ್ತು ಸರಿಯಾದ ಸಂದರ್ಭವಾಗಿದೆ. ಈ ವಿಷಯದಲ್ಲಿ ಪವಿತ್ರ ಖುರ್‌ಆನ್ ನೀಡುವ ಪಾಠ ಇದಾಗಿದೆ:

فَاجْتَنِبُوا الرِّجْسَ مِنَ الْاَوْثَانِ وَاجْتَنِبُوْا قَوْلَ الزُّوْرِ

ವಿಗ್ರಹಾರಾಧನೆಯನ್ನೂ ಮಿಥ್ಯಾನುಡಿಗಳನ್ನೂ ವರ್ಜಿಸಿರಿ. **(22:31)**

ಎಂದರೆ, ಅಸತ್ಯನುಡಿ ಒಂದು ರೀತಿಯ ವಿಗ್ರಹವಾಗಿದೆ. ಅದರ ಭರವಸೆಯನ್ನು ಇಟ್ಟು ಕೊಂಡಿರುವವರು ಪರಮಾತ್ಮನ ಆಶ್ರಯವನ್ನು ಕೈಬಿಡಬೇಕಾಗುತ್ತದೆ. ಅದೇ ಪ್ರಕಾರ ಅಸತ್ಯ ವಚನದ ಹೇತುವಾಗಿ ಅವರನ್ನು ಪರಮಾತ್ಮನು ಕೈಬಿಡುತ್ತಾನೆ.

وَلَا يَأْبَ الشُّهَدَآءُ اِذَا مَا دُعُوْا

ಸಾಕ್ಷ್ಯ ನುಡಿಯಲು ಕರೆಯಲ್ಪಟ್ಟಾಗ ನೀವು ಹೋಗಲು ನಿರಾಕರಿಸಬಾರದು.

**(2:283)**

وَلَا تَكْتُمُوا الشَّهَادَةَ ؕ وَمَنْ يَّكْتُمْهَا فَاِنَّهٗۤ اٰثِمٌ قَلْبُهٗ

ಸತ್ಯವಾದ ಸಾಕ್ಷ್ಯವನ್ನು ನೀವು ಮುಚ್ಚಿಡಬಾರದು. ಯಾವಾತನು ಅದನ್ನು ಗೋಪ್ಯವಾಗಿರಿಸುವನೋ ಅವನ ಹೃದಯ ಪಾಪದಿಂದ ಕೂಡಿರುತ್ತದೆ.

**(2:284)**

وَإِذَا قُلْتُمْ فَاعْدِلُوا وَلَوْ كَانَ ذَا قُرْبَىٰ

ಮಾತನಾಡುವಾಗ ನೀವು ಸತ್ಯ ಹಾಗೂ ನ್ಯಾಯದಿಂದ ಮಾತನಾಡಿರಿ. ನಿಮ್ಮ ಬಂಧುಗಳಿಗೆ ವಿರುದ್ಧವಾಗಿ ಹೇಳಬೇಕಾದರೂ ಸರಿ. **(6:153)**

كُونُوا قَوَّامِينَ بِالْقِسْطِ شُهَدَاءَ لِلَّهِ

وَلَوْ عَلَىٰ أَنفُسِكُمْ أَوِ الْوَالِدَيْنِ وَالْأَقْرَبِينَ

ನೀವು ಸತ್ಯ ಮತ್ತು ನ್ಯಾಯವನ್ನು ಬಿಗಿಯಾಗಿ ಹಿಡಿಯಿರಿ; ನಿಮ್ಮ ಸಾಕ್ಷ್ಯ ದೇವನಿಗಾಗಿರಲಿ. ಸತ್ಯ ಹೇಳುವ ಮೂಲಕ ನಿಮಗೆ ಜೀವಹಾನಿ ಉಂಟಾಗುವುದಾದರೂ ಅಥವಾ ನಿಮ್ಮ ಮಾತಾಪಿತರಿಗೆ ಕೇಡು ಉಂಟಾಗುವುದಾದರೂ ಅಥವಾ ಮಕ್ಕಳು ಮುಂತಾದ ನಿಕಟ ಬಂಧುಗಳಿಗೆ ನಷ್ಟ ಉಂಟಾಗುವುದಾದರೂ ಸುಳ್ಳು ನುಡಿಯಬಾರದು. **(4:136)**

وَلَا يَجْرِمَنَّكُمْ شَنَآنُ قَوْمٍ عَلَىٰ أَلَّا تَعْدِلُوا

ಯಾವುದಾದರೂ ಜನತೆಯ ವಿರೋಧವು ನಿಮ್ಮನ್ನು ಸತ್ಯವಿರುದ್ಧವಾಗಿ ವರ್ತಿಸಲು ಪ್ರೇರೇಪಿಸದಿರಲಿ. **(5:9)**

وَالصَّادِقِينَ وَالصَّادِقَاتِ

ಸತ್ಯವಂತರಿಗೂ ಸತ್ಯವತಿಯರಿಗೂ ಮಹತ್ತಾದ ಪ್ರತಿಫಲ ಲಭಿಸುವುದು. **(33:36)**

وَتَوَاصَوْا بِالْحَقِّ وَتَوَاصَوْا بِالصَّبْرِ

ಅವರು ಸತ್ಯ ಹಾಗೂ ಸಹನೆಯ ಕುರಿತು ಅನ್ಯೋನ್ಯ ಉಪದೇಶಿಸುತ್ತಾರೆ. **(103:4)**

لَا يَشْهَدُونَ الزُّورَ

ಅವರು ಅಸತ್ಯವಂತರ ಮಧ್ಯದಲ್ಲಿ ಕುಳಿತುಕೊಳ್ಳುವುದಿಲ್ಲ. **(25:73)**

## ಸಹನೆ

ಮನುಷ್ಯನ ಸಹಜಗುಣಗಳ ಪೈಕಿ ಇನ್ನೊಂದು ಗುಣವು **'ಸಬ್‌ರ್'** (صبر) ಅಥವಾ ಸಹನೆಯಾಗಿದೆ. ಪ್ರತಿಯೊಬ್ಬನೂ ತನ್ನ ಜೀವನಯಾತ್ರೆಯಲ್ಲಿ ಎದುರಾಗುವ

ಆಪತ್ತುಗಳನ್ನೂ ರೋಗಪೀಡನೆಗಳನ್ನೂ ದುಃಖಗಳನ್ನೂ ಸಹಿಸಬೇಕಾಗುತ್ತದೆ. ಸಾಮಾನ್ಯವಾಗಿ ಅಂತಹ ಸಂದರ್ಭಗಳಲ್ಲಿ ಅವನು ಬೇಸರಗೊಳ್ಳುತ್ತಲೂ ಖಿನ್ನನಾಗಿಯೂ ಕೊನೆಗೆ ಸಹನೆಯನ್ನು ಕೈಗೊಂಡು ಶಾಂತಮನಸ್ಕನಾಗುತ್ತಾನೆ. ಆದರೆ ಈ ತರದ ಸಹನೆಯನ್ನು ಪವಿತ್ರ ಗ್ರಂಥವಾದ ಖುರ್‌ಆನ್ ಒಂದು ಉತ್ಕೃಷ್ಟ ಸ್ವಭಾವವೆಂದು ಪರಿಗಣಿಸುವುದಿಲ್ಲ. ಬದಲಾಗಿ, ಅದು ದಣಿದ ಫಲವಾಗಿ ತನ್ನಷ್ಟಕ್ಕೆ ಉಂಟಾಗುವ ಒಂದು ಸ್ವಾಭಾವಿಕ ಅವಸ್ಥೆಯೆಂದು ತಿಳಿಸಿಕೊಡುತ್ತದೆ. ಆಪತ್ತು ಬಂದೆರಗಿದಾಗ ಮನನೊಂದು ಅಳುವುದು, ತಲೆ – ಎದೆ ಬಡಿದುಕೊಳ್ಳುವುದು, ಹಾಗೆ ದುಃಖಾತಿರೇಖ ಉಚ್ಚಮಟ್ಟಕ್ಕೆ ತಲುಪಿದ ನಂತರ ಕೊನೆಗೆ ತನ್ನಷ್ಟಕ್ಕೆ ತಾನೆ ಶಾಂತಗೊಳ್ಳುವುದು ಮನುಷ್ಯ ಪ್ರಕೃತಿಯಾಗಿದೆ. ಈ ಎರಡು ಸ್ಥಿತಿಗಳು ಉದ್ವೇಗಭರಿತ ಶಾರೀರಿಕಾವಸ್ಥೆಗಳಾಗಿರುವುದರಿಂದ ಅವುಗಳಿಗೆ ಸದ್ಗುಣದೊಂದಿಗೆ ಯಾವುದೇ ಸಂಬಂಧವಿಲ್ಲ. ಆದರೆ, ಒಬ್ಬನು ತನ್ನ ಯಾವುದಾದರೂ ವಸ್ತು ನಷ್ಟವಾಗುವಾಗ, ಅದು ಪರಮಾತ್ಮನು ತನಗೆ ನೀಡಿದ ವಿಶ್ವಸ್ತ ವಸ್ತುವೆಂದು ಭಾವಿಸುತ್ತಾ ಅತೃಪ್ತಿ ಸೂಚಿಸದೆ, ಪರಮಾತ್ಮನು ಅದನ್ನು ಹಿಂದಕ್ಕೆ ಪಡೆದುದರಿಂದ ಅವನ ಇಚ್ಛೆಗೆ ತಾನು ಶಿರಬಾಗುವೆನೆಂದು ಹೇಳಿ ಸಮಾಧಾನಪಟ್ಟುಕೊಳ್ಳುವುದು ನೈತಿಕಗುಣಗಳಲ್ಲಿ ಒಳಪಡುವ ಸಹನೆಯಾಗಿದೆ. ಈ ಸದ್ಗುಣದ ಬಗ್ಗೆ ಪವಿತ್ರ ಖುರ್‌ಆನ್ ನೀಡುವ ಉಪದೇಶ ಇದಾಗಿದೆ:

وَلَنَبْلُوَنَّكُمْ بِشَيْءٍ مِّنَ الْخَوْفِ وَالْجُوعِ وَنَقْصٍ مِّنَ الْأَمْوَالِ وَالْأَنفُسِ وَالثَّمَرَاتِ ۗ وَبَشِّرِ الصَّابِرِينَ - الَّذِينَ إِذَا أَصَابَتْهُم مُّصِيبَةٌ قَالُوا إِنَّا لِلَّهِ وَإِنَّا إِلَيْهِ رَاجِعُونَ - أُولَٰئِكَ عَلَيْهِمْ صَلَوَاتٌ مِّن رَّبِّهِمْ وَرَحْمَةٌ ۖ وَأُولَٰئِكَ هُمُ الْمُهْتَدُونَ

ಸತ್ಯವಿಶ್ವಾಸಿಗಳೇ, ನಾವು ನಿಮ್ಮನ್ನು ಭಯಭೀತಿಯ ಅನುಭವಗಳಿಂದಲೂ ಹಸಿವು ಮತ್ತು ದಾರಿದ್ರ್ಯದ ಮೂಲಕವೂ ಧನನಾಶದಿಂದಲೂ ಜೀವಾಪಾಯದಿಂದಲೂ ಪರಿಶ್ರಮದ ವಿಫಲತೆಯಿಂದಲೂ ಉದ್ದೇಶಿತ ಕಾರ್ಯಗಳು ಸಿದ್ಧಿಸಲಾರದೆಯೂ ಸಂತಾನ ನಷ್ಟದಿಂದಲೂ ಪರೀಕ್ಷೆ ಗೊಳಪಡಿಸುವೆವು. ಆಪತ್ತು ಬಂದೊದಗಿದ ಸಂದರ್ಭಗಳಲ್ಲಿ 'ನಾವು ದೇವನ ಅಧೀನದಲ್ಲಿದ್ದೇವೆ; ಅವನ ಬಳಿಗೆಯೇ ಹಿಂತೆರಳುವವರಾಗಿದ್ದೇವೆ' ಎಂದು ಹೇಳುವ ಸಹನಶೀಲರಿಗೆ ಶುಭವಾರ್ತೆಯನ್ನು ಅರುಹು. ಅವರ ಮೇಲೆ ಅಲ್ಲಾಹನ ಅನುಗ್ರಹ ಮತ್ತು ಕಾರುಣ್ಯವಿದೆ; ದೇವನ ಮಾರ್ಗವನ್ನು ಪಡೆದವರು ಅವರೇ ಆಗಿದ್ದಾರೆ. **(2:156, 157, 158)**

ಸಂಕ್ಷಿಪ್ತವಾಗಿ, ಈ ರೀತಿಯ ಸ್ವಭಾವಕ್ಕೆ ಸಹನಶೀಲತೆಯೆಂದು ಹೇಳುತ್ತಾರೆ. ಇದನ್ನೇ ದೇವೇಚ್ಛೆಗೆ ವಿಧೇಯನಾಗುವುದೆಂದು ಹೇಳುವುದು. ಇನ್ನೊಂದು ರೀತಿಯಲ್ಲಿ ಈ ಸದ್ಗುಣವನ್ನು ನ್ಯಾಯವಾದ ನಡತೆ ಎಂದು ಹೇಳಬಹುದು. ಮನುಷ್ಯನ ಜೀವಿತಕಾಲವೆಲ್ಲ ಹಿತಕಾರ್ಯವನ್ನು ಮಾಡಿಕೊಟ್ಟು, ಅವನ ಇಷ್ಟ ಪ್ರಕಾರ ಸಹಸ್ರಾರು ಕಾರ್ಯಗಳನ್ನು ಪ್ರಕಟಪಡಿಸಿ, ಅವನಿಗೆ ಲೆಕ್ಕಮಾಡಲು ಅಸಾಧ್ಯವಾದಷ್ಟು ಅನುಗ್ರಹಗಳನ್ನು ನೀಡಿರುವ ಸರ್ವಾಧಿನಾಥನಾದ ಪರಮಾತ್ಮನು ತನ್ನ ಇಷ್ಟವನ್ನು ಅನುಸರಿಸುವಂತೆ ಮಾಡಲು ಇಚ್ಛಿಸುವಾಗ ಮನುಷ್ಯನು ವಿಮುಖನಾಗಿ ದೇವೇಚ್ಛೆಗೆ ವಿಧೇಯನಾಗದೆ ಗೊಣಗುಟ್ಟುತ್ತಾ ಅತೃಪ್ತಿಯನ್ನು ತೋರಿಸಿ ಮಾರ್ಗಭ್ರಂಶನಾಗಲು ತೊಡಗುವುದು ನ್ಯಾಯ ವಿರುದ್ಧವಾದ ನಡತೆಯಾಗುತ್ತದೆ.

## ಸಹಾನುಭೂತಿ

ಮನುಷ್ಯ ಸ್ವಭಾವದಲ್ಲಿ ಅವಿಭಾಜ್ಯವೆಂಬಂತೆ ಅಂತರ್ಲೀನವಾಗಿರುವ ಮತ್ತೊಂದು ಗುಣ ಸಹಜೀವಿಗಳೊಡನೆ ಆತನ ಸಹತಾಪ ಅಥವಾ ಸಹಾನುಭೂತಿಯಾಗಿದೆ. ಸ್ವಜಾತಿ ಸ್ನೇಹವೆಂಬ ಮನೋಭಾವನೆ ಸಹಜವಾಗಿಯೇ ಸರ್ವ ಜಾತಿ ಮತಸ್ಥರಲ್ಲೂ ಕಾಣಬಹುದು. ಕೆಲವರಂತೂ ತಮ್ಮ ಜಾತಿಯವರಿಗೆ ಸಹಾಯ ಮಾಡುವ ಅತ್ಯುತ್ಸಾಹದಿಂದ ಸಹಜ ಪ್ರೇರಣೆಗೊಳಗಾಗಿ ಇತರ ಜಾತಿಯವರೊಡನೆ, ಅವರು ಮನುಷ್ಯರೇ ಅಲ್ಲವೆಂಬ ರೀತಿಯಲ್ಲಿ, ಅನ್ಯಾಯದಿಂದಲೂ ಅನೀತಿಯಿಂದಲೂ ವರ್ತಿಸುವುದಿದೆ. ಈ ಸ್ವಭಾವವನ್ನು ಒಂದು ಸದ್ಗುಣವೆಂದು ಪರಿಗಣಿಸಲಾಗದು. ಬದಲಾಗಿ, ಅದು ಕೇವಲ ಒಂದು ಪ್ರಕೃತಿಸಿದ್ಧ ಸ್ವಭಾವವಾಗಿದೆ. ಈ ಸ್ವಭಾವವನ್ನು ಕಾಗೆ ಮೊದಲಾದ ಪಕ್ಷಿಗಳಲ್ಲಿಯೂ ಕಾಣಬಹುದಾಗಿದೆ. ಒಂದು ಕಾಗೆ ಸತ್ತರೆ ಸಾವಿರಾರು ಕಾಗೆಗಳು ಬಂದು ಸೇರುತ್ತವೆ. ಮನುಷ್ಯನು ತನ್ನ ಈ ಸ್ವಭಾವವನ್ನು ನೀತಿ ಮತ್ತು ನ್ಯಾಯಕ್ಕೆ ಅನುಗುಣವಾಗಿ ಸಂದರ್ಭೋಚಿತವಾಗಿ ಪ್ರದರ್ಶಿಸುವಾಗ ಮಾತ್ರ ಅದು ಸದ್ಗುಣವೆಂದು ಪರಿಗಣಿಸಲ್ಪಡುತ್ತದೆ. ಈ ಮಹತ್ತಾದ ಸಹಾನುಭೂತಿ ಎಂಬ ಸದ್ಗುಣವನ್ನು ಅರಬಿ ಭಾಷೆಯಲ್ಲಿ 'ಮುವಾಸಾತ್' (مواسات) ಎಂದೂ ಫಾರ್ಸಿ ಭಾಷೆಯಲ್ಲಿ 'ಹಮ್‌ದರ್ದಿ' ಎಂದೂ ಹೇಳುತ್ತಾರೆ. ಈ ವಿಷಯದಲ್ಲಿ ಖುರ್‌ಆನಿನಲ್ಲಿ ಹೀಗೆ ಹೇಳಲಾಗಿದೆ:

تَعَاوَنُوا عَلَى الْبِرِّ وَالتَّقْوٰى وَلَا تَعَاوَنُوا عَلَى الْإِثْمِ وَالْعُدْوَانِ

ನೀವು ನಿಮ್ಮ ಜನತೆಗೆ ತೋರಿಸುವ ಸಹತಾಪ ಮತ್ತು ನೀಡುವ ಸಹಾಯ ನ್ಯಾಯಯುತವೂ ನೀತಿಯುತವೂ ಆಗಿರಲಿ; ದುಷ್ಕರ್ಮ ಮತ್ತು ಅನ್ಯಾಯಗಳಲ್ಲಿ

ನೀವು ಅವರಿಗೆ ನೆರವಾಗದಿರಲಿ. **(5:3)**

وَلَا تَهِنُوا فِي ابْتِغَاءِ الْقَوْمِ

ನಿಮ್ಮ ಸಮುದಾಯದೊಡನೆ ಸಹತಾಪ ತೋರಿಸುವುದರಲ್ಲಿ ಉದಾಸೀನರಾಗದಿರಿ. **(4:105)**

وَلَا تَكُن لِّلْخَآئِنِينَ خَصِيمًا

ಮೋಸಗಾರರ ಪಕ್ಷವನ್ನು ವಹಿಸಿ ತರ್ಕಿಸಬೇಡಿರಿ. **(4:106)**

وَلَا تُجَادِلْ عَنِ الَّذِينَ يَخْتَانُونَ أَنفُسَهُمْ

إِنَّ اللهَ لَا يُحِبُّ مَن كَانَ خَوَّانًا أَثِيمًا

ಅನ್ಯೋನ್ಯ ವಿಶ್ವಾಸವಂಚನೆ ಮಾಡುವವರ ಪರವಾಗಿ ವಾದಿಸಬೇಡಿರಿ; ಖಂಡಿತವಾಗಿಯೂ ದೇವನು ವಂಚಕರನ್ನೂ ಪಾಪಿಗಳನ್ನೂ ಪ್ರೀತಿಸುವುದಿಲ್ಲ. **(4:108)**

## ದೇವನ ಅಸ್ತಿತ್ವದ ಅನ್ವೇಷಣೆ

ಮನುಷ್ಯ ಪ್ರಕೃತಿಯಲ್ಲಿ ಲೀನವಾಗಿರುವ ಮತ್ತೊಂದು ಸಹಜ ಗುಣ ಸರ್ವಶಕ್ತವಾದ ಒಂದು ಅಸ್ತಿತ್ವದ ಕುರಿತಾದ ಅನ್ವೇಷಣೆಯಾಗಿದೆ. ಆ ಪರಮಾರ್ಥ ಶಕ್ತಿಯ ಕಡೆಗೆ ಮನುಷ್ಯನನ್ನು ಪ್ರೇರೇಪಿಸುವ ಒಂದು ಆಕರ್ಷಣಶಕ್ತಿ ಹೃದಯಾಂತರಾಳದಲ್ಲಿ ನಿಕ್ಷಿಪ್ತವಾಗಿರುತ್ತದೆ. ಈ ಆಕರ್ಷಣೆ ಅಥವಾ ಅನ್ವೇಷಣ ಬುದ್ಧಿಯ ಕುರುಹು ಶಿಶುವಿನಲ್ಲಿ ಅದರ ಜನನದೊಂದಿಗೆಯೇ ತೋರಿಬರುತ್ತದೆ. ಜನಿಸಿದ ಕೂಡಲೇ ಮಗು ಅದರ ಜನ್ಮಸಿದ್ಧ ಗುಣದಿಂದ ಪ್ರೇರಿತವಾಗಿ ತಾಯಿಯ ಕಡೆಗೆ ತಿರುಗುತ್ತದೆ. ನೈಸರ್ಗಿಕವಾಗಿ ಅದಕ್ಕೆ ತಾಯಿಯೊಡನೆ ವಿಶಿಷ್ಟ ರೀತಿಯ ಪ್ರೀತಿ ಇರುವುದಾಗಿ ಕಾಣಬಹುದು. ಆದರೆ ಜ್ಞಾನೇಂದ್ರಿಯಗಳು ವಿಕಾಸಗೊಂಡಂತೆಯೇ ಈ ಸಹಜ ಗುಣವು ಪೂರ್ವಾಧಿಕ ಪ್ರಕಾಶಗೊಳ್ಳುತ್ತದೆ. ಕೊನೆಗೆ, ಅಂತರ್ಲೀನವಾಗಿರುವ ಈ ಸ್ನೇಹಶಕ್ತಿ ಸ್ಪಷ್ಟವಾಗಿ ಪ್ರಕಟಗೊಳ್ಳುತ್ತದೆ. ಆಗ ತನ್ನ ತಾಯಿಯ ಮಡಿಲಲ್ಲಿ ಹೊರತು ಬೇರೆಲ್ಲೂ ಅದು ಸ್ವಸ್ಥವಾಗಿರುವುದಿಲ್ಲ. ಮಾತೆಯ ಸ್ನೇಹಭರಿತ ಲಾಲನೆ ಪಾಲನೆಯಲ್ಲಿ ಮಾತ್ರ ಅದು ಪೂರ್ಣವಾದ ಸುಖವನ್ನು ಪಡೆಯುತ್ತದೆ. ತಾಯಿಯಿಂದ ಬೇರ್ಪಡಿಸುವುದಾದರೆ ಅದರ ಸುಖ ಸಂತೋಷಗಳೆಲ್ಲ ಸಂತಾಪಗಳಾಗಿ ಮಾರ್ಪಡುತ್ತವೆ. ಯಾವ

ರೀತಿಯಲ್ಲಿ ಸಾಂತ್ವನಪಡಿಸಿದರೂ ಮಗುವಿನ ಈ ದುಃಖ ನಿವಾರಿಸಲ್ಪಡುವುದಿಲ್ಲ. ತಾಯಿಯ ಮಡಿಲಿನ ಹೊರತು ಬೇರೆಲ್ಲೂ ಅದಕ್ಕೆ ನಿಜವಾದ ನೆಮ್ಮದಿ ಸಿಗುವುದಿಲ್ಲ. ಈ ರೀತಿಯಲ್ಲಿ ಶಿಶುವನ್ನು ತಾಯಿಯ ಸಮೀಪಕ್ಕೆ ಎಳೆದುಕೊಂಡು ಹೋಗುವ ಆಕರ್ಷಣ ಶಕ್ತಿ ಏನಾಗಿರಬಹುದು? ಅದು ಯಥಾರ್ಥ ಭಕ್ತಿ ಮತ್ತು ಆರಾಧನೆಗೆ ಅರ್ಹನಾದ ಸೃಷ್ಟಿಕರ್ತನ ಕಡೆಗೆ ಮನುಷ್ಯನನ್ನು ತಿರುಗಿಸಲಿಕ್ಕಾಗಿ ಶಿಶುಪ್ರಕೃತಿಯಲ್ಲಿ ನಿಕ್ಷಿಪ್ತವಾಗಿರುವ ಸ್ನೇಹಶಕ್ತಿಯಲ್ಲದೆ ಬೇರೇನೂ ಅಲ್ಲ. ಮನುಷ್ಯನು ಸ್ನೇಹವನ್ನು ತೋರ್ಪಡಿಸುವಾಗಲೆಲ್ಲ ಈ ಆಕರ್ಷಣ ಶಕ್ತಿಯೇ ಅವನಲ್ಲಿ ಪ್ರವರ್ತಿಸುತ್ತದೆ. ಅವನು ಯಾವುದೇ ಬಾಹ್ಯ ವಸ್ತುವಿನ ಮೇಲೆ ಪ್ರೀತಿಯನ್ನು ತೋರಿಸುವುದಾದರೂ ಈ ಆಕರ್ಷಣ ಶಕ್ತಿಯೇ ಪ್ರತಿಫಲಿಸುತ್ತದೆ. ಹೀಗೆ ಅವನು ಬಾಹ್ಯ ವಸ್ತುಗಳಲ್ಲಿ ಪ್ರೀತಿ ತೋರಿಸುವುದು ಪರಮಾರ್ಥವಾದ ಲಕ್ಷ್ಯವಸ್ತುವನ್ನು ಹುಡುಕುವ ಆ ಸ್ವಾಭಾವಿಕ ಪ್ರಜ್ಞೆಯಿಂದ ಪ್ರೇರಿತವಾಗಿದೆಯೆಂದು ಹೇಳಬಹುದು. ಕಳೆದು ಹೋದ ಹಾಗೂ ಹೆಸರು ಕೂಡ ಮರೆತು ಹೋದ ಒಂದು ವಸ್ತುವನ್ನು ಓರ್ವನು ತನ್ನ ದೃಷ್ಟಿಗೆ ಬೀಳುವ ಪ್ರತಿಯೊಂದು ವಸ್ತುವಿನಲ್ಲೂ ಹುಡುಕುವಂತೆ ಮನುಷ್ಯನು ಬಾಹ್ಯ ವಸ್ತುಗಳಲ್ಲೆಲ್ಲ ತನ್ನ ಲಕ್ಷ್ಯವನ್ನು ಹುಡುಕುತ್ತಾನೆ. ಅವನಿಗೆ ಧನ, ಸಂತಾನ ಮತ್ತು ಪತ್ನಿಯ ಮೇಲಿನ ಪ್ರೀತಿಯೂ ಮಧುರ ಗಾನದ ಮೇಲಿರುವ ಅಭಿರುಚಿ ಎಲ್ಲವೂ ಅಜ್ಞಾತವಾದ ಆ ಪ್ರಿಯನಿಗೆ ಸಂಬಂಧಿಸಿದ ಅನ್ವೇಷಣೆಯನ್ನು ಸೂಚಿಸುತ್ತದೆ. ಸರ್ವವಸ್ತುಗಳಲ್ಲೂ, ಶಾಖದ (ಅಗ್ನಿ) ಹಾಗೆ, ಪರೋಕ್ಷವಾಗಿ ಅಸ್ತಿತ್ವದಲ್ಲಿರುವ ಅತ್ಯಂತ ಸೂಕ್ಷ್ಮ ಹಾಗೂ ನಿಗೂಢವಾಗಿರುವ ಆ ಸರ್ವಾತ್ಮಕ ಶಕ್ತಿಯನ್ನು ಮನುಷ್ಯನ ಬಾಹ್ಯ ದೃಷ್ಟಿಗೆ ಕಾಣಲಿಕ್ಕೋ ಅಪೂರ್ಣವಾದ ಬುದ್ಧಿಶಕ್ತಿಗೆ ಅರಿಯಲಿಕ್ಕೋ ಸಾಧ್ಯವಿಲ್ಲ. ಆದುದರಿಂದ ಆ ಶಕ್ತಿಯನ್ನು ಗುರುತಿಸುವ ವಿಷಯದಲ್ಲಿ ಮನುಷ್ಯನಿಂದ ಅನೇಕ ಮಹಾ ತಪ್ಪುಗಳುಂಟಾಗಿವೆ. ಈ ಅಬದ್ಧತೆಗಳಿಂದ, ನಿರಾಕಾರನಾದ ಸೃಷ್ಟಿಕರ್ತನಿಗೆ ಮಾತ್ರ ಸಲ್ಲಬೇಕಾದ ಭಕ್ತಿಭಾವಗಳು ಅವನ ಸೃಷ್ಟಿಗಳಿಗೆ ಅರ್ಪಿಸಲ್ಪಟ್ಟವು. ಈ ಪ್ರಮಾದವನ್ನು ಪವಿತ್ರ ಖುರ್‌ಆನ್ ದೃಷ್ಟಾಂತ ರೂಪದಲ್ಲಿ ಬಹಳ ಉತ್ತಮವಾಗಿ ವಿವರಿಸಿದೆ. ಅದು ಈ ಪ್ರಪಂಚವನ್ನು, ಕೆಳಭಾಗದಲ್ಲಿ ಶುಭ್ರವಾದ ಕನ್ನಡಿಯನ್ನು ಹಾಸಿದ ಹಾಗೂ ಅದರ ಅಡಿಭಾಗದಲ್ಲಿ ತೀವ್ರವಾಗಿ ನೀರು ಹರಿಯುತ್ತಿರುವ ಒಂದು ಗಾಜಿನ ಭವನಕ್ಕೆ ಹೋಲಿಸಿದೆ. ಹಾಸಿದ ಪಾರದರ್ಶಕ ಕನ್ನಡಿಯ ಮೇಲೆ ಬಿದ್ದ ದೃಷ್ಟಿ ಅದನ್ನೇ ನೀರೆಂದು ಭ್ರಮಿಸಿ, ಮನುಷ್ಯನು ನೀರಿನಲ್ಲಿ ನಡೆಯಲು ಹೆದರುವಂತೆ ಈ ಕನ್ನಡಿಯ ಮೇಲೆ ನಡೆಯಲು ಹೆದರುತ್ತಾನೆ. ಆದರೆ ವಸ್ತುತಃ ಅದು ಕೆಳಭಾಗದಲ್ಲಿರುವ ಜಲವನ್ನು ತೋರಿಸುವ ಸ್ವಚ್ಛ ಪಾರದರ್ಶಕ ಕನ್ನಡಿ ಮಾತ್ರವಾಗಿದೆ. ಇದೇ ಪ್ರಕಾರ, ಆಕಾಶದಲ್ಲಿ ನಾವು

ಕಾಣುವ ಸೂರ್ಯ, ಚಂದ್ರಾದಿಗಳ ಹಿಂದೆ ಪ್ರವರ್ತಿಸುತ್ತಿರುವ ಆ ಸರ್ವೋತ್ಕೃಷ್ಟ ಶಕ್ತಿಯ ಇರುವಿಕೆಯನ್ನು ಸ್ಪಷ್ಟಪಡಿಸುವಂಥದ್ದಾಗಿವೆ. ಸ್ವಚ್ಛ ಪಾರದರ್ಶಕ ಕನ್ನಡಿಯನ್ನು ನೋಡಿ ನೀರೆಂದು ಭ್ರಮಿಸಿದಂತೆ ಮನುಷ್ಯನ ದೋಷಯುತ ವಿವೇಚನಾ ಶಕ್ತಿ ಈ ಆಕಾಶಕಾಯಗಳನ್ನೇ ಆ ಮಹಾ ಶಕ್ತಿಯೆಂದು ಭ್ರಮಿಸಿ ಆರಾಧಿಸಲು ತೊಡಗಿತು. ಈ ಸಂಗತಿಯನ್ನು ಪವಿತ್ರ ಖುರ್‌ಆನ್ ಹೀಗೆ ವಿವರಿಸುತ್ತದೆ:

إِنَّهُ صَرْحٌ مُّمَرَّدٌ مِّن قَوَارِيرَ

ಇದು (ನೀನು ಭ್ರಮಿಸಿದಂತೆ ನೀರಲ್ಲ) ಶುಭ್ರ ಪಾರದರ್ಶಕ ಕನ್ನಡಿ ಹಾಸಲಾದ ಅರಮನೆಯಾಗಿದೆ. **(27:45)**

ಸಂಕ್ಷಿಪ್ತವಾಗಿ ಹೇಳುವುದಾದರೆ, ದೇವನು ಸ್ವಯಂ ಪ್ರಕಾಶಪೂರ್ಣನಾಗಿದ್ದರೂ ಅತ್ಯಂತ ನಿಗೂಢ ಹಾಗೂ ಅವ್ಯಕ್ತನಾಗಿದ್ದಾನೆ. ಆ ಸರ್ವಾಧಿನಾಥನಿಗೆ ಸಂಬಂಧಿಸಿ ಸರಿಯಾದ ಜ್ಞಾನ ಪಡೆಯಲು ಈ ಸ್ಥೂಲ ಪ್ರಪಂಚದಲ್ಲಿ ಗೋಚರಿಸುವ ವ್ಯವಸ್ಥೆ ಮಾತ್ರವೇ ಪರ್ಯಾಪ್ತವಲ್ಲ. ಆದ್ದರಿಂದಲೇ ಈ ಬಾಹ್ಯ ಪ್ರಪಂಚದ ವ್ಯವಸ್ಥೆಯನ್ನು ಅವಲಂಬಿಸಿ ಚಿಂತನ ಮಾಡಿದವರಿಗೆ ಎಲ್ಲೆಡೆಯಲ್ಲೂ ಸುವ್ಯವಸ್ಥೆಯನ್ನೂ ಕ್ರಮಬದ್ಧತೆ ಯನ್ನೂ ಪ್ರಕೃತಿಯ ಅನೇಕ ಅದ್ಭುತಗಳನ್ನೂ ಕಂಡು ಆನಂದಿಸಲಿಕ್ಕೂ ಆಕಾಶದಲ್ಲೂ ಭೂಮಿಯಲ್ಲೂ ಸೂಕ್ಷ್ಮಾವಲೋಕನ ಮಾಡಿ ಪ್ರಕೃತಿಶಾಸ್ತ್ರ, ಖಗೋಳಶಾಸ್ತ್ರ, ತತ್ವಜ್ಞಾನ ಎಂಬಿತ್ಯಾದಿಗಳಲ್ಲಿ ನಿಪುಣತೆಯನ್ನು ಪಡೆಯಲಿಕ್ಕೂ ಸಾಧ್ಯವಾಗಿದೆ ಹೊರತು ಅನೇಕ ವಿಸ್ಮಯಗಳನ್ನು ಒಳಗೊಂಡಿರುವ ಈ ವಿಶ್ವಕ್ಕೆ ಸೃಷ್ಟಿಕರ್ತನೂ ರಕ್ಷಕನೂ ಆಗಿರುವ ಒಬ್ಬ ದೇವನಿದ್ದಾನೆಂಬ ದೃಢವಾದ ಜ್ಞಾನ ಪಡೆಯಲು ಸಾಧ್ಯವಾಗಲಿಲ್ಲ. ಅವರಿಗೆ ದೇವನ ಅಸ್ತಿತ್ವಕ್ಕೆ ಸಂಬಂಧಿಸಿದ ಅಂಧಕಾರಮಯ ಸಂದೇಹಗಳಿಂದ ಮುಕ್ತರಾಗಲಿಕ್ಕೆ ಅಸಾಧ್ಯವಾಯಿತು. ಅವರ ಪೈಕಿ ಹೆಚ್ಚಿನವರು ಹಲವು ತಪ್ಪು ಕಲ್ಪನೆಗಳಿಗೆ ಗುರಿಯಾಗಿ ನಿರರ್ಥಕವಾದ ಊಹಾಪೋಹಗಳಲ್ಲಿ ಸಿಲುಕಿಕೊಂಡರು. ಸೃಷ್ಟಿಕರ್ತನಿಗೆ ಸಂಬಂಧಿಸಿದ ಅನ್ವೇಷಣೆಯಲ್ಲಿ ಅವರ ವಿಜ್ಞಾನ ಅವರಿಗೆ ಯಾವ ವಿಧದಲ್ಲಾದರೂ ಸಹಾಯಕವಾಗಿದ್ದರೆ, ಈ ಪರಿಪೂರ್ಣವೂ ಉತ್ಕೃಷ್ಟವೂ ಆದ ಪ್ರಕೃತಿ ವ್ಯವಸ್ಥೆಯನ್ನು ವೀಕ್ಷಿಸಿದಾಗ ಈ ಸುವ್ಯವಸ್ಥಿತವಾದ ಬ್ರಹ್ಮಾಂಡ ಕ್ರಮಕ್ಕೆ ಖಂಡಿತವಾಗಿಯೂ ಒಬ್ಬ ಸೃಷ್ಟಿಕರ್ತನು ಇರಬೇಕೆಂಬ ಒಂದು ಅನುಮಾನಕ್ಕೆ ಅವರು ತಲಪುವಷ್ಟರ ಮಟ್ಟಿಗೆ ಮಾತ್ರ ಅದು ಸೀಮಿತವಾಗಿದೆ. ವಾಸ್ತವದಲ್ಲಿ ಈ ಅರಿವು ದೇವನ ಅಸ್ತಿತ್ವದ ಬಗ್ಗೆ ಅಪೂರ್ಣವೂ ಅಪಕ್ವವೂ ಆದ ಜ್ಞಾನವಾಗಿದೆ. ಏಕೆಂದರೆ ವಿಸ್ಮಯಕರವಾದ ವ್ಯವಸ್ಥೆಯಿಂದ ಕೂಡಿದ ಈ ಪ್ರಪಂಚಕ್ಕೆ ಒಬ್ಬ ಕರ್ತನಿರಬೇಕೆಂಬ

ಅನುಮಾನಕ್ಕೂ ಯಥಾರ್ಥದಲ್ಲಿ ಅವನಿದ್ದಾನೆಂಬ ದೃಢಜ್ಞಾನಕ್ಕೂ ತಮ್ಮೊಳಗೆ ಬಹಳ ಅಂತರವಿದೆ. ಊಹಾತ್ಮಕ ಜ್ಞಾನವಾದರೋ ಮನಸ್ಸಿಗೆ ಸರಿಯಾದ ಸಮಾಧಾನ ಮತ್ತು ಸಂತೃಪ್ತಿಯನ್ನು ನೀಡಲಿಕ್ಕೋ, ಸಂದೇಹಗಳನ್ನು ಸಂಪೂರ್ಣ ದೂರೀಕರಿಸಲಿಕ್ಕೋ ಶಕ್ತವಲ್ಲ. ದೇವನಿಗೆ ಸಂಬಂಧಿಸಿ ಪರಿಪೂರ್ಣವೂ ಪರಮಾರ್ಥವೂ ಆದ ಜ್ಞಾನಲಬ್ಧಿಗಾಗಿ ಮನುಷ್ಯನ ಸ್ವಾಭಾವಿಕವಾಗಿರುವ ದಾಹವನ್ನು ಶಮನಗೊಳಿಸಲಿಕ್ಕೋ ಈ ವಿಷಯದಲ್ಲಿ ಅವನಲ್ಲುಂಟಾಗುವ ಸಂಶಯಗಳನ್ನು ನೀಗಿಸಲಿಕ್ಕೋ ಅದು ಯೋಗ್ಯವಾದ ಪಾನೀಯವಲ್ಲ. ಪ್ರಕೃತಿಯ ಅಧ್ಯಯನದಿಂದುಂಟಾಗುವ ಆ ಅಪಕ್ವಜ್ಞಾನ ನ್ಯೂನತೆಯನ್ನು ಹೊಂದಿದ್ದು ಅಪಾಯಕಾರಿಯಾಗಿಯೂ ಆಗಿದೆ. ಏಕೆಂದರೆ ಅದರಲ್ಲಿ ಸಾರಯುಕ್ತ ತಥ್ಯಕ್ಕಿಂತ ವಿತರ್ಕಗಳೇ ಹೆಚ್ಚು.

## ಪರಮಾತ್ಮನ ವಚನಾಮೃತ

ಪ್ರಕೃತಿಯಲ್ಲಿ ಗೋಚರಿಸಲ್ಪಡುವ ಕಾರ್ಯ ವಿಧಾನಗಳ ಮೂಲಕ ಸರ್ವಶಕ್ತನಾದ ಪರಮಾತ್ಮನು ಯಾವ ರೀತಿ ತನ್ನ ಅಸ್ತಿತ್ವವನ್ನು ಪ್ರಕಟಗೊಳಿಸಿರುವನೋ ಅದೇ ರೀತಿ ತನ್ನ ವಚನಾಮೃತಗಳ ಮೂಲಕವೂ ತನ್ನ ಇರುವಿಕೆಯನ್ನು ಭಕ್ತರಿಗೆ ಅಭಿವ್ಯಕ್ತಿಗೊಳಿಸದಿದ್ದರೆ, ಕೇವಲ ಅವನ ಕರ್ಮಕುಶಲತೆಯನ್ನು ಕಂಡು ವಿಚಾರಯುತ ಆಸ್ತಿಕ ಭಾವನೆಯನ್ನು ಹೊಂದುವುದು ತೃಪ್ತಿಕರವಲ್ಲ. ಉದಾಹರಣೆಗಾಗಿ, ಒಂದು ಕೋಣೆಯ ಬಾಗಿಲುಗಳು ಒಳಗಿನಿಂದ ಮುಚ್ಚಲ್ಪಟ್ಟು ಕಾಣುವ ಪಕ್ಷದಲ್ಲಿ ಅವುಗಳನ್ನು ಒಳಗಿನಿಂದ ಮುಚ್ಚಿದ ಒಬ್ಬ ವ್ಯಕ್ತಿ ಖಂಡಿತ ಅಲ್ಲಿರಬೇಕೆಂದು ನಾವು ಮೊದಲು ಭಾವಿಸುತ್ತೇವೆ. ಕಾರಣವೇನೆಂದರೆ ಒಳಗಿನ ಚಿಲಕ ಹೊರಗಿನಿಂದ ಹಾಕಲು ಸಾಧ್ಯವಿಲ್ಲವಷ್ಟೆ. ಆದರೆ ವರ್ಷಗಳು ಕಳೆದರೂ ಆ ಕೋಣೆಯಿಂದ ಯಾವ ಶಬ್ದವನ್ನೂ ಕೇಳದಿದ್ದರೆ, ಹೊರಗಿನಿಂದ ಪದೇ ಪದೇ ಕರೆದರೂ ಯಾವ ಉತ್ತರವೂ ಲಭಿಸದಿದ್ದರೆ, ಅದರೊಳಗೆ ಯಾರೋ ಇದ್ದಾರೆಂಬ ನಮ್ಮ ಭಾವನೆ ಕ್ರಮೇಣ ಬದಲಾಗುತ್ತದೆ. ಮಾತ್ರವಲ್ಲ, ಅದರೊಳಗೆ ಯಾರೂ ಇಲ್ಲವೆಂದೂ ಅಜ್ಞಾತವಾದ ಯಾವುದೋ ಕಾರಣದಿಂದ ಒಳಗಿನ ಚಿಲಕ ಬಿದ್ದಿರಬೇಕೆಂದೂ ನಾವು ಅಭಿಪ್ರಾಯಪಡುತ್ತೇವೆ. ಈ ಪ್ರಪಂಚದ ಕರ್ತನಾದ ಪರಮಾತ್ಮನ ಅಸ್ತಿತ್ವದ ಕುರಿತಾಗಿ ಕೇವಲ ಪ್ರಕೃತಿಯ ಕರ್ಮ ಕೌಶಲ್ಯವೆಂಬ ಒಂದೇ ವಿಷಯವನ್ನು ಅವಲಂಬಿಸಿ ಅನ್ವೇಷಣೆ ನಡೆಸಿದ ದಾರ್ಶನಿಕರಿಗೂ ಉಂಟಾದ ಅನುಭವ ಇದೇ ಆಗಿದೆ. ಮಹಾಮಹಿಮನೂ ಜೀವಂತನೂ ಆಗಿರುವ ಪರಮಾತ್ಮನನ್ನು, ಅಗೆದು ನೋಡಿದಾಗ ಮಣ್ಣಿನಡಿಯಲ್ಲಿ ಮಾತ್ರ ಕಾಣಬಹುದಾದ ಶವಶರೀರದಂತೆ ತಿಳಿದುಕೊಳ್ಳುವುದು ಭಾರಿ ತಪ್ಪಾಗಿದೆ.

ಪರಮಾತ್ಮನ ಅಸ್ತಿತ್ವ ಲೋಕಕ್ಕೆ ಬಹಿರಂಗವಾಗಬೇಕಾದರೆ ಮನುಷ್ಯನ ಸಹಾಯ ಮತ್ತು ಪ್ರಯತ್ನ ಅಗತ್ಯವೆಂದಾದರೆ ನಾವು ಅವನ ಮೇಲಿಟ್ಟಿರುವ ಆಕಾಂಕ್ಷೆಗಳೆಲ್ಲ ವ್ಯರ್ಥ. ಆದರೆ ಪರಮಾತ್ಮನು ಆದಿಕಾಲದಿಂದಲೇ ತನ್ನ ಸ್ಪಷ್ಟ ಹಾಗೂ ಅನುಗ್ರಹದಾಯಕ ವಚನಗಳ ಮೂಲಕ ತನ್ನ ಇರುವಿಕೆಯನ್ನು ಬಹಿರಂಗಪಡಿಸಿ, ಜನರನ್ನು ತನ್ನೆಡೆಗೆ ಕರೆಯುತ್ತಿದ್ದಾನೆ. ಮನುಷ್ಯನ ಪ್ರಯತ್ನ ಇಲ್ಲದಿರುತ್ತಿದ್ದರೆ ದೇವನ ಇರುವಿಕೆ ಬಗ್ಗೆ ಅವನ ಸೃಷ್ಟಿಗಳು ಅರಿಯುತ್ತಿರಲಿಲ್ಲವೆಂದೋ, ಈ ವಿಷಯದಲ್ಲಿ ಪರಮಾತ್ಮನು ಮನುಷ್ಯನಿಗೆ ಋಣಿಯಾಗಿರುವನೆಂದೋ, ತತ್ವಜ್ಞಾನಿಗಳು ಇಲ್ಲದಿರುತ್ತಿದ್ದರೆ ಪ್ರಪಂಚದ ಸೃಷ್ಟಿಕರ್ತ ಅಜ್ಞಾತನಾಗಿಯೇ ಇರುತ್ತಿದ್ದನೆಂದೋ ಭಾವಿಸುವುದಾದರೆ ಅದು ಮಹಾ ದುರಭಿಮಾನವೆಂದೇ ಹೇಳಬೇಕಾಗುತ್ತದೆ. ಅವನು ಹೇಗೆ ಮಾತನಾಡುತ್ತಾನೆ? ಅವನಿಗೆ ಮಾತನಾಡಲಿಕ್ಕೆ ನಾಲಗೆ ಇದೆಯೇ? ಎಂದು ಪ್ರಶ್ನಿಸುವುದು ಸಹ ಧಾರ್ಷ್ಟ್ಯವಾಗಿದೆ. ಪರಮಾತ್ಮನು ಆಕಾಶಕಾಯಗಳನ್ನೂ ಭೂಮಿಯನ್ನೂ ಭೌತಿಕ ಕೈಗಳಿಲ್ಲದೆಯೇ ಸೃಷ್ಟಿಸಲಿಲ್ಲವೇ? ಭೌತಿಕ ಕಣ್ಣುಗಳಿಲ್ಲದೆಯೇ ಅವನು ಈ ಪ್ರಪಂಚ ಸಕಲವನ್ನೂ ಕಾಣುವುದಿಲ್ಲವೇ? ಭೌತಿಕ ಕಿವಿಗಳಿಲ್ಲದೆಯೇ ಅವನು ಭಕ್ತರ ಶಬ್ದಗಳನ್ನು ಆಲಿಸುವುದಿಲ್ಲವೇ? ಹಾಗಿರುವಾಗ ಅವನು ಭೌತಿಕ ನಾಲಗೆ ಇಲ್ಲದೆಯೇ ಮಾತನಾಡಬೇಕಲ್ಲವೇ? ಪೂರ್ವಕಾಲಗಳಲ್ಲಿ ಪರಮಾತ್ಮನು ಮನುಷ್ಯರೊಡನೆ ಮಾತನಾಡುತ್ತಲೂ ತನ್ನ ಕುರಿತು ಅವರಿಗೆ ಅರಿವು ನೀಡುತ್ತಲೂ ಇದ್ದರೂ ಈಗ ಅವನು ಮಾತನಾಡುವುದಿಲ್ಲ ಎಂದು ಹೇಳುವುದು ಕೂಡ ಆಧಾರರಹಿತವಾಗಿದೆ. ಅವನ ಸಂಭಾಷಣೆ, ಸಂಬೋಧನೆ ಇತ್ಯಾದಿಗಳು ಯಾವುದಾದರೂ ಒಂದು ಪ್ರತ್ಯೇಕ ಕಾಲಕ್ಕೆ ಸೀಮಿತಗೊಂಡಿರುವುದು ಸಾಧ್ಯವಿಲ್ಲ. ಹಿಂದಿನ ಕಾಲಗಳಲ್ಲಿ ಮಾತನಾಡುತ್ತಿದ್ದ ಪರಮಾತ್ಮನು ನಿಶ್ಚಯವಾಗಿಯೂ ಈಗಲೂ ಮಾತನಾಡುತ್ತಲೂ ಅವನನ್ನು ಅನ್ವೇಷಿಸುತ್ತಿರುವ ಭಕ್ತದಾಸರಿಗೆ ತನ್ನ ವಚನಗಳಿಂದ ಅನುಗ್ರಹಿಸುತ್ತಲೂ ಇದ್ದಾನೆ. ಅವನ ವರಪ್ರಸಾದಗಳ ಬಾಗಿಲುಗಳು ಪೂರ್ವಕಾಲಗಳಂತೆಯೇ ಈಗಲೂ ತೆರೆದಿರಿಸಲ್ಪಟ್ಟಿವೆ. ಸನ್ಮಾರ್ಗದರ್ಶನಕ್ಕಾಗಿ ಅತ್ಯಾವಶ್ಯಕಗಳಾದ ನಿಯಮಸಂಹಿತೆಗಳನ್ನೂ ನೀತಿ ತತ್ವಗಳನ್ನೂ ಕ್ರೋಢೀಕರಿಸಲಾದ ಇಸ್ಲಾಮಿಕ ಧರ್ಮಶಾಸ್ತ್ರವು (ಶರೀಅತ್) ಪರಮಾತ್ಮನಿಂದ ಹೊಸ ಒಂದು ನಿಯಮಶಾಸ್ತ್ರದ ಆವಶ್ಯಕತೆಯನ್ನು ಇಲ್ಲದಂತೆ ಮಾಡಿದೆಯೆಂಬುದೂ, ಪ್ರವಾದಿತ್ವವೂ ದೌತ್ಯವೂ ನಮ್ಮ ಪ್ರವಾದಿ ಶ್ರೇಷ್ಠರಾದ ಮುಹಮ್ಮದ್ ಪೈಗಂಬರರಲ್ಲಿ (ದೇವನ ಇಷ್ಟಾಶೀರ್ವಾದಗಳೂ ಅನುಗ್ರಹಗಳೂ ಅವರ ಮೇಲೆ ಸುರಿಯಲಿ) ಪೂರ್ಣತೆಯನ್ನು ಪಡೆದಿದೆಯೆಂಬುದೂ ಸಂಶಯಾತೀತವಾಗಿದ್ದರೂ ಪರಮಾತ್ಮನ ವಚನಾಮೃತ ಕೊನೆಗೊಂಡಿಲ್ಲ.

ಈ ಕೊನೆಯ ದೈವಿಕ ಪ್ರಕಾಶ ಅರಬ್ ರಾಜ್ಯದಿಂದ ಪ್ರಕಟಗೊಳ್ಳಬೇಕೆಂಬುದು ದೈವಸಂಕಲ್ಪವಾಗಿತ್ತು. ಪರಮಾತ್ಮನ ಈ ಸಂಕಲ್ಪಕ್ಕೆ ಒಂದು ಉದ್ದೇಶವಿತ್ತೆಂದು ಕಾಣಲು ಸಾಧ್ಯವಿದೆ. ಅರಬರು ಇಸ್ರಾಈಲ್ ವಂಶಜರ ಸಕಲ ವಿಧ ಸಂಬಂಧಗಳಿಂದ ಬೇರ್ಪಟ್ಟು ಫಾರಾನ್ ಎಂಬ ನಿರ್ಜನ ಪ್ರದೇಶದಲ್ಲಿ ದೇವೇಚ್ಛೆಯಂತೆ ಉಪೇಕ್ಷಿಸಲ್ಪಟ್ಟ ಇಸ್ಮಾಈಲ್ ವಂಶಜರಾಗಿದ್ದರು. 'ಫಾರಾನ್' (فاران) ಎಂಬ ಅರಬಿ ಪದದ ಅರ್ಥ 'ಓಡಿಹೋದ ಈರ್ವರು' ಎಂದಾಗಿದೆ. ಇಸ್ಮಾಈಲ್ ಇಸ್‌ಹಾಕ್‌ನೊಂದಿಗೆ ಸಹಭಾಗಿಯಾಗಿರಲಿಕ್ಕಿಲ್ಲವೆಂದು ಹೇಳಲ್ಪಟ್ಟಿರುವ ಪ್ರಕಾರವೇ ಹಝ್ರತ್ ಇಬ್ರಾಹೀಂ ಪ್ರವಾದಿಯವರಿಂದ ಬೇರ್ಪಡಿಸಲ್ಪಟ್ಟ ಇಸ್ಮಾಈಲ್ ವಂಶಜರಿಗೆ ಇಸ್ರಾಈಲ್ ನಿಯಮದಲ್ಲಿ ಯಾವ ಸಹಭಾಗಿತ್ವವೂ ಇರಲಿಲ್ಲ. ಹೀಗೆ ಅವರು ಬಂಧುಜನರಿಂದ ಪರಿತ್ಯಜಿಸಲ್ಪಟ್ಟವರಾಗಿದ್ದರು. ಬೇರಾವುದೇ ಜನಾಂಗದವರೊಡನೆ ಅವರಿಗೆ ಬಾಂಧವ್ಯ ವಿರಲಿಲ್ಲ. ಇತರ ಎಲ್ಲ ರಾಜ್ಯಗಳಲ್ಲೂ ಪರಮಾತ್ಮನ ಪ್ರವಾದಿಗಳ ಬೋಧನೆ ಒಂದೊಮ್ಮೆ ವ್ಯಾಪಿಸಿತ್ತೆಂದು ಅನುಮಾನಿಸಬಹುದಾದ ನಿಯಮ ತತ್ವಗಳ ಮತ್ತು ಆರಾಧನಾ ಪದ್ಧತಿಗಳ ಕೆಲವು ಚಿಹ್ನೆಗಳು ಗೋಚರಿಸುತ್ತವೆ. ಆದರೆ ಅರಬ್ ರಾಜ್ಯ ಮಾತ್ರ ಈ ರೀತಿಯ ಬೋಧನೆಗಳ ಕುರಿತು ತೀರಾ ಅಜ್ಞವಾಗಿತ್ತು. ಮಾತ್ರವಲ್ಲ, ಈ ವಿಷಯದಲ್ಲಿ ಅದು ಇತರ ಎಲ್ಲ ರಾಜ್ಯಕ್ಕಿಂತಲೂ ಅತ್ಯಂತ ಹಿಂದುಳಿದಿತ್ತು. ಕೊನೆಗೆ ಅದರ ಸರದಿ ಬಂತು. ಅಲ್ಲಿಯ ಪ್ರವಾದಿಯ ದೌತ್ಯ ಸಾರ್ವತ್ರಿಕವಾಯಿತು. ಆ ಪ್ರವಾದಿ ಶ್ರೇಷ್ಠರು ಸರ್ವ ಜನರನ್ನು ಅನುಗ್ರಹಿಸಲಿಕ್ಕೂ ಅವರಲ್ಲಿ ಸೇರಿಕೊಂಡಿರುವ ನ್ಯೂನತೆಗಳನ್ನು ಪರಿಹರಿಸಲಿಕ್ಕೂ ಬೇಕಾಗಿ ಆಗಮಿಸಿದರು. ಅವರು ತಂದ ಧರ್ಮಶಾಸ್ತ್ರ ಇನ್ನು ಯಾವುದೇ ನೀತಿ ಶಾಸ್ತ್ರದ ಆವಶ್ಯಕತೆಯಿಲ್ಲದ ರೀತಿಯಲ್ಲಿ ಪರಿಪೂರ್ಣವಾಗಿದೆ. ಆ ನಿಯಮಗ್ರಂಥದ ಸುಧಾರಣೆಯ ಪದ್ಧತಿಗಳು ಪೂರ್ವ ಧರ್ಮಗ್ರಂಥಗಳಂತೆ ಯಾವುದಾದರೂ ಪ್ರತ್ಯೇಕ ಜನಾಂಗಕ್ಕೆ ಮಾತ್ರವುಳ್ಳದ್ದಲ್ಲ. ಅದು ಸರ್ವ ಮಾನವ ಕುಲದ ಸುಧಾರಣೆಯನ್ನು ಇಚ್ಛಿಸುತ್ತದೆ. ಮನುಷ್ಯನ ನೈತಿಕ ಶಿಕ್ಷಣಕ್ಕೆ ಅತ್ಯಾವಶ್ಯಕವಾದ ಸಕಲ ಪದ್ಧತಿಗಳನ್ನು ಅದು ವಿವರಿಸಿದೆ. ಅಪರಿಷ್ಕೃತರಿಗೆ ಮಾನವತೆಯ ಸಿದ್ಧಾಂತ ಹಾಗೂ ಶಿಷ್ಟಾಚಾರಗಳನ್ನು ಅದು ಕಲಿಸಿತು. ಅನಂತರ ಉತ್ಕೃಷ್ಟ ಅಧ್ಯಾಪನೆಗಳನ್ನು ನೀಡಿ ಅವರನ್ನು ನೀತಿವಂತರನ್ನಾಗಿ ಮಾಡಿತು.

## ಪ್ರಪಂಚಕ್ಕೆ ಪವಿತ್ರ ಖುರ್‌ಆನಿನ ಕೊಡುಗೆ

ಈ ನೀತಿಶಾಸ್ತ್ರ ಗ್ರಂಥವಾದ ಪವಿತ್ರ ಖುರ್‌ಆನ್ ಸಹಜ ಸ್ವಭಾವಗಳನ್ನೂ ಉತ್ಕೃಷ್ಟ ನೈತಿಕ ಗುಣಗಳನ್ನೂ ಬೇರ್ಪಡಿಸಿ ಅವುಗಳ ಭಿನ್ನತೆಯನ್ನು ಸ್ಪಷ್ಟಪಡಿಸಿತು.

ಅದು ಮನುಷ್ಯನನ್ನು ಸಹಜಗುಣದ ಸ್ಥಿತಿಯಿಂದ ನೈತಿಕ ಸ್ಥಿತಿಯಾದ ಉತ್ಕೃಷ್ಟ ಸ್ಥಾನಕ್ಕೇರಿಸುವುದರಲ್ಲಿ ಮಾತ್ರ ತೃಪ್ತಿಪಡದೆ ಅದರಾಚೆಗಿರುವ ಆಧ್ಯಾತ್ಮಿಕ ಸ್ಥಿತಿಗೆ ಅವನನ್ನು ತಲುಪಿಸಲಿಕ್ಕಾಗಿ ಯುಕ್ತವಾದ ಪವಿತ್ರ ಜ್ಞಾನದ ಬಾಗಿಲುಗಳನ್ನು ಸಹ ತೆರೆದು ಇಟ್ಟಿರುತ್ತದೆ. ಅಷ್ಟು ಮಾತ್ರವಲ್ಲ, ಅದು ಲಕ್ಷಗಟ್ಟಲೆ ಜನರನ್ನು ಪರಮಾರ್ಥ ಜ್ಞಾನದಿಂದ ಪ್ರಬುದ್ಧರನ್ನಾಗಿ ಮಾಡಿ ದೇವನ ಸನ್ನಿಧಿಗೆ ತಲುಪಿಸಿರುತ್ತದೆ. ಈ ಪ್ರಕಾರದಲ್ಲಿ ಮೊದಲು ಪ್ರಸ್ತಾಪಿಸಲಾದ ಮನುಷ್ಯನ ಮೂರು ವಿಧ ಅವಸ್ಥೆಗಳಿಗೆ ಸಂಬಂಧಿಸಿ ಆ ದಿವ್ಯಗ್ರಂಥ ಪರಿಪೂರ್ಣವಾದ ಸುಧಾರಣೆಯ ಮಾರ್ಗಗಳನ್ನು ನಿರ್ದೇಶಿಸಿದೆ. ಹೀಗೆ ಪವಿತ್ರ ಖುರ್‌ಆನ್ ನೈತಿಕ ಸುಧಾರಣೆಗೆ ಅತ್ಯಾವಶ್ಯಕವಾದ ನಿರ್ದೇಶನಗಳ ಒಂದು ಪರಿಪೂರ್ಣ ಸಂಹಿತೆಯಾದುದರಿಂದ ಅದರ ಪರಿಪೂರ್ಣತೆ ಹಾಗೂ ಶ್ರೇಷ್ಠತೆಯ ಬಗ್ಗೆ ಅದು ಸ್ಪಷ್ಟವಾಗಿ ವಾದಿಸಿರುವುದನ್ನು ಕಾಣಬಹುದು. ಅದು ಹೀಗೆನ್ನುತ್ತದೆ:

اَلۡيَوۡمَ اَكۡمَلۡتُ لَكُمۡ دِيۡنَكُمۡ وَاَتۡمَمۡتُ عَلَيۡكُمۡ نِعۡمَتِىۡ

وَرَضِيۡتُ لَكُمُ الۡاِسۡلَامَ دِيۡنًا

ಇಂದಿನ ದಿವಸ ನಾನು ನಿಮಗೆ ನಿಮ್ಮ ಧರ್ಮವನ್ನು ಪರಿಪೂರ್ಣಗೊಳಿಸಿ ನನ್ನ ಅನುಗ್ರಹವನ್ನು ನಿಮಗೆ ಪೂರ್ತಿಗೊಳಿಸಿ ನಿಮಗೆ ಇಸ್ಲಾಮನ್ನು ನಿಮ್ಮ ಧರ್ಮವನ್ನಾಗಿಸಿ ತೃಪ್ತಿಗೊಂಡಿದ್ದೇನೆ. **(5:4)**

ಧರ್ಮವು ಅದರ ಪೂರ್ಣತೆಯನ್ನು ಇಸ್ಲಾಮಿನಲ್ಲಿ ಪಡೆದಿದೆಯೆಂದು ಈ ಪವಿತ್ರ ಖುರ್‌ಆನ್ ವಾಕ್ಯ ಒತ್ತಿ ಹೇಳುತ್ತದೆ. ಅಂದರೆ, ಧರ್ಮದ ಪರಿಪೂರ್ಣವಾದ ಸ್ಥಿತಿ 'ಇಸ್ಲಾಂ' ಎಂಬ ಪದದ ಅರ್ಥದಲ್ಲಿ ಒಳಗೊಂಡಿದೆಯೆಂದಾಗಿದೆ. ಬೇರೆ ಮಾತಿನಲ್ಲಿ ಹೇಳುವುದಾದರೆ, ದೇವೇಚ್ಛೆಗಾಗಿ ಪೂರ್ಣರೀತಿಯಲ್ಲಿ ವಿಧೇಯನಾಗಿದ್ದುಕೊಂಡು ಆತ್ಮತ್ಯಾಗದ ಮೂಲಕ, ತ್ಯಾಗವು ಬರೇ ಮಾತಿನಲ್ಲಿರದೆ ಕಾರ್ಯ ರೂಪದಲ್ಲಿ ಬಹಿರಂಗಪಡಿಸುವ ಮೂಲಕ, ಮೋಕ್ಷಮಾರ್ಗವನ್ನು ಪಡೆಯುವ ಪರಮ ಅನುಸರಣಪಥವಾಗಿದೆ ಇಸ್ಲಾಂ ಎಂಬುದರ ಅರ್ಥ. ಈ ಸ್ಥಿತಿಯಲ್ಲಿ ಸಕಲ ಶ್ರೇಷ್ಠ ಗುಣಗಳು ಅಂತಿಮ ಹಂತವನ್ನು ಪಡೆಯುತ್ತವೆ.

ಆದರೆ ಅಪೂರ್ಣವಾದ ಬುದ್ಧಿಶಕ್ತಿಯನ್ನು ಮಾತ್ರ ಆಶ್ರಯಿಸಿ ವರ್ತಿಸಿದ ತತ್ವಜ್ಞಾನಿಗಳಿಗೆ ಯಥಾರ್ಥ ಪರಮಾತ್ಮನನ್ನು ಕಾಣಲು ಸಾಧ್ಯವಾಗಲಿಲ್ಲ. ಪವಿತ್ರ ಖುರ್‌ಆನ್ ಆ ಸತ್ಯದೇವನನ್ನು ತಿಳಿದುಕೊಳ್ಳಲು ಸರಿಯಾದ ಜ್ಞಾನಮಾರ್ಗವನ್ನು

ಪ್ರದಾನ ಮಾಡಿದೆ. ಪ್ರಪಂಚ ಕರ್ತನಿಗೆ ಸಂಬಂಧಿಸಿ ಸರಿಯಾದ ಜ್ಞಾನವನ್ನು ನೀಡಲು ಆ ಪವಿತ್ರ ಗ್ರಂಥ ಎರಡು ಮಾರ್ಗಗಳನ್ನು ನಿರ್ದೇಶಿಸಿದೆ. ಪ್ರಥಮವಾಗಿ ವಿವೇಕ ಮಾರ್ಗ. ಮನುಷ್ಯನ ವಿವೇಕವು ವೈಚಾರಿಕ ಆಧಾರಗಳನ್ನು ಸೃಜಿಸಲು ಬಹಳ ಶಕ್ತಿಶಾಲಿ ಮತ್ತು ತೀಕ್ಷ್ಣತರವಾಗಿದ್ದು ಅದು ಮನುಷ್ಯನನ್ನು ತಪ್ಪುಮಾಡದಂತೆ ತಡೆಯುತ್ತದೆ. ದ್ವಿತೀಯ ಮಾರ್ಗ ಆಧ್ಯಾತ್ಮಿಕವಾದುದು. ಇದರ ಕುರಿತು ಮೂರನೆಯ ಪ್ರಶ್ನೆಯ ಉತ್ತರದಲ್ಲಿ ವಿವರಿಸಲಾಗುವುದು.

## ದೈವಾಸ್ತಿತ್ವದ ಸಾಕ್ಷ್ಯಗಳು

ಮೊದಲನೆಯದಾಗಿ, ವಿವೇಕ ಮಾರ್ಗ ಮೂಲಕ ಪವಿತ್ರ ಖುರ್‌ಆನ್ ದೇವನ ಅಸ್ತಿತ್ವವನ್ನು ರುಜುಪಡಿಸಲು ಪ್ರಬಲವಾದ ಹಲವು ವಿಚಾರಗಳನ್ನು ಹೇಗೆ ತೋರಿಸಿಕೊಟ್ಟಿದೆಯೆಂದು ನೋಡಿರಿ. ಒಂದೆಡೆಯಲ್ಲಿ ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

رَبُّنَا الَّذِيٓ اَعۡطٰى كُلَّ شَيۡءٍ خَلۡقَهٗ ثُمَّ هَدٰى

ನಮ್ಮ ದೇವನು ಪ್ರತಿಯೊಂದು ವಸ್ತುವಿಗೂ ಅದರ ಪ್ರಕೃತಿಗನುಸಾರವಾದ ಸೃಷ್ಟಿಯನ್ನು ಪ್ರದಾನ ಮಾಡಿ, ಅನಂತರ ಅದರ ನಿರ್ದಿಷ್ಟ ಪರಿಪೂರ್ಣತೆಯನ್ನು ಪಡೆಯಲು ಮಾರ್ಗದರ್ಶನ ನೀಡಿದವನಾಗಿದ್ದಾನೆ. **(20:51)**

ಮನುಷ್ಯ ಸಹಿತ ನೆಲ, ಜಲ ಮತ್ತು ವಾಯು ಮಂಡಲದಲ್ಲಿರುವ ಎಲ್ಲ ಜೀವಿಗಳ ಶರೀರ ರಚನೆಯನ್ನು ಪರಿಶೀಲಿಸಿ ಅವುಗಳ ಸ್ವಭಾವದ ಕುರಿತು ಚಿಂತಿಸುವುದಾದರೆ ಎಲ್ಲವೂ ಅವುಗಳ ಪ್ರಕೃತಿಗೆ ಅನುಯೋಜ್ಯವಾದ ರೀತಿಯಲ್ಲಿ ಸೃಷ್ಟಿಸಲ್ಪಟ್ಟಿವೆಯೆಂಬ ದೇವನ ಅದ್ಭುತಕರವಾದ ಸೃಷ್ಟಿ ಸಾಮರ್ಥ್ಯವನ್ನು ಕಾಣಬಹುದು. ಈ ವಿಷಯ ಪ್ರತಿಯೊಬ್ಬನೂ ಸಾಕಷ್ಟು ಚಿಂತಿಸಿ ನೋಡುವಷ್ಟು ವಿಪುಲತರದ್ದಾಗಿದೆ.

ದೇವನ ಅಸ್ತಿತ್ವವನ್ನು ಸಮರ್ಥಿಸಲು ಪವಿತ್ರ ಖುರ್‌ಆನ್ ತೋರಿಸುವ ಇನ್ನೊಂದು ಪುರಾವೆ, ಅವನು ಕಾರಣಕರ್ತ ಅಥವಾ ಆದಿಕಾರಣನೆಂದಾಗಿದೆ. ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

وَاَنَّ اِلٰى رَبِّكَ الۡمُنۡتَهٰى

ಎಲ್ಲ ಕಾರ್ಯಕಾರಣ ಸರಣಿಗಳು ನಿನ್ನ ನಾಥನಲ್ಲಿ ಕೊನೆಗೊಳ್ಳುತ್ತವೆ. **(53:43)**

ಈ ಬ್ರಹ್ಮಾಂಡದಲ್ಲಿ ಗೋಚರ – ಅಗೋಚರಗಳಾದ ಎಲ್ಲವೂ ಕಾರ್ಯಕಾರಣ ವ್ಯವಸ್ಥೆಯಿಂದ ಕೂಡಿಕೊಂಡಿವೆಯೆಂಬ ವಿಚಾರ ಸೂಕ್ಷ್ಮವಾಗಿ ಪರಿಶೀಲಿಸಿದರೆ

ಕಾಣಬಹುದಾಗಿದೆ. ಈ ವ್ಯವಸ್ಥೆಯ ಸಾರ್ವತ್ರಿಕವಾದ ಪ್ರವರ್ತನೆಯೇ ನಾವು ಕಾಣುವ ವಿವಿಧ ವೈಜ್ಞಾನಿಕ ಹಾಗೂ ತತ್ವಜ್ಞಾನಗಳ ಸೃಷ್ಟಿಗೂ ಬೆಳವಣಿಗೆಗೂ ಕಾರಣವಾಗಿದೆ. ಸೃಷ್ಟಿಲೋಕದ ಯಾವ ಅಂಶವೂ ಈ ಕಾರ್ಯಕಾರಣ ಸಂಬಂಧದ ವ್ಯವಸ್ಥೆಯಿಂದ ಹೊರತಲ್ಲ. ಕೆಲವು, ಬೇರೆ ಕೆಲವಕ್ಕೆ ಮೂಲಕಾರಣವಾಗಿಯೂ ಕೆಲವು, ಶಾಖೆಗಳಾಗಿಯೂ ಇರುತ್ತವೆ. ಆದಿಕಾರಣದ ಹೊರತು ಪ್ರತಿಯೊಂದು ಕಾರ್ಯವೂ ಮತ್ತೊಂದು ಕಾರಣವನ್ನು ಅವಲಂಬಿಸಿದೆ. ಆ ಕಾರಣವು ಇನ್ನೊಂದು ಕಾರ್ಯದ ಪರಿಣಾಮವಾಗಿದೆ. ಹೀಗೆ ಈ ಕಾರ್ಯಕಾರಣ ಸರಣಿ ಹಿಂದಕ್ಕೆ ಹೋಗುತ್ತಲಿರುತ್ತದೆ. ಆದರೆ ಅನಂತವಲ್ಲದ ಈ ಪ್ರಪಂಚದಲ್ಲಿ ನಡೆಯುತ್ತಿರುವ ಈ ಕಾರ್ಯಕಾರಣ ಸರಣಿ ಅನಂತವಾಗಿರಲು ಅಸಾಧ್ಯವಾದುದರಿಂದ ಅದು ಎಲ್ಲಿಯಾದರೂ ಒಂದು ಕಡೆ ಕೊನೆಗೊಳ್ಳಲೇಬೇಕಾಗಿದೆ. ಹೀಗೆ ಅತ್ಯಂತ ಕೊನೆಯ ಆ ಕಾರಣ ಪ್ರಪಂಚಕರ್ತನಾಗಿದ್ದಾನೆ. “ಎಲ್ಲ ಕಾರ್ಯಕಾರಣ ಸರಣಿಗಳು ನಿನ್ನ ನಾಥನಲ್ಲಿ ಕೊನೆಗೊಳ್ಳುತ್ತವೆ” ಎಂಬ ಪ್ರಸ್ತುತ ದೇವವಾಕ್ಯ ಈ ಅಂತಿಮ ಕಾರಣದೆಡೆಗೆ ಅಥವಾ ಆದಿಕಾರಣದೆಡೆಗೆ ನಮ್ಮ ಗಮನವನ್ನು ಸೆಳೆಯುತ್ತದೆ.

ದೇವನ ಅಸ್ತಿತ್ವವನ್ನು ಸಾಬೀತುಪಡಿಸಲು ಪವಿತ್ರ ಖುರ್‌ಆನ್ ತೋರಿಸುವ ಮತ್ತೊಂದು ಪುರಾವೆ ಇದಾಗಿದೆ:

لَا الشَّمْسُ يَنْبَغِي لَهَآ اَنْ تُدْرِكَ الْقَمَرَ وَلَا الَّيْلُ سَابِقُ النَّهَارِ ۚ

وَكُلٌّ فِيْ فَلَكٍ يَّسْبَحُوْنَ

ಸೂರ್ಯನಿಗೆ ಚಂದ್ರನ ಜೊತೆಗೆ ಸೇರಲು ಸಾಧ್ಯವಿಲ್ಲ. ರಾತ್ರಿಗೆ ಹಗಲನ್ನು ಹಿಡಿದಿಡಲು ಸಾಧ್ಯವಿಲ್ಲ. ಎಲ್ಲವೂ ಅವುಗಳ ನಿರ್ದಿಷ್ಟ ಪಥಗಳಲ್ಲಿಯೇ ಸಂಚರಿಸುತ್ತವೆ. **(36:41)**

ಈ ಆಕಾಶಕಾಯಗಳಲ್ಲಿ ಯಾವುದೂ ಅದರ ಸಂಚಾರ ಪಥವನ್ನು ವ್ಯತಿಕ್ರಮಿಸುವುದಿಲ್ಲ. ಅವುಗಳಿಗೆ ಒಬ್ಬ ನಿಯಂತ್ರಕ ಅಥವಾ ನಿಯಾಮಕನಿಲ್ಲದಿರುತ್ತಿದ್ದರೆ ಅವು ನಾನಾ ವಿಧಗಳಲ್ಲಿ ಚಲಿಸಿ ಕ್ಷಣಮಾತ್ರದಲ್ಲಿ ನಾಶಗೊಳ್ಳುತ್ತಿದ್ದುವು. ಪ್ರಕೃತಿ ನಿಯಮಗಳ ಕುರಿತು ಗಾಢವಾಗಿ ಚಿಂತಿಸುವವರಿಗೆ ಈ ಪುರಾವೆ ಬಹಳ ಪ್ರಯೋಜನಕಾರಿಯಾಗಿದೆ. ಆಕಾಶದಲ್ಲಿ ಚಲಿಸುತ್ತಿರುವ ಅಸಂಖ್ಯಾತ ಗೋಳಗಳಿಗೆ ತುಸು ಮಾತ್ರವಾದರೂ ಗತಿ ವ್ಯತ್ಯಾಸವುಂಟಾದರೆ ಇಡೀ ಬ್ರಹ್ಮಾಂಡವೇ ನಾಶಹೊಂದುವುದು. ಈ ಆಕಾಶಕಾಯಗಳು ಪರಸ್ಪರ ಡಿಕ್ಕಿ ಹೊಡೆಯದೆಯೂ ಅವುಗಳ ಚಲನೆಯಲ್ಲಿ ಏನೂ ವ್ಯತ್ಯಾಸವಾಗದೆಯೂ ನಿರಂತರವಾದ ಚಲನೆಯಿಂದಾಗಿ ಸವೆದುಹೋಗದೆಯೂ

ಅಥವಾ ಅವುಗಳಿಗೆ ತೇಮಾನವುಂಟಾಗದೆಯೂ ಸಂಚರಿಸಿಕೊಂಡಿರುವುದು ಎಷ್ಟು ಅದ್ಭುತಕರವಾಗಿದೆ! ಅತ್ಯಂತ ವಿಪುಲವಾದ ಈ ಉಜ್ವಲ ಕಾರ್ಖಾನೆ ಸರ್ವಸಮರ್ಥನಾದ ಒಬ್ಬ ಸೂತ್ರಧಾರನ ನಿಯಂತ್ರಣಕ್ಕೆ ಅಧೀನವಾಗಿರದಿದ್ದರೆ ಅಸಂಖ್ಯಾತ ವರ್ಷಗಳಿಂದ ಯಾವುದೇ ನ್ಯೂನತೆಯಿಲ್ಲದೆ ಹೇಗೆ ಸ್ವಯಂ ಚಲಿಸಲು ಸಾಧ್ಯ? ಈ ಪರಿಪೂರ್ಣವಾದ ದೇವಶಕ್ತಿ ಮತ್ತು ಜ್ಞಾನವನ್ನು ಸೂಚಿಸುತ್ತಾ ಪವಿತ್ರ ಖುರ್‌ಆನ್ ಇನ್ನೊಂದೆಡೆಯಲ್ಲಿ ಹೀಗೆ ಹೇಳುತ್ತದೆ:

أَفِي ٱللَّهِ شَكٌّ فَاطِرِ ٱلسَّمَٰوَٰتِ وَٱلْأَرْضِ

ಹೀಗಿರುವಾಗ ಆಕಾಶಮಂಡಲವನ್ನೂ ಭೂಮಿಯನ್ನೂ ಸೃಷ್ಟಿಸಿದ ದೇವನ ಸತ್ತೆಯಲ್ಲಿ ಏನಾದರೂ ಸಂಶಯವಿದೆಯೇ? **(14:11)**

ಸೃಷ್ಟಿಕರ್ತನ ಅಸ್ತಿತ್ವವನ್ನು ಸಾಬೀತುಪಡಿಸಲು ಪವಿತ್ರ ಖುರ್‌ಆನ್ ತೋರಿಸುವ ಬೇರೊಂದು ಪುರಾವೆ ಇದಾಗಿದೆ:

كُلُّ مَنْ عَلَيْهَا فَانٍ - وَيَبْقَىٰ وَجْهُ رَبِّكَ ذُو ٱلْجَلَٰلِ وَٱلْإِكْرَامِ

ಸರ್ವ ವಸ್ತುಗಳೂ ನಶ್ವರ; ಪ್ರತಾಪವಂತನೂ ಮಹಾಮಹಿಮನೂ ಆದ ನಿನ್ನ ಪ್ರಭು ಮಾತ್ರ ಶಾಶ್ವತನಾಗಿರುವನು. **(55:27,28)**

ಈ ಭೂಮಿಯಿಡೀ ಛಿದ್ರ ಛಿದ್ರವಾಗಿ, ಆಕಾಶಕಾಯಗಳೆಲ್ಲ ನಾಶವಾಗಿ ಸಂಪೂರ್ಣ ಪ್ರಪಂಚವೇ ಶೂನ್ಯವಾಗುವುದೆಂದು ಭಾವಿಸೋಣ. ಆದರೂ ಎಂದೆಂದಿಗೂ ಅನಶ್ವರವೂ ಅಕ್ಷಯವೂ ಅಭೇದವೂ ಆದ ಯಾವುದೋ ಒಂದು ಶಕ್ತಿ ಯಥಾಸ್ಥಿತಿಯಲ್ಲಿ ನಂತರವೂ ಬಾಕಿಯಾಗಬೇಕೆಂದು ನಮ್ಮ ವಿವೇಕವೂ ಮನಃಸಾಕ್ಷಿಯೂ ಹೇಳುತ್ತದೆ. ಅಂತಹ ಆ ಶಕ್ತಿಯೇ ಸರ್ವ ನಶ್ವರ ವಸ್ತುಗಳನ್ನು ನಾಸ್ತಿಯಿಂದ ಸೃಷ್ಟಿಸಿದ ದೇವನು. 'ನಾಶ'ವು ಅವನಿಗೆ ಅಧೀನವಾಗಿರುವುದರಿಂದ ಅವನು ನಾಶದಿಂದ ಸುರಕ್ಷಿತನಾಗಿದ್ದಾನೆ.

ಪವಿತ್ರ ಖುರ್‌ಆನ್ ಇನ್ನೊಂದೆಡೆಯಲ್ಲಿ ದೇವನ ಅಸ್ತಿತ್ವದ ಕುರಿತು ನುಡಿಯುವುದು ಈ ರೀತಿಯಾಗಿದೆ:

أَلَسْتُ بِرَبِّكُمْ ۖ قَالُوا بَلَىٰ

ಸರ್ವಶಕ್ತನಾದ ದೇವನು ಆತ್ಮಗಳೊಡನೆ 'ನಿಮ್ಮ ಸೃಷ್ಟಿಕರ್ತನೂ ರಕ್ಷಕನೂ ಪಾಲಕನೂ ನಾನಲ್ಲವೇ?' ಎಂದು ಕೇಳಿದಾಗ, 'ಹೌದು ಖಂಡಿತವಾಗಿಯೂ' ಎಂದು ಅವು ಹೇಳಿದವು. **(7:173)**

ಈ ವಾಕ್ಯದಲ್ಲಿ ದೇವನು ಸಂಭಾಷಣೆಯ ರೂಪದಲ್ಲಿ, ಆತ್ಮಗಳಲ್ಲಿ ಅವನು ನಿಕ್ಷೇಪಿಸಿಟ್ಟಿರುವ ಒಂದು ವಿಶಿಷ್ಟ ಸ್ವಭಾವವನ್ನು, ಅಂದರೆ ಯಾವ ಆತ್ಮವೂ ಸ್ವಾಭಾವಿಕವಾಗಿ ದೇವನ ಅಸ್ತಿತ್ವವನ್ನು ಅಲ್ಲಗಳೆಯಲು ಶಕ್ತವಲ್ಲ ಎಂಬ ಸಂಗತಿಯನ್ನು ವಿವರಿಸಿಕೊಟ್ಟಿದ್ದಾನೆ. ನಾಸ್ತಿಕರು ದೇವನ ಸತ್ತೆಯನ್ನು ನಿರಾಕರಿಸುವುದು ಅವರ ಸ್ವಭಾವ ಅವರನ್ನು ಅದರೆಡೆಗೆ ಪ್ರೇರೇಪಿಸುವುದರಿಂದಲ್ಲ; ಬದಲಾಗಿ, ದೇವನಿದ್ದಾನೆಂಬುದಕ್ಕೆ ಅವರು ಭಾವಿಸುವ ರೀತಿಯಲ್ಲಿ ಅವರಿಗೆ ರುಜುವಾತೇನೂ ಲಭಿಸದ ಕಾರಣದಿಂದಾಗಿದೆ. ದೇವನನ್ನು ಅಲ್ಲಗಳೆಯುವುದರೊಂದಿಗೆಯೇ ಅವರು ಪ್ರತಿಯೊಂದು ಕಾರ್ಯಕ್ಕೂ ಪ್ರತ್ರ್ಯೇಕ ಪ್ರತ್ಯೇಕ ಕಾರಣವುಂಟೆಂದು ನಂಬುತ್ತಾರೆ. ಶರೀರಕ್ಕೆ ರೋಗ ತಗಲುವುದಾದರೆ ಅದಕ್ಕೆ ಏನೋ ಕಾರಣವಿರಬೇಕೆಂಬುದನ್ನು ನಿರಾಕರಿಸುವಷ್ಟರ ಮಟ್ಟಿಗಿನ ಬುದ್ಧಿಶೂನ್ಯರು ಲೋಕದಲ್ಲಿರಬಹುದೆಂದು ತೋರುವುದಿಲ್ಲ. ಈ ಪ್ರಪಂಚದಲ್ಲಿ ನಡೆಯುತ್ತಿರುವ ಪ್ರತಿಯೊಂದು ಸಂಭವಕ್ಕೆ ಒಂದು ಪ್ರತ್ಯೇಕ ಕಾರಣವಿಲ್ಲವೆಂದಾದರೆ ಭೂಕಂಪ, ಬಿರುಗಾಳಿ, ಗ್ರಹಣ, ಸಾಂಕ್ರಾಮಿಕ ರೋಗಗಳ ಹಬ್ಬುವಿಕೆ ಇತ್ಯಾದಿ ಘಟನೆಗಳಿಗೆ ಸಂಬಂಧಿಸಿ ಮುಂಚಿತವಾಗಿ ಲೆಕ್ಕಹಾಕುವಿಕೆ ಹಾಗೂ ದಿನಂಪ್ರತಿ ನಡೆಯುತ್ತಿರುವ ಇನ್ನೂ ಹಲವು ಸಂಗತಿಗಳ ಕುರಿತು ನೀಡುವ ಮುನ್ಸೂಚನೆಗಳು ಅಸಾಧ್ಯವೆಂದಾಗುತ್ತದೆ. ಒಟ್ಟಾರೆ, ಒಬ್ಬ ಅನ್ವೇಷಕನು ದೇವನ ಅಸ್ತಿತ್ವವನ್ನು ಒಪ್ಪದೇ ಇದ್ದರೂ ಕಾರ್ಯಕಾರಣ ವ್ಯವಸ್ಥೆಯನ್ನು ನಿರಾಕರಿಸಲು ಆತನಿಗೆ ಸಾಧ್ಯವಿಲ್ಲವಾದುದರಿಂದ ಆದಿಕಾರಣ ಸತ್ತೆಯನ್ನು ಅಲ್ಲಗಳೆಯಲಿಕ್ಕೂ ಆತನು ಶಕ್ತನಲ್ಲ. ಇದು ಒಂದು ರೀತಿಯಲ್ಲಿ ದೇವನ ಅಸ್ತಿತ್ವವನ್ನು ಪರೋಕ್ಷವಾಗಿ ಅಂಗೀಕರಿಸಿದಂತೆಯೇ. ಆದರೆ ಅದು ಪೂರ್ಣವಾದ ಅಂಗೀಕಾರವಲ್ಲ. ದೇವನ ಅಸ್ತಿತ್ವವನ್ನು ಅಲ್ಲಗಳೆಯುವ ಒಬ್ಬ ನಾಸ್ತಿಕನನ್ನು ಈ ಪ್ರಾಪಂಚಿಕ ಭೋಗೇಚ್ಛೆಗಳ ಕುರಿತು ತಿಳಿದುಕೊಳ್ಳದಂತೆ ಪ್ರಜ್ಞಾಹೀನನನ್ನಾಗಿ ಮಾಡಿ ಒಂದು ಪರಮ ಶಕ್ತಿಯ ಆಜ್ಞೆಗೆ ವಿಧೇಯನನ್ನಾಗಿ ಮಾಡಿದರೆ ಆ ಸ್ಥಿತಿಯಲ್ಲಿ ಅವನು ದೇವಾಸ್ತಿತ್ವವನ್ನು ಒಪ್ಪುವನೆಂಬುದಕ್ಕೆ ಹಲವರ ಅನುಭವ ದೃಷ್ಟಾಂತಗಳಿವೆ. ಮೇಲಿನ ಪವಿತ್ರ ಖುರ್‌ಆನ್ ವಚನ ಅಂತಹ ಒಂದು ಸ್ಥಿತಿಯ ಕುರಿತು ಸೂಚಿಸಿದೆ. ಎಂದರೆ, ಮನುಷ್ಯನ ಮೇಲಿನ ಪ್ರಾಪಂಚಿಕ ಭೋಗೇಚ್ಛೆಗಳು ಬಲಗೊಳ್ಳುತ್ತಿರುವಾಗ ಮಾತ್ರ ದೇವನ ಸತ್ತೆಯನ್ನು ನಿರಾಕರಿಸುವ ಬುದ್ಧಿ ತೋರುವುದೆಂದೂ ಪರಿಶುದ್ಧವಾದ ಮನುಷ್ಯ ಪ್ರಕೃತಿಯಾದರೋ ದೈವಿಕ ವಿಚಾರದಿಂದ ಕೂಡಿಕೊಂಡಿದೆಯೆಂದೂ ಆ ವಾಕ್ಯ ತಿಳಿಸಿಕೊಡುತ್ತದೆ.

# ದೇವನ ಮಹಾತ್ಮೆ

ದೇವನ ಅಸ್ತಿತ್ವವನ್ನು ರುಜುವಾತುಪಡಿಸಲಿಕ್ಕಾಗಿ ಪವಿತ್ರ ಖುರ್‌ಆನ್ ತೋರಿಸಿದ ಪುರಾವೆಗಳಲ್ಲಿ ಕೆಲವನ್ನು ಮೇಲೆ ವಿವರಿಸಲಾಗಿದೆ. ಇನ್ನು, ಆ ಪವಿತ್ರ ಗ್ರಂಥ ಯಾವ ದೇವನೆಡೆಗೆ ನಮ್ಮನ್ನು ಕರೆಯುತ್ತದೋ ಅವನಿಗಿರುವುದೆಂದು ಅದು ಹೇಳುವ ಮಹತ್ವಗಳೂ ಗುಣವಿಶೇಷಗಳೂ ಯಾವುವೆಂದು ನೋಡೋಣ. ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

هُوَ اللّٰهُ الَّذِىْ لَآ اِلٰهَ اِلَّا هُوَ ۚ عٰلِمُ الْغَيْبِ وَالشَّهَادَةِ ۚ هُوَ الرَّحْمٰنُ الرَّحِيْمُ

ಆರಾಧನೆಗೂ ಅನುಸರಣೆಗೂ ಅರ್ಹನಾಗಿರುವ, ಭಾಗೀದಾರನಿಲ್ಲದ ಏಕನಾಗಿರುವವನೇ ದೇವನು. **(59:23)**

ಈ ವಚನದಲ್ಲಿ ದೇವನಿಗೆ ಭಾಗೀದಾರನಿಲ್ಲವೆಂದು ಹೇಳಿರುವುದೇಕೆಂದರೆ, ಅವನು ನಿಸ್ತುಲನೂ ಏಕನೂ ಅಲ್ಲವೆಂದಾದರೆ ಅವನ ಶಕ್ತಿ ಒಂದೊಮ್ಮೆ ಭಾಗೀದಾರನಿಗೆ ಅಧೀನವಾಗಿ ಅವನ ದೇವತ್ವ ನಷ್ಟಹೊಂದಲು ಹೇತುವಾಗುವುದು. ಮಾತ್ರವಲ್ಲ, ಅವನ ಹೊರತು ಆರಾಧನೆಗರ್ಹನು ಇನ್ನಾರೂ ಇಲ್ಲವೆಂದು ಹೇಳಿರುವುದು ಅವನು ಸಕಲ ಗುಣ ಸಂಪೂರ್ಣನೆಂದು ಸ್ಪಷ್ಟೀಕರಿಸಲಿಕ್ಕಾಗಿದೆ. ಗುಣ ವೈಶಿಷ್ಟ್ಯಗಳ ಧಾರಾಳತ್ವವನ್ನು ಆಧಾರವಾಗಿರಿಸಿ ಸೃಷ್ಟಿಗಳಲ್ಲಿ ಒಂದನ್ನು ದೇವನೆಂದು ಆರಿಸಲು ಭಾವಿಸುವುದಾದರೆ, ದೇವನಿಗಿರಬೇಕಾದ ಪರಮ ಶ್ರೇಷ್ಠ ಗುಣಗಳು ಆ ಸೃಷ್ಟಿಯಲ್ಲಿವೆಯೆಂದು ಊಹಿಸುವುದಾದರೆ, ಅದೆಂದಿಗೂ ಸಕಲ ಶ್ರೇಷ್ಠ ಗುಣಗಳಿಂದಲೂ ವಿಶೇಷಣಗಳಿಂದಲೂ ವಿಭೂಷಿತನಾಗಿರುವ, ಸ್ವಯಂ ಪರಿಪೂರ್ಣನೂ ಅತ್ಯುನ್ನತನೂ ಆಗಿರುವ ನಿಜವಾದ ದೇವನಿಗೆ ಸಮಾನವಾಗಿರಲಾರದು. ಸೃಷ್ಟಿಕರ್ತನಿಗೆ ಮಾತ್ರ ಸಲ್ಲಿಸಲ್ಪಡಬೇಕಾದ ಆರಾಧನಾದಿ ಭಕ್ತಿಶ್ರದ್ಧೆಗಳಿಗೆ ಸೃಷ್ಟಿಗಳಲ್ಲಿ ಯಾರನ್ನಾದರೂ ಪಾಲುಗಾರನನ್ನಾಗಿ ಮಾಡುವುದು ಬಹುದೊಡ್ಡ ಅನ್ಯಾಯವಾಗಿದೆ.

ಮೇಲೆ ಉದ್ಧರಿಸಿದ ಖುರ್‌ಆನ್ ವಾಕ್ಯದಲ್ಲಿ ದೇವನನ್ನು **"ಆಲಿಮುಲ್ ಗೈಬ್" (عالم الغيب)** ಎಂದು ಹೇಳಲಾಗಿದೆ. ಅಂದರೆ, ಅವನು "ತನ್ನ ತತ್ವವನ್ನು ತಾನು ಮಾತ್ರ ತಿಳಿಯುವ ಅಂತರ್ಯಾಮಿ" ಆಗಿದ್ದಾನೆ. ಅವನ ತತ್ವವನ್ನು ಪರಿಮಿತವಾದ ಮನುಷ್ಯ ಶಕ್ತಿಗೆ ಪೂರ್ಣವಾಗಿ ಗ್ರಹಿಸಲು ಸಾಧ್ಯವಿಲ್ಲ. ಸೂರ್ಯ, ಚಂದ್ರ ಮತ್ತಿತರ ದೇವಸೃಷ್ಟಿಗಳ ಸ್ವರೂಪವನ್ನು ತಿಳಿದುಕೊಳ್ಳಲು ನಮಗೆ ಸಾಧ್ಯವಿದೆ. ಆದರೆ ಸೃಷ್ಟಿಕರ್ತನಾದ ದೇವನ ಸತ್ತೆಯನ್ನು ಸಮಗ್ರವಾಗಿ ಗ್ರಹಿಸಲಿಕ್ಕೆ ಸಾಧ್ಯವಿಲ್ಲ.

ಮೇಲಿನ ವಾಕ್ಯದಲ್ಲಿ ದೇವನನ್ನು **"ಆಲಿಮುಶ್ಶಹಾದತ್"** (عالم الشهادة) ಎಂದು ಸಹ ಹೇಳಲಾಗಿದೆ. ಅಂದರೆ "ತನಗೆ ಯಾವುದೂ ಗೋಪ್ಯವಾಗಿರದೆ ಸಕಲವನ್ನೂ ಸ್ಪಷ್ಟವಾಗಿ ತಿಳಿಯುವವನು." ಅವನು ಸೃಷ್ಟಿಸಿದ ವಸ್ತುಗಳಲ್ಲಿ ಯಾವುದೇ ವಸ್ತುವಿನ ಬಗ್ಗೆ ಅವನು ಪರಿಪೂರ್ಣವಾಗಿ ತಿಳಿಯದಿರುವುದು ಅವನ ದೇವತ್ವಕ್ಕೆ ಅನುಯೋಜ್ಯವಲ್ಲ. ಅವನು ಪ್ರಪಂಚದ ಕಣ ಕಣಗಳನ್ನು ಸೂಕ್ಷ್ಮವಾಗಿ ಕಾಣುತ್ತಾನೆ. ಆದರೆ ಮನುಷ್ಯನಿಗೆ ಅದು ಸಾಧ್ಯವಲ್ಲ. ಈ ಪ್ರಪಂಚ ವ್ಯವಸ್ಥೆಯನ್ನು ಯಾವಾಗ ಕೊನೆಗೊಳಿಸಬೇಕೆಂದು ದೇವನು ಬಲ್ಲನು. ಅವನಿಗಲ್ಲದೆ ಮತ್ತ್ಯಾರಿಗೂ ಅದರ ಅರಿವಿಲ್ಲ. ಅವನೇ ಎಲ್ಲ ವಸ್ತುಗಳ ಕಾಲ ನಿರ್ಣಯವನ್ನು ಪೂರ್ಣವಾಗಿ ತಿಳಿಯುತ್ತಾನೆ.

ದೇವನ ಇನ್ನೊಂದು ವಿಶೇಷಣವಾಗಿ **"ಹುವರ್‍ರಹ್ಮಾನ್"** (هوالرّحمٰن) ಎಂದು ಹೇಳಲಾಗಿದೆ. ಅಂದರೆ, ಅವನು ಸಕಲ ಜೀವಜಾಲಗಳನ್ನು ಸೃಷ್ಟಿಸುವುದಕ್ಕೆ ಮುಂಚಿತವಾಗಿ ಅವುಗಳ ಸುಖಸೌಕರ್ಯಗಳಿಗೆ ಅವಶ್ಯವಾದ ಸಕಲ ಸಾಮಗ್ರಿಗಳನ್ನು ಯಾವುದೇ ಕರ್ಮದ ಪ್ರತಿಫಲವಾಗಿಯಲ್ಲದೆ, ತನ್ನ ಅಪಾರ ದಯೆಯಿಂದ ಸಿದ್ಧಪಡಿಸಿದವನಾಗಿದ್ದಾನೆ. ನಮ್ಮ ಸೃಷ್ಟಿಗೂ ಕರ್ಮಾನುಷ್ಠಾನಕ್ಕೂ ಮೊದಲೇ ಅವನು ನಮ್ಮ ಅಗತ್ಯಕ್ಕಾಗಿ ಸೂರ್ಯನನ್ನೂ ವಿಶಾಲ ಭೂಮಿಯನ್ನೂ ಅದರಲ್ಲಡಕವಾದ ಅಸಂಖ್ಯಾತ ಅನುಗ್ರಹ ವಸ್ತುಗಳನ್ನೂ ತಯಾರಿಸಿಟ್ಟು ತನ್ನ ನಿಸ್ಸೀಮ ದಯೆಯನ್ನು ಪ್ರಕಟಿಸಿದ್ದಾನೆ. ಅವನ ಈ ಅತೀವ ದಯಾಗುಣಕ್ಕೆ "ರಹ್ಮಾನಿಯತ್" ಎಂದೂ ಆ ಸರ್ವದಾತನನ್ನು "ಅರ್‍ರಹ್ಮಾನ್" ಅಥವಾ "ದಯಾವಂತ" ಎಂದೂ ಪವಿತ್ರ ಖುರ್‌ಆನ್ ಹೇಳುತ್ತದೆ.

ಇನ್ನೊಂದು ವಿಶೇಷಣ **"ಅರ್‍ರಹೀಂ"** (الرّحيم) ಎಂದಾಗಿದೆ. ಅಂದರೆ, ಸತ್ಕರ್ಮಗಳಿಗೆ ಸತ್ಫಲವನ್ನು ನೀಡುವವನೂ ಯಾರ ಪ್ರಯತ್ನವನ್ನು ಕೂಡ ನಿಷ್ಫಲಗೊಳಿಸದವನೂ ಆದ ಕರುಣಾವಂತ. ದೇವನ ಈ ಕರುಣಾ ಪ್ರಕಟಣೆಗೆ "ರಹೀಮಿಯ್ಯತ್" ಎಂದೂ ಆ ಕೃಪಾ ನಿಧಿಯನ್ನು "ಅರ್‍ರಹೀಂ" ಎಂದೂ ಹೇಳಲಾಗಿದೆ.

ಪವಿತ್ರ ಖುರ್‌ಆನಿನಲ್ಲಿ ದೇವನ ಕುರಿತು ಹೇಳಲಾದ ಮತ್ತೊಂದು ವಿಶೇಷ ಗುಣ ಇದಾಗಿದೆ:

مٰلِكِ يَوْمِ الدِّيْنِ

ಅವನು ಪ್ರತಿಫಲ ನೀಡಲ್ಪಡುವ ದಿನದ ಒಡೆಯನಾಗಿರುವನು. **(1:4)**

ಅಂದರೆ, ಕರ್ಮಕ್ಕನುಸಾರವಾದ ಶಿಕ್ಷಾರಕ್ಷೆಯ ಸರ್ವಾಧಿಕಾರವನ್ನು ಹೊಂದಿರುವವನು. ಸರ್ವಲೋಕದ ನ್ಯಾಯಾಧೀಶ ಅವನೇ ಆಗಿದ್ದಾನೆ. ಅವನು ತನಗೆ ಸೃಷ್ಟಿಗಳೊಂದಿಗೆ ಯಾವುದೇ ಸಂಬಂಧವಿಲ್ಲದಂತೆ ಭೂಮ್ಯಾಕಾಶಗಳ ಅಧಿನಾಯಕತ್ವವನ್ನು ಇನ್ನ್ಯಾರಿಗಾದರೂ ಒಪ್ಪಿಸಲಿಲ್ಲ; ಹಾಗೆಯೇ ಸ್ವತಂತ್ರವಾಗಿ ಲೋಕದಲ್ಲಿ ಶಿಕ್ಷಾರಕ್ಷ ಕ್ರಮವನ್ನು ನಡೆಸುವ ಅಧಿಕಾರವನ್ನೂ ಯಾರಿಗೂ ನೀಡಿಲ್ಲ.

ದೇವನ ಗುಣ ಮಹಿಮೆಗಳನ್ನು ಮತ್ತೂ ವಿವರಿಸುತ್ತಾ ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

اَلْمَلِكُ الْقُدُّوسُ السَّلٰمُ الْمُؤْمِنُ الْمُهَيْمِنُ (59:24)

ಈ ವಾಕ್ಯದಲ್ಲಿ ಹೇಳಲಾದ ದೇವನ ಮಹಿಮೆಗಳಲ್ಲಿ ಒಂದು, **"ಅಲ್ ಮಲಿಕುಲ್ ಖುದ್ದೂಸ್"** (الملك القدوس) ಎಂದಾಗಿದೆ. ಅಂದರೆ, ಯಾವುದೇ ನ್ಯೂನತೆಯಿಲ್ಲದ ಪರಿಶುದ್ಧನಾದ ರಾಜ. ಲೌಕಿಕ ಅರಸೊತ್ತಿಗೆ ದೋಷರಹಿತವಲ್ಲ ಎಂಬುದು ಸ್ಪಷ್ಟ. ಒಂದು ರಾಜ್ಯದ ಪ್ರಜೆಗಳೆಲ್ಲ ಆ ರಾಜ್ಯವನ್ನು ಬಿಟ್ಟು ಬೇರೆಡೆಗೆ ವಲಸೆ ಹೋದರೆ ಆ ತ್ಯಜಿಸಲ್ಪಟ್ಟ ರಾಜ್ಯದ ರಾಜನಿಗೆ ಯಾವ ರಾಜತನ ಬಾಕಿಯಾಗುತ್ತದೆ? ಅಥವಾ ಭಯಂಕರವಾದ ಕ್ಷಾಮಬಾಧೆ ಕಾರಣದಿಂದ ಪ್ರಜೆಗಳೆಲ್ಲ ರಾಜ್ಯಕರ ತೆರಲು ಅಶಕ್ತರಾದರೆ ಆ ರಾಜ್ಯದ ರಾಜನ ಸ್ಥಿತಿಯೇನಾದೀತು? ಹಾಗೆಯೇ, ಪ್ರಜೆಗಳೆಲ್ಲ ರಾಜನಿಗೆದುರಾಗಿ ದಂಗೆಯೆದ್ದು ಆತನ ರಾಜತನಕ್ಕೆ ಸವಾಲೊಡ್ಡಿದರೆ, ಆ ರಾಜ ತನ್ನ ಅಧಿಕಾರವನ್ನು ಉಳಿಸಿಕೊಳ್ಳುವ ಬಗೆ ಹೇಗೆ? ಆದರೆ ಸರ್ವಾಧಿನಾಥನಾದ ದೇವನ ಪ್ರಭುತ್ವ ಈ ರೀತಿಯದ್ದಲ್ಲ. ಅವನ ಆಡಳಿತೆ ಲೌಕಿಕ ರಾಜಾಧಿಕಾರದಿಂದ ಸಂಪೂರ್ಣ ಭಿನ್ನವಾದುದು. ಅವನಾದರೋ, ಸಮಸ್ತ ಬ್ರಹ್ಮಾಂಡವನ್ನು ಒಂದೇ ಕ್ಷಣದಲ್ಲಿ ನಾಶಪಡಿಸಲಿಕ್ಕೂ ಪುನಃ ಹೊಸದಾಗಿ ಸೃಷ್ಟಿಜಾಲಗಳನ್ನು ಉಂಟುಮಾಡಲಿಕ್ಕೂ ಶಕ್ತನಾದ ಕರ್ತನಾಗಿದ್ದಾನೆ. ಅವನು ಹೀಗೆ ಸರ್ವಶಕ್ತನಾದ ಸೃಷ್ಟಿಕರ್ತನಲ್ಲದಿರುತ್ತಿದ್ದರೆ ನ್ಯಾಯ ಪಾಲಿಸಿ, ತನ್ನ ಆಡಳಿತೆ ನಡೆಸಲು ಅವನಿಗೆ ಸಾಧ್ಯವಾಗುತ್ತಿರಲಿಲ್ಲ. ಏಕೆಂದರೆ, ಹೊಸದಾಗಿ ಸೃಷ್ಟಿಸಲು ಅವನು ಶಕ್ತನಲ್ಲವೆಂದಾದರೆ ಅವನು ಸೃಷ್ಟಿಲೋಕಕ್ಕೆ ಒಮ್ಮೆ ಮುಕ್ತಿಯನ್ನು ನೀಡಿದ ನಂತರ ಆ ಮೊದಲ ಸೃಷ್ಟಿಯನ್ನೇ ಇನ್ನೊಮ್ಮೆ ಈ ಲೋಕಕ್ಕೆ ಕಳುಹಿಸಲಿಕ್ಕಾಗಿ ಅವರೆಡೆಯಿಂದ ಅನ್ಯಾಯವಾದ ರೀತಿಯಲ್ಲಿ ಅವರ ಮುಕ್ತಿಯನ್ನು ವಾಪಸು ಪಡೆಯಲು ನಿರ್ಬಂಧಿತನಾಗುವನು. ಈ ಕ್ರಮ ಅವನ ದೇವತ್ವಕ್ಕೆ ಕಳಂಕಕಾರಿಯಾಗಿದೆ; ಮಾತ್ರವಲ್ಲ ಇದರಿಂದ ಅವನ ರಾಜತನ ಭೌತಿಕ ರಾಜತನದಂತೆಯೇ ನ್ಯೂನತೆಯಿಂದ ಕೂಡಿದ್ದೆಂದು ವ್ಯಕ್ತವಾಗುವುದು.

ರಾಜ್ಯಭಾರಕ್ಕಾಗಿ ಆಡಳಿತಾಧಿಕಾರಿಗಳು ನಿರ್ಮಿಸುವ ನಿಯಮಗಳು ಯಾವಾಗಲೂ ಕುಂದು ಕೊರತೆಗಳಿಂದ ಕೂಡಿರುತ್ತವೆ. ಅವರು ಸ್ವಾರ್ಥ ಉದ್ದೇಶಗಳನ್ನು ಸಾಧಿಸಲು ಅನ್ಯಾಯದ ಮಾರ್ಗವನ್ನು ಅವಲಂಬಿಸಬೇಕೆಂದು ತೋರುವಾಗ ಸಂಕೋಚಪಡದೆ ಅದನ್ನೇ ರಾಜ್ಯ ನೀತಿಯೆಂದು ಪರಿಗಣಿಸುತ್ತಾರೆ. ಉದಾಹರಣೆಗೆ, ಒಂದು ಹಡಗನ್ನು ರಕ್ಷಿಸಲಿಕ್ಕಾಗಿ ಒಂದು ದೋಣಿಯನ್ನು ಅದರ ನಾವಿಕರ ಸಹಿತ ನಾಶಪಡಿಸಲು ಈ ರಾಜ ನಿಯಮಗಳು ಅನುಮತಿ ನೀಡುತ್ತವೆ. ದೇವನಿಗಾದರೆ ಇಂತಹ ಸಂದಿಗ್ಧ ಕ್ರಮದ ಆವಶ್ಯಕತೆ ಇಲ್ಲ. ಒಟ್ಟಾರೆ, ದೇವನು ಸರ್ವಶಕ್ತನೂ ನಾಸ್ತಿಯಿಂದ ಸಕಲವನ್ನು ಸೃಷ್ಟಿಸುವವನೂ ಅಲ್ಲವಾಗಿದ್ದರೆ, ಬಲಹೀನರಾದ ರಾಜರಂತೆ ಅವನು ಸಹ ತನ್ನ ಶಕ್ತಿಯನ್ನು ತೋರ್ಪಡಿಸುವುದರ ಬದಲಿಗೆ ಅನ್ಯಾಯ ಮಾರ್ಗವನ್ನು ಕೈಗೊಳ್ಳಬೇಕಾಗುತ್ತಿತ್ತು; ಅಥವಾ ನೀತಿ – ನ್ಯಾಯ ಪಾಲಿಸಲಿಕ್ಕಾಗಿ ತನ್ನ ದೇವತ್ವವನ್ನೇ ಕೈಬಿಡಬೇಕಾಗುತ್ತಿತ್ತು. ಆದರೆ ದೇವನ ಹಡಗು ಪೂರ್ಣ ಶಕ್ತಿಪ್ರಭಾವದಿಂದ ನೀತಿ ಮತ್ತು ನ್ಯಾಯದ ಸಮುದ್ರದಲ್ಲಿ ಸಂಚರಿಸುತ್ತಲಿದೆ.

ದೇವನ ಮತ್ತೊಂದು ಹೆಸರು **"ಅಸ್ಸಲಾಮ್"** (السلام) ಎಂದಾಗಿದೆ. ಅಂದರೆ, ದೇವನು ನ್ಯೂನತೆಗಳಿಂದಲೂ ವಿಪತ್ತುಗಳಿಂದಲೂ ಕಷ್ಟತೆಗಳಿಂದಲೂ ಸುರಕ್ಷಿತನೂ ರಕ್ಷಣೆ ನೀಡುವವನೂ ಆಗಿದ್ದಾನೆ. ಈ ವಿಶಿಷ್ಟ ನಾಮದ ಅರ್ಥ ಬಹಳ ಸ್ಪಷ್ಟ. ಸೃಷ್ಟಿಗಳಂತೆಯೇ ದೇವನು ಸಹ ವಿಪತ್ತುಗಳಿಗೆ ಗುರಿಯಾಗಿ, ಜನರ ಕೈಯಿಂದ ಪೀಡನೆಗಳನ್ನು ಅನುಭವಿಸಿ ಅಥವಾ ತನ್ನ ಜನರ ಕೈಯಿಂದಲೇ ವಧಿಸಲ್ಪಟ್ಟು ತನ್ನ ಉದ್ದೇಶಗಳನ್ನು ಸಾಧಿಸಲಾಗದೆ ಪರಾಭವಗೊಂಡರೆ ಅಂತಹ ದೇವನು ನಮಗೆ ಆಪತ್ಕಾಲದಲ್ಲಿ ಸಹಾಯವನ್ನೂ ರಕ್ಷಣೆಯನ್ನೂ ನೀಡಲು ಸಮರ್ಥನೆಂದು ನಂಬಿ ಭರವಸೆಯನ್ನಿಡುವುದು ಹೇಗೆ? ಮಿಥ್ಯಾ ದೈವಗಳ ಕುರಿತು ಖುರ್‌ಆನ್ ಹೀಗೆ ಹೇಳುತ್ತದೆ:

إِنَّ الَّذِينَ تَدْعُونَ مِن دُونِ اللَّهِ لَن يَخْلُقُوا ذُبَابًا وَلَوِ اجْتَمَعُوا لَهُ ۖ وَإِن يَسْلُبْهُمُ الذُّبَابُ
شَيْئًا لَّا يَسْتَنقِذُوهُ مِنْهُ ۚ ضَعُفَ الطَّالِبُ وَالْمَطْلُوبُ -

مَا قَدَرُوا اللَّهَ حَقَّ قَدْرِهِ ۗ إِنَّ اللَّهَ لَقَوِيٌّ عَزِيزٌ

ನಿಜವಾದ ಪರಮಾತ್ಮನನ್ನು ಬಿಟ್ಟು, ನೀವು ಸಹಾಯ ಯಾಚಿಸುವ ಮಿಥ್ಯಾ ದೇವರುಗಳೆಲ್ಲ ಒಟ್ಟು ಸೇರಿದರೂ ಅವರಿಗೆ ಒಂದು ನೊಣವನ್ನಾಗಲಿ ಸೃಷ್ಟಿಸಲು ಸಾಧ್ಯವಿಲ್ಲ. ಮಾತ್ರವಲ್ಲ. ನೊಣ ಅವರ ಕೈಯಿಂದ ಏನಾದರೂ ವಸ್ತುವನ್ನು

ಕಿತ್ತುಕೊಂಡು ಹೋದರೆ ಅವರಿಗೆ ಅದನ್ನು ನೊಣದಿಂದ ವಾಪಸು ಪಡೆಯುವ ಶಕ್ತಿ ಕೂಡ ಇರುವುದಿಲ್ಲ. ಇಂತಹ ದೇವರುಗಳನ್ನು ಆರಾಧಿಸುವವರು ವಿವೇಕಹೀನರೂ ಆ ದೇವರುಗಳು ಶಕ್ತಿಹೀನರೂ ಆಗಿದ್ದಾರೆ. ಯಥಾರ್ಥ ಪರಮಾತ್ಮ, ಶಕ್ತರಲ್ಲಿ ಅತ್ಯಂತ ಶಕ್ತನೂ ಎಲ್ಲವನ್ನು ಜಯಿಸುವವನೂ ಆಗಿದ್ದಾನೆ. ಅವನನ್ನು ಹಿಡಿಯಲಿಕ್ಕೋ ಹೊಡೆಯಲಿಕ್ಕೋ ಸಾಧ್ಯವಿಲ್ಲ. ದೇವನ ಕುರಿತು ಅಸಂಬದ್ಧ ಕಲ್ಪನೆಗಳಿಗೆ ಅಧೀನರಾದವರು ದೇವನ ಮಹತ್ವವನ್ನಾಗಲಿ, ಅವನ ಸ್ಥಾನವನ್ನಾಗಲಿ ಸರಿಯಾಗಿ ತಿಳಿದಿರುವುದಿಲ್ಲ. **(22: 74,75)**

ಇದಕ್ಕೆ ಮೊದಲು ಉದ್ಧರಿಸಲಾದ ಖುರ್‌ಆನ್ ವಾಕ್ಯದಲ್ಲಿ ಹೇಳಲಾದ ದೇವನ ವಿಶೇಷತೆಗಳಲ್ಲಿ ಇನ್ನೊಂದು **'ಅಲ್‌ಮುಅ್‌ಮಿನ್'** (**المؤمن**) ಎಂದಾಗಿದೆ. ಅಂದರೆ, ಸಮಾಧಾನ ಮತ್ತು ಶಾಂತಿಯನ್ನು ಪ್ರದಾನ ಮಾಡುವವನೂ ತನ್ನ ಏಕತೆಗೂ ಶ್ರೇಷ್ಠತೆಗೂ ಸಾಕ್ಷ್ಯಗಳನ್ನು ನೀಡಿ ಶಾಂತಿಯನ್ನು ದಯಪಾಲಿಸುವವನೂ ಆಗಿರುವ ದೇವ. ಈ ಪಾವನನಾಮ ಸೂಚಿಸುವುದೇನೆಂದರೆ, ಸತ್ಯದೇವನನ್ನು ನಂಬುವವನು ತನ್ನ ಬಳಿ ಶಕ್ತಿಯುತ ಪುರಾವೆಗಳಿರುವುದರಿಂದ ಯಾರ ಮುಂದೆಯೂ ಲಜ್ಜಿತನಾಗಲಾರ. ಅವನು ದೇವನ ಮುಂದೆಯೂ ಲಜ್ಜಿತನಾಗಲಾರ. ಆದರೆ ಮಿಥ್ಯಾ ದೇವರುಗಳನ್ನು ನಂಬುವವನು ಸದಾ ಕ್ಲೇಶಕ್ಕೊಳಗಾಗುತ್ತಾನೆ. ಅವನು ತನ್ನ ನಂಬಿಕೆಯ ಆಧಾರವಾಗಿ ಸಾಕ್ಷ್ಯಗಳನ್ನು ತೋರಿಸುವುದರ ಬದಲು ಪರಿಹಾಸಕ್ಕೆ ಗುರಿಯಾಗದಿರಲು ಪ್ರತಿಯೊಂದು ವಿವೇಕಹೀನ ಸಂಗತಿಗಳನ್ನು ಗೂಢತತ್ವಗಳೆಂದು ವ್ಯಾಖ್ಯಾನಿಸುತ್ತಾನೆ ಮತ್ತು ಸಾಬೀತಾದ ತಪ್ಪುಗಳನ್ನು ಮುಚ್ಚಿಡಲು ಪ್ರಯತ್ನಿಸುತ್ತಾನೆ.

ಆ ಪವಿತ್ರ ಖುರ್‌ಆನ್ ವಾಕ್ಯ ಮುಂದುವರಿದು ಹೇಳುವ ದೇವನ ವಿಶೇಷತೆಗಳಿವು:

الْمُهَيْمِنُ الْعَزِيزُ الْجَبَّارُ الْمُتَكَبِّرُ

ಅವನು ಸರ್ವ ರಕ್ಷಕನೂ ಪರಿಪಾಲಕನೂ ಸರ್ವವನ್ನು ಜಯಿಸುವ ಪ್ರತಾಪಶಾಲಿಯೂ ಕುಂದು ಕೊರತೆಗಳನ್ನು ನೀಗಿಸುವವನೂ ಯಾರಿಂದಲೂ ಯಾವುದೇ ನೆರವನ್ನು ಬಯಸದವನೂ ಎಲ್ಲರಿಗೂ ಆಸರೆಯಾಗಿರುವ ಪ್ರಭಾವಶಾಲಿಯೂ ಆಗಿದ್ದಾನೆ. **(59:24)**

ಪವಿತ್ರ ಖುರ್‌ಆನ್ ಮುಂದುವರಿದು ಹೇಳುತ್ತದೆ:

هُوَ اللّٰهُ الْخَالِقُ الْبَارِئُ الْمُصَوِّرُ لَهُ الْاَسْمَآءُ الْحُسْنٰى

يُسَبِّحُ لَهُ مَا فِي السَّمٰوٰتِ وَالْاَرْضِ ۚ وَهُوَ الْعَزِيْزُ الْحَكِيْمُ

ಅವನು ಶರೀರಗಳನ್ನು ಮತ್ತು ಆತ್ಮಗಳನ್ನು ಸೃಷ್ಟಿಸುವವನೂ ಗರ್ಭದಲ್ಲಿರುವ ಭ್ರೂಣಕ್ಕೆ ರೂಪಕೊಡುವವನೂ ಆಗಿದ್ದಾನೆ. ಸಕಲ ಉತ್ಕೃಷ್ಟ ನಾಮಗಳು ಅವನಿಗಿವೆ. ಆಕಾಶ ಮಂಡಲಗಳಲ್ಲಿ ಮತ್ತು ಭೂಮಿಯಲ್ಲಿರುವವರು ಅವನ ಮಹತ್ವವನ್ನು ಕೊಂಡಾಡುತ್ತಾರೆ; ಅವನ ಪರಿಶುದ್ಧತೆಯನ್ನು ಶ್ಲಾಘಿಸುತ್ತಾರೆ. ಅವನು ಪ್ರತಾಪಶಾಲಿಯೂ ವಿವೇಕವಂತನೂ ಆಗಿದ್ದಾನೆ. **(59:25)**

ಈ ವಾಕ್ಯ ಬಾಹ್ಯಾಕಾಶದಲ್ಲಿ ಸಹ ನಿವಾಸಿಗಳಿರುವರೆಂದೂ ಅವರು ದೇವನ ಮಾರ್ಗದರ್ಶನ ಪ್ರಕಾರ ವರ್ತಿಸುವವರಾಗಿದ್ದಾರೆಂದೂ ಸೂಚಿಸುತ್ತದೆ.

ಇನ್ನೊಂದೆಡೆಯಲ್ಲಿ ಪವಿತ್ರ ಖುರ್‌ಆನ್ ಹೇಳುತ್ತದೆ:

عَلٰى كُلِّ شَيْءٍ قَدِيْرٌ

ಅಲ್ಲಾಹನು ಎಲ್ಲ ಕಾರ್ಯಗಳಲ್ಲೂ ಸಾಮರ್ಥ್ಯವುಳ್ಳ ಸರ್ವಶಕ್ತನಾಗಿದ್ದಾನೆ. **(2:149)**

ಈ ವಾಕ್ಯ, ಸತ್ಯ ದೇವನನ್ನು ಆರಾಧಿಸುವವರಿಗೆ ಒಂದು ಸಾಂತ್ವನ ವಚನವಾಗಿದೆ. ದೇವನು ಅಶಕ್ತನೂ ಬಲಹೀನನೂ ಎಂದಾದರೆ ಅಂತಹ ದೇವನಿಂದ ಮನುಷ್ಯನು ಏನನ್ನು ಆಶಿಸಲಿಕ್ಕಿದೆ?

ಪವಿತ್ರ ಖುರ್‌ಆನ್ ಇನ್ನೂ ದೇವನ ಗುಣಗಳನ್ನು ವಿವರಿಸುತ್ತದೆ:

رَبِّ الْعٰلَمِيْنَ - الرَّحْمٰنِ الرَّحِيْمِ - مٰلِكِ يَوْمِ الدِّيْنِ

ಪರಮಾತ್ಮನು ಸರ್ವಲೋಕ ಪರಿಪಾಲಕನೂ ಪರಮ ದಯಾಳುವೂ ಕೃಪಾನಿಧಿಯೂ ವಿಧಿ ದಿನದ ಸರ್ವಾಧಿಪತಿಯೂ ಆಗಿದ್ದಾನೆ. **(1:2–4)**

اُجِيْبُ دَعْوَةَ الدَّاعِ اِذَا دَعَانِ

ಅವನು ಪ್ರಾರ್ಥಿಸುವವನ ಪ್ರಾರ್ಥನೆಗಳನ್ನು ಕೇಳುವವನೂ ಉತ್ತರ ನೀಡುವವನೂ ಆಗಿದ್ದಾನೆ. **(2:187)**

اَلْحَيُّ الْقَيُّوْمُ

ಅವನು ಸದಾ ಜೀವಂತನೂ ಸರ್ವಜೀವಿಗಳ ಜೀವನೂ ಸಕಲ ಜೀವಿಗಳಿಗೆ ಆಸರೆಯೂ ಆಗಿದ್ದಾನೆ. **(3:3, 2:256)**

ಈ ವಚನದಲ್ಲಿ ದೇವನು ಸದಾ ಜೀವಂತನು ಎಂದು ಹೇಳಿದ್ದು, ಅವನು ಸದಾ ಜೀವಿಸುತ್ತಿರುವ ಶಾಶ್ವತನು ಅಲ್ಲವೆಂದಾದ ಪಕ್ಷದಲ್ಲಿ, ಅವನು ಒಂದು ವೇಳೆ ನಮಗಿಂತ ಮೊದಲು ತೀರಿಹೋಗುವವನೋ ಎಂಬ ಶಂಕೆಯನ್ನು ನಿವಾರಿಸಲಿಕ್ಕೋಸ್ಕರವಾಗಿದೆ.

قُلْ هُوَ اللّٰهُ اَحَدٌ- اَللّٰهُ الصَّمَدُ- لَمْ يَلِدْ وَلَمْ يُوْلَدْ- وَلَمْ يَكُنْ لَّهٗ كُفُوًا اَحَدٌ

ದೇವನು ಏಕನೂ ಎಲ್ಲಕ್ಕೂ ಆಸರೆಯಾಗಿರುವ ಆಧಿನಾಥನೂ ಆಗಿದ್ದಾನೆ. ಅವನಿಗೆ ಪುತ್ರನಿಲ್ಲ; ಅವನು ಯಾರ ಪುತ್ರನೂ ಅಲ್ಲ. ಅವನಿಗೆ ಸರಿಸಮಾನರಾಗಿ ಯಾರೂ ಇಲ್ಲ. **(112:2–5)**

ಪರಮಾತ್ಮನ ಏಕತೆಯ ಕುರಿತು ಸರಿಯಾಗಿ ನಂಬಿಕೊಂಡು ಆ ನಂಬಿಕೆಯಲ್ಲಿ ಲವಲೇಶವಾದರೂ ಹೆಚ್ಚುಕಮ್ಮಿ ಮಾಡಬಾರದೆಂಬ ವಿಚಾರ ಜ್ಞಾಪಕದಲ್ಲಿರಿಸಬೇಕಾಗಿದೆ. ಸೃಷ್ಟಿಕರ್ತನಾದ ದೇವನಿಗೆ ಸಂಬಂಧಿಸಿ ಕೈಗೊಳ್ಳಬೇಕಾದ ನೀತಿಧರ್ಮ ಇದೇ ಆಗಿದೆ. ಇದುವರೆಗೆ ಪ್ರತಿಪಾದಿಸಲಾದ ನೈತಿಕ ತತ್ವಗಳು ಪವಿತ್ರ ಖುರ್‌ಆನಿನ ನೀತಿ ಶಾಸ್ತ್ರದ ಒಂದು ಭಾಗವಾಗಿದೆ. ಪವಿತ್ರ ಖುರ್‌ಆನಿನ ಈ ಅಧ್ಯಾಪನದ ಒಂದು ವೈಶಿಷ್ಟ್ಯವೇನೆಂದರೆ, ಸಕಲ ನೈತಿಕ ಗುಣಗಳು ಅಮಿತತೆ ಹಾಗೂ ನ್ಯೂನತೆಗಳಿಂದ ಹೊರತಾಗಿವೆ. ಯಾವುದೇ ಸದ್ಗುಣ ಸರಿಯಾದ ನೈತಿಕ ಸೀಮೆಯೊಳಗೆ ಪ್ರಕಟವಾಗುವುದಾದರೆ ಮಾತ್ರವೇ ಪವಿತ್ರ ಖುರ್‌ಆನಿನ ಅಧ್ಯಾಪನೆಗನುಸಾರವಾದ ಯಥಾರ್ಥ ಸದ್ಗುಣವಾಗುತ್ತದೆ. ನೈಜ ಸದ್ಗುಣ ಎರಡು ಮೇರೆಗಳ ಮಧ್ಯದಲ್ಲಿರುತ್ತದೆ. ಬೇರೆ ಮಾತಿನಲ್ಲಿ ಹೇಳುವುದಾದರೆ, ಅಮಿತತೆ ಮತ್ತು ನ್ಯೂನತೆ ಎಂಬ ಎರಡು ತುದಿಗಳ ಮಧ್ಯದ ಸ್ಥಾನ ಸದ್ಗುಣದ್ದಾಗಿದೆ. ಮಧ್ಯಮ ಮಾರ್ಗಕ್ಕೆ ಪ್ರೇರೇಪಿಸುವ ಮತ್ತು ಮಧ್ಯಮ ಸ್ಥಾನದಲ್ಲಿ ಸ್ಥಿರಗೊಳ್ಳುವ ಎಲ್ಲ ಸ್ವಭಾವಗಳು ಶ್ರೇಷ್ಠವಾದ ನೈತಿಕ ಗುಣಗಳನ್ನು ಸೃಷ್ಟಿಸಲು ಸಾಧಕವಾಗಿವೆ. ಸಂದರ್ಭವನ್ನರಿತು ಯಥೋಚಿತವಾಗಿ ವರ್ತಿಸುವುದು ಮಧ್ಯಮ ಪಥವಾಗಿದೆ. ಒಬ್ಬ ರೈತ ಕಾಲಕ್ಕೆ ಬಹಳ ಮುಂಚಿತವಾಗಿ ಅಥವಾ ಬಹಳ ತಡವಾಗಿ ಬಿತ್ತುವನಾದರೆ ಅವನು ಮಧ್ಯಮ ವಿಧಾನವನ್ನು ಕೈಬಿಟ್ಟಂತಾಗುತ್ತದೆ. ಸದ್ಗುಣ, ಸತ್ಯ, ವಿವೇಕ ಎಲ್ಲವೂ ಮಧ್ಯಮ ಪಥದಲ್ಲಿವೆ. ಮಧ್ಯಮ ಮಾರ್ಗವಾದರೋ ಔಚಿತ್ಯದಿಂದ ಕೂಡಿಕೊಂಡಿದೆ. ಎರಡು ತುದಿಗಳಲ್ಲಿರುವ ಅಸತ್ಯ ಮಾರ್ಗಗಳ ಮಧ್ಯದಲ್ಲಿ ಸತ್ಯ ಮಾರ್ಗವಿದೆ. ಯಥೋಚಿತ ನೀತಿ ಮನುಷ್ಯನನ್ನು ಮಧ್ಯಮ ಪಥದಲ್ಲಿ ಸಂಚರಿಸುವಂತೆ ಮಾಡುತ್ತದೆಯೆಂಬುದರಲ್ಲಿ ಸಂಶಯವಿಲ್ಲ. ಪರಮಾತ್ಮನನ್ನು ಅರಿತು ನಂಬುವ ವಿಚಾರದಲ್ಲೂ ಮಧ್ಯಮಾರ್ಗವನ್ನು ಅವಲಂಬಿಸಬೇಕಾಗಿದೆ. ದೇವ ವಿಶ್ವಾಸಕ್ಕೆ ಸಂಬಂಧಿಸಿದ ಮಧ್ಯಮಾರ್ಗವೇನೆಂದರೆ, ಅವನ ಪರಮಾರ್ಥ

ಗುಣಗಳನ್ನು ಅಲ್ಲಗಳೆದು ಅವನನ್ನು ನಿರ್ಗುಣನೆಂದು ಕಲ್ಪಿಸದಿರುವುದು ಹಾಗೂ ಅವನಿಗೆ ಭೌತಿಕ ವಸ್ತುಗಳೊಡನೆ ಸಾದೃಶ್ಯ ಕಲ್ಪಿಸದಿರುವುದು. ಪವಿತ್ರ ಖುರ್‌ಆನ್ ಪರಮಾತ್ಮನ ವೈಶಿಷ್ಟ್ಯಗಳನ್ನು ವಿವರಿಸುವಾಗ ಈ ಮಧ್ಯಮಾರ್ಗವನ್ನು ಕೈಗೊಂಡಿದೆ. ದೇವನು ಕಾಣುತ್ತಾನೆ, ಕೇಳುತ್ತಾನೆ, ತಿಳಿಯುತ್ತಾನೆ, ಮಾತನಾಡುತ್ತಾನೆ ಮುಂತಾಗಿ ಕಲಿಸುವುದರೊಂದಿಗೆ ಅವನನ್ನು ಯಾವುದೇ ಸೃಷ್ಟಿಯೊಂದಿಗೆ ಸಾದೃಶ್ಯಪಡಿಸದಿರಲಿಕ್ಕೂ ಆ ಪವಿತ್ರ ಗ್ರಂಥ ನಮ್ಮನ್ನು ಎಚ್ಚರಿಸಿದೆ. ಅದು ಹೀಗೆ ಹೇಳುತ್ತದೆ:

لَيْسَ كَمِثْلِهٖ شَيْءٌ

ದೇವನೊಡನೆ ಅಸ್ತಿತ್ವದಲ್ಲೂ ಗುಣದಲ್ಲೂ ತುಲ್ಯವಾಗಿರುವ ಯಾವ ವಸ್ತುವೂ ಇಲ್ಲ. **(42:12)**

فَلَا تَضْرِبُوْا لِلّٰهِ الْاَمْثَالَ

ದೇವನನ್ನು ಸೃಷ್ಟಿಗಳಲ್ಲಿ ಯಾವುದರೊಂದಿಗೂ ಹೋಲಿಸಬೇಡಿರಿ. **(16:75)**

ಒಟ್ಟಿನಲ್ಲಿ, ದೇವನಿಗೆ ಸಂಬಂಧಿಸಿ ಅವನನ್ನು ನಿರ್ಗುಣನೆಂದು ಕಲ್ಪಿಸುವುದು ಹಾಗೂ ಅವನ ಗುಣ ಮಹಾತ್ಮೆಗಳನ್ನು ಇತರ ಸೃಷ್ಟಿಗಳೊಂದಿಗೆ ಹೋಲಿಸುವುದು ಎಂಬೀ ಎರಡು ಮೇರೆಗಳ ಮಧ್ಯಮಾರ್ಗವೇ ಯಥಾರ್ಥ ದೇವನಿರೂಪಣೆಯಾಗಿದೆ. ಇಸ್ಲಾಂ ಅದರ ಸಕಲ ಅಧ್ಯಾಪನೆಗಳಲ್ಲೂ ಈ ಮಧ್ಯನೆಲೆಯನ್ನು ಕೈಗೊಂಡಿದೆ. ಪವಿತ್ರ ಖುರ್‌ಆನ್ ಅದರ ಪ್ರಥಮ ಅಧ್ಯಾಯವಾದ ಸೂರಃ ಫಾತಿಹದಲ್ಲಿ ನಿರ್ದೇಶಿಸಿದ ಪ್ರಾರ್ಥನಾ ವಾಕ್ಯದಲ್ಲೇ ಮಧ್ಯಮಾರ್ಗ ಕೈಗೊಳ್ಳಲು ಬೋಧಿಸಿದೆ:

اِهْدِنَا الصِّرَاطَ الْمُسْتَقِيْمَ - صِرَاطَ الَّذِيْنَ اَنْعَمْتَ عَلَيْهِمْ ۙ غَيْرِ الْمَغْضُوْبِ عَلَيْهِمْ وَلَا الضَّآلِّيْنَ

ನೀನು ನಮ್ಮನ್ನು ಸರಿಯಾದ ಮಾರ್ಗದಲ್ಲಿ ನಡೆಸು; ನೀನು ಅನುಗ್ರಹಿಸಿದವರ ಮಾರ್ಗದಲ್ಲಿ. ನಿನ್ನ ಕ್ರೋಧಕ್ಕೆ ಗುರಿಯಾಗದವರ ಮತ್ತು ಪಥಭ್ರಷ್ಟರಾಗದವರ ಮಾರ್ಗದಲ್ಲಿ. **(1:6.7)**

ಈ ವಾಕ್ಯದಲ್ಲಿ ಮೂರು ವಿಧ ಜನರ ಕುರಿತು ಹೇಳಲಾಗಿದೆ. ಎರಡನೆಯದಾಗಿ ಹೇಳಿದ “ಕ್ರೋಧಕ್ಕೆ ಗುರಿಯಾದವರು” (مغضوب عليهم) ಎಂಬುದರ ತಾತ್ಪರ್ಯ ದೇವನಿಗೆದುರಾಗಿ ಕ್ರೋಧವನ್ನು ತೋರಿಸಿ ಪಾಶವೀಯವಾಗಿ ವರ್ತಿಸಿದುದರ ಫಲವಾಗಿ ದೇವಕ್ರೋಧಕ್ಕೆ ಗುರಿಯಾದವರು. ಮೂರನೆಯದಾಗಿ ಹೇಳಿದ “ಪಥಭ್ರಷ್ಟರಾದವರು”

(ضَالِّين) ಎಂಬುದರ ತಾತ್ಪರ್ಯ ಮೃಗೀಯ ಪ್ರೇರಣೆಗಳಿಗೆ ಅಧೀನರಾಗಿ ಇಂದ್ರಿಯೇಚ್ಛೆಗಳಿಗೆ ಬಲಿಯಾದವರು. ಈ ಎರಡು ಮಾರ್ಗಗಳನ್ನು ಬಿಟ್ಟು ಸತ್ಪಥದಲ್ಲಿ ಚಲಿಸುವವರನ್ನು **"ಅನ್‌ಅಮ್ತ ಅಲೈಹಿಮ್"** (**انعمت عليهم**) ಅಥವಾ **"**ಅನುಗ್ರಹೀತರು**"** ಎಂಬ ಪದದಿಂದ ಪವಿತ್ರ ಖುರ್‌ಆನ್ ಕರೆಯುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಮನುಷ್ಯರನ್ನು ಮಧ್ಯಮ ಮಾರ್ಗದೆಡೆಗೆ ಕೊಂಡೊಯ್ಯುವುದು ಪವಿತ್ರ ಖುರ್‌ಆನಿನ ಉದ್ದೇಶವಾಗಿದೆ. ಮೂಸಾ ಪ್ರವಾದಿಯ ಧರ್ಮಗ್ರಂಥವಾದ **"**ತೌರಾತ್**"** ಪ್ರತೀಕಾರವನ್ನೂ ಈಸಾ ಪ್ರವಾದಿಯ **"**ಇಂಜೀಲ್**"** ಸಹನೆಯನ್ನೂ ನಿಷ್ಕರ್ಷಿಸುವಾಗ, ಪವಿತ್ರ ಖುರ್‌ಆನ್ ಈ ಗುಣಗಳನ್ನು ಯಥೋಚಿತವಾಗಿ ಪ್ರಯೋಗಿಸಿ ಮಧ್ಯನೆಲೆಯನ್ನು ಸ್ವೀಕರಿಸಬೇಕೆಂದು ಬೋಧಿಸುತ್ತದೆ. ಅದು ಹೀಗೆ ಹೇಳುತ್ತದೆ:

وَكَذٰلِكَ جَعَلْنٰكُمْ اُمَّةً وَّسَطًا

ನಾವು ನಿಮ್ಮನ್ನು ಮಧ್ಯಮ ಮಾರ್ಗದಲ್ಲಿ ಚಲಿಸುವ ಸಮುದಾಯವನ್ನಾಗಿ ಮಾಡಿರುವೆವು. **(2:144).** ಅಂದರೆ, ಎಲ್ಲ ಕಾರ್ಯಗಳಲ್ಲೂ ಮಧ್ಯ ನೆಲೆಯನ್ನು ಕೈಗೊಳ್ಳಲು ಬೋಧಿಸಲಾಗಿದೆ.

ಈ ಮಧ್ಯಮಾರ್ಗವನ್ನು ಅವಲಂಬಿಸುವವರು ಅನುಗ್ರಹೀತರು.

خَيْرُ الْاُمُوْرِ اَوْسَطُهَا "ಮಧ್ಯಮಾರ್ಗವೇ ಶ್ರೇಷ್ಠವಾದುದು."

## ಆಧ್ಯಾತ್ಮಿಕ ಸ್ಥಿತಿ

ಇನ್ನು ಮೂರನೆಯ ಘಟ್ಟವಾದ ಆಧ್ಯಾತ್ಮಿಕ ಸ್ಥಿತಿಯ ಕುರಿತು ಪರ್ಯಾಲೋಚಿಸೋಣ. ಪವಿತ್ರ ಖುರ್‌ಆನಿನ ಅಧ್ಯಾಪನ ಪ್ರಕಾರ ಆಧ್ಯಾತ್ಮಿಕ ಸ್ಥಿತಿಯ ಉದ್ಭವಸ್ಥಾನ 'ನಫ್ಸ್ ಮುತ್ಮಇನ್ನ' ಅಥವಾ 'ಶಾಂತಿಯನ್ನು ಗಳಿಸಿದ ಆತ್ಮ' ಎಂದು ಮೊದಲು ಪ್ರಸ್ತಾಪಿಸಲಾಗಿದೆಯಷ್ಟೇ. ಈ ಹಂತದ ಸಂಸ್ಕಾರ ವಿಧಾನವು ಸದ್ಗುಣ ಸಂಪನ್ನನಾದ ಮನುಷ್ಯನನ್ನು ಆಧ್ಯಾತ್ಮಿಕ ಗುಣಸಂಪನ್ನನಾಗಿ ಮಾಡುವುದಾಗಿದೆ. ಎಂದರೆ, ಮನುಷ್ಯನನ್ನು ನೈತಿಕ ಸ್ಥಿತಿಯಿಂದ ಆಧ್ಯಾತ್ಮಿಕ ಸ್ಥಿತಿಯ ಉನ್ನತ ಮಟ್ಟಕ್ಕೆ ಏರಿಸುವುದಾಗಿದೆ. ಪವಿತ್ರ ಖುರ್‌ಆನ್ ಹೇಳುತ್ತದೆ:

يٰۤاَيَّتُهَا النَّفْسُ الْمُطْمَئِنَّةُ - اِرْجِعِىْۤ اِلٰى رَبِّكِ رَاضِيَةً مَّرْضِيَّةً - فَادْخُلِىْ فِىْ عِبٰدِىْ - وَادْخُلِىْ جَنَّتِىْ

> ಎಲೈ ಪರಮಾತ್ಮನಿಂದ ಶಾಂತಿಯನ್ನು ಗಳಿಸಿದ ಆತ್ಮವೇ. ನೀನು ಅವನಲ್ಲಿ ಸಂತೃಪ್ತನಾಗಿಯೂ ಅವನು ನಿನ್ನಲ್ಲಿ ಸಂಪ್ರೀತನಾದ ಸ್ಥಿತಿಯಲ್ಲೂ ನಿನ್ನ ಸಂರಕ್ಷಕನ ಕಡೆಗೆ ಹಿಂತಿರುಗಿ ಬಾ; ನನ್ನ ಭಕ್ತದಾಸರ ಜೊತೆಯಲ್ಲಿ ಸೇರಿ ನನ್ನ ಸ್ವರ್ಗದಲ್ಲಿ ಪ್ರವೇಶಿಸು. **(89:28–31)**

ಆಧ್ಯಾತ್ಮಿಕ ಸ್ಥಿತಿಯ ಕುರಿತು ಪ್ರತಿಪಾದಿಸಲಿಕ್ಕಾಗಿ ಈ ಪವಿತ್ರ ಖುರ್‌ಆನ್ ವಾಕ್ಯಗಳನ್ನು ಸವಿಸ್ತಾರವಾಗಿ ವ್ಯಾಖ್ಯಾನಿಸುವುದು ಅಗತ್ಯ. ಐಹಿಕ ಜೀವಿತದಲ್ಲಿ ಮನುಷ್ಯನಿಗೆ ಪ್ರಾಪ್ತವಾಗುವ ಅತ್ಯುತ್ಕೃಷ್ಟವಾದ ಆಧ್ಯಾತ್ಮಿಕ ಸ್ಥಿತಿ – ತನ್ನ ಸಕಲ ನೆಮ್ಮದಿ, ಸಂತೋಷ, ಸಂತೃಪ್ತಿಗಳನ್ನು ದೇವನಲ್ಲಿ ಮಾತ್ರ ಕಾಣುವುದು ಹಾಗೂ ಅವನಿಂದ ಶಾಂತಿಯನ್ನು ಪಡೆಯುವುದಾಗಿದೆ. ಈ ಸ್ಥಿತಿಯನ್ನು ಬೇರೆ ಮಾತಿನಲ್ಲಿ ಸ್ವರ್ಗೀಯ ಜೀವಿತವೆಂದು ಹೇಳಲಾಗುತ್ತದೆ. ಈ ಹಂತದಲ್ಲಿ ಮನುಷ್ಯನು ತನ್ನ ಪೂರ್ಣವಾದ ಸತ್ಯನಿಷ್ಠೆ, ನಿಷ್ಕಳಂಕತೆ, ಪ್ರಾಮಾಣಿಕತೆಗಳ ಪ್ರತಿಫಲವಾಗಿ ಐಹಿಕ ಜೀವಿತದಲ್ಲೇ ಸ್ವರ್ಗ ಸುಖದ ಅನುಭೂತಿಯನ್ನು ಪಡೆಯುತ್ತಾನೆ. ಇತರರು ಪರಲೋಕದಲ್ಲಿ ಒಂದು ಸ್ವರ್ಗವನ್ನು ನಿರೀಕ್ಷಿಸುತ್ತಿರುವಾಗ ಈತನು ಇಹದಲ್ಲೇ ಸ್ವರ್ಗವನ್ನು ಪ್ರವೇಶಿಸಿರುತ್ತಾನೆ. ಈ ಸ್ಥಿತಿಯನ್ನು ಪಡೆಯುವವನು ಪ್ರಾರ್ಥನಾದಿ ಉಪಾಸನಾ ಕರ್ಮಗಳನ್ನು ಹೊರೆಯೆಂದು ಗಣಿಸದೆ, ಅವೆಲ್ಲ ವಾಸ್ತವದಲ್ಲಿ ತನ್ನ ಅಧ್ಯಾತ್ಮ ಪಾಲನೆ ಪೋಷಣೆಗೂ ಉತ್ಕರ್ಷಕ್ಕೂ ಅಗತ್ಯವೆಂದೂ ತನ್ನ ಆಧ್ಯಾತ್ಮಿಕ ಜೀವಿತಕ್ಕೆ ಮೂಲ ಕಾರಣವಾಗಿರುವ ಆಹಾರವೆಂದೂ ಆ ಕರ್ಮಗಳ ಪ್ರತಿಫಲ ಮುಂದೆ ಪಾರತ್ರಿಕ ಜೀವಿತದಲ್ಲಿ ಮಾತ್ರವೇ ಲಭಿಸಲಿಕ್ಕಿರುವುದಲ್ಲವೆಂದೂ ತಿಳಿದುಕೊಳ್ಳುತ್ತಾನೆ. ಎರಡನೆಯ ಸಂಸ್ಕಾರ ಘಟ್ಟದಲ್ಲಿ, ಮನುಷ್ಯನನ್ನು ಅವನ ಅಶುದ್ಧ ಜೀವಿತದ ಕುರಿತು ದೂಷಿಸುತ್ತಿದ್ದರೂ ಅವನಲ್ಲಿ ಸದ್ವಿಚಾರಗಳನ್ನು ಮಾತ್ರ ಉಂಟುಮಾಡಲಿಕ್ಕಾಗಲಿ, ಕೆಟ್ಟ ವಿಚಾರಗಳನ್ನು ದಮನಿಸಲಿಕ್ಕಾಗಲಿ, ಸದ್ವರ್ತನೆ ಮತ್ತು ಸದ್ಗುಣದಲ್ಲಿ ಸ್ಥಿರಚಿತ್ತನನ್ನಾಗಿ ಮಾಡಲಿಕ್ಕಾಗಲಿ ಸಂಪೂರ್ಣ ಶಕ್ತವಲ್ಲದ 'ನಫ್ಸ್ ಲವ್ವಾಮ' ಅಥವಾ 'ಸ್ವಯಂ ದೂಷಿಸುವ ಆತ್ಮ'ವು ಮೇಲೆ ಹೇಳಿದ ಶಾಂತಿ ಪಡೆದ ಆತ್ಮಸ್ಥಿತಿಯೆಡೆಗಿರುವ ಪ್ರಯಾಣ ಪಥದಲ್ಲಿ ಪಾವನವಾದೊಂದು ಮಾರ್ಪಾಟನ್ನು ಹೊಂದುತ್ತದೆ. ಈ ಹಂತವನ್ನು ಅವನು ತಲುಪಿದಾಗ ಪೂರ್ಣ ಸಫಲತೆಯನ್ನು ಪಡೆಯುತ್ತಾನೆ. ಅವನ ಭೋಗೇಚ್ಛೆಗಳೆಲ್ಲ ಶಿಥಿಲಗೊಳ್ಳಲು ತೊಡಗುತ್ತದೆ. ಆತ್ಮದಲ್ಲಿ ಒಂದು ಹೊಸ ಚೈತನ್ಯ ಮೂಡಿಬರುತ್ತದೆ. ಆಗ ಅವನು ತನ್ನ ಮೊದಲಿನ ದುರ್ಬಲತೆ ಮತ್ತು ಚಪಲತೆಗಳ ಕುರಿತು ಲಜ್ಜಿತನಾಗಿ ಪಶ್ಚಾತ್ತಾಪಪಡುತ್ತಾನೆ. ಈ ಸಂದರ್ಭದಲ್ಲಿ ಮನುಷ್ಯನ ಸ್ವಭಾವದಲ್ಲಿ ದೊಡ್ಡದಾದ ಒಂದು ಮಾರ್ಪಾಟು ಉಂಟಾಗುತ್ತದೆ. ಅವನ

ನಡತೆಗಳಲ್ಲಿ ಮಹತ್ತಾದ ಬದಲಾವಣೆ ಕಂಡು ಬರುತ್ತದೆ. ಮಾತ್ರವಲ್ಲ, ಅವನು ತನ್ನ ಮುಂಚಿನ ಜೀವಿತ ರೀತಿಗಳಿಂದ ಬೇರ್ಪಟ್ಟು ದೂರವಾಗುತ್ತಾನೆ. ಅಶುದ್ಧತೆಗಳಿಂದ ಶುಚೀಕರಿಸಲ್ಪಟ್ಟು ಅವನು ಶುದ್ಧನಾಗುತ್ತಾನೆ. ಅವನ ಹೃದಯದಲ್ಲಿ ದೇವನು ತನ್ನ ಕೈಗಳಿಂದ ಸದ್ಧರ್ಮ ಪ್ರೇಮವನ್ನು ಬಿತ್ತುತ್ತಾನೆ. ಅವನ ಹೃದಯದಿಂದ ಮಾಲಿನ್ಯವನ್ನು ಸಂಪೂರ್ಣ ಕಿತ್ತೆಸೆಯುತ್ತಾನೆ. ಅವನ ಹೃದಯಕ್ಷೇತ್ರದಲ್ಲಿ ಸತ್ಯತೆಯ ಸೈನ್ಯಗಳು ತಂಗುತ್ತವೆ. ಅಂತಃಶಕ್ತಿಗಳೆಂಬ ಕೋಟೆಗಳನ್ನೆಲ್ಲ ಧರ್ಮಶೀಲತೆ ಅಧೀನಗೊಳಿಸುತ್ತದೆ. ಹಾಗೆ ಸತ್ಯ ಗೆದ್ದು ಅಸತ್ಯ ಆಯುಧವನ್ನಿಟ್ಟು ಶರಣಾಗುತ್ತದೆ. ಈ ಸೌಭಾಗ್ಯಕ್ಕೆ ಪಾತ್ರನಾಗುವ ಮನುಷ್ಯನಿಗೆ ದೇವನ ಪವಿತ್ರ ಹಸ್ತದ ನೆರವಿರುತ್ತದೆ. ಅವನು ದೇವರಕ್ಷಣೆಯ ನೆರಳಿನಲ್ಲಿ ನಡೆಯುತ್ತಾನೆ. ಇದರ ಕುರಿತು ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳಲಾಗಿದೆ:

أُولَٰئِكَ كَتَبَ فِي قُلُوبِهِمُ الْإِيمَانَ وَأَيَّدَهُم بِرُوحٍ مِّنْهُ

ದೇವನು ತನ್ನ ಕೈಯಿಂದ ಭಕ್ತರ ಹೃದಯಗಳಲ್ಲಿ ಸತ್ಯವಿಶ್ವಾಸವನ್ನು ಕೆತ್ತಿದ್ದಾನೆ ಮತ್ತು ಪರಿಶುದ್ಧ ಚೈತನ್ಯದಿಂದ ಅವರಿಗೆ ನೆರವಾಗಿದ್ದಾನೆ. **(58:23)**

حَبَّبَ إِلَيْكُمُ الْإِيمَانَ وَزَيَّنَهُ فِي قُلُوبِكُمْ وَكَرَّهَ إِلَيْكُمُ الْكُفْرَ وَالْفُسُوقَ وَالْعِصْيَانَ ۚ
أُولَٰئِكَ هُمُ الرَّاشِدُونَ - فَضْلًا مِّنَ اللَّهِ وَنِعْمَةً ۚ وَاللَّهُ عَلِيمٌ حَكِيمٌ

ಭಕ್ತರೇ, ದೇವನು ಸತ್ಯವಿಶ್ವಾಸವನ್ನು ನಿಮಗೆ ಪ್ರಿಯವನ್ನಾಗಿ ಮಾಡಿ ಅದರ ಸೌಂದರ್ಯವನ್ನೂ ಉತ್ಕೃಷ್ಟತೆಯನ್ನೂ ನಿಮ್ಮ ಹೃದಯಗಳಲ್ಲಿ ಒತ್ತಿ, ಅವಿಶ್ವಾಸ, ಅಧರ್ಮ ಮತ್ತು ಪಾಪದ ಕುರಿತು ನಿಮ್ಮಲ್ಲಿ ವಿರಕ್ತಿಯನ್ನುಂಟುಮಾಡಿ, ದುರ್ಮಾರ್ಗಗಳೆಲ್ಲ ನಿಷಿದ್ಧವೆಂದು ನಿಮಗೆ ತಿಳಿಯುವಂತೆ ಮಾಡಿರುವನು. ಈ ಪ್ರಕಾರದಲ್ಲಿ ದೇವಸಹಾಯ ಪಡೆದವರು ಸತ್ಪಥವನ್ನು ಅನುಗಮಿಸುವವರಾಗಿದ್ದಾರೆ. ಇವೆಲ್ಲ ದೇವನ ಅನುಗ್ರಹದಿಂದಲೂ ಕರುಣೆಯಿಂದಲೂ ಆಗಿವೆ; ದೇವನು ಅತ್ಯಧಿಕ ತಿಳಿದವನೂ ಅಗಾಧ ಜ್ಞಾನಿಯೂ ಆಗಿದ್ದಾನೆ. **(49:8,9)**

جَاءَ الْحَقُّ وَزَهَقَ الْبَاطِلُ ۚ إِنَّ الْبَاطِلَ كَانَ زَهُوقًا

ಸತ್ಯ ಆಗಮಿಸಿತು; ಅಸತ್ಯ ಅಳಿದುಹೋಯಿತು; ಖಂಡಿತವಾಗಿಯೂ ಸತ್ಯವನ್ನು ಎದುರಿಸಲು ಅಸತ್ಯಕ್ಕೆ ಸಾಧ್ಯವಿಲ್ಲ. **(17:82)**

ಸಂಕ್ಷಿಪ್ತವಾಗಿ, ಮೂರನೆಯ ಘಟ್ಟದಲ್ಲಿ ಮನುಷ್ಯನಿಗೆ ಲಭ್ಯವಾಗುವ

ಸ್ಥಿತಿಯನ್ನು ಮೇಲಿನ ವಾಕ್ಯಗಳು ಸೂಚಿಸುತ್ತವೆ. ಈ ಸ್ಥಿತಿಯನ್ನು ತಲಪುವ ವರೆಗೆ ಮನುಷ್ಯನಿಗೆ ನೈಜವಾದ ಪರಿಜ್ಞಾನ ಲಭಿಸುವುದಿಲ್ಲ. "ದೇವನು ತನ್ನ ಕೈಯಿಂದ ಭಕ್ತರ ಹೃದಯಗಳಲ್ಲಿ ಸತ್ಯವಿಶ್ವಾಸವನ್ನು ಕೆತ್ತಿದ್ದಾನೆ; ಮತ್ತು ಪರಿಶುದ್ಧ ಚೈತನ್ಯದಿಂದ ಅವರಿಗೆ ನೆರವಾಗಿದ್ದಾನೆ" ಎಂದು ಪವಿತ್ರ ಖುರ್‌ಆನಿನಲ್ಲಿ ಹೇಳಿದುದರ ಕುರಿತು ಚಿಂತಿಸೋಣ. ಈ ವಾಕ್ಯಗಳು ಸೂಚಿಸುವುದೇನೆಂದರೆ, ದೈವಿಕ ಸಹಾಯದ ವಿನಾ ಮನುಷ್ಯನಿಗೆ ಯಥಾರ್ಥ ಪರಿಶುದ್ಧತೆ ಮತ್ತು ಸದ್ಗುಣ ಪ್ರಾಪ್ತವಾಗಲಾರದು. ದ್ವಿತೀಯ ಸಂಸ್ಕಾರಘಟ್ಟವಾದ 'ನಫ್ಸ್ ಲವ್ವಾಮ' ಅಥವಾ 'ಸ್ವಯಂ ದೂಷಿಸುವ ಆತ್ಮ' ಎಂಬ ಸ್ಥಿತಿಯಲ್ಲಿ ಮನುಷ್ಯನು ಪದೇ ಪದೇ ಪಶ್ಚಾತ್ತಾಪಪಡುತ್ತಲೂ ಪುನಃ ಪುನಃ ಎಡವಿ ಬೀಳುತ್ತಲೂ ಇರುತ್ತಾನೆ. ಕೆಲವು ಬಾರಿ ಅವನು ತನ್ನ ಸೋಲುವಿಕೆಯ ಕಾರಣವಾಗಿ ತನ್ನ ಸ್ವಭಾವ ಸುಧಾರಣೆಗೆ ಸಂಬಂಧಿಸಿ ನಿರಾಶನಾಗಿ ತನ್ನ ಆತ್ಮದ ರೋಗಕ್ಕೆ ಚಿಕಿತ್ಸೆ ಇಲ್ಲವೆಂದು ಭಾವಿಸುತ್ತಾನೆ. ಈ ಸ್ಥಿತಿ ಒಂದು ನಿರ್ದಿಷ್ಟ ಕಾಲದ ವರೆಗೆ ಅವನಲ್ಲಿರುತ್ತದೆ. ಕೊನೆಗೆ ದೇವ ಸಹಾಯದ ಕಾಲ ಒದಗಿ ಬಂದು ರಾತ್ರಿಯಲ್ಲೋ ಹಗಲಿನಲ್ಲೋ ಅವನಲ್ಲಿ ಒಂದು ತೇಜಸ್ಸು ಪ್ರತ್ಯಕ್ಷಗೊಳ್ಳುತ್ತದೆ. ದೈವಿಕ ಪ್ರಭಾವದಿಂದ ಕೂಡಿದ ಈ ತೇಜಸ್ಸಿನ ಅವಿರ್ಭಾವದ ಮೂಲಕ ಅವನ ಅಂತರಂಗದಲ್ಲಿ ಒಂದು ಅದ್ಭುತ ಪರಿವರ್ತನೆ ಉಂಟಾಗಿ, ತನ್ನನ್ನು ಒಂದು ಅದೃಶ್ಯ ಕೈ ಮುಂದಕ್ಕೆ ನಡೆಸಿಕೊಂಡು ಹೋಗುವಂತೆ ಅನುಭವಪಡುತ್ತಾನೆ. ಒಂದು ಅದ್ಭುತ ಲೋಕ ಹೊಸದಾಗಿ ಅವನ ಅಂತರ್ದೃಷ್ಟಿಗೆ ಗೋಚರಿಸುತ್ತದೆ. ಆ ಸಂದರ್ಭದಲ್ಲಿ ಅವನಿಗೆ ದೇವನ ಇರುವಿಕೆಯ ಕುರಿತು ದೃಢಜ್ಞಾನ ಸಿದ್ಧಿಸುತ್ತದೆ. ಮೊದಲೆಂದಿಗೂ ಇರದ ಒಂದು ಹೊಸ ಪ್ರಕಾಶದಿಂದ ಅವನ ಕಣ್ಣುಗಳು ಹೊಳೆಯುತ್ತವೆ.

ಆದರೆ ಈ ಮಾರ್ಗವನ್ನು ಪಡೆಯುವುದೂ ಈ ದಿವ್ಯ ತೇಜಸ್ಸನ್ನು ಗಳಿಸುವುದೂ ಹೇಗೆ? ಕಾರ್ಯಕಾರಣ ಸಂಬಂಧದಿಂದ ಕೂಡಿದ ಈ ಲೋಕದಲ್ಲಿ ನಾವು ಕಾಣುವ ಪ್ರತಿಯೊಂದು ಕಾರ್ಯಕ್ಕೆ ಒಂದು ಕಾರಣವೂ ಪ್ರತಿಯೊಂದು ಕ್ರಿಯೆಗೆ ಒಂದು ಪ್ರೇರಕವೂ ಇರುತ್ತದೆ. ಹಾಗೆಯೇ ಯಾವುದೇ ಜ್ಞಾನದ ಸಂಪಾದನೆಗೂ ಒಂದು ನಿರ್ದಿಷ್ಟ ಮಾರ್ಗವಿದೆ. ಕಾರ್ಯಸಿದ್ಧಿಯೆಡೆಗೆ ಕೊಂಡೊಯ್ಯುವ ಆ ಮಾರ್ಗವನ್ನು ಅದಕ್ಕೆ ಸಂಬಂಧಿಸಿದ ಸರಿಯಾದ ಮಾರ್ಗವೆಂದು ಹೇಳಬಹುದು. ದೇವನು ನಿಸರ್ಗದಲ್ಲಿ ನಿಶ್ಚಯಿಸಿಟ್ಟಿರುವ ನಿಯಮವನ್ನು ಅನುಸರಿಸದೆ ಯಾವ ಕಾರ್ಯವೂ ಸಾಧ್ಯವಿಲ್ಲ. ಪ್ರತಿಯೊಂದು ಕಾರ್ಯಕ್ಕೂ ಅದರದೇ ಆದ ನಿರ್ದಿಷ್ಟ ಮಾರ್ಗವಿದೆಯೆಂದೂ ಆ ಮಾರ್ಗವನ್ನು ಅನುಸರಿಸುವುದರಿಂದ ಕಾರ್ಯಲಬ್ಧಿಯಾಗುವುದೆಂದೂ ನಿಸರ್ಗನಿಯಮ ತಿಳಿಸಿಕೊಡುತ್ತದೆ. ಉದಾಹರಣೆಗಾಗಿ, ನಾವು ಒಂದು ಕತ್ತಲೆಯ

ಕೋಣೆಯಲ್ಲಿದ್ದುಕೊಂಡು ನಮಗೆ ಸೂರ್ಯಪ್ರಕಾಶ ಬೇಕೆನಿಸಿದರೆ ಸೂರ್ಯನಿಗೆ ಅಭಿಮುಖವಾದ ಕಿಟಕಿಯನ್ನು ತೆರೆದಿರಿಸುವುದು ನಾವು ಕೈಗೊಳ್ಳಬೇಕಾದ ಸರಿಯಾದ ಮಾರ್ಗವಾಗಿದೆ. ಹಾಗೆ ಮಾಡಿದರೆ ತಕ್ಷಣ ಬೆಳಕು ಒಳಗೆ ಪ್ರವೇಶಿಸಿ ಸ್ಥಳವೆಲ್ಲ ಪ್ರಕಾಶಮಾನವಾಗುವುದು. ಇದೇ ಪ್ರಕಾರ, ದೇವನಿಂದ ಯಥಾರ್ಥ ಅನುಗ್ರಹ ಮತ್ತು ಪಾರಿತೋಷಕ ಪ್ರಾಪ್ತವಾಗಬೇಕಾದರೆ ಒಂದು ವಿಶಿಷ್ಟ ಕಿಟಕಿಯೂ ಅಧ್ಯಾತ್ಮ ಸಿದ್ಧಿಗೆ ವಿಶಿಷ್ಟವಾದೊಂದು ಮಾರ್ಗವೂ ಇರಬೇಕಾಗಿದೆ. ಒಟ್ಟಾರೆ, ಐಹಿಕ ಜೀವಿತದಲ್ಲಿ ನಮ್ಮ ಹಲವಿಧ ಕಾರ್ಯಸಿದ್ಧಿಗಾಗಿ ಅವುಗಳ ಸರಿಯಾದ ದಾರಿಗಳನ್ನು ಕಂಡು ಹಿಡಿದು ಪರಿಶ್ರಮಿಸುವ ರೀತಿಯಲ್ಲೇ ಆತ್ಮಾನುಭೂತಿಗಳ ಸರಿಯಾದ ದಾರಿಯನ್ನು ಹುಡುಕಿ ತಿಳಿಯುವುದು ಸಹ ನಮ್ಮ ಕರ್ತವ್ಯವಾಗಿದೆ. ದೇವನನ್ನು ಗಳಿಸುವ ಪಾವನವಾದ, ಸರಿಯಾದ ಮಾರ್ಗವನ್ನು ನಮ್ಮ ಅಪೂರ್ಣ ಬುದ್ಧಿಶಕ್ತಿಯಿಂದ ಕಂಡುಹಿಡಿಯಲು ಸಾಧ್ಯವೇ? ದೇವನ ಬಲಯುತ ಕೈಯಿಂದ ಹೊರತು ತೆರೆಯಲಸಾಧ್ಯವಾದ ಆ ಬಾಗಿಲುಗಳು ಮನುಷ್ಯಕೃತ ತರ್ಕಶಾಸ್ತ್ರ ಮೂಲಕ ತೆರೆಯಲು ಸಾಧ್ಯವೇ? ಇಲ್ಲ; ಖಂಡಿತವಾಗಿಯೂ ಇಲ್ಲ. ಸದಾ ಜೀವಂತನೂ ಸ್ವತಃ ನೆಲೆನಿಂತಿರುವವನೂ ಎಲ್ಲವನ್ನೂ ನೆಲೆನಿಲ್ಲಿಸುವವನೂ ಆದ ದೇವನನ್ನು ಮನುಷ್ಯನ ತಂತ್ರಗಳಿಂದಲೂ ಯೋಜನೆಗಳಿಂದಲೂ ಪಡೆಯಲು ಸಾಧ್ಯವಿಲ್ಲ. ನಮ್ಮ ಸರ್ವಶಕ್ತಿಗಳನ್ನೂ ಜೀವಿತವನ್ನೂ ಮೊದಲಿಗೆ ದೇವನಿಗೆ ಅರ್ಪಿಸಿಕೊಂಡು ದೇವಪ್ರಾಪ್ತಿಗಾಗಿ ಸರ್ವಾತ್ಮನಾ ಪ್ರಾರ್ಥಿಸುತ್ತಿರುವುದೇ ಅದಕ್ಕಿರುವ ಸರಿಯಾದ ಮಾರ್ಗವಾಗಿದೆ. ಹೀಗೆ ದೇವನನ್ನು ದೇವನ ಮೂಲಕವೇ, ಎಂದರೆ ದೇವನ ಸಹಾಯದಿಂದಲೇ ಪಡೆಯಬೇಕಾಗಿದೆ.

## ಉತ್ಕೃಷ್ಟವಾದೊಂದು ಪ್ರಾರ್ಥನೆ

ಈ ವಿಚಾರದಲ್ಲಿ ಅತ್ಯುತ್ತಮವಾದ, ಸಂದರ್ಭೋಚಿತವಾದ, ಮನುಷ್ಯ ಸ್ವಭಾವಕ್ಕೆ ಅನುಯೋಜ್ಯವಾದ, ಆತ್ಮದ ಸ್ವಾಭಾವಿಕ ಸಂವೇಗಗಳನ್ನು ಸರಿಯಾಗಿ ಚಿತ್ರಿಸುವ ಪ್ರಾರ್ಥನೆಯನ್ನು ಪವಿತ್ರ ಖುರ್‌ಆನ್ ಅದರ ಪ್ರಥಮ ಅಧ್ಯಾಯದಲ್ಲಿ ಕಲಿಸಿಕೊಟ್ಟಿದೆ. ಅದು ಹೀಗಿದೆ:

بِسۡمِ اللهِ الرَّحۡمٰنِ الرَّحِيۡمِ - اَلۡحَمۡدُ لِلّٰهِ رَبِّ الۡعٰلَمِيۡنَ

ಪರಮ ದಯಾವಂತನೂ ಕಾರುಣ್ಯನಿಧಿಯೂ ಆದ ಅಲ್ಲಾಹನ ನಾಮದಿಂದ. ಪಾವನವಾದ ಸರ್ವಸ್ತೋತ್ರಗಳು ಸರ್ವಲೋಕಗಳನ್ನು ಸೃಷ್ಟಿಸಿ, ರಕ್ಷಿಸಿ, ಪರಿಪಾಲಿಸುವ ಅಲ್ಲಾಹನಿಗೆ. **(1:1,2)**

الرَّحْمٰنِ الرَّحِيْمِ

ನಮ್ಮ ಕರ್ಮ ಮತ್ತು ಪರಿಶ್ರಮಗಳಿಗೆ ಮುಂಚಿತವಾಗಿಯೇ ನಮಗೆ ಬೇಕಾದ ಸರ್ವ ಅನುಗ್ರಹ ವಸ್ತುಗಳನ್ನು ಸಿದ್ಧಪಡಿಸಿರುವ ಕೃಪಾನಿಧಿ ಹಾಗೂ ನಮ್ಮ ಕರ್ಮಗಳಿಗೆ ದಯಾಪೂರ್ವಕ ಪ್ರತಿಫಲಗಳನ್ನು ನೀಡುವ ಕರುಣಾವಂತನಾದ ದೇವ. **(1:3)**

مٰلِكِ يَوْمِ الدِّيْنِ

ಪ್ರತಿಫಲ ನೀಡಲ್ಪಡುವ ದಿನದ ನ್ಯಾಯಾಧಿಪತ್ಯವನ್ನು ಇನ್ನಾರಿಗೂ ಒಪ್ಪಿಸದೆ ಸ್ವಯಂ ಪರ್ಯಾಪ್ತನಾಗಿರುವ ಸರ್ವಾಧಿಪತಿ. **(1:4)**

اِيَّاكَ نَعْبُدُ وَاِيَّاكَ نَسْتَعِيْنُ

ಈ ಸ್ತುತಿಗಳಿಗೆಲ್ಲ ಪಾತ್ರನಾಗಿರುವ ದೇವಾ, ನಾವು ನಿನ್ನನ್ನು ಮಾತ್ರ ಆರಾಧಿಸುತ್ತೇವೆ; ನಿನ್ನೊಡನೆ ಮಾತ್ರ ಎಲ್ಲ ಕಾರ್ಯಗಳಲ್ಲೂ ಸಹಾಯವನ್ನು ಯಾಚಿಸುತ್ತೇವೆ. **(1:5)** (ಇಲ್ಲಿ 'ನಾವು' ಎಂಬ ಬಹುವಚನವನ್ನು ಪ್ರಯೋಗಿಸಿದ್ದು, ದೇವಾರಾಧನೆಯಲ್ಲಿ ನಮ್ಮ ಸಕಲ ಶಕ್ತಿಗಳು ತಲ್ಲೀನವಾಗಿವೆಯೆಂದೂ ಅವೆಲ್ಲ ದೇವೇಚ್ಛೆಗೆ ವಿಧೇಯ ಆಗಿವೆ ಎಂದೂ ಸೂಚಿಸಲಿಕ್ಕಾಗಿದೆ. ಏಕೆಂದರೆ ಮನುಷ್ಯನನ್ನು ಅವನ ಆಂತರಿಕ ಶಕ್ತಿಗಳೊಂದಿಗೆ ಒಬ್ಬ ವ್ಯಕ್ತಿಯೆಂದಲ್ಲ ಒಂದು ಶಕ್ತಿ ಸಮೂಹವೆಂದು ಪರಿಗಣಿಸಲಾಗುತ್ತದೆ. ಹಾಗೆ ಆ ಶಕ್ತಿಗಳೆಲ್ಲ ದೇವನ ಅನುಸರಣೆ ಮತ್ತು ವಿಧೇಯತೆಯಲ್ಲಿ ತಲ್ಲೀನವಾಗಿರುವ ಒಂದು ಸ್ಥಿತಿಗೆ 'ಇಸ್ಲಾಂ' ಎಂದು ಹೇಳಲಾಗುತ್ತದೆ).

اِهْدِنَا الصِّرَاطَ الْمُسْتَقِيْمَ - صِرَاطَ الَّذِيْنَ اَنْعَمْتَ عَلَيْهِمْ

ನೀನು ನಮ್ಮನ್ನು ಸರಿಯಾದ ಮಾರ್ಗದಲ್ಲಿ ನಡೆಸು; (ಸರಿಯಾದ ಮಾರ್ಗವನ್ನು ತೋರಿಸು) ಅದರಲ್ಲೇ ಸುಸ್ಥಿರ ಮಾಡಿ, ನಿನ್ನ ಪಾರಿತೋಷಕಗಳಿಗೂ ಅನುಗ್ರಹಗಳಿಗೂ ಕೃಪಾಕಟಾಕ್ಷಗಳಿಗೂ ಪಾತ್ರರಾದವರ ದಾರಿಯಲ್ಲಿ ಸಾಗಿಸು. **(1:6)**

غَيْرِ الْمَغْضُوْبِ عَلَيْهِمْ وَلَا الضَّآلِّيْنَ

ನಿನ್ನ ಕ್ರೋಧಕ್ಕೆ ಗುರಿಯಾದವರ ಮತ್ತು ಮಾರ್ಗಭ್ರಷ್ಟರಾಗಿ ನಿನ್ನ ಸನ್ನಿಧಿಯನ್ನು ತಲುಪದವರ ದಾರಿಯಿಂದ ನಮ್ಮನ್ನು ರಕ್ಷಿಸು. آمين(ಆಮೀನ್) – ಹೇ ದೇವನೇ ಹಾಗೆಯೇ ಮಾಡು. **(1:7)**

ಮೇಲಿನ ವಾಕ್ಯಗಳಿಂದ ತಿಳಿದುಬರುವುದೇನೆಂದರೆ, ಜೀವಿತ ಸರ್ವಸ್ವವನ್ನು ದೇವಮಾರ್ಗದಲ್ಲಿ ಅರ್ಪಿಸಿ ಅವನಿಗೆ ಪೂರ್ಣವಾಗಿ ವಿಧೇಯನಾಗಿದ್ದುಕೊಂಡು ಅವನ ಇಷ್ಟಾನುಸರಣೆಯಲ್ಲಿ ಲೀನವಾಗಿರುವುದರ ಜೊತೆಗೆ ಆತ್ಮಾನುಭೂತಿ, ದೇವ ಸಾಮೀಪ್ಯ, ದೇವನಲ್ಲಿ ಐಕ್ಯ, ದಿವ್ಯವಚನಾಮೃತ ಇವು ಲಭಿಸಲಿಕ್ಕಾಗಿ ತೀವ್ರವಾಗಿ ಪ್ರಾರ್ಥಿಸುತ್ತಲಿರುವವರ ಮೇಲೆ ದೇವನ ಪಾರಿತೋಷಕಗಳು ಅಥವಾ ಅನುಗ್ರಹಗಳು ಸುರಿಯುತ್ತವೆ. ಅವರು ತಮ್ಮ ಸರ್ವ ಶಕ್ತಿಗಳನ್ನು ದೇವೋಪಾಸನೆಯಲ್ಲಿ ವಿನಿಯೋಗಿಸಿ ಎಲ್ಲ ಪಾಪಗಳಿಂದ ಸ್ವಯಂ ಅಗಲಿಕೊಂಡು ದೇವಸನ್ನಿಧಿಯಲ್ಲಿ ಶರಣಾಗಿರುತ್ತಾರೆ. ಸಕಲ ದೋಷಗಳನ್ನು ವರ್ಜಿಸಿ ದೇವಕ್ರೋಧದ ದಾರಿಗಳಿಂದೆಲ್ಲ ದೂರಸರಿದಿರುತ್ತಾರೆ. ಹೀಗೆ ಅವರು ಸ್ಥಿರತೆ, ನಿಷ್ಕಳಂಕ ಭಕ್ತಿ ಹಾಗೂ ಪ್ರಾಮಾಣಿಕತೆಯಿಂದ ಒಡಗೂಡಿ ದೇವನನ್ನು ಹುಡುಕುವುದರಿಂದ ಅವರ ಪ್ರಯತ್ನ ಸಫಲವಾಗಿ ಅವರು ಅವನನ್ನು ಪಡೆದು ಅವನ ಪಾವನವಾದ ಜ್ಞಾನಪಾತ್ರೆಯಿಂದ ಪಾನಮಾಡಿ ತೃಪ್ತಿ ಹೊಂದುತ್ತಾರೆ. ದೇವಮಾರ್ಗದಲ್ಲಿ ಸುಸ್ಥಿರವಾಗಿ ವರ್ತಿಸುವುದರ ಕುರಿತು ಈ ವಾಕ್ಯದಲ್ಲಿ ಸೂಚಿಸಲ್ಪಟ್ಟಿರುವುದರಿಂದ ತಿಳಿದುಬರುವುದೇನೆಂದರೆ, ಆತ್ಮಾನುಭೂತಿಯೆಡೆಗೆ ಕೊಂಡೊಯ್ಯಲು ಸಮರ್ಪಕವಾದ ಯಥಾರ್ಥ ದೇವಾನುಗ್ರಹವು ಸತ್ಯಮಾರ್ಗದಲ್ಲಿ ಪರಿಪೂರ್ಣ ಸ್ಥಿರತೆಯಲ್ಲಿರುವುದರ ಹೊರತು ಲಭ್ಯವಾಗದು. ಇಲ್ಲಿ ಪರಿಪೂರ್ಣ ಸ್ಥಿರತೆಯೆಂದು ಹೇಳಿದುದರ ತಾತ್ಪರ್ಯ, ಯಾವುದೇ ಕಠಿಣ ಪರೀಕ್ಷೆಗೂ ವಿಚಲಿತ ಗೊಳಿಸಲಿಕ್ಕಾಗಲಿ, ಹಾನಿಗೊಳಿಸಲಿಕ್ಕಾಗಲಿ ಅಸಾಧ್ಯವಾದ ನಿಷ್ಕಳಂಕವೂ ನಿಷ್ಕಪಟವೂ ಆದ ಭಕ್ತಿಯಾಗಿದೆ. ಎಂದರೆ, ಖಡ್ಗಕ್ಕೆ ಛೇದಿಸಲಿಕ್ಕಾಗದ, ಅಗ್ನಿಗೆ ದಹಿಸಲಿಕ್ಕಾಗದ, ಕಷ್ಟಾನುಭವಗಳಿಂದ ಹಾನಿಗೊಳಿಸಲಿಕ್ಕಾಗದ, ಬಂಧುಗಳ ಮರಣ ಕಾರಣಗಳಿಂದ ಬೇರ್ಪಡಿಸಲಿಕ್ಕಾಗದ, ಪ್ರಿಯಜನರ ವಿರಹ ದುಃಖದಿಂದ ಭಂಗಗೊಳಿಸಲಿಕ್ಕಾಗದ, ಮಾನನಷ್ಟ ಭಯದಿಂದ ಚಂಚಲಗೊಳಿಸಲಿಕ್ಕಾಗದ, ಕಠಿಣ ದಂಡನೆಯಿಂದ ಒಡಗೂಡಿದ ಮರಣ ಶಿಕ್ಷೆಯಿಂದ ಶಿಥಿಲೀಕರಿಸಲು ಸಾಧ್ಯವಿಲ್ಲದ ಒಂದು ಸದೃಢ ಸಂಬಂಧವೆಂದು ಅದನ್ನು ವ್ಯಾಖ್ಯಾನಿಸಬಹುದು. ಒಟ್ಟಿನಲ್ಲಿ, ದೇವೋಪಲಬ್ಧಿಯ ಈ ದಾರಿ ಬಹಳ ಇಕ್ಕಟ್ಟಾಗಿದ್ದು ಪ್ರಯಾಸದಿಂದ ಕೂಡಿದೆ. ಹಾ, ಭಕ್ತಿಮಾರ್ಗ ಎಷ್ಟು ದುರ್ಗಮ!

ಈ ದುರ್ಘಟಾವಸ್ಥೆಗೆ ಸಂಬಂಧಿಸಿ ಪವಿತ್ರ ಖುರ್‌ಆನ್ ಈ ಕೆಳಗಿನ ವಾಕ್ಯದಲ್ಲಿ ಸೂಚನೆಯಿತ್ತಿದೆ:

قُلْ إِنْ كَانَ آبَاؤُكُمْ وَأَبْنَاؤُكُمْ وَإِخْوَانُكُمْ وَأَزْوَاجُكُمْ وَعَشِيرَتُكُمْ وَأَمْوَالٌ اقْتَرَفْتُمُوهَا

وَتِجَارَةٌ تَخْشَوْنَ كَسَادَهَا وَمَسٰكِنُ تَرْضَوْنَهَآ اَحَبَّ اِلَيْكُمْ مِّنَ اللّٰهِ وَرَسُوْلِهٖ وَجِهَادٍ فِيْ
سَبِيْلِهٖ فَتَرَبَّصُوْا حَتّٰى يَاْتِيَ اللّٰهُ بِاَمْرِهٖ ۗ وَاللّٰهُ لَا يَهْدِى الْقَوْمَ الْفٰسِقِيْنَ

ಅವರೊಡನೆ ಹೇಳು: ನಿಮ್ಮ ಪಿತರೂ ನಿಮ್ಮ ಪುತ್ರರೂ ನಿಮ್ಮ ಸಹೋದರರೂ ನಿಮ್ಮ ಬಾಳಸಂಗಾತಿಗಳೂ ನಿಮ್ಮ ಬಂಧುಗಳೂ ನೀವು ಕಷ್ಟಪಟ್ಟು ಸಂಪಾದಿಸಿದ ಸಂಪತ್ತೂ ನಿಂತುಹೋಗುವುದೆಂದು ನೀವು ಶಂಕಿಸುವ ವ್ಯಾಪಾರವೂ ನಿಮಗೆ ಮನೋಹರವಾಗಿ ಕಾಣುವ ವಸತಿಗಳೂ ದೇವನಿಗಿಂತಲೂ ಅವನ ಪ್ರವಾದಿಗಿಂತಲೂ ದೇವಮಾರ್ಗದಲ್ಲಿ ಪ್ರಯತ್ನಿಸುವುದಕ್ಕಿಂತಲೂ ನಿಮಗೆ ಪ್ರಿಯವೆಂದಾದರೆ, ದೇವನು ತನ್ನ ಶಾಸನವನ್ನು ಬಹಿರಂಗಗೊಳಿಸುವ ವರೆಗೆ ಪ್ರತೀಕ್ಷಿಸಿರಿ; ದೇವನು ಅಧರ್ಮಿಗಳಿಗೆ ಮಾರ್ಗದರ್ಶನ ನೀಡುವುದಿಲ್ಲ. **(9:24)**

ದೇವನ ಇಚ್ಛೆಗಳನ್ನು ಅವಗಣಿಸಿ ತಮ್ಮ ಬಂಧುಗಳನ್ನೂ ಸಂಪತ್ತನ್ನೂ ಅಧಿಕ ಪ್ರೀತಿಸುವವರು ದೇವದೃಷ್ಟಿಯಲ್ಲಿ ಅಧರ್ಮಿಗಳೆಂದು ಈ ವಾಕ್ಯದಿಂದ ಸ್ಪಷ್ಟವಾಗುತ್ತದೆ. ಅವರು ದೇವನಿಗಿಂತ ಇತರ ವಸ್ತುಗಳಿಗೆ ಪ್ರಾಶಸ್ತ್ಯ ಕೊಡುವ ಕಾರಣ ಖಂಡಿತವಾಗಿಯೂ ನಾಶಹೊಂದುತ್ತಾರೆ. ಇದೇ ಮೂರನೆಯ ಘಟ್ಟವಾಗಿದೆ. ಈ ಸ್ಥಿತಿಯಲ್ಲಿ ದೇವನ ಸಂತುಷ್ಟಿಗಾಗಿ ಸಕಲ ವಿಧ ಪೀಡೆಗಳನ್ನು ಸಹಿಸಲಿಕ್ಕೆ ಸನ್ನದ್ಧನಾಗಿ, ದೇವನ ಹೊರತು ಏನೂ ತನಗಿಲ್ಲವೆಂದೂ ಅವನನ್ನು ಹೊರತುಪಡಿಸಿದ ಸರ್ವವೂ ಮೃತಪ್ರಾಯವೆಂದೂ ತಿಳಿದುಕೊಂಡು ಪ್ರಾಮಾಣಿಕತೆಯಿಂದಲೂ ನಿಷ್ಕಳಂಕ ಭಕ್ತಿಯಿಂದಲೂ ಆ ಸರ್ವಾಧಿನಾಥನೆಡೆಗೆ ಬಾಗುವ ವ್ಯಕ್ತಿ ಅತ್ಮೋನ್ನತಿ ಸಿದ್ಧಿಸಿದ ದೇವಭಕ್ತನಾಗುತ್ತಾನೆ. ನಿಜವೇನೆಂದರೆ, ನಾವು ನಮ್ಮಲ್ಲಿ ಒಂದು ಮರಣವನ್ನು ಪಡೆಯದಿದ್ದರೆ, ಎಂದರೆ ನಮ್ಮ ವಿಷಯಾಸಕ್ತಿಗಳನ್ನು ನಾಶಗೊಳಿಸದಿದ್ದರೆ, ಅಮರ್ತ್ಯನೂ ಸದಾ ಜೀವಂತನೂ ಆದ ದೇವನನ್ನು ಕಾಣಲು ನಮಗೆ ಸಾಧ್ಯವಿಲ್ಲ. ನಮ್ಮ ಭೌತಿಕ ಜೀವಿತಕ್ಕೆ ಮರಣ ಉಂಟಾಗುವ ದಿನವೇ ದೇವ ಪ್ರಕಟನೆಯ ಸುದಿನ. ಅನ್ಯ ವಸ್ತುಗಳ ದರ್ಶನಕ್ಕೆ ಸಂಬಂಧಿಸಿ ಅಂಧರಾಗದಿರುವ ತನಕ ನಾವು ಕುರುಡರಾಗಿದ್ದೇವೆ. ದೇವನ ದಿವ್ಯ ಹಸ್ತದಲ್ಲಿ ಮೃತರಂತೆ ಆಗದಿರುವ ತನಕ ನಾವು ಕೇವಲ ನಿರ್ಜೀವರಾಗಿದ್ದೇವೆ. ನಮ್ಮ ಮುಖ ದೇವನಿಗಭಿಮುಖವಾಗುವಾಗ ಮಾತ್ರವೇ ಸಕಲ ದೈಹಿಕೇಚ್ಛೆಗಳನ್ನು ದಮನಿಸುವ ಸ್ಥಿರನಿಷ್ಠೆ ನಮಗೆ ಲಭಿಸುತ್ತದೆ. ಈ ಸ್ಥಿರನಿಷ್ಠೆಯಿಂದ ಸ್ವಾರ್ಥಪರ ಜೀವಿತಕ್ಕೆ ನಾಶ ಬರುತ್ತದೆ. ನಮ್ಮಲ್ಲುಂಟಾಗಬೇಕಾದ ಈ ಸ್ಥಿರಚಿತ್ತತೆ – بَلٰى ۚ مَنْ اَسْلَمَ وَجْهَهٗ لِلّٰهِ وَهُوَ مُحْسِنٌ ಎಂಬ ವಾಕ್ಯದಲ್ಲಿ (2:113)

ಪವಿತ್ರ ಖುರ್‌ಆನ್ ಸೂಚಿಸಿದಂತೆ ದೇವನ ಸನ್ನಿಧಿಯಲ್ಲಿ ನಮ್ಮ ಕಂಠನಾಳವನ್ನು ಬಲಿಯರ್ಪಿಸಲು ನಮ್ಮನ್ನು ಸನ್ನದ್ಧರನ್ನಾಗಿಸುವ ಸ್ಥಿತಿಯಾಗಿದೆ. ಅದರ ಪ್ರಕಾರ ನಮ್ಮ ಸಕಲ ಬಾಹ್ಯಾಂಗಗಳನ್ನೂ ಆಂತರಿಕ ಶಕ್ತಿಗಳನ್ನೂ ದೇವಹಿತಾನುವರ್ತನೆಯಲ್ಲಿ ಮಗ್ನಗೊಳಿಸಿ ನಮ್ಮ ಮರಣ ಮತ್ತು ಜೀವಿತವನ್ನು ದೇವನಿಗಾಗಿ ಅರ್ಪಿಸುವಾಗ ಮಾತ್ರವೇ ಈ ಉತ್ಕೃಷ್ಟವಾದ ಸ್ಥಿರನಿಷ್ಠೆ ನಮಗೆ ಸಿದ್ಧಿಸುತ್ತದೆ. ಈ ವಿಷಯದಲ್ಲಿ ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

قُلْ إِنَّ صَلَاتِي وَنُسُكِي وَمَحْيَايَ وَمَمَاتِي لِلَّهِ رَبِّ الْعَالَمِينَ

ಹೇಳು: ನನ್ನ ಪ್ರಾರ್ಥನೆ, ನನ್ನ ತ್ಯಾಗ, ನನ್ನ ಜೀವಿತ, ನನ್ನ ಮರಣ ಎಲ್ಲವೂ ಸರ್ವಲೋಕನಾಥನಾದ ದೇವನಿಗಾಗಿ. **(6:163)**

ತನ್ನ ಜೀವಿತವೂ ಮರಣವೂ ತನಗಾಗಿರದೆ ದೇವನಿಗಾಗಿರುವಂತೆ ಒಬ್ಬನ ದೇವಪ್ರೇಮ ತೀವ್ರತರದ್ದಾಗಿರುವಾಗ, ಪ್ರೀತಿಸುವವರನ್ನು ಪ್ರೀತಿಸುವ ದೇವನು ತನ್ನ ಪ್ರೀತಿಯನ್ನು ಅವನಲ್ಲಿ ಪ್ರಕಟಿಸುತ್ತಾನೆ. ಆ ಉಭಯ ಪ್ರೇಮದ ಸಂಗಮದಿಂದ ಲೌಕಿಕ ವಿವೇಕಕ್ಕೆ ಕಾಣಲಿಕ್ಕಾಗಲಿ, ಗುರುತಿಸಲಿಕ್ಕಾಗಲಿ ಅಸಾಧ್ಯವಾದ ಒಂದು ತೇಜಸ್ಸು ಅವನಲ್ಲಿ ಉದ್ಭವಿಸುತ್ತದೆ. ಅನೇಕ ಸಹಸ್ರ ಸತ್ಯಭಕ್ತರೂ ಸತ್ಪುರುಷರೂ ನಿರ್ದಯ ವಧಿಸಲ್ಪಟ್ಟದ್ದು ಅವರನ್ನು ಲೋಕ ಗುರುತಿಸದೆ ಇದ್ದುದರಿಂದಾಗಿದೆ. ಅವರ ಕಾಂತಿಮಯ ಮುಖಗಳನ್ನು ಅಂಧವಾದ ಲೋಕಕ್ಕೆ ಕಾಣಲು ಸಾಧ್ಯವಾಗದಿದ್ದುದರಿಂದಲೇ ಅವರನ್ನು ವಂಚಕರೆಂದೂ ಸ್ವಾರ್ಥಿಗಳೆಂದೂ ಕರೆಯಲಾಯಿತು. ಈ ಆಧ್ಯಾತ್ಮಿಕ ಅಂಧತೆಯ ಕುರಿತು ಪವಿತ್ರ ಖುರ್‌ಆನ್ ಒಂದೆಡೆ ಹೀಗೆ ಹೇಳುತ್ತದೆ:

يَنْظُرُونَ إِلَيْكَ وَهُمْ لَا يُبْصِرُونَ

ಅವಿಶ್ವಾಸಿಗಳು ನಿನ್ನ ಕಡೆಗೆ ನೋಡುತ್ತಾರೆ; ಆದರೆ ಅವರು ನಿನ್ನನ್ನು ಕಾಣುವುದಿಲ್ಲ. **(7:199)**

ಸಂಕ್ಷಿಪ್ತವಾಗಿ, ಈ ಸ್ವರ್ಗೀಯ ತೇಜಸ್ಸು ಉಂಟಾಗುವ ಆ ಸುದಿನದಿಂದ ಪಾರ್ಥಿವ ಮನುಷ್ಯನು ಆಧ್ಯಾತ್ಮಿಕ ಮನುಷ್ಯನಾಗುತ್ತಾನೆ. ಸರ್ವಾಧಿಪತಿಯಾದ ದೇವನು ಅವನೊಳಗಿಂದ ಮಾತನಾಡುತ್ತಾನೆ ಮತ್ತು ತನ್ನ ದಿವ್ಯತ್ವದ ಪ್ರಭೆಯನ್ನು ತೋರಿಸುತ್ತಾನೆ. ಪಾವನವಾದ ದೇವಾನುರಾಗದಿಂದ ತುಂಬಿದ ಅವನ ಹೃದಯವನ್ನು ಪರಮಾತ್ಮನು ತನ್ನ ನಿವಾಸ ಸ್ಥಾನವಾಗಿಯೂ ತನ್ನ ಮಹತ್ವದ ಪೀಠವನ್ನಾಗಿಯೂ ಮಾಡುತ್ತಾನೆ. ಪಾವನವಾದ ಆತ್ಮ ಪರಿವರ್ತನೆಯಿಂದ ಈ ವ್ಯಕ್ತಿ ಒಬ್ಬ ಹೊಸ

ಮನುಷ್ಯನಾಗಿ ಮಾರ್ಪಡುವ ಮೊದಲ್ಗೊಂಡು ಅವನಿಗೆ ಪರಮಾತ್ಮನು ಹೊಸ ದೇವನಾಗಿ ತೋರುತ್ತಾನೆ. ಅವನಿಗೆ ಸಂಬಂಧಿಸಿದ ಮಟ್ಟಿಗೆ ದೇವನು ತನ್ನ ವರ್ತನೆಯಲ್ಲೂ ನಿಯಮ ಸಂಪ್ರದಾಯಗಳಲ್ಲೂ ಹೊಸತನವನ್ನು ಪ್ರಕಟಿಸಲು ತೊಡಗುತ್ತಾನೆ. ನಿಜವಾಗಿ ದೇವನು ಹೊಸಬನೋ, ಅವನ ಸಂಪ್ರದಾಯಗಳು ಹೊಸತೋ ಅಲ್ಲ. ಆದರೆ ಅವನ ಈ ವರ್ತನೆ, ವಾಡಿಕೆಯಿಂದ ಭಿನ್ನವೂ ಭೌತಿಕ ತತ್ವಜ್ಞರಿಗೆ ಅಪರಿಚಿತವೂ ಆದ ರೀತಿಯದಾಗಿದೆ. ಈ ಉತ್ಕೃಷ್ಟವಾದ ಪರಿವರ್ತನೆಯನ್ನು ಪಡೆದ ವ್ಯಕ್ತಿಯ ಕುರಿತು ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

وَمِنَ النَّاسِ مَن يَشْرِي نَفْسَهُ ابْتِغَاءَ مَرْضَاتِ اللَّهِ ۗ وَاللَّهُ رَءُوفٌ بِالْعِبَادِ

ಮನುಷ್ಯರಲ್ಲಿ ದೇವನ ಪ್ರೀತಿಯನ್ನು ಗಳಿಸಿಕ್ಕಾಗಿ ಜೀವಿತಾರ್ಪಣ ಮಾಡಿರುವ ಉತ್ಕೃಷ್ಟರು ದೇವನ ಸಂತುಷ್ಟಿಗಾಗಿ ತಮ್ಮ ಜೀವವನ್ನು ವಿಕ್ರಯಿಸುತ್ತಾರೆ; ದೇವನ ಕಾರುಣ್ಯ ಪ್ರಕಟನೆಗೆ ಪಾತ್ರರಾಗಿರುವವರು ಇವರೇ ಆಗಿದ್ದಾರೆ. **(2:208)**

ಆಧ್ಯಾತ್ಮಿಕ ಉನ್ನತ ಮಟ್ಟಕ್ಕೆ ತಲುಪಿದ ಮನುಷ್ಯನು ದೇವಮಾರ್ಗದಲ್ಲಿ ಆತ್ಮಾರ್ಪಣೆ ಮಾಡುವುದು ಈ ರೀತಿಯಲ್ಲಾಗಿದೆ. ಪವಿತ್ರ ಖುರ್‌ಆನ್ ಈ ವಾಕ್ಯದಿಂದ ನಮಗೆ ಬೋಧಿಸುವುದೇನೆಂದರೆ, ದೇವಮಾರ್ಗದಲ್ಲಿ ಮತ್ತು ದೇವೇಚ್ಛೆಗಾಗಿ ಆತ್ಮ ಸಮರ್ಪಣೆ ಮಾಡಿ, ತ್ಯಾಗ ಮೂಲಕ ದೇವ ಭಕ್ತಿಯನ್ನು ಪ್ರಕಟಿಸಿ, ತನ್ನ ಜೀವಿತ ಸರ್ವಸ್ವವೂ ಸೃಷ್ಟಿಕರ್ತನಿಗೆ ವಿಧೇಯನಾಗಿರಲಿಕ್ಕೂ ಸಮಸೃಷ್ಟಿಗಳ ಸೇವೆ ಮಾಡಲಿಕ್ಕೂ ಇರುವುದೆಂದು ತಿಳಿದುಕೊಂಡಿರುವವನು ಸಕಲ ದುಃಖಗಳಿಂದಲೂ ಮುಕ್ತನಾಗುತ್ತಾನೆ. ಹೀಗೆ ತನ್ನ ಸರ್ವ ಇಚ್ಛೆಗಳನ್ನು ದೇವನ ಇಚ್ಛೆಗೆ ಅಧೀನವನ್ನಾಗಿ ಮಾಡುವವನು ಆತ್ಮಾನುಸರಣವೆಂಬ ದರ್ಪಣದಲ್ಲಿ ತನ್ನ ಅನುರಾಗ ಪಾತ್ರನಾದ ಕರ್ತನನ್ನು ದರ್ಶಿಸುತ್ತಿದ್ದಾನೋ ಎಂಬಂತೆ ಹೃದಯ ಶುದ್ಧಿಯಿಂದಲೂ ಉತ್ಸುಕತೆಯಿಂದಲೂ ಸಕಲ ಅಂತಃಶಕ್ತಿಗಳನ್ನು ಸತ್ಕರ್ಮಗಳಲ್ಲಿ ತೊಡಗಿಸುತ್ತಾನೆ. ಆಗ ಅವನ ಇಚ್ಛೆ ದೇವನ ಇಚ್ಛೆಗನುಗುಣವಾಗಿ, ಅವನ ಸರ್ವಾನಂದ ದೇವನ ಇಷ್ಟವನ್ನು ನಿರ್ವಹಿಸುವುದರಲ್ಲಿ ಮಾತ್ರವಾಗಿರುತ್ತದೆ. ಅವನು ಸತ್ಕರ್ಮಗಳನ್ನು ಭಾರವೆಂದು ಬಗೆಯದೆ ಅತೀವ ಉತ್ಸಾಹದಿಂದಲೂ ಸಂತುಷ್ಟಿಯಿಂದಲೂ ಅನುಷ್ಠಿಸುತ್ತಾನೆ. ಎಂದರೆ, ಅವನು ಸದ್ಧರ್ಮ ಅನುಷ್ಠಾನಕ್ಕೆ ಸರ್ವಾತ್ಮನಾ ಪ್ರಚೋದಿತನಾಗಿರುತ್ತಾನೆ. ಈ ಸ್ಥಿತಿಯು ಆಧ್ಯಾತ್ಮಿಕ ಪಥದಲ್ಲಿ ಸಂಚರಿಸುವ ಮನುಷ್ಯನಿಗೆ ಐಹಿಕ ಜೀವಿತದಲ್ಲಿ ಪ್ರಾಪ್ತವಾಗುವ ಸ್ವರ್ಗವಾಗಿದೆ. ಅವನಿಗೆ ಭಾವಿ ಜೀವಿತದಲ್ಲಿ ಲಭಿಸಲಿಕ್ಕಿರುವ ಸ್ವರ್ಗ ಈ ಸ್ವರ್ಗದ ಪ್ರತಿಬಿಂಬವಾಗಿದೆ. ಇಹದಲ್ಲಿ ಅನುಭವಕ್ಕೆ ಬರುವ ಈ ಆತ್ಮಾನುಭೂತಿಗಳು ದೇವನ

ಅಪಾರ ಶಕ್ತಿವೈಭವದಿಂದ ಪಾರತ್ರಿಕ ಜೀವಿತದಲ್ಲಿ ಪ್ರತ್ಯಕ್ಷರೂಪವನ್ನು ಪಡೆಯುತ್ತವೆ. ಇದನ್ನು ಸೂಚಿಸುತ್ತಾ ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

وَلِمَنْ خَافَ مَقَامَ رَبِّهٖ جَنَّتٰنِ

ತನ್ನ ರಕ್ಷಕನಾದ ದೇವನಿಗೆ ಭಯಪಟ್ಟು ಅವನ ಮಹತ್ವವನ್ನೂ ಪ್ರಭಾವವನ್ನೂ ಭಕ್ತಿಯಿಂದ ವೀಕ್ಷಿಸುವವನಿಗೆ (ಇಹದಲ್ಲೂ ಪರದಲ್ಲೂ) ಎರಡು ಸ್ವರ್ಗಗಳಿವೆ.

**(55:47)**

وَسَقٰىهُمْ رَبُّهُمْ شَرَابًا طَهُوْرًا

ದೇವಭಕ್ತಿಯಲ್ಲೂ ಧ್ಯಾನದಲ್ಲೂ ಮಗ್ನರಾಗಿರುವವರಿಗೆ ಅವರ ರಕ್ಷಕನಾದ ದೇವನು ಹೃದಯವನ್ನೂ ವಿಚಾರಗಳನ್ನೂ ಉದ್ದೇಶಗಳನ್ನೂ ಪವಿತ್ರಗೊಳಿಸುವ ಒಂದು ಪಾನೀಯವನ್ನು ಕುಡಿಸುವನು. **(76:22)**

اِنَّ الْاَبْرَارَ يَشْرَبُوْنَ مِنْ كَاْسٍ كَانَ مِزَاجُهَا كَافُوْرًا - عَيْنًا يَّشْرَبُ بِهَا عِبَادُ اللّٰهِ يُفَجِّرُوْنَهَا تَفْجِيْرًا

ಸಜ್ಜನರು **'ಕಾಫೂರ್'** (ಕರ್ಪೂರ) ಮಿಶ್ರಿತ ಒಂದು ಬಗೆಯ ಪಾನೀಯವನ್ನು ಕುಡಿಯುತ್ತಾರೆ; ತಮ್ಮ ಕೈಗಳಿಂದಲೇ ನಿರ್ಮಿಸಿದ ಬುಗ್ಗೆಯಿಂದ ಅವನು ಪಾನ ಮಾಡುತ್ತಾರೆ. **(76:6,7)**

## ಕಾಫೂರ್ (ಕರ್ಪೂರ) ಮತ್ತು ಝನ್‌ಜಬೀಲ್‌ನಿಂದ (ಶುಂಠಿ) ತಯಾರಿಸಿದ ಪಾನೀಯಗಳ ತಾತ್ಪರ್ಯ

ಮೊದಲು ಒಂದೆಡೆ ಪ್ರಸ್ತಾವಿಸಿದಂತೆ, 'ದಮನಿಸು' ಮತ್ತು 'ಮುಚ್ಚಿಡು' ಎಂದು ಅರ್ಥಕೊಡುವ **'ಕಫರ್'** ಎಂಬ ಧಾತುವಿನಿಂದ ಉತ್ಪನ್ನವಾದ **'ಕಾಫೂರ್'** ಎಂಬ ಪದ ಈ ವಾಕ್ಯದಲ್ಲಿ ಪ್ರಯೋಗಿಸಲ್ಪಟ್ಟದ್ದು, ಸದ್ಧರ್ಮಿಗಳು ದೇವಾನುರಾಗದ ಮತ್ತು ಆತ್ಮ ಪರಿತ್ಯಾಗದ ಒಂದು ಪಾನೀಯವನ್ನು ಕುಡಿದುದರಿಂದ ಅವರ ಪ್ರಪಂಚಾನುರಾಗ ಶಿಥಿಲವಾಗಿ ಅವರ ವಿಷಯಾಸಕ್ತಿಗಳು ನಿಗ್ರಹಿಸಲ್ಪಟ್ಟಿರುತ್ತವೆಯೆಂದು ಸೂಚಿಸಲಿಕ್ಕಾಗಿದೆ. ಉದ್ವೇಗಗಳೆಲ್ಲ ಹೃದಯದಲ್ಲಿ ಹುಟ್ಟುತ್ತವಷ್ಟೆ. ಹೃದಯವು ಅನುಚಿತ ವಿಚಾರಗಳಿಂದ ದೂರವಿದ್ದುಕೊಂಡಾಗ ವಿಷಯಾಸಕ್ತಿಗಳು ಕ್ರಮೇಣ ಕಡಿಮೆ ಕಡಿಮೆಯಾಗಿ ಕೊನೆಗೊಳ್ಳುತ್ತವೆ. ಪೂರ್ಣ ರೀತಿಯಲ್ಲಿ ದೇವನಿಗಾಗಿ ಆತ್ಮಾರ್ಪಣೆ ಮಾಡುವವರು ವಿಷಯಾಸಕ್ತಿಗಳಿಂದ ದೂರವಾಗುತ್ತಾರೆಂದು ಈ ಪವಿತ್ರ ಖುರ್‌ಆನ್ ವಾಕ್ಯದಿಂದ

ತಿಳಿದುಬರುತ್ತದೆ. ಒಟ್ಟಾರೆ, ದೇವನೆಡೆಗೆ ಪೂರ್ಣವಾಗಿ ಬಾಗಿ ಅವನ ಆಶ್ರಯವನ್ನು ಮಾತ್ರ ಕೋರುವ ಸದ್ಧರ್ಮಿಗಳ ಲೌಕಿಕೇಚ್ಛೆಗಳು ತಣ್ಣಗಾಗಿ, ಕರ್ಪೂರದಿಂದ ವಿಷಾಣುಗಳು ದಮನಿಸಲ್ಪಡುವಂತೆ ಅವರ ವಿಷಯಾಸಕ್ತಿಗಳು ನಿಗ್ರಹಿಸಲ್ಪಡುತ್ತವೆ.

ಮೇಲಿನ ವಾಕ್ಯಗಳ ಅನುಬಂಧವಾಗಿ ಪವಿತ್ರ ಖುರ್ಆನ್ ಹೀಗೆ ಹೇಳುತ್ತದೆ:

وَيُسْقَوْنَ فِيهَا كَأْسًا كَانَ مِزَاجُهَا زَنجَبِيلًا - عَيْنًا فِيهَا تُسَمَّىٰ سَلْسَبِيلًا

(ಕರ್ಪೂರ ಪಾನೀಯದ ನಂತರ) 'ಝನ್‌ಜಬೀಲ್' ಅಥವಾ ಶುಂಠಿ ಮಿಶ್ರಿತ ಪಾನೀಯವನ್ನು ಅವರಿಗೆ ಕುಡಿಸಲಾಗುವುದು – ಸಲ್‌ಸಬೀಲ್ ಎಂಬ ಚಿಲುಮೆಯಿಂದ. **(76:18,19)**

ಈ ವಾಕ್ಯದ **'ಝನ್‌ಜಬೀಲ್'** (**زنجبيل**) ಎಂಬ ಪದ 'ಝನಾ' (زناء) ಮತ್ತು 'ಜಬಲ್' (**جبل**) ಎಂಬ ಎರಡು ಪದಗಳುಳ್ಳ ಸಂಯುಕ್ತ ಶಬ್ದವೆಂಬುದು ಗಮನೀಯವಾಗಿದೆ. ಅರಬಿ ಭಾಷೆಯಲ್ಲಿ 'ಝನಾ' ಎಂಬ ಪದಕ್ಕೆ 'ಮೇಲೇರು' ಎಂದೂ 'ಜಬಲ್' ಎಂಬ ಪದಕ್ಕೆ 'ಪರ್ವತ' ಎಂದೂ ಅರ್ಥ. ಆಗ 'ಝನ್‌ಜಬೀಲ್' ಎಂಬ ಸಂಯುಕ್ತ ಪದದ ಅರ್ಥ 'ಪರ್ವತವನ್ನೇರು' ಎಂದಾಯಿತು. ವಿಷರೋಗ ಬಾಧಿಸಿದ ಓರ್ವನಿಗೆ ಪೂರ್ಣಾರೋಗ್ಯ ಪ್ರಾಪ್ತವಾಗುವುದರೆಡೆಯಲ್ಲಿ ಎರಡು ಅವಸ್ಥೆಗಳನ್ನು ದಾಟಿ ಬರಬೇಕಾಗಿದೆ. ಒಂದನೆಯ ಘಟ್ಟದಲ್ಲಿ ವಿಷಾಣುಗಳ ಹರಡುವಿಕೆ ತಡೆಯಲ್ಪಟ್ಟು ರೋಗದ ತೀವ್ರತೆ ಕಮ್ಮಿಯಾಗಿ ಅಪಾಯಸ್ಥಿತಿ ದೂರವಾಗುವುದು. ಹೀಗೆ ಆರೋಗ್ಯವನ್ನು ಅಪಾಯಕ್ಕೀಡುಮಾಡುವ ರೀತಿಯಲ್ಲಿ ಶಕ್ತಿಯುತವಾಗಿ ಮೇಲೇರಿದ ವಿಷವ್ಯಾಧಿಯಾದ ಆ ಬಿರುಗಾಳಿ ಶಮನಗೊಳ್ಳುವುದಾದರೂ, ತತ್ಫಲವಾಗಿ ಉಂಟಾದ ಬಲಹೀನತೆ ಅವನಲ್ಲಿ ಬಾಕಿಯಾಗುತ್ತದೆ. ಶಕ್ತಿ ಪ್ರಯೋಗಿಸುವ ಯಾವುದೇ ಕೆಲಸ ಅವನಿಂದ ಮಾಡಲು ಸಾಧ್ಯವಾಗುವುದಿಲ್ಲ. ಬಲಹೀನತೆಯ ಕಾರಣದಿಂದ ಅವನು ಜೀವಚ್ಛವದಂತೆ ಏಳುತ್ತಾ ಬೀಳುತ್ತಾ ನಡೆಯುತ್ತಾನೆ. ಆದರೆ ಎರಡನೆಯ ಘಟ್ಟದಲ್ಲಿ ಅವನಿಗೆ ಪೂರ್ವ ಆರೋಗ್ಯ ಪ್ರಾಪ್ತಿಯಾಗಿ ದೇಹ ಬಲಯುತವಾಗುತ್ತದೆ. ಹೀಗೆ ಶಕ್ತಿ ಪೂರ್ವಸ್ಥಿತಿಯನ್ನು ಪಡೆಯುವುದರೊಂದಿಗೆ ಅವನಿಗೆ ನಿರಾತಂಕವಾಗಿ ಪರ್ವತಗಳನ್ನೇರಲಿಕ್ಕೂ ಉತ್ಸಾಹಭರಿತನಾಗಿ ಅತ್ತಿಂದಿತ್ತ ಓಡಾಡಲಿಕ್ಕೂ ಧೈರ್ಯ ಬರುತ್ತದೆ. ಹೀಗಿರುವ ಒಂದು ಪರಿಸ್ಥಿತಿ ಮೂರನೆಯ ಸುಧಾರಣೆಯ ಘಟ್ಟವಾದ ಆಧ್ಯಾತ್ಮಿಕ ಸ್ಥಿತಿಯಲ್ಲಿ ಅನುಭವವಾಗುತ್ತದೆ. ಈ ಸ್ಥಿತಿಯನ್ನು ಉದ್ದೇಶಿಸಿ ಮೇಲೆ ಉದ್ಧರಿಸಲಾದ ವಾಕ್ಯದಲ್ಲಿ, ಉತ್ಕೃಷ್ಟ ಸ್ಥಾನ ಗಳಿಸಿದ ದೇವಭಕ್ತರಿಗೆ 'ಝನ್‌ಜಬೀಲ್' (ಶುಂಠಿ) ಮಿಶ್ರಿತವಾದ ಒಂದು ಪಾನೀಯ ನೀಡಲಾಗುವುದೆಂದು ಪವಿತ್ರ

ಖುರ್‌ಆನ್ ಪ್ರಸ್ತಾಪಿಸಿದೆ. ಎಂದರೆ, ಸಂಪೂರ್ಣ ಆತ್ಮಶಕ್ತಿ ಗಳಿಸಿ ಅವರು ಉನ್ನತ ಪರ್ವತ ಪ್ರದೇಶಗಳನ್ನೇರುತ್ತಾರೆ; ಕ್ಲಿಷ್ಟಕಾರ್ಯಗಳನ್ನು ಅವರು ಸಾಧಿಸುತ್ತಾರೆ; ಮತ್ತು ದೇವಪಥದಲ್ಲಿ ವಿಸ್ಮಯಕರವಾದ ತ್ಯಾಗ ಕರ್ಮಗಳನ್ನು ನಿರ್ವಹಿಸುತ್ತಾರೆ.

ವೈದ್ಯ ಶಾಸ್ತ್ರದ ಪ್ರಕಾರ 'ಝನ್‌ಜಬೀಲ್' (ಶುಂಠಿ) ಜಠರಾಗ್ನಿಯನ್ನು ಉತ್ತೇಜನಗೊಳಿಸಲಿಕ್ಕೂ ಅತಿಸಾರವನ್ನು ತಡೆಯಲಿಕ್ಕೂ ಉಪಯುಕ್ತವಾದ ಔಷಧಿಯಾಗಿದೆ. 'ಝನ್‌ಜಬೀಲ್' ಎಂಬ ಹೆಸರೇ ಅದರ ವಿಶಿಷ್ಟ ಗುಣವನ್ನು ಸೂಚಿಸುತ್ತದೆ. ಹೇಗೆಂದರೆ, ಅದು ಬಲಹೀನನಾದವನ ದೇಹಕ್ಕೆ ಶಕ್ತಿಯನ್ನೂ ಶಾಖವನ್ನೂ ನೀಡಿ ಅವನನ್ನು ಪರ್ವತವನ್ನೇರಲಿಕ್ಕೆ ಸಹ ಶಕ್ತವನ್ನಾಗಿ ಮಾಡುತ್ತದೆ. 'ಕಾಫೂರ್' ಮತ್ತು 'ಝನ್‌ಜಬೀಲ್' ಇವೆರಡರ ಕುರಿತು ಪ್ರಸ್ತಾಪಿಸುವ ಮೇಲೆ ಉದ್ಧರಿಸಲಾದ ಎರಡು ಪವಿತ್ರ ಖುರ್‌ಆನ್ ವಾಕ್ಯಗಳು, ಮನುಷ್ಯನು ಭೋಗಜೀವಿತದಿಂದ ಸತ್ಕರ್ಮದೆಡೆಗೆ ಸಾಗಿ ಬರಲು ದಾಟಬೇಕಾದ ಎರಡು ಅವಸ್ಥೆಗಳನ್ನು ಸೂಚಿಸುತ್ತವೆ. ಪ್ರಗತಿಯೆಡೆಗೆ ಸಾಗಲು ಅವನು ಪ್ರಥಮವಾಗಿ ಮಾಡುವ ಚಟುವಟಿಕೆಯ ನಂತರ ಉಂಟಾಗುವ ಒಂದನೆಯ ಘಟ್ಟದಲ್ಲಿ ವಿಷಬೀಜಗಳು ನಾಶವಾಗಿ ವಿಷಯಾಸಕ್ತಿಗಳು ತಣ್ಣಗಾಗುತ್ತವೆ. ಇದು 'ಕಾಫೂರ್' ಪಾನೀಯದ ಘಟ್ಟವಾಗಿದೆ. ಕರ್ಪೂರ ವಿಷಹರ ಔಷಧವಾದುದರಿಂದ ಅದು ಕಾಲರ, ವಿಷಮ ಜ್ವರ ಮೊದಲಾದ ವ್ಯಾಧಿಗಳಿಗೆ ಬಹಳ ಉಪಯುಕ್ತವಾಗಿದೆ. ಒಟ್ಟಾರೆ, ಈ ಘಟ್ಟದಲ್ಲಿ ವಿಷಸಂಕ್ರಮ ತಡೆಯಲ್ಪಟ್ಟು ರೋಗ ಉಪಶಮನಗೊಳ್ಳುವುದಾದರೂ ರೋಗಿಯ ಬಲಹೀನತೆ ಮತ್ತು ಆಯಾಸ ಇಲ್ಲದಾಗುವುದಿಲ್ಲ. ಆದರೆ ಎರಡನೆಯ ಘಟ್ಟದಲ್ಲಿ ಅವನು 'ಝನ್‌ಜಬೀಲ್' ಪಾನೀಯದಿಂದ ಶಕ್ತಿ ಪಡೆಯುತ್ತಾನೆ. 'ಝನ್‌ಜಬೀಲ್' ಪಾನೀಯ ಸರ್ವಶಕ್ತನಾದ ದೇವನ ಸೌಂದರ್ಯದ ಪ್ರಕಟನೆಯಾಗಿದೆ. ಆತ್ಮದ ಆಹಾರವಾದ ಈ ಪ್ರಕಟನೆಯಿಂದ ಶಕ್ತಿಶಾಲಿಯಾಗುವ ವ್ಯಕ್ತಿ ಆತ್ಮೋನ್ನತಿಗಳಿಗೇರಲಿಕ್ಕೂ ದೇವಮಾರ್ಗದಲ್ಲಿ ಮಹತ್ತರವಾದ ತ್ಯಾಗಗಳನ್ನು ಮಾಡಲಿಕ್ಕೂ ಪ್ರಾಪ್ತನಾಗುತ್ತಾನೆ. ದೇವಾನುರಾಗವೆಂಬ ಅಗ್ನಿ ಹೃದಯಾಂತರಾಳದಲ್ಲಿ ಹುದುಗಿರುವ ವಿನಾ ಒಬ್ಬನಿಗೆ ಆ ರೀತಿಯ ತ್ಯಾಗಗಳನ್ನು ಮಾಡುವುದು ಅಸಾಧ್ಯ. ಈ ಎರಡು ವಿಧ ಆಧ್ಯಾತ್ಮ ಸ್ಥಿತಿಗಳನ್ನು ತಿಳಿಸಿಕೊಡುವುದಕ್ಕಾಗಿ "ನಿಗ್ರಹಿಸುವ" ಮತ್ತು ಮೇಲೇರಲಿಕ್ಕೆ ಶಕ್ತಿ ನೀಡುವ" ಎಂದು ಅನುಕ್ರಮವಾಗಿ ಅರ್ಥ ಕೊಡುವ "ಕಾಫೂರ್" ಮತ್ತು "ಝನ್‌ಜಬೀಲ್" ಎಂಬ ಎರಡು ಪದಗಳು ಪವಿತ್ರ ಖುರ್‌ಆನಿನಲ್ಲಿ ಪ್ರಯೋಗಿಸಲ್ಪಟ್ಟಿವೆ. ಪವಿತ್ರ ಖುರ್‌ಆನಿನಲ್ಲಿ ಇನ್ನೂ ಹೀಗೆ ಹೇಳಲಾಗಿದೆ:

اِنَّآ اَعۡتَدۡنَا لِلۡكٰفِرِيۡنَ سَلٰسِلَا۟ وَاَغۡلٰلًا وَّسَعِيۡرًا

ಸತ್ಯವನ್ನು ನಿರಾಕರಿಸುವವರಿಗೆ ಶೃಂಖಲೆಗಳನ್ನೂ ಕಂಠಪಾಶಗಳನ್ನೂ ಜ್ವಲಿಸುವ ಅಗ್ನಿಯನ್ನೂ ನಾವು ಸಿದ್ಧಪಡಿಸಿದ್ದೇವೆ. **(76:5)**

ಈ ವಾಕ್ಯ ಸೂಚಿಸುವುದೇನೆಂದರೆ, ನಿಷ್ಕಳಂಕ ಮನಸ್ಸಿನಿಂದ ದೇವನನ್ನು ಹುಡುಕದವರು, ದೈವಿಕ ನಿಯಮಾನುಸಾರ ತಕ್ಕ ಪ್ರತಿಕ್ರಿಯೆಗೆ ಗುರಿಯಾಗುತ್ತಾರೆ. ಅವರು ಶೃಂಖಲೆಗಳಿಂದ ಬಂಧಿಸಲ್ಪಟ್ಟವರಂತೆ ಲೌಕಿಕ ವಿಚಾರಗಳಲ್ಲೇ ಮಗ್ನರಾಗಿಯೂ ಸಂಕೋಲೆಗಳಿಂದ ಬಿಗಿಯಲ್ಪಟ್ಟವರಂತೆ ತಲೆಗಳನ್ನು ಮೇಲಕ್ಕೆತ್ತಲು ಅಸಾಧ್ಯವಾದ ರೀತಿಯಲ್ಲಿ ಭೌತಿಕ ವಿಚಾರಗಳಲ್ಲೇ ನಿರತರಾಗಿಯೂ ಧನ ಸಂಪಾದನೆ, ಸ್ವತ್ತುಗಳನ್ನು ಸ್ವಾಧೀನಪಡಿಸುವುದು, ವಿರೋಧಿಗಳನ್ನು ಜಯಿಸುವುದು ಮುಂತಾದ ಸ್ವಾರ್ಥಾಭಿಲಾಷೆಗಳಿಂದ ತೃಪ್ತರಾಗಿರುತ್ತಾರೆ. ಹೀಗೆ ಅವರು ಕೆಟ್ಟ ವಿಚಾರಗಳಲ್ಲಿ ಮಗ್ನರಾಗಿಯೂ ಉತ್ಕೃಷ್ಟ ಕರ್ಮಗಳಿಗೆ ಅನರ್ಹರಾಗಿಯೂ ಕಾಣಲ್ಪಡುವ ಕಾರಣ ಅವರಿಗೆ ದೇವನು ಈ ಮೇಲೆ ಹೇಳಿದ ಮೂರು ವಿಧ ವ್ಯಥೆಗಳನ್ನು ವಿಧಿಸಿದ್ದಾನೆ. ಮನುಷ್ಯನು ಮಾಡುವ ಪ್ರತಿಯೊಂದು ಕ್ರಿಯೆಗೆ ಪ್ರತಿಯಾಗಿ ದೇವನು ಸಹ ಒಂದು ಕ್ರಿಯೆ ಪ್ರಕಟಿಸುತ್ತಾನೆ ಎಂಬುದರ ಒಂದು ಸೂಚನೆ ಸಹ ಇಲ್ಲಿ ಅಂತರ್ಗತವಾಗಿದೆ. ಉದಾಹರಣೆಗಾಗಿ, ಒಬ್ಬನು ತನ್ನ ಕೋಣೆಯ ಬಾಗಿಲುಗಳನ್ನೆಲ್ಲ ಮುಚ್ಚುವನಾದರೆ ಆ ಕೋಣೆಯಲ್ಲಿ ಕತ್ತಲೆ ವ್ಯಾಪಿಸುವಂತೆ ಮಾಡುವುದು ದೇವನ ಕ್ರಿಯೆಯಾಗಿದೆ. ನಮ್ಮ ಪ್ರತಿಯೊಂದು ಕ್ರಿಯೆಗೂ ಅನಿವಾರ್ಯ ಫಲವೆಂಬಂತೆ ದೇವನು ನಿಸರ್ಗ ನಿಯಮದಲ್ಲಿ ನಿಶ್ಚಯಿಸಿದ ಕಾರ್ಯವೆಲ್ಲ ಯಥಾರ್ಥದಲ್ಲಿ ಕಾರ್ಯಕಾರಣ ಕರ್ತನಾದ ದೇವನ ಪ್ರಕ್ರಿಯೆಯಾಗಿದೆ. ಒಬ್ಬನು ವಿಷ ಸೇವಿಸಿದರೆ, ಅದರ ಅನಿವಾರ್ಯ ಫಲವೆಂಬಂತೆ ದೇವನು ಅವನಿಗೆ ಮರಣ ಸಂಭವಿಸುವಂತೆ ಮಾಡುತ್ತಾನೆ. ಇದೇ ಪ್ರಕಾರ, ಸಾಂಕ್ರಮಿಕ ರೋಗ ಬಾಧಿಸಲು ಹೇತುವಾಗುವ ಒಂದು ದೋಷವನ್ನು ಒಬ್ಬನು ಮಾಡುವನಾದರೆ, ಅವನ ಆ ಕ್ರಿಯೆಗೆ ಪ್ರತಿಕ್ರಿಯೆಯಾಗಿ ಅವನಿಗೆ ಆ ರೋಗ ಬಾಧಿಸುವಂತೆ ಮಾಡುವುದು ನಿಯತಿ ಕ್ರಿಯೆಯಾಗಿದೆ. ಹೀಗೆ ನಮ್ಮ ಐಹಿಕ ಜೀವಿತದಲ್ಲಿ ನಮ್ಮ ಪ್ರತಿಯೊಂದು ಕ್ರಿಯೆಗೂ ಅನಿವಾರ್ಯವಾದ ಫಲವನ್ನು ನಾವು ಕಾಣುತ್ತಿದ್ದೇವಷ್ಟೇ. ಆ ಫಲವೇ ದೇವಕ್ರಿಯೆ. ಆಧ್ಯಾತ್ಮಿಕ ವಿಷಯದಲ್ಲೂ ಇದೇ ನಿಯಮವಾಗಿದೆ. ಈ ವಿಚಾರವನ್ನು ಪವಿತ್ರ ಖುರ್‌ಆನ್ ಎರಡು ಉದಾಹರಣೆಗಳಿಂದ ವಿಶದೀಕರಿಸುತ್ತದೆ. ಅದು ಹೀಗೆ ಹೇಳುತ್ತದೆ:

وَالَّذِيۡنَ جَاهَدُوۡا فِيۡنَا لَنَهۡدِيَنَّهُمۡ سُبُلَنَا

ಯಾರು ನಮ್ಮನ್ನು ಪಡೆಯಲು ಪೂರ್ಣವಾಗಿ ಯತ್ನಿಸುತ್ತಾರೋ, ಅವರ ಆ

ಪ್ರಯತ್ನದ ಅನಿವಾರ್ಯ ಫಲವಾಗಿ ಅವರನ್ನು ನಾವು ನಮ್ಮ ದಾರಿಗಳಲ್ಲಿ ನಡೆಸುವೆವು. **(29:70)**

فَلَمَّا زَاغُوٓا أَزَاغَ ٱللَّهُ قُلُوبَهُمْ

ಯಾರು ವಕ್ರತೆಯನ್ನು ಕೈಗೊಂಡು ನೇರ ಮಾರ್ಗದಲ್ಲಿ ನಡೆಯದಿರುತ್ತಾರೋ ಅವರ ಹೃದಯಗಳನ್ನು ನಾವು ವಕ್ರತೆಯುಳ್ಳದ್ದಾಗಿ ಮಾಡುವೆವು. **(61:6)**

ಈ ವಿಷಯವನ್ನು ಹೆಚ್ಚು ಸ್ಪಷ್ಟಪಡಿಸಲಿಕ್ಕೋಸ್ಕರ ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

مَن كَانَ فِي هَٰذِهِۦٓ أَعْمَىٰ فَهُوَ فِي ٱلْءَاخِرَةِ أَعْمَىٰ وَأَضَلُّ سَبِيلًا

ಯಾವನು ಇಹದಲ್ಲಿ ಅಂಧನಾಗಿರುವನೋ ಅವನು ಪರದಲ್ಲೂ ಅಂಧನಾಗುವನು. ಹಾಗೂ ಇನ್ನೂ ಹೆಚ್ಚು ದಾರಿತಪ್ಪಿದವನಾಗುವನು. **(17:73)**

ಯಥಾರ್ಥ ಭಕ್ತರು ಐಹಿಕ ಜೀವಿತದಲ್ಲೇ ದೇವನ ದರ್ಶನವನ್ನು ಪಡೆಯುತ್ತಾರೆಂದೂ ಅವರು ಸರ್ವಸ್ವವನ್ನು ತ್ಯಜಿಸಿ ಹೃದಯಪೂರ್ವಕ ಇಚ್ಛಿಸಿದ ಅವರ ಅನುರಾಗ ಪಾತ್ರನಾದ ದೇವನು ತನ್ನ ಮಹತ್ತಾದ ಪ್ರಭಾವದಿಂದ ಇಹದಲ್ಲೇ ಅವರಿಗೆ ಪ್ರತ್ಯಕ್ಷನಾಗುವನೆಂದೂ ಈ ಮೇಲಿನ ಪವಿತ್ರ ಖುರ್‌ಆನ್ ವಾಕ್ಯ ಸ್ಪಷ್ಟವಾಗಿ ಸೂಚಿಸುತ್ತದೆ. ಸಂಕ್ಷಿಪ್ತವಾಗಿ, ಸ್ವರ್ಗೀಯ ಜೀವಿತಕ್ಕೆ ಇಹದಲ್ಲೇ ತಳಪಾಯ ಹಾಕಲಾಗುವುದೆಂದೂ ನರಕೀಯ ಅಂಧಜೀವಿತವು ಐಹಿಕ ಅಶುದ್ಧಿ ಮತ್ತು ಆಧ್ಯಾತ್ಮಿಕಾಂಧತೆಯಿಂದ ಕೂಡಿದ ಜೀವಿತದಿಂದಲೇ ರೂಪುಗೊಳ್ಳುವುದೆಂದೂ ಈ ದೇವವಾಕ್ಯ ಸೂಚಿಸುತ್ತದೆ.

ಪವಿತ್ರ ಖುರ್‌ಆನ್ ಇನ್ನೂ ಹೇಳುತ್ತದೆ:

وَبَشِّرِ ٱلَّذِينَ ءَامَنُوا۟ وَعَمِلُوا۟ ٱلصَّٰلِحَٰتِ أَنَّ لَهُمْ جَنَّٰتٍ تَجْرِى مِن تَحْتِهَا ٱلْأَنْهَٰرُ

ನಂಬಿಕೆಯಿರಿಸಿ ಸತ್ಕರ್ಮ ಗೈಯ್ಯುವವರಿಗೆ, ಕೆಳಭಾಗದಲ್ಲಿ ನದಿಗಳು ಪ್ರವಹಿಸುವ ತೋಟಗಳಿಗೆ ಅವರು ಹಕ್ಕುದಾರರೆಂಬ ಶುಭವಾರ್ತೆಯನ್ನು ನೀಡು. **(2:26)**

ಈ ದೇವವಾಕ್ಯದಲ್ಲಿ ಸತ್ಯವಿಶ್ವಾಸವನ್ನು ಕೆಳಭಾಗದಲ್ಲಿ ನದಿಗಳು ಹರಿಯುವ ತೋಟಗಳಿಗೆ ಹೋಲಿಸಲಾಗಿದೆ. ತೋಟಕ್ಕೆ ನದಿಗಳೊಡನೆಂಬಂತಿರುವ ಒಂದು ಸಂಬಂಧ ಸತ್ಯವಿಶ್ವಾಸಕ್ಕೆ ಸತ್ಕರ್ಮಗಳೊಡನೆ ಇದೆಯೆಂಬ ತತ್ವರಹಸ್ಯವನ್ನು ಇಲ್ಲಿ

ಸೂಚಿಸಲಾಗಿದೆ. ನೀರಿಲ್ಲದಿದ್ದರೆ ತೋಟದ ಮರಗಿಡಗಳು ಬಾಡಿಹೋಗುವ ಹಾಗೆಯೇ ಸತ್ಕರ್ಮಗಳು ಇಲ್ಲದ ಸತ್ಯವಿಶ್ವಾಸ ನಿರ್ಜೀವವಾಗಿರುತ್ತದೆ. ಹೀಗೆ ಕರ್ಮಶೂನ್ಯವಾದ ಸತ್ಯವಿಶ್ವಾಸ ಪ್ರಯೋಜನರಹಿತವಾಗಿರುವಂತೆಯೇ ಸತ್ಯವಿಶ್ವಾಸದಿಂದ ಕೂಡಿರದ ಕರ್ಮಗಳು ಸಹ ಕೇವಲ ಅಭಿನಯವಾಗಿರುತ್ತವೆ. ಯಥಾರ್ಥದಲ್ಲಿ ಇಸ್ಲಾಮಿಕ ಸ್ವರ್ಗವು ಐಹಿಕ ಜೀವಿತದ ಸತ್ಯವಿಶ್ವಾಸ ಹಾಗೂ ಸತ್ಕರ್ಮಗಳ ಒಂದು ಪ್ರತಿಚ್ಛಾಯೆಯಾಗಿದೆ. ಅದು ಹೊರಗಿನಿಂದ ಬಂದು ಮನುಷ್ಯನಿಗೆ ಲಭಿಸುವ ಒಂದು ನವೀನ ವಸ್ತುವಲ್ಲ. ಸ್ವರ್ಗವು ಅವನ ಒಳಗಿನಿಂದಲೇ ರೂಪುಗೊಳ್ಳುತ್ತದೆ. ಪ್ರತಿಯೊಬ್ಬನಿಗೆ ಲಭಿಸುವ ಸ್ವರ್ಗ ಅವನ ಸತ್ಯವಿಶ್ವಾಸ ಮತ್ತು ಸತ್ಕರ್ಮಗಳಿಂದ ರೂಪು ತಳೆಯುವುದು ಹಾಗೂ ಅದರ ಆನಂದಾನುಭೂತಿ ಅವನಿಗೆ ಈ ಲೋಕದಲ್ಲೇ ಅನುಭವವಾಗಲು ತೊಡಗುತ್ತದೆ. ಹಾಗೆ ಸತ್ಯವಿಶ್ವಾಸವೆಂಬ ತೋಟ ಮತ್ತು ಸತ್ಕರ್ಮಗಳೆಂಬ ನದಿಗಳು ಅವನಿಗೆ ಪರೋಕ್ಷವಾದ ರೂಪದಲ್ಲಿ ಇಲ್ಲಿಯೇ ಅನುಭವಗೋಚರವಾಗುತ್ತವೆ. ಆದರೆ ಪಾರತ್ರಿಕ ಜೀವಿತದಲ್ಲಿ ಈ ತೋಟ ಮತ್ತು ಅದರ ನದಿಗಳು ಪ್ರತ್ಯಕ್ಷ ರೂಪದಲ್ಲಿ ಗೋಚರಿಸುವುವು. ದೇವನ ಅಸ್ತಿತ್ವ, ಅವನ ಮಹಾತ್ಮೆ ಮತ್ತು ಇಚ್ಛೆಗಳ ಕುರಿತಾದ ಸತ್ಯವೂ ಪರಿಶುದ್ಧವೂ ಸುದೃಢವೂ ಪರಿಪೂರ್ಣವೂ ಆದ ವಿಶ್ವಾಸವೇ ಮನೋಹರವೂ ಫಲದಾಯಕವೂ ಆದ ತೋಟವೆಂದೂ ಸತ್ಕರ್ಮಗಳು ಆ ಸ್ವರ್ಗೀಯ ತೋಟದ ನದಿಗಳೆಂದೂ ದೇವವಾಕ್ಯ ನಮಗೆ ತಿಳಿಸಿಕೊಡುತ್ತದೆ. ಈ ವಿಷಯವನ್ನು ಪವಿತ್ರ ಖುರ್‌ಆನ್ ಇನ್ನೊಂದೆಡೆಯಲ್ಲಿ ಹೀಗೆ ಪ್ರಸ್ತಾಪಿಸುತ್ತದೆ:

ضَرَبَ اللّٰهُ مَثَلًا كَلِمَةً طَيِّبَةً كَشَجَرَةٍ طَيِّبَةٍ اَصْلُهَا ثَابِتٌ وَّفَرْعُهَا فِى السَّمَآءِ - تُؤْتِىۤ اُكُلَهَا كُلَّ حِيْنٍ

> ಅಧಿಕತೆಯಾಗಲಿ ನ್ಯೂನತೆಯಾಗಲಿ ಬಾಧಿಸದ, ಕುಂದುಕೊರತೆಯಾಗಲಿ ಕಳಂಕವಾಗಲಿ ಇಲ್ಲದ, ಹುಸಿ – ತಮಾಷೆಗಳಿಂದ ಹೊರತಾದ ಪರಿಪೂರ್ಣ ವಿಶ್ವಾಸವೆಂಬ ಸದ್ವಚನವು ಭೂಮಿಯಲ್ಲಿ ಭದ್ರವಾಗಿ ಬೇರೂರಿದ, ಶಾಖೆಗಳು ಆಕಾಶದೆಡೆಗೆ ಹರಡಿಕೊಂಡಿರುವ, ಸರ್ವ ಋತುಗಳಲ್ಲೂ ಫಲ ನೀಡುವ, ಯಾವ ಕಾಲದಲ್ಲೂ ಫಲರಾಹಿತ್ಯ ಬಾಧಿಸದ ಉತ್ತಮ ವೃಕ್ಷಕ್ಕೆ ಸದೃಶವಾಗಿದೆ.
>
> **(14:25,26)**

ಇಲ್ಲಿ ದೇವನು ಸತ್ಯವಿಶ್ವಾಸದ ವಚನವನ್ನು ನಿತ್ಯ ಫಲದಾಯಕ ವೃಕ್ಷಕ್ಕೆ ಹೋಲಿಸಿ ಅದರ ಮೂರು ಲಕ್ಷಣಗಳನ್ನು ಸೂಚಿಸಿದ್ದಾನೆ:

1. ವಿಶ್ವಾಸವಚನದ ತತ್ವವೆಂಬ ಬೇರು ಮನುಷ್ಯಹೃದಯವೆಂಬ ಭೂಮಿಯಲ್ಲಿ ಭದ್ರವಾಗಿರಬೇಕು. ಎಂದರೆ, ಧರ್ಮದ ನಿಜ ತತ್ವವನ್ನು ಮನುಷ್ಯನ ಸ್ವಭಾವ (ಶುದ್ಧ ಪ್ರಕೃತಿ) ಮತ್ತು ಅವನ ಅಂತಃಕರಣ (ಮನಸ್ಸಾಕ್ಷಿ) ಅಂಗೀಕರಿಸಬೇಕಾಗಿದೆ.

2. ಅದರ ಶಾಖೆಗಳು ಆಕಾಶದಲ್ಲಿ ವ್ಯಾಪಿಸಿರಬೇಕಾಗಿದೆ. ಎಂದರೆ, ಆ ವಿಶ್ವಾಸಸಂಹಿತೆ ತರ್ಕಬದ್ಧವಾಗಿರಬೇಕು. ಹಾಗೆಯೇ ದಿವ್ಯವಾದ ಪ್ರಕೃತಿ ನಿಯಮಗಳು ಆ ವಿಶ್ವಾಸವನ್ನು ಅನುಕೂಲಿಸಬೇಕು. ಬೇರೆ ಮಾತಿನಲ್ಲಿ ಹೇಳುವುದಾದರೆ, ಅದರ ಸತ್ಯತೆಯನ್ನು ಸ್ಥಾಪಿಸಲಿಕ್ಕಾಗಿ ಮುಂದಿಡುವ ಸಾಕ್ಷ್ಯಾಧಾರಗಳು ಪ್ರಕೃತಿ ನಿಯಮಕ್ಕೆ ಬದ್ಧವೂ ಖಂಡಿಸಲು ಅಸಾಧ್ಯವಾದಷ್ಟು ಉನ್ನತ ಮಟ್ಟದ್ದೂ ಆಗಿರಬೇಕಾಗಿದೆ.

3. ಅದು ರುಚಿಕರ ಫಲಗಳನ್ನು ನಿರಂತರವಾಗಿ ಮತ್ತು ಕಾಲಭೇದವಿಲ್ಲದೆ ನೀಡಬೇಕಾಗಿದೆ. ಎಂದರೆ, ಆ ವಿಶ್ವಾಸಾನುಷ್ಠಾನ ಮೂಲಕ ಅದರ ಸ್ವಾಧೀನಶಕ್ತಿ ಮತ್ತು ಅನುಗ್ರಹಫಲ ಎಲ್ಲ ಕಾಲಗಳಲ್ಲೂ ಅನುಭವಗೋಚರವಾಗಿರಬೇಕಾದದ್ದೂ ಆ ವರಪ್ರಸಾದಗಳು ಒಂದು ನಿರ್ದಿಷ್ಟ ಕಾಲದ ವರೆಗೆ ಪ್ರಕಟವಾದ ನಂತರ ಕೊನೆಗೊಳ್ಳದಿರ ಬೇಕಾದದ್ದೂ ಅವಶ್ಯ.

ಇನ್ನೊಂದೆಡೆಯಲ್ಲಿ ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

وَمَثَلُ كَلِمَةٍ خَبِيثَةٍ كَشَجَرَةٍ خَبِيثَةٍ اجْتُثَّتْ مِن فَوْقِ الْأَرْضِ مَا لَهَا مِن قَرَارٍ

ಮಿಥ್ಯಾವಚನ, ಭೂಮಿಯಿಂದ ಕೀಳಲ್ಪಟ್ಟದ್ದೂ ಯಾವ ರೀತಿಯಲ್ಲೂ ನೆಲೆಯೂರಿ ನಿಲ್ಲಲು ಅಸಾಧ್ಯವಾದದ್ದೂ ಆದ ವೃಕ್ಷಕ್ಕೆ ಸದೃಶವಾಗಿದೆ. **(14:27)**

ಎಂದರೆ, ಮನುಷ್ಯನ ಪರಿಶುದ್ಧವಾದ ಸಹಜಗುಣ ಮತ್ತು ಅಂತಃಕರಣ ಅದನ್ನು ಸ್ವೀಕರಿಸಲಾರದು ಹಾಗೂ ಅದು ವಿವೇಕಕ್ಕೂ ಪ್ರಕೃತಿ ನಿಯಮಗಳಿಗೂ ಮನಸ್ಸಾಕ್ಷಿಗೂ ವಿಪರೀತವಾದ ಕೇವಲ ಕಟ್ಟು ಕತೆಯಂತಿರುವುದು.

ಪವಿತ್ರ ಖುರ್‌ಆನ್ ಸತ್ಯವಿಶ್ವಾಸವನ್ನು ದ್ರಾಕ್ಷೆ, ದಾಳಿಂಬೆ ಮೊದಲಾದ ಸ್ವಾದಿಷ್ಟ ಫಲಗಳನ್ನು ಕೊಡುವ ತರುಲತಾದಿಗಳಿಗೆ ಹೋಲಿಸಿ ಐಹಿಕ ಜೀವಿತದ ಆಧ್ಯಾತ್ಮಿಕ ಅನುಭೂತಿಗಳು ಪರಲೋಕದಲ್ಲಿ ಪ್ರಸ್ತುತ ಫಲಗಳ ರೂಪದಲ್ಲಿ ಗೋಚರಿಸುವುವೆಂದು ವಿವರಿಸುವ ಪ್ರಕಾರವೇ, ಅವಿಶ್ವಾಸವೆಂಬ ಹಾಳು ವೃಕ್ಷವನ್ನು **'ಝಕ್ಕೂಂ'** ಎಂದು ಹೆಸರಿಸಿ ಅದರ ಕೆಟ್ಟ ಫಲಗಳನ್ನು ವ್ಯಕ್ತಗೊಳಿಸಿದೆ. ಆ ಪವಿತ್ರ ಗ್ರಂಥ ಹೀಗೆ ಹೇಳುತ್ತದೆ:

اَذٰلِكَ خَيۡرٌ نُّزُلًا اَمۡ شَجَرَةُ الزَّقُّوۡمِ -اِنَّا جَعَلۡنٰهَا فِتۡنَةً لِّلظّٰلِمِيۡنَ -اِنَّهَا شَجَرَةٌ تَخۡرُجُ فِيۡۤ اَصۡلِ الۡجَحِيۡمِ -طَلۡعُهَا كَاَنَّهٗ رُءُوۡسُ الشَّيٰطِيۡنِ

ಸ್ವರ್ಗದ ತೋಟಗಳು ಉತ್ತಮವೇ ಅಥವಾ ಜ಼ಕ್ಕೂಂ ವೃಕ್ಷವೇ? ನಾವು ಅದನ್ನು ದುಷ್ಟರಿಗೆ ಒಂದು ಪೀಡೆಯಾಗಿರಿಸಿದ್ದೇವೆ; ಅದು ನರಕದ ಬುಡದಿಂದ ಮೊಳಕೆಯೊಡೆಯುತ್ತದೆ (ಎಂದರೆ, ನರಕದ ಬುಡವೆಂಬ ಅಹಂಭಾವದಿಂದ ಅದು ಅಂಕುರಿಸುತ್ತದೆ); ಅದರ ಕಾಯಿಗಳು ಶೈತಾನರ ತಲೆಗಳಂತಿವೆ. **(37:63–66)**

**‘ಶೈತ್’** ಎಂಬ ಪದದಿಂದ ಉದ್ಭವಿಸಿದ **‘ಶೈತಾನ್’** ಎಂಬುದರ ಅರ್ಥ **‘ನಾಶಹೊಂದುವವನು’** ಎಂದಾಗಿದೆ. ಆ ಮರದ ಹಣ್ಣು ತಿನ್ನುವುದು ನಾಶಕ್ಕೆ ಕಾರಣವಾಗುವುದೆಂದು ಈ ಪದಪ್ರಯೋಗದಿಂದ ಅರ್ಥೈಸಬೇಕಾಗಿದೆ.

ಇನ್ನೂ ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

اِنَّ شَجَرَتَ الزَّقُّوۡمِ -طَعَامُ الۡاَثِيۡمِ - كَالۡمُهۡلِ ۚ يَغۡلِىۡ فِى الۡبُطُوۡنِ - كَغَلۡىِ الۡحَمِيۡمِ

ಜ಼ಕ್ಕೂಂ ವೃಕ್ಷವು ಪ್ರಜ್ಞಾಪೂರ್ವಕ ಪಾಪಕರವಾದ ಜೀವಿತವನ್ನು ನಡೆಸುತ್ತಿರುವ ನರಕವಾಸಿಗಳ ಆಹಾರವಾಗಿದೆ. ಅದು ಕರಗಿದ ತಾಮ್ರದಂತಿದ್ದು ನೀರು ಕುದಿಯುವಂತೆ ಅವರ ಉದರದಲ್ಲಿ ಕುದಿಯುತ್ತಿರುತ್ತದೆ. **(44:44–47)**

ನರಕವಾಸಿಯ ಕುರಿತು ಮತ್ತೂ ಖುರ್‌ಆನ್ ನುಡಿಯುತ್ತದೆ:

ذُقۡ ۚ اِنَّكَ اَنۡتَ الۡعَزِيۡزُ الۡكَرِيۡمُ

ಈ ವೃಕ್ಷದ ಫಲವನ್ನು ಆಸ್ವಾದಿಸು; ನೀನು ಗೌರವಸ್ಥನೂ ಮರ್ಯಾದಸ್ಥನೂ ಆಗಿದ್ದೀಯೆ! **(44:50)**

ಈ ಕೊನೆಯ ವಾಕ್ಯ ಕ್ರೋಧ ಸೂಚಕವಾಗಿದೆ. ನರಕವಾಸಕ್ಕೆ ಅರ್ಹನಾದ ಆ ಪಾಪಿ ಅಹಂಭಾವ ತೋರಿಸದೆಯೂ ತನ್ನ ಸ್ಥಾನಮಾನವನ್ನು ಲೆಕ್ಕಿಸಿ ಸತ್ಯಕ್ಕೆದುರಾಗಿ ವಿಮುಖತೆಯನ್ನು ಪ್ರದರ್ಶಿಸದೆಯೂ ಇರುತ್ತಿದ್ದರೆ ಅವನಿಗೆ ಈ ಕೆಟ್ಟ ಫಲವನ್ನು ಅನುಭವಿಸಲಿಕ್ಕಾಗಲಿ, ಕಷ್ಟ ಸಹಿಸಲಿಕ್ಕಾಗಲಿ ಸಂದರ್ಭ ಬರುತ್ತಿರಲಿಲ್ಲವೆಂದು ಈ ವಾಕ್ಯ ತಿಳಿಸಿಕೊಡುತ್ತದೆ. "ಜ಼ಕ್ಕೂಮ್" (**زقّوم**) ಎಂಬ ಪದ "ಧ್ಹುಕ್" (**ذق**) ಮತ್ತು "ಅಮ್" (**ام**) ಎಂಬ ಪದಗಳ ಸಮಾಸವಾಗಿದೆಯೆಂಬ ಒಂದು ಸೂಚನೆ ಸಹ ಈ ವಾಕ್ಯದಲ್ಲಿದೆ. ಮೊದಲಿನ ಭಾಗವಾದ ಧ್ಹುಕ್ ಎಂಬುದರ

ಅರ್ಥ "ನೀನು ಆಸ್ವಾದಿಸು" ಎಂದಾಗಿದೆ. ಎರಡನೆಯ ಭಾಗ ಅಮ್ ಎಂಬುದು (44:50) إِنَّكَ أَنتَ الْعَزِيزُ الْكَرِيمُ ಎಂಬ ವಾಕ್ಯದ ಮೊದಲಿನ ಮತ್ತು ಕೊನೆಯ ಅಕ್ಷರಗಳ ಜೋಡಣೆಯ ಸಂಕ್ಷಿಪ್ತವಾಗಿದೆ. ರೂಢಿಯಿಂದ ಧ಼ ಅಕ್ಷರ ಜ಼ಕ್ಕೂಂ ಎಂಬ ಪದದಲ್ಲಿ ಜ಼ ಆಗಿ ರೂಪಾಂತರಗೊಂಡಿದೆ.

ಸಂಕ್ಷಿಪ್ತವಾಗಿ, ಈ ಲೋಕದಲ್ಲಿ ಪ್ರದರ್ಶಿಸುವ ವಿಶ್ವಾಸವಚನಗಳನ್ನು ಸ್ವರ್ಗೀಯ ವೃಕ್ಷಗಳಿಗೂ ಈ ಲೋಕದ ಅವಿಶ್ವಾಸ ವಚನಗಳನ್ನು ನರಕದ ಜ಼ಕ್ಕೂಂ ವೃಕ್ಷಕ್ಕೂ ಹೋಲಿಸಿ ಸ್ವರ್ಗದ ಮತ್ತು ನರಕದ ಬೇರು ಈ ಲೋಕದಿಂದಲೇ ಆರಂಭವಾಗುತ್ತದೆಯೆಂದು ಪರಮಾತ್ಮನು ತಿಳಿಸಿಕೊಟ್ಟಿದ್ದಾನೆ. ನರಕದ ಕುರಿತು ಪವಿತ್ರ ಖುರ್‌ಆನಿನಲ್ಲಿ ಇನ್ನೊಂದೆಡೆ ಹೀಗೆ ಹೇಳಲಾಗಿದೆ:

نَارُ اللَّهِ الْمُوقَدَةُ - الَّتِي تَطَّلِعُ عَلَى الْأَفْئِدَةِ

ನರಕವು ದೇವಕ್ರೋಧದಿಂದ ಉದ್ಭವಿಸುವ ಒಂದು ಅಗ್ನಿಯಾಗಿದೆ. ಅದು ಪಾಪದಿಂದ ಪ್ರಜ್ವಲಿಸುತ್ತದೆ. ಅದರ ಜ್ವಾಲೆಗಳು ಮೊದಲಿಗೆ ಹೃದಯಗಳಲ್ಲಿ ವ್ಯಾಪಿಸುತ್ತವೆ. **(104:7,8)**

ಈ ಪವಿತ್ರ ವಚನ ಸೂಚಿಸುವುದೇನೆಂದರೆ, ನರಕಾಗ್ನಿಯ ಮೂಲ ಹೃದಯವನ್ನು ದಂಡಿಸುವ ದುಃಖ, ನೋವು, ಕ್ಲೇಶಗಳಾಗಿವೆ. ಏಕೆಂದರೆ ಆತ್ಮಕ್ಕೆ ಸಂಬಂಧಿಸಿದ ಪೀಡೆಗಳೆಲ್ಲ ಮೊದಲಿಗೆ ಹೃದಯವನ್ನು ಬಾಧಿಸುತ್ತವೆ. ಅನಂತರ ಅವು ಶರೀರದಲ್ಲಿಡೀ ವ್ಯಾಪಿಸುತ್ತವೆ. ಇನ್ನೊಂದೆಡೆಯಲ್ಲಿ ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

وَقُودُهَا النَّاسُ وَالْحِجَارَةُ

ನರಕಾಗ್ನಿ ಜ್ವಲಿಸಿಕೊಂಡಿರಲಿಕ್ಕೆ ಅದರ ಇಂಧನ ಎರಡು ವಸ್ತುಗಳಾಗಿವೆ. ಒಂದು, ಯಥಾರ್ಥ ದೇವನನ್ನು ಬಿಟ್ಟು ಇತರ ವಸ್ತುಗಳನ್ನು ಆರಾಧಿಸುವ ಮನುಷ್ಯರು ಅಥವಾ ತಮ್ಮನ್ನೇ ಆರಾಧಿಸಲಿಕ್ಕೆ ಅನುಮತಿ ನೀಡಿದ ಮನುಷ್ಯರು. **(2:25)**

ಇಂತಹವರ ಕುರಿತು ಪವಿತ್ರ ಖುರ್‌ಆನ್ ಮತ್ತೊಂದೆಡೆಯಲ್ಲಿ ಹೀಗೆ ಹೇಳುತ್ತದೆ:

إِنَّكُمْ وَمَا تَعْبُدُونَ مِن دُونِ اللَّهِ حَصَبُ جَهَنَّمَ

ನೀವೂ, ಮನುಷ್ಯರಾಗಿದ್ದು ದೇವತ್ವ ವಾದಿಸಿದವರೂ ನರಕಕ್ಕೆ ದೂಡಲ್ಪಡುವಿರಿ.

**(21:99)**

ನರಕದ ಎರಡನೆಯ ಇಂಧನ ವಿಗ್ರಹಗಳಾಗಿವೆ **(2:25)**. ಇಂಧನವಾಗಿರುವ ಈ ವಸ್ತುಗಳಿಲ್ಲದಿರುತ್ತಿದ್ದರೆ ನರಕವಿರುತ್ತಿರಲಿಲ್ಲವೆಂದು ತಾತ್ಪರ್ಯ. ಸ್ವರ್ಗ ಮತ್ತು ನರಕ ಈ ಭೌತಿಕ ಲೋಕದಂತೆ ಅಲ್ಲವೆಂದೂ ಅವರೆಡರ ಮೂಲ ಆಧ್ಯಾತ್ಮಿಕತೆಯನ್ನು ಅವಲಂಬಿಸಿಕೊಂಡಿವೆಯೆಂದೂ ಪವಿತ್ರ ಖುರ್‌ಆನ್ ತಿಳಿಸಿಕೊಡುವುದು ಪ್ರಸ್ತುತ ವಾಕ್ಯಗಳಿಂದ ಸ್ಪಷ್ಟವಾಗುತ್ತದೆ. ಸ್ವರ್ಗೀಯ ಅನುಗ್ರಹಗಳು ಮತ್ತು ನಾರಕೀಯ ಪೀಡನೆಗಳು ಪರಲೋಕದಲ್ಲಿ ಪ್ರತ್ಯಕ್ಷಗೊಳ್ಳುವುವಾದರೂ ಅವು ಈ ಭೌತಿಕ ಲೋಕದವುಗಳಂತಿರಲಿಕ್ಕಿಲ್ಲ.

## ಪರಮಾತ್ಮನೊಡನೆ ಪರಿಪೂರ್ಣ ಆಧ್ಯಾತ್ಮಿಕ ಸಂಬಂಧವೇರ್ಪಡಿಸುವ ಮಾರ್ಗ

ಇನ್ನು ಮುಖ್ಯ ವಿಷಯದೆಡೆಗೆಯೇ ಹಿಂತಿರುಗೋಣ. ದೇವನೊಡನೆ ಪರಿಪೂರ್ಣವಾದ ಆಧ್ಯಾತ್ಮಿಕ ಸಂಬಂಧ ಸ್ಥಾಪಿಸಲು ಪವಿತ್ರ ಖುರ್‌ಆನ್ ನಿರ್ದೇಶಿಸಿದ ಮಾರ್ಗ "ಇಸ್ಲಾಂ" ಎಂಬ ಪದ ಸೂಚಿಸುವ ರೀತಿಯ ಪರಿಪೂರ್ಣ ವಿಧೇಯತೆ ಮತ್ತು "ಫಾತಿಹ" ಪ್ರಾರ್ಥನೆಯಾಗಿದೆ. ಎಂದರೆ, ಜೀವಿತ ಸರ್ವಸ್ವವನ್ನೂ ದೇವಪಥದಲ್ಲಿ ಸಮರ್ಪಿಸಿ ಸಂಪೂರ್ಣ ದೇವೇಚ್ಛೆಗೆ ಶಿರಬಾಗಿಕೊಂಡು ಪವಿತ್ರ ಖುರ್‌ಆನಿನ ಪ್ರಥಮ ಅಧ್ಯಾಯವಾದ "ಫಾತಿಹ" ಎಂಬ ಪ್ರಾರ್ಥನೆಯನ್ನು ಸದಾ ಮಾಡುತ್ತಾ ಇರುವುದು. ಅನ್ಯೂನವಾದ ವಿಧೇಯತೆ ಮತ್ತು ಫಾತಿಹ ಪ್ರಾರ್ಥನೆ ಇವೆರಡು ಇಸ್ಲಾಮಿನ ತಿರುಳು. ದೇವನೆಡೆಗೆ ತಲುಪಲಿಕ್ಕೂ ಯಥಾರ್ಥ ಮೋಕ್ಷ ಗಳಿಸಲಿಕ್ಕೂ ಅತ್ಯುತ್ಕೃಷ್ಟ ಮಾರ್ಗ ಇದಾಗಿದೆ. ಆಧ್ಯಾತ್ಮಿಕವಾದ ಪರಮೋನ್ನತ ಸ್ಥಾನ ಮತ್ತು ದೇವೈಕ್ಯವನ್ನು ಸಿದ್ಧಿಸಲಿಕ್ಕೆ ಪ್ರಕೃತಿ ನಿಯಮವಾದ ಏಕಮಾರ್ಗವೂ ಇದೇ ಆಗಿದೆ. ಒಟ್ಟಾರೆ, "ಇಸ್ಲಾಂ" ಎಂಬ ಶಬ್ದ ಸೂಚಿಸುವ ಅಗ್ನಿಮಯವಾದ ಆಧ್ಯಾತ್ಮಿಕ ಮಾರ್ಗದಲ್ಲಿ ಪೂರ್ಣವಾಗಿ ಪ್ರವೇಶಿಸಿ ಫಾತಿಹ ಪ್ರಾರ್ಥನೆಯನ್ನು ಸತತವಾಗಿ ಅನುಷ್ಠಿಸುವವರು ದೇವನನ್ನು ಪಡೆಯುತ್ತಾರೆ. ಹೀಗೆ ಇಸ್ಲಾಂ ಎಂದರೆ ವಿಷಯಾಸಕ್ತಿಯಿಂದ ಕೂಡಿದ ಕೀಳ್ಮಟ್ಟದ ಜೀವಿತವನ್ನು ದಹನಮಾಡುವ ಹಾಗೂ ಕಲ್ಪಿತ ಮಿಥ್ಯಾ ದೈವಗಳನ್ನೆಲ್ಲ ಭಸ್ಮೀಕರಿಸಿ ನಮ್ಮ ಜೀವ, ಸಂಪತ್ತು, ಅಭಿಮಾನವೆಲ್ಲ ಯಥಾರ್ಥ ದೇವ ಸನ್ನಿಧಿಯಲ್ಲಿ ಬಲಿಯರ್ಪಿಸಲ್ಪಡುವಂತೆ ಮಾಡುವ ಒಂದು ಅಗ್ನಿಯೆಂದು ಹೇಳಬಹುದು. ಈ ಆಧ್ಯಾತ್ಮಿಕ ಚಿಲುಮೆಯಿಂದ ನವ್ಯಜೀವಿತವೆಂಬ ತೀರ್ಥವನ್ನು ಕುಡಿಯುವುದರಿಂದ ನಮ್ಮ ಆಧ್ಯಾತ್ಮಿಕವಾದ ಸಕಲ ಶಕ್ತಿಗಳೂ ಒಂದು ಸಂಕಲೆಯ ಕೊಂಡಿಗಳಂತೆ ದೇವನೊಡನೆ ಬಂಧಿಸಲ್ಪಡುತ್ತವೆ. ಮಿಂಚಿನಂತಹ ಒಂದು

ಅಗ್ನಿ ನಮ್ಮ ಒಳಗಿನಿಂದ ಹೊರಡುತ್ತದೆ. ಮತ್ತೊಂದು ಅಗ್ನಿ ಮೇಲಿಂದ ಇಳಿದು ಬರುತ್ತದೆ. ಈ ಎರಡು ಜ್ವಾಲೆಗಳ ಸಮ್ಮಿಲನದಿಂದ ನಮ್ಮ ಎಲ್ಲ ವಿಷಯಾಸಕ್ತಿಗಳೂ ದೇವೇತರ ವಸ್ತುಗಳ ಮೇಲಿರುವ ಪ್ರೀತಿಯೂ ಭಸ್ಮವಾಗುತ್ತವೆ. ಅದರ ಫಲವಾಗಿ ನಮ್ಮ ಮೊದಲಿನ ಜೀವನ ಕ್ರಮಕ್ಕೆ ಕೊನೆಯುಂಟಾಗುತ್ತದೆ. ಈ ಸ್ಥಿತಿಗೆ ಪವಿತ್ರ ಖುರ್‌ಆನ್ ನೀಡುವ ಹೆಸರು "ಇಸ್ಲಾಂ" ಎಂದಾಗಿದೆ. "ಇಸ್ಲಾಂ" ಎಂಬ ಸಂಪೂರ್ಣ ವಿಧೇಯತೆಯ ಮುಖಾಂತರ ನಮ್ಮ ವಿಷಯೇಚ್ಛೆಗಳಿಗೆ ಒಂದು ಮರಣ ಸಂಭವಿಸುತ್ತದೆ. ಅನಂತರ ಪ್ರಾರ್ಥನೆ ಮೂಲಕ ನಮಗೆ ಒಂದು ಹೊಸ ಜೀವ ಲಭಿಸುತ್ತದೆ. ಈ ಪುನರ್ಜೀವನ ಘಟ್ಟದಲ್ಲಿ ದೇವಬೋಧನೆಯೂ ದೇವವಾಣಿಯೂ ಇರಬೇಕಾದುದು ಅವಶ್ಯ. ಈ ಸ್ಥಿತಿಯನ್ನು ಪಡೆಯುವುದಕ್ಕೆ ದೇವದರ್ಶನವೆಂದು ಹೇಳಲಾಗುತ್ತದೆ. ಈ ಘಟ್ಟವನ್ನು ತಲುಪುವ ಭಕ್ತನು ದೇವನ ಪಾವನ ಮುಖವನ್ನು ಕಾಣುತ್ತಾನೆ. ಇನ್ನೊಂದು ಪ್ರಕಾರದಲ್ಲಿ, ತನ್ನ ಸ್ವಂತ ಕಣ್ಣಿನಿಂದ ದೇವನನ್ನು ಕಾಣುವ ರೀತಿಯಲ್ಲಿರುವ ದೃಢವಾದ ಒಂದು ಸಂಬಂಧ ಆತನಿಗೆ ಪರಮಾತ್ಮನೊಡನೆ ಉಂಟಾಗುತ್ತದೆ. ಆಗ ಆತನಿಗೆ ದೈವಿಕವಾದ ಒಂದು ಶಕ್ತಿ ಸಿದ್ಧಿಸಿ ಆತನ ಎಲ್ಲ ಇಂದ್ರಿಯಗಳೂ ಆಂತರಿಕ ಶಕ್ತಿಗಳೂ ಶೋಭಿಸುತ್ತವೆ. ನಿರ್ಮಲವೂ ಪಾವನವೂ ಆದ ಜೀವಿತದ ಆಕರ್ಷಣೆ ಶಕ್ತಿಯುತವಾಗಿ ಆತನಲ್ಲಿ ಪ್ರವರ್ತಿಸಲು ತೊಡಗುತ್ತದೆ. ಈ ಘಟ್ಟದಲ್ಲಿ ಪರಮಾತ್ಮನು, ಭಕ್ತನಾದ ಆ ಮನುಷ್ಯನ ಕಣ್ಣಾಗುತ್ತಾನೆ, ಮಾತನಾಡುವ ನಾಲಿಗೆ, ಶ್ರವಿಸುವ ಕಿವಿ, ಕಾರ್ಯಪ್ರವೃತ್ತ ಕೈ ಮತ್ತು ನಡೆಯುವ ಕಾಲು ಆಗುತ್ತಾನೆ. ಈ ಸ್ಥಿತಿಯನ್ನು ಸೂಚಿಸುತ್ತಾ ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

يَدُ اللّٰهِ فَوْقَ اَيْدِيْهِمْ

ಅವರ ಕೈಗಳ ಮೇಲಿರುವ (ಪೈಗಂಬರರ) ಕೈ ಅಲ್ಲಾಹನ ಕೈಯಾಗಿದೆ. **(48:11)**

ಇನ್ನೂ ಹೇಳುತ್ತದೆ:

وَمَا رَمَيْتَ اِذْ رَمَيْتَ وَلٰكِنَّ اللّٰهَ رَمٰى

ನೀನು ಎಸೆದಾಗ, ಅದು ನೀನಲ್ಲ; ಅಲ್ಲಾಹನು ಎಸೆದದ್ದು. **(8:18)**

ಸಂಕ್ಷಿಪ್ತವಾಗಿ, ಈ ಹಂತದಲ್ಲಿ ಭಕ್ತನು ಪೂರ್ಣ ರೀತಿಯಲ್ಲಿ ದೇವೈಕ್ಯವನ್ನು ಪಡೆದಿರುತ್ತಾನೆ. ದೇವನ ಪರಿಶುದ್ಧ ಇಚ್ಛೆ ಆತನ ಆತ್ಮವನ್ನು ಸ್ವಾಧೀನಿಸಿ ಇಚ್ಛೆಗಳನ್ನು ನಿಯಂತ್ರಿಸುತ್ತದೆ. ಮೊದಲು ದುರ್ಬಲವಾಗಿದ್ದ ನೈತಿಕ ಶಕ್ತಿಗಳು ಈ ಹಂತದಲ್ಲಿ

ಸುದೃಢ ಬಂಡೆಗಳಂತೆ ಸುಸ್ಥಿರವಾಗಿರುತ್ತವೆ. ಈ ಪರಿವರ್ತನೆಯಿಂದ ಬುದ್ಧಿ ಮತ್ತು ನಿರ್ಧಾರ ಶಕ್ತಿ ತೀಕ್ಷ್ಣವಾಗುತ್ತವೆ. ಇಂತಹ ಸ್ಥಿತಿಯ ಕುರಿತು –

وَاَيَّدَهُمْ بِرُوْحٍ مِّنْهُ

"ದೇವನು ಪರಿಶುದ್ಧ ಚೈತನ್ಯದಿಂದ ಅವರಿಗೆ ನೆರವಾಗಿದ್ದಾನೆ" **(58:23)** ಎಂಬ ದೇವವಚನ ಸೂಚಿಸುತ್ತದೆ. ಈ ಹಂತವನ್ನು ತಲುಪುವಾಗ ಭಕ್ತನು ದೇವ ಮಾರ್ಗದಲ್ಲಿ ಆತ್ಮಪರಿತ್ಯಾಗ ಮಾಡಲಿಕ್ಕೂ ಎಂತಹ ಕ್ಲೇಶಗಳನ್ನು ಮತ್ತು ಅಪಮಾನಗಳನ್ನು ಸಹಿಸಲಿಕ್ಕೂ ಸುಲಭವಾಗಿ ತೋರುವ ರೀತಿಯಲ್ಲಿ ಆತನ ಹೃದಯದಲ್ಲಿ ದೇವಾನುರಾಗದ ಅಲೆಯೇಳುತ್ತದೆ. ಆತನು ಸ್ವಯಂ ಆಕರ್ಷಿತನಾಗಿ ದೇವ ಸನ್ನಿಧಿಗೆ ಓಡುತ್ತಿರುವನಾದರೂ ತನ್ನನ್ನು ಹೀಗೆ ಆಕರ್ಷಿಸುತ್ತಿರುವುದು ಯಾರೆಂದು ಅರಿಯುವುದಿಲ್ಲ. ಅದೃಶ್ಯವಾದ ಒಂದು ಕೈ ಆತನಿಗೆ ನೆರವಾಗುತ್ತದೆ. ದೇವೇಚ್ಛೆಯನ್ನು ನೆರವೇರಿಸುವುದು ಆತನ ಜೀವಿತಾದರ್ಶವಾಗುತ್ತದೆ. ಈ ಘಟ್ಟದಲ್ಲಿ ಆತನಿಗೆ ಪರಮಾತ್ಮನು ಬಹಳ ಸಮೀಪದಲ್ಲಿ ಕಾಣುತ್ತಾನೆ. ಈ ವಿಷಯದಲ್ಲಿ ದೇವನು ಹೀಗೆ ಹೇಳುತ್ತಾನೆ:

وَنَحْنُ اَقْرَبُ اِلَيْهِ مِنْ حَبْلِ الْوَرِيْدِ

ನಾವು ಅವನ ಜೀವನಾಡಿಗಿಂತಲೂ ಹೆಚ್ಚು ಸಮೀಪದಲ್ಲಿದ್ದೇವೆ. **(50:17)**

ಈ ಘಟ್ಟದಲ್ಲಿ, ಉತ್ಕೃಷ್ಟ ಹಂತವನ್ನು ಪಡೆದ ಭಕ್ತನ ಲೌಕಿಕ ಸಂಬಂಧಗಳೆಲ್ಲ ಮರದ ಮೇಲೆ ಬಲಿತು ತನ್ನಷ್ಟಕ್ಕೆ ಕೆಳಗೆ ಬೀಳುವ ಫಲಗಳಂತೆ ಬೇರ್ಪಡುತ್ತವೆ. ಆತನಿಗೆ ದೇವನೊಡನೆ ಅತ್ಯಂತ ಅಗಾಧವಾದ ಒಂದು ಸಂಬಂಧವೇರ್ಪಟ್ಟು ಸೃಷ್ಟಿಗಳಿಂದ ದೂರವಾಗುತ್ತಾನೆ. ದೇವನ ಸಂಭಾಷಣೆ ಮತ್ತು ಸಂಬೋಧನೆಗಳಿಂದ ಆತನು ಅನುಗ್ರಹಿಸಲ್ಪಡುತ್ತಾನೆ.

ಈ ಉತ್ಕೃಷ್ಟ ಪದವಿಯನ್ನು ಗಳಿಸುವ ಬಾಗಿಲುಗಳು ಪೂರ್ವಕಾಲದಂತೆ ಈಗಲೂ ತೆರೆದಿರಿಸಲ್ಪಟ್ಟಿವೆ. ಕರುಣಾನಿಧಿಯಾದ ದೇವನು, ತನ್ನನ್ನು ಮನಸ್ಸಿಟ್ಟು ಅನ್ವೇಷಿಸುವವರಿಗೆ ಈ ಅನುಗ್ರಹವನ್ನು ಪೂರ್ವಕಾಲದಲ್ಲಿ ನೀಡಿದ ಪ್ರಕಾರವೇ ಈಗಲೂ ಪ್ರದಾನ ಮಾಡುತ್ತಾನೆ. ಆದರೆ ಈ ಮಾರ್ಗ ಬಾಯಿಯ ವ್ಯರ್ಥ ವಚನಗಳಿಂದ ಸಿದ್ಧಿಸುವಂತಹದ್ದಲ್ಲ. ಜಂಭ ಕೊಚ್ಚುವುದರಿಂದಾಗಲಿ, ಮಿಥ್ಯಾಸಂವಾದದಿಂದಾಗಲಿ ಈ ಬಾಗಿಲು ತೆರೆಯಲ್ಪಡಲಾರದು. ಅದನ್ನು ಪಡೆಯಲು ಆಶಿಸುವವರು ಅಸಂಖ್ಯಾತರಾದರೂ ಕೆಲವರು ಮಾತ್ರ ಸಫಲರಾಗುತ್ತಾರೆ. ಏಕೆಂದರೆ

ಈ ಸ್ಥಾನವು ನಿಷ್ಠೆಯಿಂದ ಕೂಡಿದ ಪರಿಶ್ರಮ ಮತ್ತು ನಿಜವಾದ ಆತ್ಮಾರ್ಪಣೆ ವಿನಾ ಲಭ್ಯವಲ್ಲ. ಕೇವಲ ವ್ಯರ್ಥ ಮತ್ತು ಶುಷ್ಕವಾದ ಬಾಯಿಮಾತುಗಳಿಂದ ಏನು ಪ್ರಯೋಜನ? ಯಾವ ಅಗ್ನಿಗೆ ಹೆದರಿ ಜನರು ಓಡಿಹೋಗುತ್ತಾರೋ, ಆ ಅಗ್ನಿಯಲ್ಲಿ ಸತ್ಯನಿಷ್ಠೆಯಿಂದ ಕಾಲೂರಿ ನಡೆಯಬೇಕಾದುದು ಈ ಮಾರ್ಗವನ್ನು ಗಳಿಸಲಿಕ್ಕಿರುವ ಮೊದಲ ಶರತ್ತಾಗಿದೆ. ಯಥಾರ್ಥ ಪರಿಶ್ರಮವಿಲ್ಲದ ಕೇವಲ ಬಾಯಿ ಮಾತುಗಳು ವ್ಯರ್ಥ. ಈ ವಿಷಯದಲ್ಲಿ ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳುತ್ತಾನೆ:

وَإِذَا سَأَلَكَ عِبَادِي عَنِّي فَإِنِّي قَرِيبٌ ۖ أُجِيبُ دَعْوَةَ الدَّاعِ إِذَا دَعَانِ ۖ فَلْيَسْتَجِيبُوا لِي
وَلْيُؤْمِنُوا بِي لَعَلَّهُمْ يَرْشُدُونَ

ನನ್ನ ಕುರಿತು ನನ್ನ ಭಕ್ತರು ನಿನ್ನೊಡನೆ ಕೇಳಿದರೆ, ನಾನು ಬಹಳ ಸಮೀಪದಲ್ಲಿದ್ದೇನೆಂದು ಅವರೊಡನೆ ಹೇಳು; ಪ್ರಾರ್ಥಿಸುವವನ ಪ್ರಾರ್ಥನೆಯನ್ನು ನಾನು ಕೇಳುತ್ತೇನೆ; ಒಟ್ಟಿನಲ್ಲಿ, ಅವರು ವಿಜಯಿಗಳಾಗಲಿಕ್ಕಾಗಿ ಪ್ರಾರ್ಥನೆಗಳ ಮೂಲಕ ನನ್ನ ಸಾಮೀಪ್ಯವನ್ನು ಅರಸಲಿ; ನನ್ನಲ್ಲಿ ದೃಢವಿಶ್ವಾಸವಿರಿಸಲಿ.

**(2:187)**

**ಎರಡನೆಯ ಪ್ರಶ್ನೆ:**

# ಮರಣಾನಂತರ ಜೀವನ

ಮರಣದ ನಂತರ ಮನುಷ್ಯನ ಅವಸ್ಥೆಯೇನೆಂಬುದು ಎರಡನೇ ಪ್ರಶ್ನೆಯಾಗಿದೆ. ಮರಣಾನಂತರದ ಸ್ಥಿತಿ ಹೊಸದಾದ ಒಂದು ಅವಸ್ಥೆಯೇನೂ ಅಲ್ಲ; ಅದು ಯಥಾರ್ಥದಲ್ಲಿ ಐಹಿಕ ಜೀವಿತದ ನಮ್ಮ ಆತ್ಮಸ್ಥಿತಿಯ ಸಂಪೂರ್ಣವೂ ಸ್ಪಷ್ಟವೂ ಆದ ಒಂದು ಪ್ರತಿಫಲನವಾಗಿದೆ. ಇಹಲೋಕದಲ್ಲಿ ಮನುಷ್ಯನ ಧರ್ಮವಿಶ್ವಾಸಗಳ ಮತ್ತು ಕರ್ಮಗಳ ಶುಭ ಮತ್ತು ಅಶುಭ ಸ್ಥಿತಿಗಳು ಅವನಲ್ಲಿ ಗುಪ್ತವಾಗಿದ್ದುಕೊಂಡು ಅವುಗಳ ಗುಣಕರವಾದ ಅಥವಾ ದೋಷಕರವಾದ ಪ್ರಭಾವ ಅವನಲ್ಲಿ ರಹಸ್ಯವಾಗಿ ಪ್ರವರ್ತಿಸಲು ತೊಡಗುತ್ತದೆ. ಆದರೆ ಪರಲೋಕದಲ್ಲಿ ಅವೆಲ್ಲ ಸ್ಪಷ್ಟವಾಗಿ ಗೋಚರಿಸುತ್ತವೆ. ಇದರ ನಮೂನೆಯನ್ನು ನಾವು ಸ್ವಪ್ನಾವಸ್ಥೆಯಲ್ಲಿ ಕಾಣಬಹುದಾಗಿದೆ. ಮನುಷ್ಯನ ದೇಹದಲ್ಲಿ ಯಾವ ರೀತಿಯ ಮನೋಭಾವನೆ ಬಲಗೊಳ್ಳುತ್ತದೆಯೋ, ಅದಕ್ಕನುಗುಣವಾದ ಶಾರೀರಿಕ ಸ್ಥಿತಿ ಅವನಿಗೆ ಕನಸಿನಲ್ಲಿ ಗೋಚರಿಸುತ್ತದೆ. ಕಠಿಣವಾದ ಜ್ವರ ಬಂದರೆ ಸ್ವಪ್ನದಲ್ಲಿ ಸಾಮಾನ್ಯವಾಗಿ ಬೆಂಕಿ ಅಥವಾ ಅಗ್ನಿಜ್ವಾಲೆ ಕಾಣಿಸುತ್ತದೆ. ಕಫಜ್ವರ ಅಥವಾ ನೆಗಡಿ ಬಾಧಿಸುವಾಗ ತಾನು ನೀರಿನಿಂದ ಆವೃತನಾಗಿ ಕಾಣುತ್ತಾನೆ. ಸಂಕ್ಷಿಪ್ತವಾಗಿ, ಯಾವ ರೀತಿಯ ರೋಗದ ಮಾರ್ಪಾಟು ದೇಹ ಸ್ಥಿತಿಯಲ್ಲಿ ಉಂಟಾಗುತ್ತದೋ ಅದಕ್ಕನುಸಾರವಾದ ಸ್ಥಿತಿ ಉಪಮಾರೂಪದಲ್ಲಿ ಕನಸಿನಲ್ಲಿ ಕಾಣಿಸುತ್ತದೆ. ಹೀಗೆ ಆಂತರಿಕ ಸ್ಥಿತಿಯನ್ನು ಪ್ರತ್ಯಕ್ಷದಲ್ಲಿ ತೋರಿಸುವ ಈ ಸ್ವಪ್ನಾವಸ್ಥೆಯ ಕುರಿತು ಚಿಂತಿಸುವುದಾದರೆ, ಹೆಚ್ಚು ಕಮ್ಮಿ ಇದೇ ಬಗೆಯ ಒಂದು ಸ್ಥಿತಿಯು ಪಾರತ್ರಿಕ ಜೀವಿತದಲ್ಲಿ ಪ್ರಕಟವಾಗುವುದೆಂದು ತಿಳಿದುಕೊಳ್ಳಲು ಪ್ರಯಾಸವಿಲ್ಲ. ಸ್ವಪ್ನ ನಮ್ಮಲ್ಲಿ ವಿಶಿಷ್ಟ ರೀತಿಯ ಒಂದು ಬದಲಾವಣೆಯನ್ನು ಉಂಟುಮಾಡಿ ಆಂತರಿಕವಾದ ಆಧ್ಯಾತ್ಮಿಕ ಸ್ಥಿತಿಗಳನ್ನು ಭೌತಿಕ ರೂಪದಲ್ಲಿ ತೋರಿಸಿಕೊಡುತ್ತದೆ. ಅದೇ ಪ್ರಕಾರ ಐಹಿಕ ಜೀವಿತದ ನಮ್ಮ ಆಧ್ಯಾತ್ಮಿಕ ಸ್ಥಿತಿ ಪರಲೋಕದಲ್ಲಿ ದೃಗ್ಗೋಚರವಾಗುತ್ತದೆ. ಎಂದರೆ, ನಮ್ಮ ಕರ್ಮಗಳೂ ಕರ್ಮಫಲಗಳೂ ಅಲ್ಲಿ ಸಾಕಾರ ಪ್ರತ್ಯಕ್ಷಗೊಳ್ಳುವುವು. ಹೀಗೆ, ಈ ಲೋಕದಲ್ಲಿ ಪರೋಕ್ಷವಾಗಿದ್ದ ನಮ್ಮ ಆಧ್ಯಾತ್ಮಿಕ ಸಂಪಾದನೆಗಳೆಲ್ಲ ಪರಲೋಕದಲ್ಲಿ ನಮಗೆ ಪ್ರತ್ಯಕ್ಷವಾಗುವುವು. ಸ್ವಪ್ನದಲ್ಲಿ ಕಾಣಿಸುವ ವಿವಿಧ ರೀತಿಯ ದೃಶ್ಯಗಳು ಭಾವನಾ ರೂಪದಲ್ಲಾಗದೆ, ನೈಜವೆಂದು ನಾವು ಭಾವಿಸುತ್ತೇವೆ. ಇದೇ

ಪ್ರಕಾರ ಪರಲೋಕದಲ್ಲಿಯೂ ಆಗುವುದು. ಮಾತ್ರವಲ್ಲ, ಈ ರೂಪಕ ಮತ್ತು ಉಪಮೆ ರೂಪದ ದೃಶ್ಯಗಳ ಮೂಲಕ ಸರ್ವಶಕ್ತನಾದ ದೇವನು ತನ್ನ ಶಕ್ತಿ ಮಹಾತ್ಮೆಯನ್ನು ನವೀನ ರೀತಿಯಲ್ಲಿ ಬಹಿರಂಗಪಡಿಸುವನು. ಇದನ್ನು ಉಪಮಾಲೋಕವೆಂದಲ್ಲ, ದೇವನ ಅಪಾರ ಶಕ್ತಿಯ ನೂತನವಾದ ಒಂದು ಸೃಷ್ಟಿಯೆಂದು ಹೇಳುವುದು ಯಥಾರ್ಥವೂ ವಾಸ್ತವಿಕವೂ ಆಗಿದೆ. ಪರಲೋಕದ ಈ ಅನುಭವಗಳ ಕುರಿತು ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

فَلَا تَعْلَمُ نَفْسٌ مَّآ أُخْفِىَ لَهُم مِّن قُرَّةِ أَعْيُنٍ

ಸಚ್ಚರಿತರಾದ ಭಕ್ತಜನರಿಗೋಸ್ಕರ ಗೋಪ್ಯವಾಗಿರಿಸಿದ ಅನುಗ್ರಹಗಳು ಯಾವ್ಯಾವೆಂದು ಯಾವುದೇ ಆತ್ಮವೂ ತಿಳಿದಿರುವುದಿಲ್ಲ. **(32:18)**

ಈ ದೇವ ವಾಕ್ಯ ನಮಗೆ ತಿಳಿಸಿಕೊಡುವುದೇನೆಂದರೆ, ಭಕ್ತ ಜನರಿಗೆ ಪರಲೋಕದಲ್ಲಿ ಲಭ್ಯವಾಗುವ ದಿವ್ಯಾನುಗ್ರಹಗಳು ಯಾರಿಗೂ ಪರಿಚಿತವಲ್ಲ. ಅವು ರಹಸ್ಯವಾಗಿವೆ; ಹಾಗೆ ಈ ಲೋಕದ ಭೌತಿಕ ವಸ್ತುಗಳೊಂದಿಗೆ ಸಾಮ್ಯತೆಯಿಲ್ಲದವೂ ಆಗಿವೆ. ಆದರೆ ಈ ಲೋಕದ ಅನುಗ್ರಹಕರವಾದ ಭೋಗ್ಯ ವಸ್ತುಗಳಾದರೋ ನಮಗೆ ಗೋಪ್ಯವಲ್ಲವಷ್ಟೆ. ಹಾಲು, ದಾಳಿಂಬೆ, ದ್ರಾಕ್ಷೆ ಮೊದಲಾದ ಭೌತಿಕ ವಸ್ತುಗಳನ್ನು ನಾವು ಹಲವು ಸಲ ರುಚಿಸುತ್ತಿರುತ್ತೇವೆ. ಆದ್ದರಿಂದ ಅವು ಗುಪ್ತವಾಗಿರಿಸಿದ ಸ್ವರ್ಗೀಯ ಅನುಗ್ರಹಗಳಲ್ಲಿ ಒಳಗೊಳ್ಳಲಾರವು ಎಂಬುದು ಸ್ಪಷ್ಟ. ಅವುಗಳಿಗೆ ಸ್ವರ್ಗೀಯ ವಸ್ತುಗಳೊಂದಿಗೆ ಹೆಸರುಗಳಲ್ಲಿ ಹೊರತು ಬೇರೆ ಯಾವ ಸಾದೃಶ್ಯವೂ ಇಲ್ಲ. ಹಾಗಿರುವಾಗ, ಸ್ವರ್ಗವು ಭೌತಿಕಾನುಗ್ರಹಗಳ ಭಂಡಾರವೆಂದು ತಿಳಿದುಕೊಂಡಿರುವವರು ಯಾರೂ ಪವಿತ್ರ ಖುರ್‌ಆನನ್ನು ಲವಲೇಶವಾದರೂ ಅರಿತುಕೊಂಡಿಲ್ಲವೆಂದು ಹೇಳಬಹುದು.

ಮೇಲೆ ಉದ್ಧರಿಸಿದ ಪವಿತ್ರ ಖುರ್‌ಆನ್ ವಾಕ್ಯದ ವ್ಯಾಖ್ಯಾನವಾಗಿ ಹಝ್ರತ್ ಮುಹಮ್ಮದ್ ಪೈಗಂಬರ್[ಸ] ಹೇಳಿರುವುದೇನೆಂದರೆ, ಸ್ವರ್ಗ ಮತ್ತು ಅದರ ಅನುಗ್ರಹಗಳನ್ನು ಯಾವುದೇ ಕಿವಿ ಕೇಳಿಲ್ಲ, ಯಾವುದೇ ಕಣ್ಣು ಕಂಡಿಲ್ಲ, ಯಾವುದೇ ಮನಸ್ಸು ಗ್ರಹಿಸಲಿಲ್ಲ. ಭೌತಿಕ ಅನುಗ್ರಹಗಳಾದರೋ ದೃಷ್ಟಿಗೆ ಗೋಚರವಾಗುತ್ತವೆ. ಕಿವಿಗಳಿಗೆ ಕೇಳಿಸುತ್ತವೆ ಮತ್ತು ಮನಸ್ಸಿಗೆ ಗ್ರಾಹ್ಯವಾಗುತ್ತವೆಯಷ್ಟೆ. ಸರ್ವಜ್ಞನಾದ ದೇವನು ಮತ್ತು ಅವನ ಪ್ರವಾದಿ ಸ್ವರ್ಗದ ವೈಭವಗಳು ಇಂದ್ರಿಯಾತೀತವೆಂದು ಸ್ಪಷ್ಟವಾಗಿ ಹೇಳಿರುವಾಗ, ಹಸುಗಳ ಅಥವಾ ಎಮ್ಮೆಗಳ ಹಾಲು ಸ್ವರ್ಗದಲ್ಲಿ ನದಿಗಳೋಪಾದಿಯಲ್ಲಿ ಹರಿಯುವುದೆಂದು ನಂಬುವುದಾದರೆ ನಾವು ಪವಿತ್ರ

ಖುರ್‌ಆನ್‌ನಿಂದ ದೂರಕ್ಕೆ ಸರಿಯುವೆವು. ಸ್ವರ್ಗದ ಆ ಅನುಗ್ರಹಗಳು ಭೌತಿಕ ವೈಭವಗಳಿಂದ ಕೂಡಿದವು ಆಗಿದ್ದರೆ, ಅಲ್ಲಿ ಅಪಾರ ಹೈನು ಸಂಪತ್ತು ಮತ್ತು ವೃಕ್ಷಗಳ ಮೇಲೆ ಅಗಣಿತ ಜೇನುಗೂಡುಗಳು ಇರಬೇಕಾಗಿವೆಯೆಂದೂ ಅನೇಕ ದೇವದೂತರು ಹಾಲನ್ನೂ ಜೇನನ್ನೂ ಶೇಖರಿಸಿ ನದಿಗಳಲ್ಲಿ ಹರಿಯಿಸುವ ಕೆಲಸದಲ್ಲಿ ನಿಯುಕ್ತರಾಗಿರಬೇಕಾಗಿದೆಯೆಂದೂ ನಂಬಬೇಕಾದೀತು. ಸ್ವರ್ಗೀಯ ಅನುಗ್ರಹಗಳು ಈ ಲೋಕಕ್ಕೆ ಪರಿಚಿತವಲ್ಲವೆಂದು ಹೇಳುವ ವಚನಗಳು ಅಡಕವಾದ ಪವಿತ್ರ ಖುರ್‌ಆನಿನ ಅಧ್ಯಾಪನಕ್ಕೆ ಈ ರೀತಿಯ ವಿಶ್ವಾಸವು ಸರಿಹೊಂದುವುದೇ? ಆ ಅನುಗ್ರಹಗಳು ಆತ್ಮವನ್ನು ಪ್ರಕಾಶಗೊಳಿಸಿ ದೇವಜ್ಞಾನವನ್ನು ವೃದ್ಧಿಗೊಳಿಸುವ ಆತ್ಮಭೋಜನವೆಂದು ಪವಿತ್ರ ಖುರ್‌ಆನ್ ಕಲಿಸುತ್ತದೆ. ಈ ಸ್ವರ್ಗಾನುಗ್ರಹಗಳು ಭೌತಿಕ ವಸ್ತುಗಳಂತೆ ಸಾದೃಶ್ಯ ರೂಪದಲ್ಲಿ ಪವಿತ್ರ ಖುರ್‌ಆನಿನಲ್ಲಿ ವಿವರಿಸಲ್ಪಟ್ಟಿದ್ದರೂ ಅವುಗಳ ಉದ್ಭವ ಆಧ್ಯಾತ್ಮಿಕತೆ ಮತ್ತು ನೈತಿಕತೆಯನ್ನು ಆಧರಿಸಿಕೊಂಡಿದೆಯೆಂದು ಜೊತೆಯಲ್ಲೇ ಹೇಳಲಾಗಿದೆ.

ಸ್ವರ್ಗದಲ್ಲಿ ನೀಡಲ್ಪಡುವ ಅನುಗ್ರಹಗಳನ್ನು ಅನುಭವಿಸುವಾಗ ಅವು ಮೊದಲು ಸಹ ತಮಗೆ ಲಭಿಸಿರುವುದಾಗಿ ಭಕ್ತಜನರು ಹೇಳುವರೆಂದು ಕೆಳಗೆ ಉದ್ಧರಿಸುವ ಪವಿತ್ರ ಖುರ್‌ಆನ್ ವಾಕ್ಯದಲ್ಲಿ ಹೇಳಲಾದುದರಿಂದ ಅವು ಭೌತಿಕ ಅನುಗ್ರಹಗಳೆಂದು ಭಾವಿಸಬೇಕಾಗಿಲ್ಲ. ಅಲ್ಲಾಹನು ಹೇಳುತ್ತಾನೆ:

وَبَشِّرِ الَّذِيْنَ اٰمَنُوْا وَعَمِلُوا الصّٰلِحٰتِ اَنَّ لَهُمْ جَنّٰتٍ تَجْرِيْ مِنْ تَحْتِهَا الْاَنْهٰرُ ؕ كُلَّمَا
رُزِقُوْا مِنْهَا مِنْ ثَمَرَةٍ رِّزْقًا ۙ قَالُوْا هٰذَا الَّذِيْ رُزِقْنَا مِنْ قَبْلُ ۙ وَاُتُوْا بِهٖ مُتَشَابِهًا

ವಿಶ್ವಾಸವನ್ನು ಕೈಗೊಂಡು ಅನ್ಯೂನವಾದ ಸತ್ಕರ್ಮಗೈಯುವವರಿಗೆ, ಕೆಳಭಾಗದಲ್ಲಿ ನದಿಗಳು ಪ್ರವಹಿಸುವ ತೋಟಗಳಿಗೆ ಅವರು ಹಕ್ಕುದಾರರೆಂಬ ಶುಭವಾರ್ತೆಯನ್ನು ನೀಡು; ಅವುಗಳ ಫಲಗಳನ್ನು ಅಲ್ಲಿ ಅವರಿಗೆ ನೀಡಲ್ಪಡುವಾಗ, 'ಈ ಫಲಗಳನ್ನು ಮೊದಲು ಸಹ ನಮಗೆ ನೀಡಲಾಗಿದೆಯಷ್ಟೆ' ಎಂದು ಅವರು ಹೇಳುವರು; (ಏಕೆಂದರೆ ಪೂರ್ವ ಜೀವಿತದಲ್ಲಿ ಅನುಭವಿಸಿದ ಫಲಗಳಿಗೆ) ಹೋಲಿಕೆಯುಳ್ಳವು ಅವರಿಗೆ ನೀಡಲಾಗುವುದು. **(2:26)**

ಭಕ್ತಜನರು ಮೊದಲು ಈ ಲೋಕದಲ್ಲಿ ಅನುಭವಿಸಿರುವುದಾಗಿ ಇಲ್ಲಿ ಹೇಳಲಾದ ಫಲಗಳು ಭೌತಿಕ ಅನುಗ್ರಹಗಳೆಂದು ಭಾವಿಸುವುದು ತೀರಾ ಅಸಮಂಜಸವೂ ಪವಿತ್ರ ಖುರ್‌ಆನ್ ವಾಕ್ಯದ ಅರ್ಥಕ್ಕೆ ಕಟು ವಿರುದ್ಧವೂ ಆಗಿದೆ.

ಸತ್ಯವಿಶ್ವಾಸಿಗಳಾಗಿ ಸತ್ಕರ್ಮಗೈಯುವ ಭಕ್ತರು ಸತ್ಯವಿಶ್ವಾಸವೆಂಬ ತೋಟ ಮತ್ತು ಸತ್ಕರ್ಮಗಳೆಂಬ ನದಿಗಳಿಂದ ಕೂಡಿದ ಸ್ವರ್ಗವನ್ನು ತಮಗಾಗಿ ಸ್ವಂತ ಕೈಗಳಿಂದ ನಿರ್ಮಿಸುತ್ತಾರೆಂದು ಪ್ರಸ್ತುತ ವಾಕ್ಯ ತಿಳಿಸಿಕೊಡುತ್ತದೆ. ಆ ಪವಿತ್ರ ಧಾಮದ ಫಲಗಳನ್ನು ಅವರು ಈ ಲೋಕದಲ್ಲಿ ಆಸ್ವಾದಿಸುತ್ತಾರೆ. ಅದರ ಫಲಗಳನ್ನೇ ಅವರು ಪರಲೋಕದಲ್ಲೂ ಅನುಭವಿಸುವರು; ಅವುಗಳಾದರೋ ಬಹಳ ಮಾಧುರ್ಯವುಳ್ಳ ಫಲಗಳಾಗಿ ರೂಪಾಂತರ ಹೊಂದಿ ಗೋಚರಿಸುವುವು. ಹೀಗೆ, ಆ ಫಲಗಳನ್ನೂ ಐಹಿಕ ಜೀವಿತದ ಆಧ್ಯಾತ್ಮಿಕ ನೆಲೆಯಲ್ಲಿ ಆಸ್ವಾದಿಸುವುದರಿಂದ, ಪರಲೋಕದಲ್ಲಿ ಅವರಿಗೆ ಅವುಗಳನ್ನು ಗುರುತಿಸಲು ಸಾಧ್ಯವಾಗಿ, ಪೂರ್ವ ಜೀವಿತಕಾಲದ ಆ ಫಲಗಳೊಡನೆ ಸಾಮ್ಯತೆಯುಳ್ಳದ್ದಾಗಿ ಕಾಣುವುದರಿಂದ 'ಈ ಫಲಗಳು ಮೊದಲು ನಮಗೆ ನೀಡಲ್ಪಟ್ಟಿವೆಯಷ್ಟೆ' ಎಂದು ಅವರು ಹೇಳುವರು. ಹೀಗೆ, ಈ ಲೋಕದಲ್ಲಿ ದೇವಾನುರಾಗ ಮತ್ತು ದೇವಪ್ರೀತಿಯೆಂಬ ಆಧ್ಯಾತ್ಮಿಕ ಭೋಜನ ಆಸ್ವಾದಿಸುವವರಿಗೆ ಪರಲೋಕದಲ್ಲಿ ಅದೇ ಆಹಾರ ಪ್ರತ್ಯಕ್ಷ ರೂಪದಲ್ಲಿ ನೀಡಲ್ಪಡುವುದೆಂದು ಈ ದೇವವಾಕ್ಯ ಸ್ಪಷ್ಟವಾಗಿ ಹೇಳಿಕೊಡುತ್ತದೆ. ಅವರು ಈ ರೀತಿಯಲ್ಲಿ ದೇವಪ್ರೇಮ ಮತ್ತು ದೇವಾನುರಾಗವನ್ನು ಅನುಭವಿಸಿ ಅದರ ರುಚಿಯನ್ನು ತಿಳಿದಿರುವುದರಿಂದ, ಪರಲೋಕದ ಸುಖಾನುಭವ ಸಂದರ್ಭದಲ್ಲಿ, ತಮಗೆ ಐಹಿಕ ಜೀವಿತದ ಪ್ರಶಾಂತವಾದ, ಏಕಾಂತದಲ್ಲೂ ರಾತ್ರಿಯ ಅಂಧಕಾರದಲ್ಲೂ ಯಥಾರ್ಥ ಪ್ರೇಮ ಲಕ್ಷ್ಯವಾದ ದೇವನ ಅನುರಾಗದಿಂದ ಕೂಡಿದ ಧ್ಯಾನನಿಷ್ಠೆಯಲ್ಲಿ ಸಿದ್ಧಿಸಿದ ಆನಂದಾನುಭೂತಿಯನ್ನು ಅವರು ಸ್ಮರಿಸುವರು. ಒಟ್ಟಾರೆ ಹೇಳುವುದಾದರೆ, ಮೇಲಿನ ಪವಿತ್ರ ಖುರ್‌ಆನ್ ವಾಕ್ಯ ಈ ಲೋಕದ ಭೌತಿಕ ಅನುಗ್ರಹಗಳ ಕುರಿತಾಗಲಿ, ಅನುಭೋಗ ವೈಭವಗಳ ಕುರಿತಾಗಲಿ ಪ್ರಸ್ತಾಪಿಸುವುದಿಲ್ಲ.

ಆದರೆ, ದೇವಭಕ್ತರಿಗೆ ಈ ಲೋಕದಲ್ಲಿ ಆಧ್ಯಾತ್ಮಿಕ ನೆಲೆಯಲ್ಲಿ ಸ್ವರ್ಗೀಯ ಅನುಗ್ರಹಗಳು ಅನುಭವವಾಗಿದ್ದರೆ, ಆ ಅನುಗ್ರಹಗಳನ್ನು ಇಲ್ಲಿ ಯಾರೂ ಕಂಡಿಲ್ಲ, ಕೇಳಿಲ್ಲ, ಯಾರ ಹೃದಯದಲ್ಲೂ ರೂಪಗೊಂಡಿಲ್ಲವೆಂದು ಪ್ರಸ್ತಾಪಿಸಿರುವುದು ಹೇಗೆ ಸರಿಯಾಗುತ್ತದೆಯೆಂದೂ, ಈ ಸ್ಥಿತಿಯಲ್ಲಿ ಮೇಲೆ ಉದ್ಧರಿಸಲಾದ ಎರಡು ಪವಿತ್ರ ಖುರ್‌ಆನ್ ವಾಕ್ಯಗಳಿಗೆ ಪರಸ್ಪರ ಅರ್ಥ ವೈರುದ್ಧ್ಯ ಉಂಟಾಗುವುದಿಲ್ಲವೇ ಎಂದೂ ಶಂಕೆ ಮೂಡಬಹುದು. ಎರಡನೆಯ ವಾಕ್ಯದಲ್ಲಿ ಪೂರ್ವಜೀವಿತದಲ್ಲಿ ನೀಡಲಾದ ಫಲಗಳ ಕುರಿತು ಹೇಳಿದುದರ ತಾತ್ಪರ್ಯ ಲೌಕಿಕ ಅನುಗ್ರಹಗಳು ಎಂದಾಗುವಾಗ ಮಾತ್ರವೇ ಪರಸ್ಪರ ವೈರುದ್ಧ್ಯ ಉಂಟಾಗುತ್ತದೆ. ಆದರೆ ದೇವವಾಕ್ಯ ಅರ್ಥೈಸುವುದು ಭೌತಿಕ ಅನುಗ್ರಹಗಳನ್ನಲ್ಲ, ಆಧ್ಯಾತ್ಮಿಕ ಅನುಗ್ರಹಗಳನ್ನಾಗಿದೆ.

ಆಗ ಇಲ್ಲಿ ಯಾವುದೇ ಅರ್ಥವೈಪರೀತ್ಯ ಉಂಟಾಗುವುದಿಲ್ಲ. ದೇವಜ್ಞಾನಿಯಾದ ಯಥಾರ್ಥ ಭಕ್ತನಿಗೆ ಆಧ್ಯಾತ್ಮಿಕ ಸ್ಥಿತಿಯಲ್ಲಿ ಈ ಲೋಕದಲ್ಲಿ ಲಭಿಸುವುದೆಲ್ಲವೂ ಪರಲೋಕಕ್ಕೆ ಸಂಬಂಧಿಸಿದ ಅನುಗ್ರಹವೇ ಆಗಿದೆ. ಈ ಅನುಗ್ರಹದ ಮಾದರಿಯನ್ನು, ಅವನಿಗೆ ಪಾರತ್ರಿಕ ಆಸಕ್ತಿಯನ್ನು ವೃದ್ಧಿಗೊಳಿಸಲಿಕ್ಕೆ ಈ ಲೋಕದಲ್ಲೇ ಮುಂಚಿತವಾಗಿ ನೀಡಲಾಗುತ್ತದೆ, ಅಷ್ಟೆ.

ದೇವಾನುಭೂತಿ ಉಂಟಾಗಿರುವ ಮನುಷ್ಯನು ಈ ಲೋಕಕ್ಕೆ ಸಂಬಂಧಪಟ್ಟವನಲ್ಲ. ಆದ್ದರಿಂದ ಲೋಕವು ಅವನನ್ನು ದ್ವೇಷಿಸುತ್ತದೆ. ಆದರೆ ಅವನು ಪರಲೋಕಕ್ಕೆ ಸಂಬಂಧಪಟ್ಟವನಾಗಿರುವುದರಿಂದ ಅವನಿಗೆ ಸ್ವರ್ಗೀಯ ಅನುಗ್ರಹಗಳು ನೀಡಲ್ಪಡುತ್ತವೆ. ಲೌಕಿಕ ಮನುಷ್ಯನು ಐಹಿಕ ಅನುಗ್ರಹಗಳನ್ನು ಸಂಪಾದಿಸುವಂತೆಯೇ ಪಾರಲೌಕಿಕ ದೇವಭಕ್ತನು ಸ್ವರ್ಗೀಯ ಅನುಗ್ರಹಗಳನ್ನು ಗಳಿಸುತ್ತಾನೆ. ಒಟ್ಟಿನಲ್ಲಿ, ಸ್ವರ್ಗದ ಅನುಗ್ರಹ ವಸ್ತುಗಳು ಕಣ್ಣುಗಳಿಗೂ ಕಿವಿಗಳಿಗೂ ಹೃದಯಗಳಿಗೂ ಅಗೋಚರವೂ ಅಪರಿಚಿತವೂ ಆಗಿವೆಯೆಂಬುದು ಸತ್ಯ. ಯಾವೊಬ್ಬನು ಐಹಿಕ ಜೀವಿತದಲ್ಲಿ ದೇಹ ಸುಖಗಳನ್ನು ಮೃತ್ಯುವಿಗೊಡ್ಡುತ್ತಾನೋ ಅವನಿಗೆ ಪರಲೋಕದಲ್ಲಿ ಪ್ರತ್ಯಕ್ಷವಾಗಲಿರುವ ಪಾನಕವನ್ನು ಇಹದಲ್ಲಿ ಆಧ್ಯಾತ್ಮಿಕ ಸ್ಥಿತಿಯಲ್ಲಿ ಕುಡಿಸಲಾಗುವುದು. ಪರಲೋಕದಲ್ಲಿ ಅದನ್ನು ಪ್ರತ್ಯಕ್ಷ ರೂಪದಲ್ಲಿ ನೀಡಲಾಗುವ ಸಂದರ್ಭದಲ್ಲಿ ಅವನಿಗೆ ಐಹಿಕ ಜೀವಿತದಲ್ಲುಂಟಾದ ಅದರ ಅನುಭವ ನೆನಪಿಗೆ ಬರುತ್ತದೆ. ಇದನ್ನು ತನಗೆ ಪೂರ್ವ ಜೀವಿತದಲ್ಲಿ ನೀಡಲಾಗಿತ್ತೆಂದು ಆಗ ಅವನು ಹೇಳುವನು. ಆದರೆ ಈ ಅನುಗ್ರಹಗಳು ಭೌತಿಕ ಕಣ್ಣು, ಕಿವಿ ಮತ್ತು ಇತರ ಇಂದ್ರಿಯಗಳಿಗೆ ಅಗೋಚರವೂ ಅಪರಿಚಿತವೂ ಆಗಿವೆಯೆಂಬ ಪ್ರಜ್ಞೆ ಅವನಿಗಿರುತ್ತದೆ. ಅವನು ಇಹಲೋಕಕ್ಕೆ ಸಂಬಂಧಪಟ್ಟವನಲ್ಲವಾದರೂ ಈ ಲೋಕದಲ್ಲೇ ಇದ್ದವನಾದುದರಿಂದ ಅದು ಲೌಕಿಕಾನುಗ್ರಹಗಳ ಪೈಕಿಯದ್ದಲ್ಲವೆಂದೂ ಅಂತಹ ಅನುಗ್ರಹವನ್ನು ಇಹದಲ್ಲಿ ತನ್ನ ಕಣ್ಣಿನಿಂದಾಗಲಿ, ಕಿವಿಯಿಂದಾಗಲಿ, ಹೃದಯದಿಂದಾಗಲಿ ಅನುಭವಿಸಿಲ್ಲವೆಂದೂ ಸಾಕ್ಷ್ಯವಹಿಸುವನು. ಆದರೆ, ಆ ಅನುಗ್ರಹದ ಮಾದರಿ ಅವನು ಇಹದಲ್ಲಿ ಅನುಭವಿಸಿದ್ದು ಅವನ ಆಧ್ಯಾತ್ಮಿಕ ಪುನರುಜ್ಜೀವನ ಘಟ್ಟದಲ್ಲಾಗಿತ್ತು. ಆ ಜೀವಿತವಾದರೋ ಈ ಲೋಕದ ಕೀಳ್ಮಟ್ಟದ ಕಟ್ಟುಪಾಡುಗಳಿಂದೆಲ್ಲ ಬೇರ್ಪಟ್ಟು ಪರಲೋಕದೊಂದಿಗೆ ಒಂದು ದೃಢ ಸಂಬಂಧವನ್ನು ಏರ್ಪಡಿಸುವಂತಹದ್ದಾಗಿತ್ತು.

ಮರಣಾನಂತರ ಜೀವನದ ಅನುಭವಾವಸ್ಥೆಗಳಿಗೆ ಸಂಬಂಧಿಸಿ ಪ್ರಧಾನವಾದ ಮೂರು ತತ್ವಗಳನ್ನು ಪವಿತ್ರ ಖುರ್‌ಆನ್ ವಿವರಿಸುವುದು ಇಲ್ಲಿ ಉಲ್ಲೇಖಾರ್ಹ. ಅವನ್ನು ಇಲ್ಲಿ ಬೇರೆ ಬೇರೆಯಾಗಿ ವಿವರಿಸಬಹುದು.

**ಒಂದನೆಯ ತತ್ವ,** ಮರಣಾನಂತರ ಜೀವಿತ ಹೊಸ ಒಂದು ಅವಸ್ಥೆಯಲ್ಲವೆಂದೂ ಅದು ಐಹಿಕ ಜೀವಿತಾವಸ್ಥೆಯ ಒಂದು ಪ್ರತಿರೂಪ ವಾಗಿರುವುದೆಂದೂ ಪವಿತ್ರ ಖುರ್‌ಆನ್ ಪದೇ ಪದೇ ಬೋಧಿಸುತ್ತದೆ ಎಂಬುದಾಗಿದೆ. ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

وَكُلَّ إِنسَانٍ أَلْزَمْنَـٰهُ طَـٰٓئِرَهُۥ فِى عُنُقِهِۦ ۖ وَنُخْرِجُ لَهُۥ يَوْمَ ٱلْقِيَـٰمَةِ كِتَـٰبًا يَلْقَىٰهُ مَنشُورًا

ನಾವು ಈ ಲೋಕದಲ್ಲಿ ಪ್ರತಿಯೊಬ್ಬ ಮನುಷ್ಯನ ಕರ್ಮಫಲಗಳನ್ನು ಅವನ ಕುತ್ತಿಗೆಗೆ ಕಟ್ಟಿದ್ದೇವೆ. ಗೋಪ್ಯವಾಗಿರುವ ಈ ಫಲಗಳನ್ನು ಪುನರುತ್ಥಾನ ದಿನದಂದು ತೆರೆದ ಪುಸ್ತಕದ ರೂಪದಲ್ಲಿ ಬಹಿರಂಗಪಡಿಸುವೆವು. **(17:14)**

ಈ ವಾಕ್ಯದಲ್ಲಿ ಪ್ರಯೋಗಿಸಲ್ಪಟ್ಟ **'ತಾಇರ್'** ಎಂಬ ಪದ ಇಲ್ಲಿ ಗಮನಾರ್ಹವಾಗಿದೆ. ಇದರ ಶಬ್ದಾರ್ಥ 'ಪಕ್ಷಿ' ಎಂದಾಗಿದ್ದರೂ ಉಪಮಾಲಂಕಾರವಾಗಿ 'ಕರ್ಮ' ಎಂಬರ್ಥದಲ್ಲಿ ಇಲ್ಲಿ ಪ್ರಯೋಗಿಸಲಾಗಿದೆ. ಏಕೆಂದರೆ ಒಳ್ಳೆಯ ಅಥವಾ ಕೆಟ್ಟದಾದ ಯಾವುದೇ ಕರ್ಮ ನಡೆದ ನಂತರ ಹಕ್ಕಿಯಂತೆ ಹಾರಿ ಕಣ್ಮರೆಯಾಗುತ್ತದೆ. ಎಂದರೆ, ಆ ಕಾರ್ಯ ನಿರ್ವಹಣೆಯ ಜೊತೆಗೆ ಅದರಿಂದ ಅನುಭವಿಸಿದ ಕ್ಲೇಶವಾಗಲಿ, ಆನಂದವಾಗಲಿ ಮರೆಯಾಗುತ್ತದೆ. ಆ ಕ್ರಿಯೆಯ ಶುಭ ಅಥವಾ ಅಶುಭ ಫಲ ಅಥವಾ ಚಿಹ್ನೆ ಮಾತ್ರ ಹೃದಯದಲ್ಲಿ ಬಾಕಿಯಾಗುತ್ತದೆ. ಮನುಷ್ಯನ ಯಾವುದೇ ಕರ್ಮವು ಅದರ ಕುರುಹನ್ನು ಪರೋಕ್ಷವಾಗಿ ಹೃದಯದಲ್ಲಿ ಅಚ್ಚೊತ್ತುತ್ತದೆಯೆಂಬುದು ಪವಿತ್ರ ಖುರ್‌ಆನಿನ ಒಂದು ಪಾಠವಾಗಿದೆ. ಕರ್ಮ ಯಾವ ರೀತಿಯಲ್ಲಿರುತ್ತದೋ ಅದಕ್ಕನುಸಾರವಾಗಿ ದೇವಕರ್ಮ ಸಹ ಬಹಿರಂಗವಾಗುತ್ತದೆ. ಆ ನಿಯತಿಕರ್ಮ ಮನುಷ್ಯನ ಕ್ರಿಯಾಫಲವಾದ ಒಳಿತು ಅಥವಾ ಕೆಡುಕನ್ನು ನಾಶಗೊಳ್ಳಲು ಬಿಡುವುದಿಲ್ಲ; ಮಾತ್ರವಲ್ಲ ಅದರ ಚಿಹ್ನೆ ಹೃದಯದಲ್ಲೂ ಮುಖದಲ್ಲೂ ಕಣ್ಣುಗಳಲ್ಲೂ, ಕಿವಿಗಳಲ್ಲೂ, ಕಾಲುಗಳಲ್ಲೂ ಗುಪ್ತ ರೂಪದಲ್ಲಿ ಒತ್ತಲ್ಪಡುತ್ತದೆ. ಅವನಲ್ಲಿ ಗುಪ್ತವಾಗಿರುವ **"ಕರ್ಮಗ್ರಂಥ"** ಇದೇ ಆಗಿದೆ. ಐಹಿಕ ಜೀವಿತದಲ್ಲಿ ಪರೋಕ್ಷವಾಗಿ ರೂಪುಗೊಳ್ಳುವ ಈ ಕರ್ಮವೃತ್ತಾಂತ ಗ್ರಂಥ ಪರಲೋಕದಲ್ಲಿ ಪ್ರತ್ಯಕ್ಷವಾಗುತ್ತದೆ. ಪವಿತ್ರ ಖುರ್‌ಆನ್ ಒಂದೆಡೆ ಸ್ವರ್ಗವಾಸಿಗಳ ಕುರಿತು ಹೀಗೆ ಹೇಳುತ್ತದೆ:

يَوْمَ تَرَى ٱلْمُؤْمِنِينَ وَٱلْمُؤْمِنَـٰتِ يَسْعَىٰ نُورُهُم بَيْنَ أَيْدِيهِمْ وَبِأَيْمَـٰنِهِم

ಆ ದಿನದಂದು ಸತ್ಯವಿಶ್ವಾಸಿಗಳೂ ಸತ್ಯ ವಿಶ್ವಾಸಿನಿಯರೂ ತಮಗೆ ಪರೋಕ್ಷವಾಗಿ ಸಿದ್ಧಿಸಿದ ಪ್ರಕಾಶ ಅವರ ಮುಂದಿನಿಂದಲೂ ಬಲಭಾಗದಲ್ಲೂ ಪ್ರವಹಿಸುವುದಾಗಿ ಕಾಣುವರು. **(57:13)**

ಪವಿತ್ರ ಖುರ್‌ಆನಿನ ಮತ್ತೊಂದೆಡೆಯಲ್ಲಿ ಅಧರ್ಮಿಗಳ ಕುರಿತು ಹೀಗೆ ಹೇಳಲಾಗಿದೆ:

أَلْهَىٰكُمُ التَّكَاثُرُ - حَتَّىٰ زُرْتُمُ الْمَقَابِرَ - كَلَّا سَوْفَ تَعْلَمُونَ - ثُمَّ كَلَّا سَوْفَ تَعْلَمُونَ - كَلَّا لَوْ تَعْلَمُونَ عِلْمَ الْيَقِينِ - لَتَرَوُنَّ الْجَحِيمَ - ثُمَّ لَتَرَوُنَّهَا عَيْنَ الْيَقِينِ - ثُمَّ لَتُسْأَلُنَّ يَوْمَئِذٍ عَنِ النَّعِيمِ -

> ನಿಮ್ಮ ಮಿತಿ ಮೀರಿದ ಲೌಕಿಕ ಲಾಲಸೆಯು ನೀವು ಸಮಾಧಿಗಳನ್ನು ತಲಪುವ ವರೆಗೆ ನಿಮ್ಮನ್ನು ಪಾರತ್ರಿಕ ಜೀವಿತ ವಿಚಾರದ ಬಗ್ಗೆ ಅಲಕ್ಷ್ಯರನ್ನಾಗಿ ಮಾಡುತ್ತದೆ. ನೀವು ಲೌಕಿಕತೆಗೆ ಹೆಚ್ಚು ಗಮನ ನೀಡದಿರಿ; ಏಕೆಂದರೆ ಪ್ರಪಂಚಾನುರಾಗ ಸತ್ಫಲ ನೀಡುವುದಿಲ್ಲವೆಂದು ನೀವು ಶೀಘ್ರದಲ್ಲೇ ತಿಳಿಯುವಿರಿ. ಪುನಃ ನಾನು ನಿಮ್ಮೊಡನೆ ಹೇಳುತ್ತೇನೆ – ಪ್ರಪಂಚಾನುರಾಗದ ದೋಷ ಫಲವನ್ನು ನೀವು ಬೇಗನೇ ತಿಳಿಯುವಿರಿ. ನಿಮಗೆ ದೃಢಜ್ಞಾನ ಸಿದ್ಧಿಸಿದರೆ ಈ ಲೋಕದಲ್ಲೇ ನೀವು ನರಕವನ್ನು ಕಾಣುವಿರಿ. ಆ ಬಳಿಕ ಮರಣದ ನಂತರ ಪುನರುತ್ಥಾನ ವರೆಗಿನ ಮಧ್ಯಮ ಘಟ್ಟವಾದ 'ಬರ್‌ಸ಼ಖ್'ನಲ್ಲಿ ನೀವು ಅದನ್ನು ಕಣ್ಣಾರೆ ಕಾಣುವಿರಿ. ಕೊನೆಗೆ ಪುನರುತ್ಥಾನ ಘಟ್ಟದಲ್ಲಿ ನೀವು ನ್ಯಾಯ ವಿಚಾರಣೆಗೆ ಒಳಗಾಗಿ ಶಿಕ್ಷೆಗೆ ಗುರಿಯಾಗುವಾಗ ಅನುಭವ ಮೂಲಕ ನಿಮಗೆ ನರಕದ ಬಗ್ಗೆ ಸರಿಯಾದ ಜ್ಞಾನ ಉಂಟಾಗುವುದು. **(102:2–9)**

ಅಧರ್ಮಿಗಳಿಗೆ ನರಕಜೀವನ ಈ ಲೋಕದಲ್ಲೇ ಗುಪ್ತವಾಗಿ ರೂಪಗೊಂಡಿರುತ್ತದೆಯೆಂದೂ ಗಾಢವಾಗಿ ಚಿಂತಿಸಿದರೆ ಅವರಿಗೆ ನರಕವನ್ನು ಇಲ್ಲೇ ಕಾಣಲಾಗುವುದೆಂದೂ ಈ ದೇವವಾಕ್ಯಗಳು ಹೇಳುತ್ತವೆ. ಇಲ್ಲಿ ಅಲ್ಲಾಹನು ಜ್ಞಾನವನ್ನು ಮೂರು ವಿಧದಲ್ಲಿ ವಿಂಗಡಿಸಿದ್ದಾನೆ. "ಇಲ್ಮುಲ್ ಯಖೀನ್" ಅಥವಾ "ಅನುಮಾನ ಜ್ಞಾನ", "ಐನುಲ್ ಯಖೀನ್" ಅಥವಾ "ದರ್ಶನ ಜ್ಞಾನ" ಮತ್ತು "ಹಖ್ಖುಲ್ ಯಖೀನ್" ಅಥವಾ "ಅನುಭವ ಜ್ಞಾನ". ಮೂರು ಉದಾಹರಣೆಗಳಿಂದ ಇದನ್ನು ಸ್ಪಷ್ಟಪಡಿಸಬಹುದು. ದೂರದಿಂದ ಹೊಗೆಯೆದ್ದು ಕಾಣುವಾಗ ನೋಡುವವನ ಮನಸ್ಸಿನಲ್ಲಿ ಅದಕ್ಕೆ ಕಾರಣೀಭೂತವಾದ ಅಗ್ನಿಯ ಜ್ಞಾನ ಉದಿಸುತ್ತದೆ. ಧೂಮ ಮತ್ತು ಅಗ್ನಿಯ ಬೇರ್ಪಡಿಸಲಾಗದ ಸಂಬಂಧದ ಕಾರಣದಿಂದ ಹೊಗೆಯಿರುವಲ್ಲಿ ಬೆಂಕಿಯಿರಬೇಕೆಂಬುದು ದಿಟವಷ್ಟೆ. ಆದ್ದರಿಂದ ಹೊಗೆಯೆದ್ದು ಬರುವ ಆ ಸ್ಥಳದಲ್ಲಿ ಬೆಂಕಿ ಇರಬೇಕೆಂದು ಅವನು ನಿರ್ಣಯಿಸುತ್ತಾನೆ. ಈ ಜ್ಞಾನ "ಇಲ್ಮುಲ್ ಯಖೀನ್" ಅಥವಾ "ಅನುಮಾನ ಜ್ಞಾನ"ವಾಗಿದೆ. ಅವನು ನೇರವಾಗಿ ಹೋಗಿ ಆ ಹೊಗೆ

ಎದ್ದ ಸ್ಥಳದಲ್ಲಿ ಬೆಂಕಿಯ ಜ್ವಾಲೆಯನ್ನು ಕಾಣುವನಾದರೆ ಆ ಅರಿವಿಗೆ "ಐನುಲ್ ಯಖೀನ್" ಅಥವಾ "ದರ್ಶನ ಜ್ಞಾನ" ಎಂದು ಹೇಳಲಾಗುತ್ತದೆ. ಆ ಅಗ್ನಿಯನ್ನು ಸ್ವಯಂ ಪ್ರವೇಶಿಸುವಾಗ ಅವನಿಗೆ ಉಂಟಾಗುವ ಅನುಭವ "ಹಖ್ಖುಲ್ ಯಖೀನ್" ಅಥವಾ "ಅನುಭವ ಜ್ಞಾನ"ವಾಗಿದೆ. ಇದೇ ಪ್ರಕಾರ ನರಕದ ಕುರಿತು ಈ ಲೋಕದಲ್ಲಿ ಅನುಮಾನ ಜ್ಞಾನವೂ 'ಬರ್‌ಸ಼ಖ್' ಎಂಬ ಮಧ್ಯಘಟ್ಟದಲ್ಲಿ ದರ್ಶನ ಜ್ಞಾನವೂ ಪುನರುತ್ಥಾನ ಘಟ್ಟದಲ್ಲಿ ಪರಿಪೂರ್ಣವಾದ ಅನುಭವ ಜ್ಞಾನವೂ ಸಿದ್ಧಿಸುವುದೆಂದು ಪ್ರಸ್ತುತ ದೇವವಾಕ್ಯಗಳಿಂದ ಸ್ಪಷ್ಟವಾಗುತ್ತದೆ.

## ಮಾನವ ಜೀವಿತದ ಮೂರು ಲೋಕಗಳು

ಮನುಷ್ಯ ಜೀವಿತಕ್ಕೆ ಮೂರು ಲೋಕಗಳು ಅಥವಾ ಮೂರು ವಿಭಿನ್ನ ಘಟ್ಟಗಳಿವೆಯೆಂದು ಪವಿತ್ರ ಖುರ್‌ಆನ್ ಕಲಿಸುವುದು ಇಲ್ಲಿ ಗಮನಾರ್ಹ. ಒಂದನೆಯ ಲೋಕ ಪರಿಶ್ರಮ ರಂಗವಾದ ಐಹಿಕವೇ ಆಗಿದೆ. ಯಾರಾದರೂ ತನ್ನ ಕರ್ಮಗಳ ಮೂಲಕ ಪುಣ್ಯವನ್ನೋ ಪಾಪವನ್ನೋ ಸಂಪಾದಿಸುವುದು ಇಲ್ಲಿಯಾಗಿದೆ. ಪುನರುತ್ಥಾನ ಲೋಕದಲ್ಲಿ ಸಜ್ಜನರಿಗೆ ಒಳಿತಿನಲ್ಲಿ ಅಭಿವೃದ್ಧಿ ಸಿದ್ಧಿಸುವುದಾದರೂ ಅದು ಕೇವಲ ದೇವನ ಕೃಪಾಕಟಾಕ್ಷದ ಫಲವಾಗಿದೆ ಹೊರತು ಅವರ ಪ್ರಯತ್ನದ ಬಲದಿಂದಲ್ಲ.

ಎರಡನೆಯ ಲೋಕದ ಹೆಸರು **'ಬರ್‌ಸ಼ಖ್'** (برزخ) ಎಂದಾಗಿದೆ. 'ಬರ್‌ಸ಼ಖ್' ಅರಬಿ ಭಾಷೆಯಲ್ಲಿ ಎರಡು ವಸ್ತುಗಳ ಮಧ್ಯದಲ್ಲಿರುವ ವಸ್ತುವನ್ನು ಸೂಚಿಸುವ ಪದವಾಗಿದೆ. ಆದ್ದರಿಂದ ಐಹಿಕ ಜೀವಿತ ಮತ್ತು ಪುನರುತ್ಥಾನ ಘಟ್ಟಗಳ ಮಧ್ಯದ ಸ್ಥಿತಿಗೆ 'ಬರ್‌ಸ಼ಖ್' ಎಂದು ಹೇಳಲಾಗಿದೆ. ಅತಿ ಪ್ರಾಚೀನ ಕಾಲದಿಂದಲೇ ಮಧ್ಯಘಟ್ಟವನ್ನು ಸೂಚಿಸಲಿಕ್ಕಾಗಿ ಈ ಪದ ಬಳಸಲ್ಪಡುತ್ತಾ ಇದೆ. ಹೀಗೆ ಈ ಪದವೇ ಐಹಿಕ ಜೀವಿತಕ್ಕೂ ಪುನರುತ್ಥಾನಕ್ಕೂ ಮಧ್ಯೆ ಮನುಷ್ಯಾತ್ಮಕ್ಕೆ ಒಂದು ಜೀವಿತಘಟ್ಟ ಉಂಟೆಂಬುದಕ್ಕೆ ಸಾಕ್ಷ್ಯವಹಿಸುತ್ತದೆ. ಅರಬಿ ಮಾತುಗಳು ದೇವಮುಖದಿಂದ ಹೊರಟ ನುಡಿಗಳೆಂದೂ ದೈವಿಕವೆಂದು ಹೇಳಲ್ಪಡುವ ಏಕ ಭಾಷೆ ಅದು ಮಾತ್ರವೆಂದೂ ಸರ್ವಜ್ಞಾನಗಳ ಉಗಮವೂ ಸಕಲ ಭಾಷೆಗಳ ಜನನಿಯೂ ದೇವವಚನ ಪ್ರಕಟನೆಯ ಮೊದಲಿನ ಹಾಗೂ ಕೊನೆಯ ವಾಹಕ ಸಹ ಅದೇ ಆಗಿದೆಯೆಂದೂ ನಾನು **'ಮಿನನುರ್ರಹ್ಮಾನ್'** ಎಂಬ ಗ್ರಂಥದಲ್ಲಿ ಸಾಬೀತುಪಡಿಸಿದ್ದೇನೆ. ಪ್ರಾಚೀನ ಕಾಲದಿಂದಲೇ ಅರಬಿ ಭಾಷೆಯ ಮೂಲಕ ದೇವೋಪದೇಶಗಳು ಲಭಿಸಿರುವುದರಿಂದ ಅರಬಿ ಭಾಷೆ ದೇವವಚನ ಪ್ರಕಟನೆಯ ಮೊದಲಿನ ವಾಹಕವೆಂದು ಹೇಳಲಾಗಿದೆ. ಹಾಗೆ ಅದು

ಇತರ ಭಾಷೆಗಳಿಗೆ ಆದಿಯೂ ಮೂಲವೂ ಆಯಿತು. ದೇವನ ಅಂತಿಮ ಧರ್ಮ ಗ್ರಂಥವಾದ ಪವಿತ್ರ ಖುರ್‌ಆನ್ ಅರಬಿ ಭಾಷೆಯಲ್ಲಿ ಅವತೀರ್ಣವಾದುದರಿಂದ ಆ ಭಾಷೆ ದೇವವಚನ ಪ್ರಕಟನೆಯ ಕೊನೆಯ ವಾಹಕವೆಂದು ಸಹ ಹೇಳಲಾಗಿದೆ. ಮೇಲೆ ಹೇಳಲಾದ 'ಬರ್‌ಸಖ್' ಎಂಬ ಅರಬಿ ಶಬ್ದ 'ಬರ್' ಮತ್ತು 'ಸಖ್' ಎಂಬೆರಡು ಶಬ್ದಗಳು ಸೇರಿದ ಸಂಯುಕ್ತ ಪದವಾಗಿದೆ. ಕರ್ಮರೂಪದಲ್ಲಿ ಪುಣ್ಯ–ಪಾಪಗಳನ್ನು ಸಂಪಾದಿಸುವ ಹಂತ ಕೊನೆಗೊಂಡಿತು ಎಂದಾಗಿದೆ ಈ ಪದದ ಅರ್ಥ. ಆತ್ಮವು ದೇಹದಿಂದ ಬೇರ್ಪಟ್ಟು, ನಶ್ವರ ಶರೀರ ನಾಶಹೊಂದುವ ಸ್ಥಿತಿ 'ಬರ್‌ಸಖ್' ಅಥವಾ 'ಮಧ್ಯಂತರ ಘಟ್ಟ' ಆಗಿದೆ. ಮರಣಾನಂತರ ಶರೀರ ಗೋರಿಗೆ ತಳ್ಳಲ್ಪಡುವ ಪ್ರಕಾರ ಆತ್ಮ ಸಹ ಒಂದು ಬಗೆಯ ಗೋರಿಯಲ್ಲಿ ಇರಿಸಲ್ಪಡುತ್ತದೆಯೆಂದು ಹೇಳಬಹುದು. 'ಸಖ್' ಶಬ್ದ ಇದನ್ನೇ ಸೂಚಿಸುತ್ತದೆ. ಈ ಸ್ಥಿತಿಯಲ್ಲಿ ಆತ್ಮಕ್ಕೆ ಶರೀರದ ಮೇಲಿನ ನಿಯಂತ್ರಣ ಶಕ್ತಿ ನಷ್ಟವಾಗುವುದರಿಂದ ಸತ್ಕರ್ಮ – ದುಷ್ಕರ್ಮ ಗೈಯಲು ಅದು ಸಮರ್ಥವಲ್ಲ. ನಮ್ಮ ಆತ್ಮದ ಉತ್ತಮ ಸ್ಥಿತಿ ಶರೀರದ ಆರೋಗ್ಯವನ್ನು ಆಶ್ರಯಿಸಿಕೊಂಡಿದೆಯೆಂಬುದು ಸ್ಪಷ್ಟವಷ್ಟೆ. ಮೆದುಳಿನ ಒಂದು ನಿರ್ದಿಷ್ಟ ಭಾಗಕ್ಕೆ ಏಟು ತಾಗಿದರೆ ಜ್ಞಾಪಕ ಶಕ್ತಿ ನಷ್ಟವಾಗುತ್ತದೆ. ಇನ್ನೊಂದು ಭಾಗಕ್ಕೆ ಅಪಾಯ ಸಂಭವಿಸಿದರೆ ಬುದ್ಧಿಶಕ್ತಿ ನಷ್ಟವಾಗುತ್ತದೆ ಅಥವಾ ಪ್ರಜ್ಞಾಹೀನತೆ ಉಂಟಾಗುತ್ತದೆ. ಇದೇ ಪ್ರಕಾರ ಮಿದುಳಿನ ಸ್ನಾಯುಗಳಲ್ಲಿ ಸೆಳೆತ, ಬೀಗುವಿಕೆ, ರಕ್ತ ಹೆಪ್ಪುಗಟ್ಟುವುದು ಮುಂತಾದುವು ಉಂಟಾದರೆ ಪ್ರಜ್ಞಾ ಶೂನ್ಯತೆ, ಅಪಸ್ಮಾರ, ಕ್ಷಿಪ್ರಸನ್ನಿ ಮೊದಲಾದ ರೋಗಗಳು ಬಾಧಿಸುವುವು. ಒಟ್ಟಿನಲ್ಲಿ, ಶರೀರದ ಸಂಬಂಧ ಬೇರ್ಪಡುವ ಪಕ್ಷದಲ್ಲಿ ಆತ್ಮವು ಯಾವುದಕ್ಕೂ ಸಮರ್ಥವಲ್ಲವೆಂದು ಈ ಬಗೆಯ ಅನುಭವಗಳು ನಮಗೆ ತಿಳಿಸಿಕೊಡುತ್ತವೆ. ದೇಹದ ಸಂಬಂಧವನ್ನು ಬಿಟ್ಟು ಕೇವಲ ಆತ್ಮಕ್ಕೆ ಆನಂದವನ್ನು ಅನುಭವಿಸಲು ಸಾಧ್ಯವಾಗುವುದೆಂದು ಭಾವಿಸುವುದು ಅರ್ಥಶೂನ್ಯವಾಗಿದೆ. ಆ ವಿಚಾರವನ್ನು ಒಂದು ಕಥೆಯ ರೀತಿಯಲ್ಲಿ ಆನಂದಿಸಬಹುದು ಹೊರತು ವಿವೇಕವು ಅದನ್ನು ಸರಿಯೆಂದು ಸಮ್ಮತಿಸಲಾರದು. ಶರೀರಕ್ಕೆ ಅಲ್ಪ ಮಾತ್ರವೇ ಅಸ್ವಸ್ಥತೆಯುಂಟಾದರೆ ಆತ್ಮದ ಕರ್ಮಗಳಿಗೆ ಭಂಗವುಂಟಾಗುವುದನ್ನು ನಾವು ಕಾಣುತ್ತೇವಷ್ಟೆ. ಹಾಗಿರುವಾಗ, ಶರೀರದಿಂದ ಸಂಪೂರ್ಣ ಬೇರ್ಪಟ್ಟಿರುವ ಆತ್ಮ ಪರಿಪೂರ್ಣ ಹಾಗೂ ಸ್ವಸ್ಥ ಸ್ಥಿತಿಯಲ್ಲಿ ಇರುವುದೆಂದು ಭಾವಿಸುವುದು ಹೇಗೆ? ಆತ್ಮದ ಆರೋಗ್ಯ ಸ್ಥಿತಿಗೆ ಶರೀರದ ಆರೋಗ್ಯ ಅತ್ಯಗತ್ಯವೆಂಬುದು ನಮ್ಮ ಅನುಭವವಲ್ಲವೇ? ಮನುಷ್ಯನು ವೃದ್ಧಾಪ್ಯವನ್ನು ಪಡೆಯುವಾಗ ಅವನ ಆತ್ಮಕ್ಕೆ ಸಹ ಮುದಿತನ ಮತ್ತು ಬಲಹೀನತೆ ಬಾಧಿಸುತ್ತದೆ. ಈ ವೃದ್ಧಾಪ್ಯವು ಅವನ ಜ್ಞಾನ ಸಂಪತ್ತನ್ನು

ಅಪಹರಿಸುತ್ತದೆ. ಈ ಸ್ಥಿತಿಯ ಕುರಿತು ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

لِكَيْلَا يَعْلَمَ مِنۢ بَعْدِ عِلْمٍ شَيْـًٔا

ಮನುಷ್ಯನು ಅತಿ ವೃದ್ಧಾಪ್ಯವನ್ನು ಪಡೆಯುವಾಗ ಕಲಿತದ್ದೆಲ್ಲ ಮರೆತು ಏನೂ ತಿಳಿಯದವನ ಹಾಗೆ ಆಗುತ್ತಾನೆ. **(22:6)**

ಮೇಲೆ ವಿವರಿಸಲಾದ ಈ ದೃಷ್ಟಾಂತಗಳಿಂದ, ದೇಹದಿಂದ ಬೇರ್ಪಟ್ಟು ಹೋಗುವ ಆತ್ಮ ಯಾವುದಕ್ಕೂ ಶಕ್ತವಾಗುವುದಿಲ್ಲವೆಂದು ಸಾಬೀತಾಗುತ್ತದೆ. ಈ ವಿಷಯದ ಕುರಿತಾದ ಚಿಂತನೆ ಯಥಾರ್ಥ ತತ್ವವನ್ನು ಗ್ರಹಿಸುವುದಕ್ಕೆ ಸಹಾಯಕವಾಗುವುದು. ಆತ್ಮಕ್ಕೆ ದೇಹದ ಹೊರತಾಗಿ ಶಕ್ತಿಯುಂಟೆಂದಾದರೆ, ಅದಕ್ಕೆ ನಶ್ವರ ಶರೀರದೊಡನೆ ಸಂಬಂಧವೇರ್ಪಡಿಸಿದ ದೇವನ ಕೃತ್ಯ ನಿರರ್ಥಕವಾಗುವುದು. ಮನುಷ್ಯನು ಅಪರಿಮಿತವಾದ ಔನ್ನತ್ಯಕ್ಕೆ ಏರಿಹೋಗಲಿಕ್ಕಿರುವ ಸೃಷ್ಟಿಯಾಗಿದ್ದಾನೆ. ಅವನಿಗೆ ಅಲ್ಪಾವಧಿಯ ಐಹಿಕ ಜೀವಿತದ ಅಭಿವೃದ್ಧಿಗಳನ್ನು ಶರೀರದ ಸಹಾಯವಿಲ್ಲದೆ ಗಳಿಸಲು ಅಸಾಧ್ಯವಾದ ಸ್ಥಿತಿಯಲ್ಲಿ ಪರಲೋಕದ ಅನಂತವೂ ಅಪಾರವೂ ಆದ ಅಭಿವೃದ್ಧಿಯನ್ನು ಒಂದು ದೇಹದ ಸಂಬಂಧವಿಲ್ಲದೆಯೇ ಗಳಿಸಬಹುದೆಂದು ಭಾವಿಸುವುದು ಹೇಗೆ?

ಸಂಕ್ಷಿಪ್ತವಾಗಿ, ಇಸ್ಲಾಂ ಧರ್ಮ ತತ್ವ ಪ್ರಕಾರ ಆತ್ಮಕ್ಕೆ ಅದರ ಪರಿಪೂರ್ಣತೆಯನ್ನು ಪಡೆಯಲು ದೇಹದ ಸಂಬಂಧ ಅನಿವಾರ್ಯವೆಂದು ಮೇಲಿನ ವಿವರಣೆಗಳಿಂದ ಸ್ಪಷ್ಟವಾಗುತ್ತದೆ. ಮರಣದೊಂದಿಗೆ ನಶ್ವರವಾದ ಈ ಶರೀರ ಆತ್ಮದಿಂದ ಬೇರ್ಪಡುವುದಷ್ಟೆ. ಆದರೆ ಪ್ರತಿಯೊಂದು ಆತ್ಮಕ್ಕೂ ಅದರ ಕರ್ಮಫಲವನ್ನು ಅನುಭವಿಸಲಿಕ್ಕೋಸ್ಕರ ಮಧ್ಯಘಟ್ಟವಾದ 'ಬರ್‌ಝಖ್'ನಲ್ಲಿ ಒಂದು ತಾತ್ಕಾಲಿಕ ದೇಹ ನೀಡಲಾಗುವುದು. ಅದು ಈ ಶರೀರದಂತೆ ಇರಲಾರದು. ಅದು ಕರ್ಮಗಳ ಸ್ಥಿತಿಗನುಸಾರವಾಗಿ ರೂಪುಗೊಳ್ಳುವ ಪ್ರಕಾಶಪೂರ್ಣವಾದ ಅಥವಾ ಅಂಧಕಾರಮಯವಾದ ದೇಹವಾಗಿರಬಹುದು. ಹೀಗೆ ಮನುಷ್ಯನ ಕರ್ಮ ಈ ಘಟ್ಟದಲ್ಲಿ ಆತ್ಮಕ್ಕೆ ದೇಹವಾಗುತ್ತದೆ. ಅದು ಸತ್ಕರ್ಮದ ಪ್ರಕಾಶದಿಂದ ಅಥವಾ ದುಷ್ಕರ್ಮದ ಅಂಧಕಾರದಿಂದ ರೂಪುಗೊಳ್ಳುತ್ತದೆ. ಇದು ಅತೀವ ಗಹನವಾದ ತತ್ವರಹಸ್ಯವಾಗಿದ್ದರೂ ವಿವೇಕವಿರುದ್ಧವಲ್ಲ. ಪರಿಪೂರ್ಣತೆಯನ್ನು ಪಡೆದ ಭಕ್ತನಿಗೆ ತನ್ನ ಸ್ಥೂಲ ಶರೀರದಿಂದ ಭಿನ್ನವಾದ ಪ್ರಕಾಶಮಾನವಾದ ಒಂದು ಶರೀರ ರೂಪುಗೊಳ್ಳುವುದಾಗಿ ಐಹಿಕ ಜೀವಿತದಲ್ಲೇ ಅನುಭವವಾಗುತ್ತದೆ. ಕರ್ಮಗಳ ಫಲವಾಗಿ ಮರಣಾನಂತರ ಮನುಷ್ಯಾತ್ಮಕ್ಕೆ ಲಭಿಸುವ ತೇಜೋಮಯವಾದ ದೇಹಕ್ಕೆ

ಸಂಬಂಧಿಸಿದ ಅನೇಕ ದೃಷ್ಟಾಂತಗಳು ಭಕ್ತರ ಆತ್ಮದರ್ಶನಗಳಲ್ಲಿ ಗೋಚರವಾಗುತ್ತವೆ. ಸಾಮಾನ್ಯ ಬುದ್ಧಿಯವರಿಗೆ ಈ ವಿಷಯವನ್ನು ಗ್ರಹಿಸುವುದು ಪ್ರಯಾಸಕರವಾಗಬಹುದು. ಆದರೆ ಆಧ್ಯಾತ್ಮ ದರ್ಶನಸಿದ್ದಿಯ ಭಾಗ್ಯ ಗಳಿಸಿದವರು ಕರ್ಮಗಳ ಕಾರಣದಿಂದ ತಯಾರಾಗುವ ಸೂಕ್ಷ್ಮ ದೇಹದ ಸತ್ತೆಯನ್ನು ಅಸಂಭವವೆಂದು ಭಾವಿಸಲಾರರು. ಹಾಗೆಯೇ ಅದರ ಕುರಿತಾದ ವಿವರಣೆಯನ್ನು ಆಶ್ಚರ್ಯದಿಂದ ನೋಡಲಾರರು. ಬದಲಾಗಿ, ಅವರು ಈ ವಿವರಣೆಯನ್ನು ಅರ್ಥಮಾಡಿಕೊಂಡು ಆನಂದಾನುಭೂತಿ ಪಡೆಯುವರು.

ಒಟ್ಟಿನಲ್ಲಿ, ಕರ್ಮಗತಿಯನುಸರಿಸಿ ಲಭಿಸುವ ಈ ಸೂಕ್ಷ್ಮ ದೇಹ 'ಬರ್‌ಸಖ್' ಘಟ್ಟದಲ್ಲಿ ಒಳಿತು – ಕೆಡುಕುಗಳ ಪ್ರತಿಫಲಾನುಭವಕ್ಕೆ ಪಾತ್ರವಾಗುತ್ತದೆ. ಈ ವಿಷಯದಲ್ಲಿ ನಾನು ಅನುಭವಸಿದ್ಧಿಯನ್ನು ಪಡೆದವನಾಗಿದ್ದೇನೆ. ಜಾಗ್ರತಾವಸ್ಥೆಯಲ್ಲಿ ನನಗುಂಟಾದ ಆಧ್ಯಾತ್ಮಿಕ ದರ್ಶನಗಳಲ್ಲಿ ಮೃತಪಟ್ಟವರ ಆತ್ಮಗಳನ್ನು ಹಲವು ಬಾರಿ ನಾನು ಕಂಡಿದ್ದೇನೆ. ಅಧರ್ಮಿಗಳೂ ದುರ್ಮಾರ್ಗಿಗಳೂ ಆದ ಕೆಲವರನ್ನು ಧೂಮನಿರ್ಮಿತವೆಂದು ತೋರುವ ಅಂಧಕಾರಮಯವಾದ ಶರೀರದಿಂದ ಕೂಡಿದವರಾಗಿ ಕಂಡಿದ್ದೇನೆ. ಸಂಕ್ಷಿಪ್ತವಾಗಿ, ಈ ಆಧ್ಯಾತ್ಮ ವಿಚಾರ ನನಗೆ ಸುಪರಿಚಿತ. ಹಾಗೆ, ಸರ್ವಜ್ಞನಾದ ದೇವನು ನುಡಿದಂತೆ, ಮರಣಾನಂತರ ಪ್ರತಿಯೊಂದು ಆತ್ಮಕ್ಕೆ ತೇಜಪೂರ್ಣ ಯಾ ಅಂಧಕಾರಮಯವಾದ ದೇಹ ನೀಡಲಾಗುವುದು ಎಂಬ ವಿಚಾರವನ್ನು ನಾನು ಬಲಯುತವಾಗಿ ಹೇಳುತ್ತೇನೆ. ಅತಿ ಗಹನವಾದ ಈ ಗೂಢಾರ್ಥಕ ತತ್ವವನ್ನು ಕೇವಲ ಬುದ್ಧಿಯಿಂದ ಮಾತ್ರ ರುಜುಪಡಿಸಲು ಪ್ರಯತ್ನಿಸುವುದು ಸಮಂಜಸವಲ್ಲ. ಒಂದು ವಸ್ತುವನ್ನು ನೋಡುವ ಕಣ್ಣಿನಿಂದ ಅದರ ರುಚಿ ತಿಳಿಯಲು ಅಸಾಧ್ಯವಾದ ರೀತಿಯಲ್ಲೇ ರುಚಿ ತಿಳಿಯುವ ನಾಲಗೆಯಿಂದ ವಸ್ತುವನ್ನು ಕಾಣಲು ಸಹ ಅಸಾಧ್ಯವಷ್ಟೆ. ಅದೇ ಪ್ರಕಾರ, ಆಧ್ಯಾತ್ಮ ದರ್ಶನದಿಂದ ಸಿದ್ಧಿಸುವ ಪರಲೋಕ ಜ್ಞಾನ ಕೇವಲ ಬುದ್ಧಿಯಿಂದ ಸಿದ್ಧಿಸಲಿಕ್ಕಿಲ್ಲ. ಈ ಲೋಕದಲ್ಲಿ ಅಜ್ಞಾತ ಸಂಗತಿಗಳನ್ನು ತಿಳಿಯಲಿಕ್ಕೆ ವಿಭಿನ್ನ ಮಾರ್ಗಗಳನ್ನು ದೇವನು ನಿರ್ದೇಶಿಸಿದ್ದಾನೆ. ಆದ್ದರಿಂದ ಯಾವುದೇ ಸಂಗತಿಯನ್ನು ಅದರ ನಿಶ್ಚಿತ ಮಾರ್ಗದಲ್ಲಿ ಅನ್ವೇಷಿಸಿದರೆ ಮಾತ್ರ ಅದು ಪ್ರಾಪ್ತವಾಗುವುದು.

ದೇವನು ತನ್ನ ಪವಿತ್ರ ಗ್ರಂಥದಲ್ಲಿ, ದುಷ್ಕರ್ಮಿಗಳನ್ನು ಮತ್ತು ದುರ್ಮಾರ್ಗಿಗಳನ್ನು ಮೃತಪ್ರಾಯರೆಂದೂ ಸದ್ಧರ್ಮಿಗಳನ್ನು ಜೀವಂತರೆಂದೂ ಬಣ್ಣಿಸಿರುವುದನ್ನು ಕಾಣಬಹುದು. ಈ ವರ್ಣನೆಯಲ್ಲಿ ಒಂದು ರಹಸ್ಯ ತತ್ವ

ಅಂತರ್ಲೀನವಾಗಿದೆ. ದೈವಿಕ ಕಾರ್ಯದಲ್ಲಿ ಅಲಕ್ಷ್ಯರಾಗಿದ್ದುಕೊಂಡು ಜೀವಿಸುವವರ ಪ್ರಧಾನ ಆವಶ್ಯಕತೆಗಳಾದ ತಿನ್ನುವುದು, ಕುಡಿಯುವುದು, ಭೋಗಿಸುವುದು ಎಂಬಿವುಗಳು ಅವರ ಮರಣದೊಂದಿಗೆ ಅಂತ್ಯಗೊಳ್ಳುತ್ತವೆ. ಆಧ್ಯಾತ್ಮಿಕ ಆಹಾರಗಳಲ್ಲಿ ಅವರಿಗೆ ಯಾವುದೇ ಪಾಲು ಇರುವುದಿಲ್ಲ. ಆದ್ದರಿಂದ ಅವರು ಯಥಾರ್ಥದಲ್ಲಿ ಮೃತಪ್ರಾಯರೇ ಆಗಿದ್ದಾರೆ. ಅವರನ್ನು ಪುನರುಜ್ಜೀವನಗೊಳಿಸುವುದು ಶಿಕ್ಷೆಯನ್ನು ಅನುಭವಿಸಲಿಕ್ಕೆ ಮಾತ್ರವಾಗಿದೆ. ಈ ವಿಷಯವನ್ನು ಸೂಚಿಸುತ್ತಾ ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

مَنْ يَّأْتِ رَبَّهٗ مُجْرِمًا فَاِنَّ لَهٗ جَهَنَّمَ ؕ لَا يَمُوْتُ فِيْهَا وَلَا يَحْيٰى

ಯಾವೊಬ್ಬನು ತನ್ನ ದೇವನ ಬಳಿಗೆ ಪಾಪಿಯಾಗಿ ಬರುವನೋ ಅವನ ವಾಸಸ್ಥಾನ ನರಕವಾಗಿದೆ. ಅವನು ಅದರಲ್ಲಿ ಸಾಯಲಿಕ್ಕೂ ಇಲ್ಲ ಬದುಕಲಿಕ್ಕೂ ಇಲ್ಲ. **(20:75)**

ಆದರೆ ದೇವನ ಪ್ರಿಯ ಜನರು ಶಾರೀರಿಕ ಮರಣದಿಂದ ಯಥಾರ್ಥದಲ್ಲಿ ಮೃತಪಡುವುದಿಲ್ಲ. ಏಕೆಂದರೆ, ಅವರ ಜೀವನಾವಶ್ಯಕಗಳಾದ ಆಹಾರ ಪಾನೀಯಗಳು ಅವರ ಜೊತೆಗಿರುತ್ತವೆ.

ಮೂರನೆಯ ಲೋಕ 'ಪುನರುತ್ಥಾನ ಲೋಕ' ಎಂದು ಕರೆಯಲ್ಪಡುವ ಸ್ಥಾನವಾಗಿದೆ. ಈ ಘಟ್ಟದಲ್ಲಿ ಪರಿಶುದ್ಧ ಯಾ ಅಶುದ್ಧ, ಸದಾಚಾರಿ ಯಾ ದುರಾಚಾರಿಯಾದ ಪ್ರತಿಯೊಂದು ಆತ್ಮಕ್ಕೆ ದೃಗ್ಗೋಚರ ದೇಹ ನೀಡಲ್ಪಡುವುದು. ಇದು ದೇವಮಹಾತ್ಮೆಯ ಸಂಪೂರ್ಣವಾದ ಪ್ರತ್ಯಕ್ಷತೆಗೆ ನಿರ್ಣಯಿಸಲ್ಪಟ್ಟ ಘಟ್ಟವಾಗಿದೆ. ಆ ದಿನದಲ್ಲಿ ಪ್ರತಿಯೊಬ್ಬ ಮನುಷ್ಯನು ದೇವಸತ್ತೆಯ ಕುರಿತು ಪೂರ್ಣವಾಗಿ ತಿಳಿಯುತ್ತಾನೆ ಮತ್ತು ಅವನ ಕರ್ಮಗಳಿಗೆ ತಕ್ಕ ಪೂರ್ಣವಾದ ಪ್ರತಿಫಲವನ್ನು ಪ್ರತ್ಯಕ್ಷವಾಗಿ ಅನುಭವಿಸುತ್ತಾನೆ. ಇದು ಹೇಗೆ ಸಂಭವಿಸುವುದೆಂದು ಯಾರೂ ವಿಸ್ಮಯ ಪಡಬೇಕಾಗಿಲ್ಲ. ಸರ್ವಶಕ್ತನಾದ ದೇವನಿಗೆ ಅಸಾಧ್ಯವಾದುದು ಏನೂ ಇಲ್ಲ. ಅವನು ಇಚ್ಛಿಸುವುದನ್ನೆಲ್ಲ ಮಾಡಲು ಶಕ್ತನು. ಅವನು ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳುತ್ತಾನೆ:

اَوَلَمْ يَرَ الْاِنْسَانُ اَنَّا خَلَقْنٰهُ مِنْ نُّطْفَةٍ فَاِذَا هُوَ خَصِيْمٌ مُّبِيْنٌ - وَضَرَبَ لَنَا مَثَلًا وَّنَسِىَ
خَلْقَهٗ ؕ قَالَ مَنْ يُّحْىِ الْعِظَامَ وَهِىَ رَمِيْمٌ - قُلْ يُحْيِيْهَا الَّذِىْٓ اَنْشَاَهَآ اَوَّلَ مَرَّةٍ ؕ وَهُوَ بِكُلِّ

خَلْقٍ عَلِيمٌ - أَوَلَيْسَ الَّذِي خَلَقَ السَّمٰوٰتِ وَالْأَرْضَ بِقٰدِرٍ عَلٰٓى أَنْ يَّخْلُقَ مِثْلَهُمْ بَلٰى
وَهُوَ الْخَلّٰقُ الْعَلِيمُ - إِنَّمَآ أَمْرُهٗٓ إِذَآ أَرَادَ شَيْـًٔا أَنْ يَّقُولَ لَهٗ كُنْ فَيَكُونُ - فَسُبْحٰنَ الَّذِي
بِيَدِهٖ مَلَكُوتُ كُلِّ شَيْءٍ وَّإِلَيْهِ تُرْجَعُونَ

ಮನುಷ್ಯನು ನೋಡುವುದಿಲ್ಲವೇ? ನಾವು ಅವನನ್ನು ಒಂದು ಬಿಂದು ವೀರ್ಯಾಣುವಿನಿಂದ ಸೃಷ್ಟಿಸಿದೆವು; ಅದೋ ಅವನು ದೊಡ್ಡ ಜಗಳಗಂಟಿಯಾಗಿ ಬಿಟ್ಟಿದ್ದಾನೆ! ಅವನು ನಮಗೆ ಸಂಬಂಧಿಸಿ ಮಿಥ್ಯಾ ಸಂವಾದ ನಡೆಸಿ ತನ್ನ ಸ್ವಂತ ಹುಟ್ಟನ್ನು ಮರೆತುಬಿಟ್ಟಿರುವನು. ಅಸ್ಥಿಗಳು ಕೂಡ ಜೀರ್ಣಿಸಿ ನಶಿಸಿರುವಾಗ ಮನುಷ್ಯನನ್ನು ಪುನರುಜ್ಜೀವನಗೊಳಿಸಲು ಯಾರಿಗೆ ಶಕ್ತಿಯಿದೆಯೆಂದು ಅವನು ಕೇಳುತ್ತಾನೆ. ಅವನೊಡನೆ ಹೇಳು: ಅವುಗಳನ್ನು ಮೊದಲು ಯಾರು ಉಂಟುಮಾಡಿದನೋ ಅವನೇ ಅವುಗಳಿಗೆ ಜೀವ ನೀಡುವನು. ಅವನು ಎಲ್ಲ ವಿಧಾನದಲ್ಲಿ ಸೃಷ್ಟಿಸಬಲ್ಲವನಾಗಿದ್ದಾನೆ. ಆಕಾಶ ಮಂಡಲಗಳನ್ನೂ ಭೂಮಿಯನ್ನೂ ಸೃಷ್ಟಿಸಿದವನು ಇವರಂಥ ಸೃಷ್ಟಿಗಳನ್ನು ಸೃಷ್ಟಿಸಲು ಶಕ್ತನಲ್ಲವೇ? ಹೌದು, ದಿಟವಾಗಿಯೂ ಅವನು ಸರ್ವಜ್ಞನಾದ ಸೃಷ್ಟಿಕರ್ತನಾಗಿದ್ದಾನೆ. ಒಂದು ವಸ್ತು ಉಂಟಾಗಬೇಕೆಂದು ಅವನು ಇಚ್ಛಿಸುವಾಗ 'ಉಂಟಾಗು' ಎಂದು ಮಾತ್ರ ಹೇಳುತ್ತಾನೆ; ಆಗ ಅದು ಹುಟ್ಟುತ್ತದೆ – ಇದು ಅವನ ಆಜ್ಞಾವೈಶಿಷ್ಟ್ಯ. ಒಟ್ಟಾರೆ, ಸರ್ವ ವಸ್ತುಗಳ ಅಧಿಪತಿಯೂ ಸಕಲರೂ ಹಿಂತೆರಳಬೇಕಾದ ಕೇಂದ್ರ ಸ್ಥಾನವೂ ಆದ ಅವನು ಪರಿಶುದ್ಧನು. **(36:78–80, 82–84)**

ಈ ದೇವ ವಾಕ್ಯಗಳು ನಮಗೆ ಬೋಧಿಸುವುದೇನೆಂದರೆ, ದೇವನಿಗೆ ಅಸಾಧ್ಯವಾದುದು ಏನೂ ಇಲ್ಲ. ಕ್ಷುಲ್ಲಕವಾದ ಬೀಜಾಣುವಿನಿಂದ ಒಮ್ಮೆ ಮನುಷ್ಯನನ್ನು ಹುಟ್ಟಿಸಲು ಶಕ್ತನಾದವನಿಗೆ ಮತ್ತೊಮ್ಮೆ ಅವನನ್ನು ಪುನರುಜ್ಜೀವನಗೊಳಿಸಲು ಸಾಧ್ಯವಿಲ್ಲವೇ?

ಮೂರನೆಯ ಘಟ್ಟವಾದ ಪುನರುತ್ಥಾನ ಆರಂಭವಾಗಲು ಒಂದು ದೀರ್ಘಕಾಲ ಕಳೆಯಬೇಕಾಗಿರುವುದರಿಂದ ಅಲ್ಲಿವರೆಗೆ ಇರುವ 'ಬರ್‌ಸಖ್' ಘಟ್ಟ ಸಜ್ಜನರಿಗೂ ದುರ್ಜನರಿಗೂ ಸಮಾನ ರೀತಿಯಲ್ಲಿ ನಿರುಪಯೋಗದ ಒಂದು ಬಂಧನ ಕೊಠಡಿಯಾಗುವುದಿಲ್ಲವೇ? ಎಂಬ ಒಂದು ಪ್ರಶ್ನೆ ಇಲ್ಲಿ ಉದ್ಭವಿಸಬಹುದು. ಇದಕ್ಕೆ ಸಂಕ್ಷಿಪ್ತವಾಗಿ ಉತ್ತರ ಹೇಳಬಹುದು. ಬರ್‌ಸಖ್ ಘಟ್ಟವನ್ನು ಒಂದು ಬಂಧನ ಸ್ಥಳವೆಂದು ಭಾವಿಸುವುದು ಸರಿಯಲ್ಲ. ಈ ತಪ್ಪು ಕಲ್ಪನೆ ಅಜ್ಞಾನದಿಂದ

ಉಂಟಾದುದಾಗಿದೆ. ದೇವಗ್ರಂಥದಲ್ಲಿ ಸದಾಚಾರಿಗೂ ದುರಾಚಾರಿಗೂ ಪ್ರತಿಫಲವಾಗಿ ಎರಡು ಸ್ಥಾನಗಳನ್ನು ನೀಡಲಾಗುವುದೆಂದು ಪ್ರಸ್ತಾಪಿಸಲಾಗಿದೆ. ಅವುಗಳಲ್ಲೊಂದು 'ಬರ್‌ಸಖ್' ಎಂಬ ಮಧ್ಯಘಟ್ಟವಾಗಿದೆ. ಇಲ್ಲೇ ಪ್ರತಿಯೊಬ್ಬ ಮನುಷ್ಯನು ತನ್ನ ಒಳ್ಳೆಯ ಅಥವಾ ಕೆಟ್ಟ ಕರ್ಮಕ್ಕನುಗುಣವಾದ ರಕ್ಷೆ ಅಥವಾ ಶಿಕ್ಷೆಯನ್ನು, ಪುನರುತ್ಥಾನ ಘಟ್ಟದಷ್ಟು ಪ್ರತ್ಯಕ್ಷ ರೀತಿಯಲ್ಲಿ ಅಲ್ಲವಾದರೂ, ಅನುಭವಿಸಲು ತೊಡಗುತ್ತಾನೆ. ಅಂದರೆ, ಮೃತಪಟ್ಟ ಕೂಡಲೇ ದುಷ್ಕರ್ಮಿಗಳು ನರಕ ಶಿಕ್ಷೆಯನ್ನೂ ಸತ್ಕರ್ಮಿಗಳು ಸ್ವರ್ಗ ಸುಖವನ್ನೂ ಅನುಭವಿಸತೊಡಗುತ್ತಾರೆ. ಹೀಗೆ, ಮರಣಾನಂತರ ಪ್ರತಿಯೊಬ್ಬನು ಕೂಡಲೇ ಕರ್ಮಫಲವನ್ನು ಅನುಭವಿಸಲು ತೊಡಗುವನೆಂದು ಸೂಚಿಸುವ ವಾಕ್ಯಗಳು ಪವಿತ್ರ ಖುರ್‌ಆನಿನಲ್ಲಿ ಅನೇಕ ಇವೆ. ಓರ್ವ ಸತ್ಕರ್ಮಿಯ ಕುರಿತು ಅದು ಹೀಗೆ ಹೇಳುತ್ತದೆ:

قِيْلَ ادْخُلِ الْجَنَّةَ

ನೀನು ಸ್ವರ್ಗದಲ್ಲಿ ಪ್ರವೇಶಿಸು ಎಂದು ಅವನೊಡನೆ ಆಜ್ಞಾಪಿಸಲಾಯಿತು. **(36:27)**

ಇದೇ ಪ್ರಕಾರ ಒಬ್ಬ ದುಷ್ಕರ್ಮಿಯ ಕುರಿತು ಹೀಗೆ ಹೇಳುತ್ತದೆ:

فَرَاٰهُ فِيْ سَوَآءِ الْجَحِيْمِ

(ಎಂದರೆ, ಸ್ವರ್ಗೀಯನಾದ ಒಬ್ಬ ಸತ್ಕರ್ಮಿಗೆ ನರಕವಾಸಿಯಾದ ಒಬ್ಬ ಸ್ನೇಹಿತನಿದ್ದನು. ಇಬ್ಬರು ಮರಣ ಹೊಂದಿದಾಗ ಸ್ವರ್ಗವಾಸಿಯಾದವನಿಗೆ ತನ್ನ ಗೆಳೆಯ ಎಲ್ಲಿದ್ದಾನೆಂದು ತಿಳಿಯಲು ಕಾತರವಾಯಿತು. ನೋಡಿದಾಗ,) "ಅವನನ್ನು ನರಕದ ಮಧ್ಯದಲ್ಲಿ ಕಂಡನು." **(37:56)**

ಹೀಗೆ ರಕ್ಷಾ – ಶಿಕ್ಷಾ ಅನುಭವ ಮರಣದ ಬಳಿಕ ವಿಳಂಬವಿಲ್ಲದೆ ಆರಂಭವಾಗುತ್ತದೆ. ಅಂದರೆ, ನರಕಕ್ಕೆ ಅರ್ಹನಾದವನು ಕೂಡಲೇ ನರಕದಲ್ಲೂ ಸ್ವರ್ಗದ ಹಕ್ಕುದಾರ ಸ್ವರ್ಗದಲ್ಲೂ ಪ್ರವೇಶಿಸುತ್ತಾನೆ. ಆದರೆ, ಇದರ ನಂತರ ದೇವನ ಪರಿಪೂರ್ಣ ಮಹಾತ್ಮೆ ಪ್ರಕಟವಾಗುವ ಒಂದು ಪ್ರತ್ಯೇಕ ಕಾಲಘಟ್ಟವಿದೆ. ಪೂರ್ಣ ರೀತಿಯ ಈ ಮಹತ್ವ ಪ್ರಕಟನೆ ಪುನರುತ್ಥಾನ ಘಟ್ಟದಲ್ಲಿ ಸಂಭವಿಸುವುದಾಗಿ ಅಪಾರ ಜ್ಞಾನಿಯಾದ ದೇವನು ಗೊತ್ತುಮಾಡಿದ್ದಾನೆ. ಅವನು ಮನುಷ್ಯನನ್ನು ಸೃಷ್ಟಿಸಿದ್ದು ತನ್ನ ಸೃಷ್ಟಿಕರ್ತತ್ವವು ಗ್ರಹಿಸಲ್ಪಡಲಿಕ್ಕಾಗಿದೆ. ನಂತರ ಅವನು ಸಕಲವನ್ನೂ ನಾಶಗೊಳಿಸುವುದು ತನ್ನ ಪರಮಾಧಿಕಾರ ಗುರುತಿಸಲ್ಪಡಲಿಕ್ಕಾಗಿದೆ. ಕೊನೆಗೆ ತಾನು

ಸರ್ವಶಕ್ತನೆಂದು ತಿಳಿಯಲ್ಪಡಲಿಕ್ಕಾಗಿ ಅವನು ಎಲ್ಲರಿಗೂ ಪೂರ್ಣ ಜೀವನ ನೀಡಿ ಅವರನ್ನು ಒಂದು ಸ್ಥಳದಲ್ಲಿ ಒಂದುಗೂಡಿಸುವನು.

ಮರಣಾನಂತರ ಜೀವಿತದ ಅವಸ್ಥೆಗಳ ಕುರಿತು ಪವಿತ್ರ ಖುರ್‌ಆನ್ ಪ್ರಸ್ತಾಪಿಸಿದ ಮೂರು ಗೂಢಾರ್ಥಕ ತತ್ವಗಳ ಪೈಕಿ ಒಂದನೆಯದನ್ನು ಇಲ್ಲಿ ವಿವರಿಸಲಾಯಿತು.

**ಎರಡನೆಯ ತತ್ವ,** ಐಹಿಕ ಜೀವಿತದಲ್ಲಿ ಆಧ್ಯಾತ್ಮಿಕವಾಗಿ ಸಿದ್ಧಿಸುವ ಸ್ಥಿತಿಗಳೆಲ್ಲ ಪರಲೋಕದಲ್ಲಿ ಬರ್‌ಸಖ್ ಎಂಬ ಮಧ್ಯಂತರ ಘಟ್ಟದಲ್ಲಾದರೂ ಪುನರುತ್ಥಾನ ಘಟ್ಟದಲ್ಲಾದರೂ ಸರಿ, ಪ್ರತ್ಯಕ್ಷ ರೂಪದಲ್ಲಿ ಗೋಚರಿಸುವುದೆಂದಾಗಿದೆ. ಪವಿತ್ರ ಖುರ್‌ಆನ್ ಒಂದೆಡೆ ಹೇಳುತ್ತದೆ:

مَنْ كَانَ فِيْ هٰذِهٖٓ اَعْمٰى فَهُوَ فِي الْاٰخِرَةِ اَعْمٰى وَاَضَلُّ سَبِيْلًا

ಯಾವನು ಇಹದಲ್ಲಿ ಅಂಧನಾಗಿರುವನೋ ಅವನು ಪರದಲ್ಲೂ ಅಂಧನಾಗುವನು.

**(17:73)**

ಬೇರೆ ಮಾತಿನಲ್ಲಿ ಹೇಳುವುದಾದರೆ, ಈ ಲೋಕದ ಅಧ್ಯಾತ್ಮ ಅಂಧತೆ ಪರಲೋಕದಲ್ಲಿ ಪ್ರತ್ಯಕ್ಷದಲ್ಲಿ ಅನುಭವಿಸುವಂತಾಗುವುದು. ಇನ್ನೊಂದೆಡೆಯಲ್ಲಿ ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

خُذُوْهُ فَغُلُّوْهُ - ثُمَّ الْجَحِيْمَ صَلُّوْهُ -

ثُمَّ فِيْ سِلْسِلَةٍ ذَرْعُهَا سَبْعُوْنَ ذِرَاعًا فَاسْلُكُوْهُ

ಅವನನ್ನು (ಆ ಪಾಪಿಯನ್ನು) ಹಿಡಿಯಿರಿ; ಅವನ ಕೊರಳಿಗೆ ಸಂಕೋಲೆ ತೊಡಿಸಿರಿ. ನಂತರ ಅವನನ್ನು ಉರಿಯುತ್ತಿರುವ ನರಕಾಗ್ನಿಗೆ ಎಸೆಯಿರಿ. ಮತ್ತೆ ಅವನನ್ನು ಎಪ್ಪತ್ತು ಮೊಳ ಉದ್ದವಿರುವ ಶೃಂಖಲೆಯಿಂದ ಬಂಧಿಸಿಡಿರಿ.

**(69:31–33)**

ಈ ವಾಕ್ಯಗಳು ವ್ಯಕ್ತಪಡಿಸುವುದೇನೆಂದರೆ, ಈ ಲೋಕದ ಆತ್ಮಕ್ಕೆ ಸಂಬಂಧಪಟ್ಟ ಯಾತನೆಗಳು ಪರಲೋಕದಲ್ಲಿ ಪ್ರತ್ಯಕ್ಷ ರೂಪದಲ್ಲಿ ಪ್ರಕಟಗೊಳ್ಳುವುವು. ಕೊರಳಿಗೆ ತೊಡಿಸುವುದಾಗಿ ಹೇಳಲಾಗಿರುವ ಸಂಕೋಲೆ ಮನುಷ್ಯನ ತಲೆಯನ್ನು ಭೂಮಿಯೆಡೆಗೆ ಬಗ್ಗಿಸುವ ಐಹಿಕ ಅಭಿಲಾಷೆಗಳನ್ನು ಸೂಚಿಸುತ್ತದೆ. ಈ ಇಚ್ಛೆಗಳೆಲ್ಲ ಪರಲೋಕದಲ್ಲಿ ಸಂಕೋಲೆಯ ರೂಪದಲ್ಲಿ ಅವನಿಗೆ ಗೋಚರಿಸುವುದು. ಈ ಲೋಕದ ಪೇಚಾಟಗಳೆಲ್ಲ

ಕಾಲುಗಳಲ್ಲಿ ಸಿಲುಕಿದ ಸಂಕೋಲೆಯಾಗಿ ಕಾಣುವುದು. ಲೌಕಿಕ ಅಭಿಲಾಷೆಗಳ ಕಾರಣದಿಂದ ಉಂಟಾಗುವ ಮನೋವ್ಯಥೆಯ ಬೆಂಕಿ ಪ್ರತ್ಯಕ್ಷದಲ್ಲಿ ಉರಿಯುವಂತೆ ತೋರುವುದು. ಅಧರ್ಮಿಯು ಐಹಿಕ ಜೀವಿತದಲ್ಲಿ ಇಂದ್ರಿಯಾಸಕ್ತಿಯಿಂದ ಕೂಡಿದ ಒಂದು ನರಕವನ್ನು ತನ್ನೊಳಗೆ ಇರಿಸಿಕೊಂಡಿರುತ್ತಾನೆ. ತನ್ನ ಆಶೆಗಳು ಈಡೇರದೆ ಇರುವಾಗ ಒಳಗಿನ ನರಕಾಗ್ನಿಯ ತಾಪ ಅವನಿಗೆ ಅನುಭವವಾಗುತ್ತದೆ. ಒಟ್ಟಾರೆ, ಐಹಿಕೇಚ್ಛೆಗಳು ಈಡೇರದೆ ಅವುಗಳಿಂದ ಅವನು ವಂಚಿತನಾಗಿ, ಸದಾ ಅವನಿಗೆ ನಿರಾಶೆಯುಂಟಾಗುವಾಗ ಅವನಿಗೆ ಅನುಭವವಾಗುವ ದುಃಖವನ್ನು ದೇವನು ಪ್ರತ್ಯಕ್ಷ ಅಗ್ನಿಯ ರೂಪದಲ್ಲಿ ತೋರಿಸುವನು. ಪವಿತ್ರ ಖುರ್‌ಆನ್ ಹೇಳುತ್ತದೆ:

وَحِيلَ بَيْنَهُمْ وَبَيْنَ مَا يَشْتَهُونَ

ಅವರಿಗೂ ಅವರ ಬಯಕೆಗಳಿಗೂ ಮಧ್ಯೆ ಒಂದು ತಡೆ ಇರುವುದು. **(34:55)**
ಅವರ ಶಿಕ್ಷೆಯ ಮೂಲ ಇದೇ ಆಗುವುದು.

"ಅವನನ್ನು ಎಪ್ಪತ್ತು ಮೊಳ ಉದ್ದವಿರುವ ಸಂಕೋಲೆಯಿಂದ ಬಂಧಿಸಿಡಿರಿ" ಎಂದು ಪಾಪಿಯಾದ ಮನುಷ್ಯನ ಕುರಿತು ಪವಿತ್ರ ಖುರ್‌ಆನ್ ಹೇಳಿದುದರಲ್ಲಿ ಒಂದು ತತ್ವ ರಹಸ್ಯ ಅಡಗಿದೆ. ಅಧರ್ಮಿ ಹೆಚ್ಚಾಗಿ ಎಪ್ಪತ್ತು ವಯಸ್ಸಿನ ವರೆಗೆ ಜೀವಿಸುವನು ಎಂದು ಈ ವಚನ ಸೂಚಿಸುತ್ತದೆ. ಕೆಲವೊಮ್ಮೆ ಬಾಲ್ಯಾವಸ್ಥೆ ಮತ್ತು ಮುಪ್ಪಿನ ಬಲಹೀನಾವಸ್ಥೆಯ ಹೊರತಾಗಿ ಎಪ್ಪತ್ತು ವರ್ಷಗಳ ದೀರ್ಘ ಜೀವಿತವನ್ನು ಪಾಪಿಷ್ಠನು ಈ ಲೋಕದಲ್ಲಿ ಪಡೆಯುತ್ತಾನೆ. ವಿವೇಕ ಬುದ್ಧಿ ಉಪಯೋಗಿಸಿ ಪರಿಶ್ರಮಪಟ್ಟು ಕೆಲಸಮಾಡಲು ಯೋಗ್ಯವಾದ ತನ್ನ ಆಯುಷ್ಕಾಲದ ಸುವರ್ಣ ಘಟ್ಟವಾದ ಈ ಎಪ್ಪತ್ತು ವರ್ಷಗಳನ್ನು ಅವನು ಪ್ರಪಂಚಾನುರಾಗದಲ್ಲಿ ಕಳೆಯುತ್ತಾನೆ. ಈ ಹೀನವಾದ ಪ್ರಾಪಂಚಿಕ ಬಂಧನದಿಂದ ವಿಮೋಚನೆ ಹೊಂದಲು ಶ್ರಮಿಸದೆ ಅವನು ಜೀವನ ನಡೆಸುವುದರಿಂದ, ಮೇಲಿನ ದೇವವಾಕ್ಯದಲ್ಲಿ ಹೇಳಿದಂತೆ, ಅವನ ಎಪ್ಪತ್ತು ವರ್ಷಕಾಲದ ಜೀವನ ಪರಲೋಕದಲ್ಲಿ ಎಪ್ಪತ್ತು ಮೊಳ ನೀಳವಿರುವ ಸಂಕೋಲೆಯಾಗಿ ಅವನನ್ನು ಸುತ್ತಿಕೊಳ್ಳುವುದು. ಸಂಕೋಲೆಯ ಒಂದೊಂದು ಮೊಳ ಉದ್ದವು ದುಷ್ಟ ಜೀವಿತ ಕಾಲದ ಒಂದೊಂದು ವರ್ಷ ಕಾಲವನ್ನು ಸೂಚಿಸುತ್ತದೆ. ಇಲ್ಲಿ ನೆನಪಿಟ್ಟುಕೊಳ್ಳಬೇಕಾದ ಮುಖ್ಯ ಅಂಶವೇನೆಂದರೆ, ದೇವನು ಯಾರಿಗೂ ಯಾವುದೇ ಬಗೆಯ ಸಂಕಷ್ಟವನ್ನು ನೀಡುವುದಿಲ್ಲ; ಬದಲಾಗಿ, ಮನುಷ್ಯನು ದುಷ್ಕರ್ಮಗಳ ಮೂಲಕ ಸಂಪಾದಿಸುವ ದೋಷಫಲಗಳನ್ನು ಮಾತ್ರವೇ ದೇವನು ಅವನ ಮುಂದೆ ಇರಿಸುತ್ತಾನೆ.

ಈ ದೈವಿಕ ನಿಯಮವನ್ನು ಸೂಚಿಸುತ್ತಾ ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

انْطَلِقُوْٓا اِلٰى ظِلٍّ ذِىْ ثَلٰثِ شُعَبٍ- لَّا ظَلِيْلٍ وَّلَا يُغْنِىْ مِنَ اللَّهَبِ

ಎಲೈ ದುರ್ಮಾರ್ಗಿಗಳೇ, ನಿಮಗೆ ನೆರಳನ್ನು ನೀಡದ, ಅಗ್ನಿಯ ತಾಪವನ್ನು ತಡೆಯಲು ಉಪಯುಕ್ತವಾಗದ ಮೂರು ಶಾಖೆಗಳ ಕೆಳಭಾಗಕ್ಕೆ ನಡೆಯಿರಿ.

**(77:31, 32)**

ಈ ವಾಕ್ಯದಲ್ಲಿ ಹೇಳಲಾದ 'ಮೂರು ಶಾಖೆಗಳು' ಎಂಬುದರ ತಾತ್ಪರ್ಯ ಹಿಂಸ್ರ ಸ್ವಭಾವ, ಕಿರಾತ ಸ್ವಭಾವ ಮತ್ತು ಭ್ರಾಮಕ ಸ್ವಭಾವಗಳಾಗಿವೆ. ಈ ಮೂರು ಸ್ವಭಾವಗಳನ್ನು ನಿಯಂತ್ರಿಸಿ ನೈತಿಕ ಗುಣಗಳನ್ನಾಗಿ ಪರಿವರ್ತಿಸದವರಿಗೆ ಅವು ನ್ಯಾಯ ವಿಚಾರಣೆ ದಿನದಲ್ಲಿ ಎಲೆಗಳಿಲ್ಲದ ಮೂರು ಶಾಖೆಗಳಂತೆ ಗೋಚರಿಸುವುವು. ಅವುಗಳಿಗೆ ಉಷ್ಣವನ್ನು ತಡೆಯಲು ಶಕ್ತಿಯಿಲ್ಲದುದರಿಂದ ಕೆಳಭಾಗದಲ್ಲಿ ನಿಲ್ಲುವವರು ತಾಪದಿಂದ ಸಂಕಷ್ಟಪಡುವರು. ಇದೇ ದೈವಿಕ ನಿಯಮವನ್ನು ಸ್ಪಷ್ಟಪಡಿಸಲಿಕ್ಕಾಗಿ ಪವಿತ್ರ ಖುರ್‌ಆನ್ ಸ್ವರ್ಗವಾಸಿಗಳ ಕುರಿತು ಹೀಗೆ ಹೇಳುತ್ತದೆ:

يَوْمَ تَرَى الْمُؤْمِنِيْنَ وَالْمُؤْمِنٰتِ يَسْعٰى نُوْرُهُمْ بَيْنَ اَيْدِيْهِمْ وَبِاَيْمَانِهِمْ

ಸತ್ಯವಿಶ್ವಾಸಿಗಳನ್ನೂ ಸತ್ಯವಿಶ್ವಾಸಿನಿಯರನ್ನೂ ಅವರಿಗೆ ಐಹಿಕ ಜೀವಿತದಲ್ಲಿ ಗುಪ್ತವಾಗಿರುವ ಪ್ರಕಾಶ ಆ ದಿನದಲ್ಲಿ ಅವನ ಮುಂಭಾಗದಲ್ಲೂ ಬಲಭಾಗದಲ್ಲೂ ಪ್ರವಹಿಸುತ್ತಿರುವ ಸ್ಥಿತಿಯಲ್ಲಿ ನೀನು ಕಾಣುವಿ. **(57:13)**

ಇನ್ನೊಂದೆಡೆಯಲ್ಲಿ ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

يَوْمَ تَبْيَضُّ وُجُوْهٌ وَّتَسْوَدُّ وُجُوْهٌ

ಆ ದಿನದಂದು ಕೆಲವು ಮುಖಗಳು ಶುಭ್ರವಾಗಿ ಪ್ರಕಾಶಮಾನವಾಗಿಯೂ ಕೆಲವು ಮುಖಗಳು ಕಪ್ಪಾಗಿ ಅಂಧಕಾರಮಯವಾಗಿಯೂ ಇರುವುವು.**(3:107)**

ಮತ್ತೊಂದೆಡೆಯಲ್ಲಿ ಹೀಗೆ ಹೇಳಲಾಗಿದೆ:

مَثَلُ الْجَنَّةِ الَّتِىْ وُعِدَ الْمُتَّقُوْنَ ۭ فِيْهَآ اَنْهٰرٌ مِّنْ مَّآءٍ غَيْرِ اٰسِنٍ ۚ وَاَنْهٰرٌ مِّنْ لَّبَنٍ لَّمْ يَتَغَيَّرْ طَعْمُهٗ ۚ وَاَنْهٰرٌ مِّنْ خَمْرٍ لَّذَّةٍ لِّلشّٰرِبِيْنَ ۚ وَاَنْهٰرٌ مِّنْ عَسَلٍ مُّصَفًّى

ಭಕ್ತಜನರಿಗೆ ವಾಗ್ದಾನ ಮಾಡಲ್ಪಟ್ಟ ಸ್ವರ್ಗವು ಎಂದಿಗೂ ಮಲಿನವಾಗದ

ಶುದ್ಧ ನದಿಗಳಿಂದಲೂ ರುಚಿ ವ್ಯತ್ಯಾಸವಾಗದ ಹಾಲಿನ ನದಿಗಳಿಂದಲೂ ಕುಡಿಯುವವರಿಗೆ ಆನಂದವನ್ನೀಯುವ ಅಮಲು ರಹಿತ ಮದ್ಯನದಿಗಳಿಂದಲೂ ನಿರ್ಮಲವೂ ನಿರ್ದೋಷಕರವೂ ಆದ ಜೇನಿನ ನದಿಗಳಿಂದಲೂ ಕೂಡಿದ ತೋಟದಂತೆ ಇರುವುದು. **(47:16)**

ಈ ವಾಕ್ಯದಿಂದ, ಸ್ವರ್ಗವೆಂದರೆ ಮೇಲೆ ಹೇಳಿದ ಸುಖ ಸಾಧನಗಳಿಂದ ಕೂಡಿದ ಅನಂತ ಪ್ರವಾಹಗಳ ಒಂದು ಪ್ರತಿಫಲನವೆಂದು ತಿಳಿದುಬರುತ್ತದೆ. ಭಕ್ತನಾದ ಮನುಷ್ಯನು ಐಹಿಕ ಜೀವಿತದಲ್ಲಿ ಆಧ್ಯಾತ್ಮಿಕವಾಗಿ ಕುಡಿಯುವ ಜೀವಜಲ ಪಾರತ್ರಿಕ ಜೀವಿತದಲ್ಲಿ ಸ್ವಚ್ಛ ಜಲವಾಹಿನಿಯಾಗಿ ರೂಪುಗೊಳ್ಳುತ್ತದೆ. ಈ ಲೋಕದಲ್ಲಿ ಅವನು ಒಂದು ಶಿಶುವಿನಂತೆ ಆಧ್ಯಾತ್ಮಿಕವಾಗಿ ಯಾವ ಹಾಲಿನಿಂದ ಪೋಷಿಸಲ್ಪಟ್ಟಿದ್ದನೋ ಆ ಆಧ್ಯಾತ್ಮಿಕ ಹಾಲು ಪರಲೋಕದಲ್ಲಿ ಹಾಲಿನ ನದಿಯಾಗಿ ಗೋಚರಿಸುವುದು. ಇಹದಲ್ಲಿ ಅವನು ಆಧ್ಯಾತ್ಮಿಕವಾಗಿ ಯಾವ ಅನುರಾಗದ ಮತ್ತಿನಿಂದ ಆನಂದಿತನಾಗುವನೋ ಆ ದೇವಾನುರಾಗವೆಂಬ ಆಧ್ಯಾತ್ಮಿಕ ಪಾನೀಯವು ಪರದಲ್ಲಿ ಮದ್ಯನದಿಯಾಗಿ ಪರಿವರ್ತಿತಗೊಳ್ಳುವುದು. ಈ ಲೋಕದಲ್ಲಿ ಅವನು ಆಧ್ಯಾತ್ಮಿಕವಾಗಿ ಆಸ್ವಾದಿಸುವ ಸತ್ಯವಿಶ್ವಾಸದ ಮಾಧುರ್ಯವೆಂಬ ಜೇನು ಪರಲೋಕದಲ್ಲಿ ಮಧುಪ್ರವಾಹವಾಗಿ ರೂಪಾಂತರಗೊಳ್ಳುತ್ತದೆ. ಹೀಗೆ ಪ್ರತಿಯೊಬ್ಬ ಸ್ವರ್ಗವಾಸಿಯ ಆಧ್ಯಾತ್ಮಿಕ ಸ್ಥಿತಿಗಳು ಅವನ ತೋಟಗಳಂತೆಯೂ ನದಿಗಳಂತೆಯೂ ಗೋಚರಿಸುವುವು. ಆ ದಿನದಂದು ಸರ್ವಮಹಿಮಾವಂತನಾದ ದೇವನು ತನ್ನ ಪ್ರಭಾವದೊಂದಿಗೆ ಸ್ವರ್ಗವಾಸಿಗಳಿಗೆ ಪ್ರತ್ಯಕ್ಷನಾಗುವನು. ಸಂಕ್ಷಿಪ್ತವಾಗಿ, ಆ ಘಟ್ಟದಲ್ಲಿ ಆಧ್ಯಾತ್ಮಿಕ ಸ್ಥಿತಿಗಳು ಗೋಪ್ಯವಾಗಿರದೆ ಸ್ಪಷ್ಟವಾಗಿ ಗೋಚರಿಸುವುವು.

**ಮೂರನೆಯ ತತ್ವ,** ಪರಲೋಕದಲ್ಲಿ ಅನುಭವಿಸಲ್ಪಡುವ ಪ್ರಗತಿ ಮತ್ತು ಉನ್ನತಿಗಳೆಲ್ಲ ಅಪರಿಮಿತ ಹಾಗೂ ಅನಂತವೆಂಬುದಾಗಿದೆ. ಇದಕ್ಕೆ ಸಂಬಂಧಿಸಿ ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

وَالَّذِيْنَ اٰمَنُوْا مَعَهٗ ۚ نُوْرُهُمْ يَسْعٰى بَيْنَ اَيْدِيْهِمْ وَبِاَيْمَانِهِمْ يَقُوْلُوْنَ رَبَّنَآ اَتْمِمْ لَنَا نُوْرَنَا
وَاغْفِرْ لَنَا ۚ اِنَّكَ عَلٰى كُلِّ شَيْءٍ قَدِيْرٌ

ಈ ಲೋಕದಲ್ಲಿ ಸತ್ಯವಿಶ್ವಾಸವೆಂಬ ಪ್ರಕಾಶವನ್ನು ಪಡೆದವರ ಆ ದಿವ್ಯ ಜ್ಯೋತಿ ನ್ಯಾಯ ವಿಚಾರಣೆಯ ದಿನದಂದು ಅವರ ಮುಂಭಾಗದಲ್ಲೂ ಬಲಭಾಗದಲ್ಲೂ ಪ್ರವಹಿಸುತ್ತಾ ಇರುವುದು, 'ನಮ್ಮ ದೇವಾ, ನೀನು ನಮ್ಮ ಪ್ರಕಾಶವನ್ನು

ಪರಿಪೂರ್ಣಗೊಳಿಸಿ ನಮಗೆ ನಿನ್ನ ರಕ್ಷಣೆಯನ್ನು ಅನುಗ್ರಹಿಸು; ನೀನು ಸರ್ವವಸ್ತುಗಳ ಮೇಲೆ ಅಧಿಕಾರವುಳ್ಳವನಷ್ಟೇ' ಎಂದು ಅವರು ಪ್ರಾರ್ಥಿಸುತ್ತಾ ಇರುವರು. **(66:9)**

ಈ ವಾಕ್ಯದಲ್ಲಿ ಅವರು ತಮ್ಮ ಪ್ರಕಾಶದ ಸಂಪೂರ್ಣತೆಗಾಗಿ ಪ್ರಾರ್ಥಿಸುತ್ತಾ ಇರುವರೆಂದು ಹೇಳಿದುದರಿಂದ ಸ್ವರ್ಗದ ಪ್ರಗತಿ ಅನಂತವೆಂದು ತಿಳಿದು ಬರುತ್ತದೆ. ಎಂದರೆ, ಅವರು ಆಧ್ಯಾತ್ಮಿಕ ಪ್ರಕಾಶದ ಒಂದು ಹಂತವನ್ನು ಪಡೆದ ಬಳಿಕ ವಿರಮಿಸುವುದಿಲ್ಲ. ಈ ಹಂತದಲ್ಲಿ ಅವರು ಉನ್ನತವಾದ ಮತ್ತೊಂದು ಉತ್ಕೃಷ್ಟತೆಯನ್ನು ಕಂಡು ಮೊದಲಿನದನ್ನು ಅಪೂರ್ಣಾವಸ್ಥೆಯೆಂದು ಭಾವಿಸಿಕೊಂಡು ಎರಡನೆಯ ಹಂತದ ಸಿದ್ಧಿಗಾಗಿ ಪ್ರಾರ್ಥಿಸುವರು. ಅದು ಸಿದ್ಧಿಸಿದ ನಂತರ ಅವರಿಗೆ ಮೂರನೆಯ ಒಂದು ಉಚ್ಚ ಸ್ಥಿತಿ ಕಾಣುತ್ತದೆ. ಆಗ, ಅಷ್ಟರ ವರೆಗಿನ ಸಿದ್ಧಿಯೆಲ್ಲ ಅಪೂರ್ಣವೆಂದು ಗ್ರಹಿಸಿ ಇನ್ನೂ ಮೇಲಿನ ಸ್ಥಾನಕ್ಕಾಗಿ ಪ್ರಾರ್ಥಿಸಲು ತೊಡಗುವರು. ಇಂತಹ ಅನಂತವಾದ ಅಭಿವೃದ್ಧಿಯ ಇಚ್ಛೆಯನ್ನು **'ಅತ್‌ಮಿಮ್'** (ಪರಿಪೂರ್ಣಗೊಳಿಸು) ಎಂಬ ಪದ ಸೂಚಿಸುತ್ತದೆ. ಒಟ್ಟಿನಲ್ಲಿ, ಸಜ್ಜನರು ಹೀಗೆ ಅನಂತವಾದ ಪ್ರಗತಿಯನ್ನು ಗಳಿಸುವರು. ಅವರು ಎಂದಿಗೂ ಅಧಃಪತಿಸಲಾರರು; ಎಂದಿಗೂ ಅವರು ಸ್ವರ್ಗದಿಂದ ಹೊರದೂಡಲ್ಪಡಲಾರರು. ಅವರು ತುಸು ಮಾತ್ರವಾದರೂ ಹಿಂದಕ್ಕೆ ಸರಿಯದೆ ಸದಾ ಮುಂದಕ್ಕೆ ಗಮಿಸುವರು.

ಮೇಲೆ ಉದ್ಧರಿಸಲಾದ ಖುರ್‌ಆನ್ ವಾಕ್ಯದಲ್ಲಿ ಸಜ್ಜನರ **مغفرة – 'ಮಗ್‌ಫಿರತ್'** (ಪಾಪವಿಮೋಚನೆ)ಗಾಗಿ ಪ್ರಾರ್ಥಿಸುತ್ತಾ ಇರುವರೆಂದು ಹೇಳಿದೆಯಷ್ಟೆ. ಸ್ವರ್ಗದಲ್ಲಿ ಪ್ರವೇಶಿಸಿದ ಪುಣ್ಯಾತ್ಮರಿಗೆ 'ಮಗ್‌ಫಿರತ್'ನ ಕಾರ್ಯದಲ್ಲಿ ಯಾವ ಕೊರತೆಯೂ ಉಂಟಾಗದೆಯೂ ಪಾಪ ವಿಮುಕ್ತಿ ಸಿದ್ಧಿಸಿಯೂ ಇರುವಾಗ ಅವರು **استغفار –** 'ಇಸ್ತಿಗ್‌ಫಾರ್' (ಕ್ಷಮಾಯಾಚನೆ) ಮಾಡಬೇಕಾದ ಆವಶ್ಯಕತೆಯೇನೆಂಬ ಒಂದು ಪ್ರಶ್ನೆ ಅಲ್ಲಿ ಉದ್ಭವಿಸಬಹುದು. 'ಮಗ್‌ಫಿರತ್' ಎಂಬ ಪದದ ಅರ್ಥ ಸರಿಯಾಗಿ ಗ್ರಹಿಸದಿರುವ ಕಾರಣದಿಂದಾಗಿ ಈ ಪ್ರಶ್ನೆಯೇಳುತ್ತದೆ. ಅದರ ಅರ್ಥ, ಅಯೋಗ್ಯ ಹಾಗೂ ಅಪೂರ್ಣವಾಗಿಯುಳ್ಳ ಸ್ಥಿತಿಯನ್ನು ಹೋಗಲಾಡಿಸುವುದು ಅಥವಾ ಗೋಪ್ಯವಾಗಿರಿಸುವುದು. ಒಟ್ಟಾರೆ, ಸ್ವರ್ಗವಾಸಿಗಳಾದ ಪುಣ್ಯಾತ್ಮರು ಪರಿಪೂರ್ಣ ಶ್ರೇಷ್ಠತೆಯನ್ನು ಪಡೆಯಲಿಕ್ಕಾಗಿಯೂ ಪ್ರಕಾಶದಲ್ಲಿ ಲೀನರಾಗಲಿಕ್ಕಾಗಿಯೂ ಆಶಿಸುತ್ತಾ ಇರುವರು. ತಾವು ಗಳಿಸಿದ ಸ್ಥಿತಿಗಿಂತ ಉತ್ತಮವಾದ ಮತ್ತೊಂದು ಉನ್ನತ ಮಟ್ಟವನ್ನು ಅವರು ಕಾಣುವಾಗ ಮೊದಲಿನ ಸ್ಥಿತಿಯನ್ನು ಅಪೂರ್ಣವೆಂದು ಗ್ರಹಿಸಿ

ಅದನ್ನು ಹೋಗಲಾಡಿಸಲಿಕ್ಕಾಗಿ ಪ್ರಾರ್ಥಿಸುವರು. ನಂತರ ಅದಕ್ಕಿಂತ ಉಚ್ಚ ಮಟ್ಟದ ಮೂರನೆಯ ಹಂತವನ್ನು ಕಾಣುವಾಗ ಅಷ್ಟರವರೆಗೆ ಸಿದ್ಧಿಸಿದ ಸ್ಥಿತಿಗೆ ಸಂಬಂಧಿಸಿ 'ಮಗ್‌ಫಿರತ್' ಲಭಿಸಲಿಕ್ಕಾಗಿ ಎಂದರೆ, ಆ ಸ್ಥಿತಿ ಹೋಗಲಾಡಿಸಲ್ಪಡಲಿಕಾಗಿ ಅವರು ಆಶಿಸುವರು. ಏಕೆಂದರೆ ಅಲ್ಲಿ ಅವರಿಗೆ ಪ್ರಾಪ್ತವಾಗುವ ಪ್ರಗತಿ ಅನಂತವಾಗಿದೆ. ಹೀಗೆ ಅವರು ಅನಂತವಾದ 'ಮಗ್‌ಫಿರತಿ'ಗಾಗಿ ಅಥವಾ ಅಪೂರ್ಣಾವಸ್ಥೆಗಳು ಹೋಗಲಾಡಿಸಲ್ಪಡಲಿಕ್ಕಾಗಿ ಪ್ರಾರ್ಥಿಸುತ್ತಾ ಇರುವರು. 'ಮಗ್‌ಫಿರತ್' ಮತ್ತು 'ಇಸ್ತಿಗ್‌ಫಾರ್' ಎಂಬೀ ಪದಗಳನ್ನು ಅವಿವೇಕಿಗಳು ನಮ್ಮ ಪ್ರವಾದಿ ಶ್ರೇಷ್ಠರಾದ ಮುಹಮ್ಮದ್ ಪೈಗಂಬರರ(ಸ) ಮೇಲೆ ದೋಷಾರೋಪಣೆ ಮಾಡಲು ಪ್ರಯೋಗಿಸುತ್ತಾರೆ. ಆದರೆ, ಈ ಪದಗಳ ಸರಿಯಾದ ಅರ್ಥ ಮೇಲಿನ ವಿವರಣೆಯಿಂದ ಸ್ಪಷ್ಟವಾಗಿದೆ. 'ಇಸ್ತಿಗ್‌ಫಾರ್'ನ ಆಕಾಂಕ್ಷೆ ಮನುಷ್ಯನನ್ನು ಅನಂತವಾದ ಪ್ರಗತಿಯೆಡೆಗೆ ಕೊಂಡೊಯ್ಯಲು ಪ್ರೇರಕವಾಗುವುದರಿಂದ ಅದು ಅವನಿಗೆ ಅಭಿಮಾನಕರವಾಗಿದೆ. ಸ್ತ್ರೀಯ ಉದರದಿಂದ ಬಂದ ಯಾವೊಬ್ಬನು 'ಇಸ್ತಿಗ್‌ಫಾರ್' ಎಂಬ ರಕ್ಷಾರ್ಥನೆಯ ನಿತ್ಯಾನುಷ್ಠಾನ ಮಾಡುವುದಿಲ್ಲವೋ ಅವನು ಕೀಟಕ್ಕೆ ಸಮಾನ; ಏನನ್ನೂ ಕಾಣದ ಕುರುಡ; ಹಾಗೂ ಹೃದಯದಲ್ಲಿ ಪಾಪವುಳ್ಳ ಅಶುದ್ಧನು.

ಸಂಕ್ಷಿಪ್ತವಾಗಿ, ಪವಿತ್ರ ಖುರ್‌ಆನಿನ ಅಧ್ಯಾಪನೆ ಪ್ರಕಾರ ಸ್ವರ್ಗ ಮತ್ತು ನರಕ ಮನುಷ್ಯನ ಐಹಿಕ ಜೀವಿತಾವಸ್ಥೆಗಳ ಪ್ರತಿರೂಪಗಳಾಗಿವೆ. ಅವು ಹೊರಗಿನಿಂದ ಬರುವ ಹೊಸ ಭೌತಿಕವಾದುದೇನೂ ಅಲ್ಲ. ಸ್ವರ್ಗವೂ ನರಕವೂ ಸ್ಥೂಲ ರೂಪದಲ್ಲಿ ಗೋಚರಿಸುವುವಾದರೂ ಅವು ಈ ಜೀವಿತದ ಅಧ್ಯಾತ್ಮ ಸ್ಥಿತಿಗಳ ಪ್ರತಿಚ್ಛಾಯೆಗಳು ಮಾತ್ರವಾಗಿವೆ. ಸ್ವರ್ಗವು ಈ ಲೋಕದಲ್ಲಿರುವಂತೆ ವೃಕ್ಷಗಳನ್ನು ನೆಡಲಾದ ಸ್ಥೂಲವಾದೊಂದು ಲೋಕವೆಂದಾಗಲಿ, ನರಕವು ಗಂಧಕ ಕಲ್ಲುಗಳಿಂದೆಲ್ಲ ಕೂಡಿದ ಕುಟೀರವೆಂದಾಗಲಿ ನಾವು ನಂಬುವುದಿಲ್ಲ. ಬದಲಾಗಿ, ಸ್ವರ್ಗ ಮತ್ತು ನರಕ ಇಸ್ಲಾಂ ಧರ್ಮ ಕಲಿಸುವ ಪ್ರಕಾರ, ಮನುಷ್ಯನ ಐಹಿಕ ಜೀವಿತದ ಕರ್ಮ ಸ್ಥಿತಿಗಳ ಪ್ರತಿಫಲನಗಳೆಂದು ನಾವು ನಂಬುತ್ತೇವೆ.

## ಮೂರನೆಯ ಪ್ರಶ್ನೆ:

## ಐಹಿಕ ಜೀವಿತೋದ್ದೇಶ ಹಾಗೂ ಅದನ್ನು ಗಳಿಸುವ ಮಾರ್ಗಗಳು

ಈ ಲೋಕದಲ್ಲಿ ಮನುಷ್ಯನ ಜೀವಿತೋದ್ದೇಶ ಮತ್ತು ಅದನ್ನು ಗಳಿಸುವ ಮಾರ್ಗಗಳೇನೆಂಬುದು ಮೂರನೆಯ ಪ್ರಶ್ನೆಯಾಗಿದೆ. ವಿಭಿನ್ನ ಸ್ವಭಾವಗಳ ಮನುಷ್ಯರು ಸಾಮಾನ್ಯವಾಗಿ ತಮ್ಮ ಅಜ್ಞತೆಯಿಂದ ಅಥವಾ ಸಂಕುಚಿತ ಮನಸ್ಥಿತಿಯ ಕಾರಣದಿಂದ ತಮ್ಮ ಜೀವಿತಕ್ಕೆ ವಿವಿಧ ರೀತಿಯ ಉದ್ದೇಶಗಳನ್ನು ನಿರ್ಣಯಿಸಿ ಕೇವಲ ಲೌಕಿಕಾಸಕ್ತಿಗಳನ್ನೂ ದೈಹಿಕೇಚ್ಛೆಗಳನ್ನೂ ತೃಪ್ತಿಪಡಿಸುವ ರೀತಿಯಲ್ಲಿ ಜೀವಿತವನ್ನು ನಡೆಸುತ್ತಾರೆ. ಆದರೆ ಸೃಷ್ಟಿಕರ್ತನಾದ ದೇವನು ತನ್ನ ಪವಿತ್ರ ವಚನದಲ್ಲಿ ಮನುಷ್ಯ ಜೀವನದ ಪರಮೋದ್ದೇಶವನ್ನು ಹೀಗೆ ವಿವರಿಸಿದ್ದಾನೆ:

وَمَا خَلَقْتُ الْجِنَّ وَالْإِنْسَ إِلَّا لِيَعْبُدُونِ

ನನ್ನನ್ನು ಅರಿಯಲಿಕ್ಕೂ ಆರಾಧಿಸಲಿಕ್ಕೂ ಬೇಕಾಗಿ ನಾನು ಜಿನ್ನುಗಳನ್ನೂ ಇನ್ಸ್‌ಗಳನ್ನೂ ಸೃಷ್ಟಿಸಿರುವೆನು. **(51:57)**

ಈ ಪವಿತ್ರ ಖುರ್‌ಆನ್ ವಾಕ್ಯದ ಪ್ರಕಾರ ಮನುಷ್ಯ ಜೀವಿತದ ಗುರಿ ಸೃಷ್ಟಿಕರ್ತನಾದ ದೇವನನ್ನು ಅರಿತುಕೊಂಡು ಅವನನ್ನು ಆರಾಧಿಸಿ ಅವನಿಗಾಗಿ ಬದುಕುವುದಾಗಿದೆ. ತನ್ನ ಜೀವಿತಕ್ಕೆ ಸ್ವಂತ ಇಷ್ಟ ಪ್ರಕಾರ ಒಂದು ಉದ್ದೇಶವನ್ನು ನಿಶ್ಚಯಿಸಲಿಕ್ಕೆ ಮನುಷ್ಯನಿಗೆ ಅಧಿಕಾರವಿಲ್ಲ. ಏಕೆಂದರೆ, ಅವನು ಈ ಲೋಕಕ್ಕೆ ತನ್ನ ಇಚ್ಛೆಯಿಂದ ಬರಲಿಲ್ಲ; ಹಾಗೆಯೇ ಸ್ವಇಚ್ಛೆಯಿಂದ ಇಲ್ಲಿಂದ ಹಿಂತಿರುಗುವುದೂ ಇಲ್ಲ. ಅವನು ಒಂದು ಸೃಷ್ಟಿ ಮಾತ್ರ. ಅವನನ್ನು ನಾಸ್ತಿಯಾದ ಅವಸ್ಥೆಯಿಂದ ಸೃಷ್ಟಿಸಿ ಅವನಿಗೆ ಇತರ ಜೀವಿಗಳಿಗಿಂತ ಉತ್ಕೃಷ್ಟ ಶಕ್ತಿಗಳನ್ನೂ ಬುದ್ಧಿಯನ್ನೂ ಪ್ರದಾನ ಮಾಡಿರುವ ಸೃಷ್ಟಿಕರ್ತನೇ ಅವನ ಜೀವನಕ್ಕೆ ಒಂದು ಉದ್ದೇಶವನ್ನು ನಿಶ್ಚಯಿಸಿರುವನು. ಈ ವಿಚಾರವನ್ನು ಅವನು ಗ್ರಹಿಸಿದರೂ ಇಲ್ಲವಾದರೂ ಅವನ ಜೀವಿತದ ಗುರಿ ಯಥಾರ್ಥದಲ್ಲಿ ದೇವನನ್ನು ಅರಿಯುವುದು, ಅವನಿಗೆ ಶರಣಾಗುವುದು ಮತ್ತು ಅವನಲ್ಲಿ ಲೀನವಾಗುವುದೇ ಆಗಿದೆ. ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

إِنَّ الدِّينَ عِنْدَ اللَّهِ الْإِسْلَامُ

ಖಂಡಿತವಾಗಿಯೂ, ದೇವನ ಕುರಿತು ಯಥಾರ್ಥ ಜ್ಞಾನ ಪ್ರದಾನ ಮಾಡುವ

ಹಾಗೂ ದೇವೋಪಾಸನೆಗಾಗಿ ಶ್ರೇಷ್ಠ ಮಾರ್ಗ ತೋರಿಸಿಕೊಡುವ ದೈವಿಕ ಧರ್ಮವಾಗಿದೆ ಇಸ್ಲಾಂ. **(3:20)**

فِطْرَتَ اللهِ الَّتِي فَطَرَ النَّاسَ عَلَيْهَا............ ذٰلِكَ الدِّيْنُ الْقَيِّمُ

ದೇವನು ಮನುಷ್ಯನನ್ನು ಯಾವ ಸ್ವಭಾವದಲ್ಲಿ ಸೃಷ್ಟಿಸಿರುವನೋ, ಆ ಶುದ್ಧ ಸ್ವಭಾವದಲ್ಲಿ ತದ್ರೂಪವಾಗಿ ನಿಕ್ಷಿಪ್ತವಾಗಿರುವ ಧರ್ಮ..... ಅದೇ ಆಗಿದೆ ಯಥಾರ್ಥ ಧರ್ಮ. **(30:31)**

ಎಂದರೆ, ಮನುಷ್ಯ ಸ್ವಭಾವ ಇಸ್ಲಾಮಿಕ ಆದರ್ಶಕ್ಕೆ ಅನುಗುಣವಾಗಿಯೇ ಇದೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಮನುಷ್ಯನು ತನ್ನ ಸಕಲ ಶಕ್ತಿಗಳನ್ನೂ ಬುದ್ಧಿಯನ್ನೂ ದೇವಾನುರಾಗದಲ್ಲೂ ದೇವಹಿತಾನುಸರಣೆಯಲ್ಲೂ ದೇವೋಪಾಸನೆಯಲ್ಲೂ ವ್ಯಯಿಸಬೇಕೆಂದು ಸೃಷ್ಟಿಕರ್ತನು ಉದ್ದೇಶಿಸಿದ್ದಾನೆ. ಆದ್ದರಿಂದ ಅವನು ಇಸ್ಲಾಮಿಕ ಆದರ್ಶಕ್ಕೆ ಅನುರೂಪವಾದ ಶಕ್ತಿ ಸಾಮರ್ಥ್ಯಗಳನ್ನು ಮನುಷ್ಯನಿಗೆ ನೀಡಿರುವನು.

ಈ ದೈವಿಕ ವಚನಗಳ ಸವಿಸ್ತಾರವಾದ ವ್ಯಾಖ್ಯಾನ ನೀಡಲು ಇಲ್ಲಿ ಅವಕಾಶವಿಲ್ಲ. ಒಂದನೆಯ ಪ್ರಶ್ನೆಯ ಉತ್ತರದ ಮೂರನೆಯ ಭಾಗದಲ್ಲಿ ಕೆಲ ವಿವರಣೆಯನ್ನು ಕೊಡಲಾಗಿದೆ. ಒಟ್ಟಾರೆ, ಮನುಷ್ಯನಿಗೆ ನೀಡಲಾದ ಆಂತರಿಕ ಮತ್ತು ಬಾಹ್ಯವಾದ ಅವಯವಗಳೂ ಪ್ರಜ್ಞಾಶಕ್ತಿಗಳೂ ಎಲ್ಲವೂ ಇಸ್ಲಾಮಿಕ ಆದರ್ಶಕ್ಕೆ ಅನುಯೋಜ್ಯವೆಂಬ ವಿಚಾರವನ್ನು ಮಾತ್ರ ಇಲ್ಲಿ ಸಂಕ್ಷಿಪ್ತವಾಗಿ ವಿಶದೀಕರಿಸಬಹುದು. ಮನುಷ್ಯನ ಆಂತರಿಕ ಹಾಗೂ ಬಾಹ್ಯ ಶಕ್ತಿಗಳ ಕುರಿತು ಪರಿಶೀಲಿಸುವುದಾದರೆ ದೇವನನ್ನು ಅರಿಯಲಿಕ್ಕೂ ಆರಾಧಿಸಲಿಕ್ಕೂ ಪ್ರೀತಿಸಲಿಕ್ಕೂ ಅವೆಲ್ಲ ಪ್ರಯೋಜನಕಾರಿಯಾಗಿವೆಯೆಂದು ತಿಳಿಯ ಬಹುದು. ಆದ್ದರಿಂದಲೇ, ಮನುಷ್ಯನು ಐಹಿಕ ಜೀವಿತದಲ್ಲಿ ವಿವಿಧ ಕೆಲಸ ಕಾರ್ಯಗಳಲ್ಲೂ ಪರಿಶ್ರಮಗಳಲ್ಲೂ ನಿರತನಾಗಿ ಏನೆಲ್ಲ ಸುಖ ಸೌಕರ್ಯಗಳನ್ನು ಪಡೆದರೂ ದೇವನಿಂದ ಹೊರತು ಇನ್ನಾವುದರಲ್ಲೂ ಅವನಿಗೆ ಆ ಯಥಾರ್ಥ ಸುಖವನ್ನು ಅನುಭವಿಸಲಾಗುವುದಿಲ್ಲ. ಕೋಟ್ಯಾಧೀಶನೋ, ಉನ್ನತ ಹುದ್ದೇದಾರನೋ, ವರ್ತಕಾಗ್ರಣಿಯೋ, ರಾಜಾಧಿರಾಜನೋ, ಮಹಾದಾರ್ಶನಿಕನೋ ಆಗಿದ್ದರೂ ಅವನು ಲೌಕಿಕ ಬಂಧನಗಳಲ್ಲಿ ಸಿಲುಕಿ ಕೊನೆಗೆ ದುಃಖಿತನಾಗಿ ಜೀವಿತದಲ್ಲಿ ಜಿಗುಪ್ಸೆಗೊಳ್ಳುತ್ತಾನೆ. ಸ್ವೇಚ್ಛೆಗಳಿಗೆ ಬಲಿಯಾಗಿ ಪ್ರಪಂಚಾನುರಾಗದಲ್ಲಿ ಲೀನನಾಗಿರುವ ಕಾರಣದಿಂದ ಅವನ ಹೃದಯ ಅವನನ್ನು ಶಪಿಸುತ್ತದೆ. ಐಹಿಕ ವ್ಯವಹಾರಗಳ ವಿಜಯ ಪ್ರಾಪ್ತಿಗಾಗಿ ಅವನು ಕೈಗೊಂಡ ಮೋಸಗಾರಿಕೆ, ವಂಚನೆ, ಅಕ್ರಮ ಮೊದಲಾದ ದುಷ್ಕೃತ್ಯಗಳನ್ನು ಅವನ ಮನಃಸಾಕ್ಷಿ ಒಪ್ಪುವುದಿಲ್ಲ.

ಈ ವಿಷಯವನ್ನು ಬೇರೊಂದು ರೀತಿಯಲ್ಲಿ ಮನಗಾಣಬಹುದು. ಒಂದು ಜೀವಿಗೆ ಪರಮಾವಧಿ ಮಾಡಲು ಸಾಧ್ಯವಿರುವ ಕೆಲಸವನ್ನು ಅದು ಮಾಡಿ ಅದಕ್ಕಿಂತ ಮಿಗಿಲಾಗಿ ಏನೂ ಮಾಡಲು ಅಸಮರ್ಥವೆಂದಾದರೆ, ಆ ಅಂತಿಮ ಕಾರ್ಯವೇ ಅದರ ಜೀವಿತದ ಪರಮ ಪ್ರಯೋಜನವೆಂದು ತಿಳಿಯಬೇಕಾಗಿದೆ. ಉದಾಹರಣೆಗೆ, ಒಂದು ಎತ್ತಿನ ಪರಮ ಪ್ರಯೋಜನ ನೆಲವನ್ನು ಉಳುವುದು ಯಾ ನೀರೆತ್ತುವುದು ಯಾ ಭಾರವೆಳೆಯುವುದಾಗಿದೆ. ಇದಕ್ಕಿಂತ ಮಿಗಿಲಾದ ಶಕ್ತಿ ಅದಕ್ಕಿರುವುದಿಲ್ಲ. ಆದ್ದರಿಂದ ಎತ್ತಿನ ಜೀವಿತದ ಪರಮೋದ್ದೇಶ ಈ ಮೂರು ಆಗಿವೆ. ಆದರೆ ಮನುಷ್ಯನ ಶಕ್ತಿಗಳಲ್ಲಿ ಅತ್ಯುತ್ಕೃಷ್ಟ ಶಕ್ತಿ ಯಾವುದೆಂದು ಪರಿಶೋಧಿಸುವುದಾದರೆ, ಅದು ಸರ್ವೋನ್ನತನಾದ ಸೃಷ್ಟಿಕರ್ತನನ್ನು ಅರಸುವ ಪ್ರಜ್ಞಾಶಕ್ತಿಯೆಂದು ಕಾಣಬಹುದು. ಈ ಶಕ್ತಿ ಅವನನ್ನು ತನಗಾಗಿ ಏನನ್ನೂ ಬಾಕಿಯಿರಿಸದೆ ಸರ್ವವನ್ನೂ ದೇವನಿಗಾಗಿ ಅರ್ಪಿಸಿಕೊಂಡು ಸಂಪೂರ್ಣವಾಗಿ ದೇವಾನುರಾಗದಲ್ಲಿ ಲೀನವಾಗಲಿಕ್ಕೆ ಪ್ರಚೋದಿಸುತ್ತದೆ. ತಿನ್ನುವುದು, ಕುಡಿಯುವುದು, ನಿದ್ರಿಸುವುದು ಇತ್ಯಾದಿ ಶಾರೀರಿಕ ಚಟುವಟಿಕೆಗಳಲ್ಲಿ ಅವನು ಇತರ ಪ್ರಾಣಿಗಳಿಗೆ ತುಲ್ಯನು. ಕೆಲವು ಜೀವಿಗಳಾದರೋ ಚಾತುರ್ಯದಲ್ಲಿ ಅವನಿಗಿಂತ ಮಿಗಿಲೆನಿಸುತ್ತವೆ. ಜೇನು ನೊಣ ಹಲವು ವಿಧದ ಹೂಗಳ ರಸದಿಂದ ವಿಶಿಷ್ಟವಾದ ಜೇನನ್ನು ಉಂಟುಮಾಡುತ್ತದೆ. ಆದರೆ ಬುದ್ಧಿಜೀವಿಯಾದ ಮನುಷ್ಯನಿಗೆ ಇಂದಿನ ವರೆಗೆ ಇದನ್ನು ಸಾಧಿಸಲಾಗಲಿಲ್ಲ. ಹೀಗೆ ಮನುಷ್ಯನ ಪರಿಪೂರ್ಣತೆ ಇಂತಹ ವಿಷಯಗಳಲ್ಲಿ ಅಲ್ಲ; ದೇವೈಕ್ಯ ಪ್ರಾಪ್ತಿಯಲ್ಲಿ ಮಾತ್ರವೆಂದು ಕಾಣಬಹುದು. ಒಟ್ಟಿನಲ್ಲಿ, ಮನುಷ್ಯನ ಹೃದಯದ ಕಿಟಕಿಯನ್ನು ದೇವನಿಗಾಗಿ ತೆರೆದಿರಿಸುವುದೇ ಅವನ ಜೀವಿತದ ಯಥಾರ್ಥ ಉದ್ದೇಶವಾಗಿದೆ.

## ಉದ್ದೇಶ ಸಿದ್ಧಿಯ ಮಾರ್ಗಗಳು

ಈ ಉದ್ದೇಶ ಸಾಧಿಸುವುದು ಹೇಗೆ, ಅದರ ಮಾರ್ಗಗಳು ಯಾವುವು ಎಂಬ ವಿಷಯದ ಕುರಿತು ಪ್ರತಿಪಾದಿಸೋಣ. ಈ ಗುರಿ ಸಾಧನೆಯ **ಪ್ರಥಮ** ಹಾಗೂ **ಪ್ರಧಾನ** ಮಾರ್ಗವೇನೆಂದರೆ, ದೇವನನ್ನು ಸರಿಯಾದ ರೀತಿಯಲ್ಲಿ ಅರಿಯುವುದು ಮತ್ತು ಸತ್ಯದೇವನಲ್ಲಿ ವಿಶ್ವಾಸವಿರಿಸುವುದು. ಯಾರಾದರೂ ಪ್ರಥಮ ಹೆಜ್ಜೆಯಲ್ಲೇ ತಪ್ಪಿಬಿದ್ದು ಪಕ್ಷಿಯನ್ನೋ ಮೃಗವನ್ನೋ ಮನುಷ್ಯ ಸಂತಾನವನ್ನೋ ದೇವನೆಂದು ನಂಬಿದರೆ ಅವನ ಎರಡನೆಯ ಹೆಜ್ಜೆ ಸರಿಯಾದ ಪಥದಲ್ಲಿ ಸಾಗುವುದೆಂದು ಭಾವಿಸುವುದು ಹೇಗೆ? ಸತ್ಯದೇವನು ಸರಿಯಾದ ರೀತಿಯಲ್ಲಿ ತನ್ನನ್ನು ಹುಡುಕುವವರಿಗೆ ಸಹಾಯ ಮಾಡುತ್ತಾನೆ. ಆದರೆ ಜೀವವಿಲ್ಲದ ದೈವ – ಮೃತರಂತಿರುವ ಸೇವಕರಿಗೆ ಹೇಗೆ

ಸಹಾಯ ಮಾಡಬಲ್ಲುದು? ಈ ವಿಚಾರವನ್ನು ಪವಿತ್ರ ಖುರ್‌ಆನ್ ಸಾಮ್ಯ ರೂಪದಲ್ಲಿ ಹೀಗೆ ವಿವರಿಸುತ್ತದೆ:

لَهُۥ دَعْوَةُ ٱلْحَقِّ ۖ وَٱلَّذِينَ يَدْعُونَ مِن دُونِهِۦ لَا يَسْتَجِيبُونَ لَهُم بِشَىْءٍ إِلَّا كَبَٰسِطِ كَفَّيْهِ
إِلَى ٱلْمَآءِ لِيَبْلُغَ فَاهُ وَمَا هُوَ بِبَٰلِغِهِۦ ۚ وَمَا دُعَآءُ ٱلْكَٰفِرِينَ إِلَّا فِى ضَلَٰلٍ

ಸರ್ವಶಕ್ತನಾದ ಸತ್ಯದೇವನೇ ಯಥಾರ್ಥದಲ್ಲಿ ಪ್ರಾರ್ಥನೆಗರ್ಹನು; ಅವನ ಹೊರತು ಇವರು ಯಾರನ್ನು ಕರೆದು ಪ್ರಾರ್ಥಿಸುತ್ತಾರೋ ಅವರು ಇವರಿಗೆ ಯಾವ ಉತ್ತರವನ್ನೂ ಕೊಡುವುದಿಲ್ಲ. ಅವರ ಸ್ಥಿತಿ, ತನ್ನ ಬಾಯಿಗೆ ನೀರು ಬಂದು ಬೀಳಲಿಕ್ಕಾಗಿ ಕೈಚಾಚಿ ಮೊರೆಯಿಡುವವನಂತಹದ್ದಾಗಿದೆ. ಆದರೆ ನೀರು ಅವನ ಬಾಯಿಯನ್ನು ಸೇರುವುದೋ? ಖಂಡಿತವಾಗಿಯೂ ಇಲ್ಲ. ಯಾರು ಸತ್ಯಸ್ವರೂಪನಾದ ದೇವನನ್ನು ಅರಿಯುವುದಿಲ್ಲವೋ ಅವರ ಪ್ರಾರ್ಥನೆಗಳೆಲ್ಲ ವ್ಯರ್ಥ. **(13:15)**

**ಎರಡನೆಯ ಮಾರ್ಗ**ವೇನೆಂದರೆ, ದೇವನ ಪರಿಪೂರ್ಣವಾದ ಸೌಂದರ್ಯ ಮಹಾತ್ಮೆಯ ಕುರಿತು ತಿಳಿದಿರುವುದು. ಸೌಂದರ್ಯವು ಸ್ವಾಭಾವಿಕವಾಗಿ ಹೃದಯವನ್ನು ಆಕರ್ಷಿಸಲಿಕ್ಕೂ ಪ್ರೀತಿಯನ್ನು ಅಂಕುರಿಸಲಿಕ್ಕೂ ಸಮರ್ಥವಾಗಿದೆ. ದೇವನ ಸೌಂದರ್ಯ ಮಹಿಮೆ ಅವನ ಏಕತ್ವದಲ್ಲೂ ಪ್ರಭಾವದಲ್ಲೂ ಪಾವನತೆಯಲ್ಲೂ ಇತರ ಉತ್ಕೃಷ್ಟ ಗುಣಗಳಲ್ಲೂ ಗೋಚರಿಸುತ್ತದೆ. ಈ ವಿಷಯದ ಕುರಿತು ಪವಿತ್ರ ಖುರ್‌ಆನ್ ನಮ್ಮ ಗಮನವನ್ನು ಹೀಗೆ ಸೆಳೆಯುತ್ತದೆ:

قُلْ هُوَ ٱللَّهُ أَحَدٌ - ٱللَّهُ ٱلصَّمَدُ - لَمْ يَلِدْ وَلَمْ يُولَدْ - وَلَمْ يَكُن لَّهُۥ كُفُوًا أَحَدٌۢ

ದೇವನು ಅಸ್ತಿತ್ವದಲ್ಲೂ ಗುಣದಲ್ಲೂ ಮಹಾತ್ಮೆಯಲ್ಲೂ ಏಕಮಾತ್ರನಾಗಿದ್ದಾನೆ. ಅವನ ಪಾಲುದಾರನಾಗಿ ಯಾರೂ ಇಲ್ಲ. ಸರ್ವವೂ ಅವನ ಸಹಾಯವನ್ನು ಆಶ್ರಯಿಸಿಕೊಂಡಿವೆ. ಪ್ರತಿಯೊಂದು ಅಣುವೂ ಅವನಿಂದ ಜೀವನವನ್ನು ಪಡೆಯುತ್ತದೆ. ಅವನು ಎಲ್ಲ ವಸ್ತುಗಳಿಗೂ ಆಶ್ರಯದಾತನು. ಅವನು ಯಾರನ್ನೂ ಆಶ್ರಯಿಸಿಕೊಂಡಿಲ್ಲ. ಅವನು ಯಾರ ಮಗನೂ ಅಲ್ಲ; ಯಾರ ಪಿತನೂ ಅಲ್ಲ. ಅವನಿಗೆ ಸರಿಸಾಟಿಯಾಗಿ ಯಾರೂ ಇಲ್ಲ. **(112:2–5)**

ಪವಿತ್ರ ಖುರ್‌ಆನ್ ಪದೇ ಪದೇ ಇಂತಹ ವಾಕ್ಯಗಳಿಂದ ದೇವನ ಮಹಿಮೆಯನ್ನೂ ಪ್ರಭಾವವನ್ನೂ ವರ್ಣಿಸಿಕೊಂಡು ಮನುಷ್ಯರ ಗಮನವನ್ನು

ಸರ್ವಶಕ್ತನಾದ ಏಕದೇವನೆಡೆಗೆ ತಿರುಗಿಸಿ, ಅವನು ಮೃತನೋ, ದುರ್ಬಲನೋ, ನಿರ್ದಯನೋ, ಶಕ್ತಿಹೀನನೋ ಅಲ್ಲವೆಂದು ಬೋಧಿಸುತ್ತದೆ.

**ಮೂರನೆಯ ಮಾರ್ಗ**ವೇನೆಂದರೆ, ದೇವನ ಗುಣ ಮಹಾತ್ಮೆಗಳ ಮತ್ತು ಅವನ ಅನುಗ್ರಹಗಳ ಕುರಿತು ತಿಳಿಯುವುದು. ಸೌಂದರ್ಯ ಮತ್ತು ಔದಾರ್ಯ ಸ್ನೇಹವನ್ನು ಹುಟ್ಟಿಸುವ ಎರಡು ಪ್ರೇರಕಗಳಾಗಿವೆ. ದೇವನ ಅನುಗ್ರಹಕರ ಔದಾರ್ಯ ಸಂಬಂಧಿತ ಗುಣಮಹಾತ್ಮೆಗಳ ಒಂದು ಸಂಕ್ಷಿಪ್ತ ರೂಪವನ್ನು ಪವಿತ್ರ ಖುರ್‌ಆನಿನ ಪ್ರಥಮ ಅಧ್ಯಾಯವಾದ ಸೂರಃ ಫಾತಿಹದಲ್ಲಿ ಕಾಣಬಹುದು. ಅದು ಹೀಗಿದೆ:

اَلْحَمْدُ لِلّٰهِ رَبِّ الْعٰلَمِيْنَ - الرَّحْمٰنِ الرَّحِيْمِ - مٰلِكِ يَوْمِ الدِّيْنِ

ಸಕಲ ಲೋಕಗಳ ಪರಿಪಾಲಕನಾದ ದೇವನಿಗೆ ಸರ್ವ ಸ್ತುತಿಗಳು. ಅವನ ದಯೆ ಮತ್ತು ಅನುಗ್ರಹ ನಿಸ್ಸೀಮ. ಅವನು ಪ್ರತಿಫಲ ನೀಡಲ್ಪಡುವ ದಿನದ ಸರ್ವಾಧಿಪತಿಯು. **(1:2–4)**

ನಾಸ್ತಿಯಾದ ಅವಸ್ಥೆಯಿಂದ ದೇವನು ಮನುಷ್ಯರನ್ನೂ ಇತರ ಜೀವಿಗಳನ್ನೂ ಸೃಷ್ಟಿಸಿ ಯಥೋಚಿತವಾಗಿ ಪರಿಪಾಲಿಸುತ್ತಲೂ ರಕ್ಷಿಸುತ್ತಲೂ ಇದ್ದಾನೆಂಬುದರಲ್ಲಿ ಮತ್ತು ಅವನ ಸೀಮಾತೀತ ಅನುಗ್ರಹಗಳು ಸೃಷ್ಟಿಗಳಲ್ಲಿ ಪ್ರಕಟಗೊಳ್ಳುವುದರಲ್ಲಿ ಅವನ ಅನುಗ್ರಹಪೂರ್ಣತೆ ನೆಲೆಗೊಳ್ಳುತ್ತದೆ. ದೇವನ ಈ ಅನುಗ್ರಹಪೂರ್ಣತೆಯ ಕುರಿತು ಪವಿತ್ರ ಖುರ್‌ಆನ್ ಹಲವು ಬಾರಿ ನೆನಪು ಮಾಡಿಕೊಟ್ಟಿದೆ. ಒಂದೆಡೆಯಲ್ಲಿ ಅದು ಹೀಗೆನ್ನುತ್ತದೆ:

وَاِنْ تَعُدُّوْا نِعْمَتَ اللّٰهِ لَا تُحْصُوْهَا

ದೇವನ ಅನುಗ್ರಹಗಳನ್ನು ನೀವು ಲೆಕ್ಕ ಹಾಕಲು ಪ್ರಯತ್ನಿಸಿದರೆ ನಿಮಗೆ ಎಂದಿಗೂ ಅದು ಸಾಧ್ಯವಿಲ್ಲ. **(14:35)**

ಜೀವಿತೋದ್ದೇಶ ಸಿದ್ಧಿಗಾಗಿ ದೇವನು ನಿರ್ದೇಶಿಸಿದ **ನಾಲ್ಕನೆಯ ಮಾರ್ಗ** ಪ್ರಾರ್ಥನೆಯಾಗಿದೆ. ಅವನು ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳುತ್ತಾನೆ:

اُدْعُوْنِيْٓ اَسْتَجِبْ لَكُمْ

ನೀವು ನನ್ನೊಡನೆ ಪ್ರಾರ್ಥಿಸಿರಿ. ನಾನು ನಿಮಗೆ ಉತ್ತರವೀಯುವೆನು. **(40:61)**

ಮನುಷ್ಯನಿಗೆ ದೇವನನ್ನು ಅವನ ಸಹಾಯವಿಲ್ಲದೆ ತನ್ನ ಸ್ವಂತ ಶಕ್ತಿ ಮೂಲಕ ಗಳಿಸಲು ಸಾಧ್ಯವಿಲ್ಲವಾದುದರಿಂದ ಪ್ರಾರ್ಥಿಸುತ್ತಾ ಇರಲಿಕ್ಕಾಗಿ ಪವಿತ್ರ ಖುರ್‌ಆನ್ ಪದೇ ಪದೇ ಬೋಧಿಸುತ್ತದೆ.

ಗುರಿ ಸಾಧನೆಯ **ಐದನೆಯ ಮಾರ್ಗ** 'ಮುಜಾಹಿದಃ' ಅಥವಾ 'ಧರ್ಮ ಕಾರ್ಯಕ್ಕಾಗಿ ಪ್ರಯತ್ನ'ವಾಗಿದೆ. ಎಂದರೆ, ತನ್ನ ಸಂಪಾದನೆಯನ್ನು ದೇವ ಮಾರ್ಗದಲ್ಲಿ ವ್ಯಯಿಸಿಕೊಂಡು ತನ್ನ ಶಕ್ತಿ ಸಾಮರ್ಥ್ಯಗಳನ್ನು ದೇವ ಪಥದಲ್ಲಿ ವಿನಿಯೋಗಿಸಿಕೊಂಡು, ಜೀವವನ್ನು ದೇವನಾಮದಲ್ಲಿ ಅರ್ಪಿಸಿಕೊಂಡು, ಬುದ್ಧಿಯನ್ನೂ ಜ್ಞಾನವನ್ನೂ ದೈವಿಕ ಧರ್ಮದ ಸೇವೆಗಾಗಿ ಉಪಯೋಗಿಸಿಕೊಂಡು ದೇವನನ್ನು ಪಡೆಯಲು ಪ್ರಯತ್ನಿಸುವುದು.

ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹನು ಹೀಗೆ ಹೇಳುತ್ತಾನೆ:

وَجَاهِدُوْا بِاَمْوَالِكُمْ وَاَنْفُسِكُمْ فِيْ سَبِيْلِ اللّٰهِ

ನೀವು ನಿಮ್ಮ ಧನದಿಂದಲೂ ಜೀವದಿಂದಲೂ ನಿಮ್ಮ ಸರ್ವ ವಿಧ ಶಕ್ತಿಗಳಿಂದಲೂ ದೇವಮಾರ್ಗದಲ್ಲಿ ವಿಶೇಷ ಪ್ರಯತ್ನ ಮಾಡಿರಿ. **(9:41)**

وَمِمَّا رَزَقْنٰهُمْ يُنْفِقُوْنَ

ನಾವು ಅವರಿಗೆ ನೀಡಿರುವವುಗಳನ್ನು, ಎಂದರೆ ಬುದ್ಧಿ ಶಕ್ತಿ, ಜ್ಞಾನ, ವಿವೇಚನೆ, ವಿದ್ಯೆ ಮುಂತಾದುವನ್ನೆಲ್ಲ ನಮ್ಮ ದಾರಿಯಲ್ಲಿ ವಿನಿಯೋಗಿಸುವವರು ವಿಜಯಿಗಳು.

**(2:4)**

وَالَّذِيْنَ جَاهَدُوْا فِيْنَا لَنَهْدِيَنَّهُمْ سُبُلَنَا

ನಮ್ಮ ದಾರಿಯಲ್ಲಿ ಸರ್ವವಿಧದಲ್ಲೂ ಪರಿಶ್ರಮಿಸುವವರಿಗೆ ನಾವು ನಮ್ಮ ಮಾರ್ಗಗಳನ್ನು ತೋರಿಸಿಕೊಡುವೆವು. **(29:70)**

ಗುರಿ ಸಾಧನೆಯ **ಆರನೆಯ ಮಾರ್ಗ** ಸ್ಥಿರನಿಷ್ಠೆ ಅಥವಾ ಅಚಂಚಲವಾದ ಸ್ಥಿರಚಿತ್ತತೆಯಾಗಿದೆ. ಎಂದರೆ, ಸತ್ಯ ಧರ್ಮಾಚರಣೆಯಲ್ಲಿ ದಣಿವು, ಆಯಾಸ ತೋರಿಸದೆ, ಯಾವುದೇ ಕಠಿಣ ಪರೀಕ್ಷೆಯಲ್ಲೂ ಭೀರುತ್ವ ತೋರ್ಪಡಿಸದೆ ದೃಢಚಿತ್ತದಿಂದ ವರ್ತಿಸಬೇಕಾಗಿದೆ. ಇದರ ಕುರಿತು ದೇವನು ಹೀಗೆ ಹೇಳುತ್ತಾನೆ:

اِنَّ الَّذِيْنَ قَالُوْا رَبُّنَا اللّٰهُ ثُمَّ اسْتَقَامُوْا تَتَنَزَّلُ عَلَيْهِمُ الْمَلٰٓئِكَةُ اَلَّا تَخَافُوْا وَلَا تَحْزَنُوْا

وَاَبْشِرُوْا بِالْجَنَّةِ الَّتِيْ كُنْتُمْ تُوْعَدُوْنَ - نَحْنُ اَوْلِيٰٓؤُكُمْ فِي الْحَيٰوةِ الدُّنْيَا وَفِي الْاٰخِرَةِ

'ಸತ್ಯದೇವನಾದ ಅಲ್ಲಾಹನೇ ನಮ್ಮ ರಕ್ಷಕನು' ಎಂದು ಹೇಳಿ ಮಿಥ್ಯ ದೇವಗಳಿಂದೆಲ್ಲ ಮುಖ ತಿರುಗಿಸಿ ಸ್ಥಿರಚಿತ್ತರಾಗಿರುವವರಿಗೆ, ಎಂದರೆ ಎಲ್ಲ ವಿಧ

> ಪರೀಕ್ಷಾ ಘಟ್ಟಗಳಲ್ಲೂ ಸಂಕಷ್ಟಾವಸ್ಥೆಗಳಲ್ಲೂ ದೃಢಚಿತ್ತದಿಂದ ವರ್ತಿಸುವವರಿಗೆ ದೇವದೂತರು ಇಳಿದು ಬಂದು ಹೇಳುವರು: 'ನೀವು ಭಯಪಡಬೇಡಿರಿ, ದುಃಖಿಸುವುದೂ ಬೇಡ. ಬದಲಿಗೆ, ನೀವು ಸಂತೋಷಭರಿತರಾಗಿರಿ. ನಿಮಗೆ ವಾಗ್ದಾನವಿತ್ತ ಸ್ವರ್ಗಸುಖಕ್ಕೆ ನೀವು ಹಕ್ಕುದಾರರಾಗಿರುವಿರಿ. ನಾವು ಇಹಲೋಕ ಜೀವಿತದಲ್ಲೂ ಪರಲೋಕ ಜೀವಿತದಲ್ಲೂ ನಿಮ್ಮ ಮಿತ್ರರಾಗಿದ್ದೇವೆ. **(41:31,32)**

ಧರ್ಮಾನುಚರಣೆಯಲ್ಲಿ ಸ್ಥಿರನಿಷ್ಠೆ ದೇವನ ಪ್ರೀತಿಗೆ ಕಾರಣವಾಗುತ್ತದೆಂದು ಈ ವಚನಗಳು ನಮಗೆ ಬೋಧಿಸುತ್ತವೆ. ಅಚಂಚಲವಾದ ವಿಶ್ವಾಸ ಸ್ಥೈರ್ಯ ಪವಾಡಕ್ಕಿಂತ ಮಿಗಿಲೆಂಬುದು ವಾಸ್ತವಿಕ. ನಾನಾ ಕಡೆಗಳಿಂದ ಪ್ರತಿಕೂಲತೆಗಳೂ ಕ್ಲೇಶಗಳೂ ಸುತ್ತುವರಿದು, ದೇವಪಥದಲ್ಲಿ ಜೀವಕ್ಕೂ ಸಂಪತ್ತಿಗೂ ಹಾನಿಯುಂಟಾಗಿ ಅಸಮಾಧಾನಕರವಾದ ಪರಿಸ್ಥಿತಿಯಲ್ಲಿದ್ದುಕೊಂಡು, ಸಾಂತ್ವನ ಮತ್ತು ಸಮಾಧಾನ ನೀಡುವಂತಹ ದೇವವಾಣಿಯೂ ದಿವ್ಯ ದರ್ಶನವೂ ಸ್ವಪ್ನದರ್ಶನವೂ ದೇವನ ಪರೀಕ್ಷೆಯೆಂಬಂತೆ ಸ್ಥಗಿತಗೊಂಡು, ಭಯಂಕರವಾದ ಪರಿಸ್ಥಿತಿಗಳನ್ನು ಅನುಭವಿಸುವ ಸಂದರ್ಭಗಳಲ್ಲೂ ಅಧೈರ್ಯವನ್ನು ತೋರಿಸದೆ, ಹೇಡಿಯಂತೆ ಹಿಮ್ಮೆಟ್ಟದೆ, ವಿಶ್ವಾಸದಲ್ಲಿ ಬಲಗುಂದದೆ, ಸತ್ಯನಿಷ್ಠೆ ಮತ್ತು ಸ್ಥಿರಚಿತ್ತತೆಗೆ ಕುಂದುಂಟಾಗದೆ, ಮಾನಹಾನಿಯುಂಟಾದರೂ ಅಸಂತುಷ್ಟಿ ತೋರಿಸದೆ ಸ್ವಂತ ನಿಲುವಿಗಾಗಿ ಪರರ ಸಹಾಯವನ್ನು ನಿರೀಕ್ಷಿಸದೆ, ದೇವನ ಸಾಂತ್ವನ ವಚನಗಳನ್ನಾಗಲಿ ಆಶಿಸದೆ, ಬಲಹೀನತೆಯಲ್ಲೂ ನಿಸ್ಸಹಾಯಕತೆಯಲ್ಲೂ ಮನಃಚಾಂಚಲ್ಯವನ್ನು ತೋರಿಸದೆಯೂ ಅದೃಷ್ಟವನ್ನು ಹಳಿಯದೆಯೂ ಗೋಳಿಡದೆಯೂ ದೇವೇಚ್ಛೆಗೆ ಸಂತೃಪ್ತನಾಗಿದ್ದುಕೊಂಡು ಆತ್ಮತ್ಯಾಗದ ಸನ್ನದ್ಧತೆಯಲ್ಲಿ ಮುಂದಕ್ಕೆ ಸಾಗುವುದೇ ಪರಿಪೂರ್ಣ ಹಾಗೂ ಪರಮ ಸ್ಥಿರಭಕ್ತಿಯಾಗಿದೆ. ಹೀಗೆ ಬಹುಮುಖ ಪರೀಕ್ಷಾ ಘಟ್ಟವನ್ನು ವಿಜಯಕರವಾಗಿ ಎದುರಿಸುವ ಸ್ಥಿರಚಿತ್ತತೆ ದೇವದರ್ಶನಕ್ಕೆ ಅರ್ಹವಾಗುತ್ತದೆ. ಈ ಮಹತ್ತಾದ ಸ್ಥಿರೋತ್ಸಾಹದ ಆಧ್ಯಾತ್ಮಿಕ ಸುವಾಸನೆ ಪ್ರವಾದಿಗಳ, ಸತ್ಯಸಂಧರಾದ ಮಹಾ ಪುರುಷರ ಮತ್ತು ಹುತಾತ್ಮರಾದ ಮಹಾತ್ಮರ ಮಣ್ಣಿನಿಂದ ಈಗಲೂ ಸೂಸುತ್ತಿದೆ. ಇದರ ಬಗ್ಗೆ ಸೂರಃ ಫಾತಿಹದ ಈ ಪ್ರಾರ್ಥನಾ ವಾಕ್ಯದಲ್ಲಿಯೂ ಸೂಚಿಸಲ್ಪಟ್ಟಿದೆ:

اِهْدِنَا الصِّرَاطَ الْمُسْتَقِيْمَ - صِرَاطَ الَّذِيْنَ اَنْعَمْتَ عَلَيْهِمْ

> ಹೇ ದೇವಾ, ಯಾವ ದಾರಿಯನ್ನು ಅನುಸರಿಸುವುದರಿಂದ ನಿನ್ನ ಅನುಗ್ರಹ ಮತ್ತು ಪ್ರೀತಿ ಪ್ರಾಪ್ತವಾಗುವುದೋ, ಆ ಸ್ಥಿರತೆಯ ಮಾರ್ಗದಲ್ಲಿ ನೀನು ನಮ್ಮನ್ನು ನಡೆಸು. (1:6,7)

ಇದೇ ಸಂಗತಿಯನ್ನು ಪವಿತ್ರ ಖುರ್ಆನಿನ ಬೇರೊಂದು ಪ್ರಾರ್ಥನಾ ವಾಕ್ಯದಲ್ಲಿ ಸಹ ಹೀಗೆ ಸೂಚಿಸಲಾಗಿದೆ:

رَبَّنَآ اَفۡرِغۡ عَلَيۡنَا صَبۡرًا وَّ تَوَفَّنَا مُسۡلِمِيۡنَ

ಹೇ ಪ್ರಭೂ, ಕಷ್ಟಾವಸ್ಥೆಯಲ್ಲಿ ಸಹನೆಯುಂಟಾಗಲಿಕ್ಕೆ ನೀನು ನಮಗೆ ಮನಃಶಾಂತಿಯನ್ನು ಪ್ರದಾನ ಮಾಡಿ, ನಮ್ಮ ಮರಣ ಇಸ್ಲಾಮಿನಲ್ಲಿ, ಎಂದರೆ ದೇವಹಿತಾನುಸರಣೆಯಲ್ಲಿ ಆಗಲಿಕ್ಕೆ ನಮ್ಮನ್ನು ಅನುಗ್ರಹಿಸು. **(7:127)**

ದುಃಖ ಮತ್ತು ಸಂಕಷ್ಟ ಕಾಲಗಳಲ್ಲಿ ದೇವನು ತನ್ನ ಪ್ರೀತಿಯ ಭಕ್ತರ ಹೃದಯದಲ್ಲಿ ಒಂದು ತೇಜಸ್ಸನ್ನು ಇಳಿಸುವನು. ಈ ದಿವ್ಯ ಪ್ರಕಾಶದಿಂದ ಶಕ್ತಿ ಪಡೆಯುವುದರಿಂದ ಅವರು ಸಕಲ ವಿಧ ಸಂಕಷ್ಟಗಳನ್ನು ಶಾಂತಚಿತ್ತದಿಂದ ಎದುರಿಸುತ್ತಾರೆ. ದೇವಮಾರ್ಗದಲ್ಲಿ ತಮ್ಮ ಪಾದಗಳಲ್ಲಿ ಸಿಲುಕುವ ಸಂಕೋಲೆಗಳನ್ನು ಅವರು ಸತ್ಯವಿಶ್ವಾಸದ ಮಾಧುರ್ಯದಿಂದ ಚುಂಬಿಸುತ್ತಾರೆ. ದೇವಭಕ್ತನಿಗೆ ಆಪತ್ತುಗಳೂ ಸಂಕಷ್ಟಗಳೂ ಬಂದೆರಗಿ ಮೃತ್ಯುವನ್ನು ಅಭಿಮುಖವಾಗಿ ಕಾಣುವಾಗ, ಆತನು ತನ್ನ ಸಂರಕ್ಷಕನಾದ ದೇವನೊಡನೆ ದುಃಖ ವಿಮುಕ್ತಿಗಾಗಿ ವೃಥಾ ಕಲಹ ಆರಂಭಿಸುವುದಿಲ್ಲ. ಆ ಸಂದರ್ಭದಲ್ಲಿ ಸಂಕಷ್ಟ ನಿವಾರಣೆ ಮತ್ತು ದುಃಖ ವಿಮೋಚನೆಗಾಗಿ ಛಲವಿಡಿದು ಗೋಳಾಡುವುದು ದೇವೇಚ್ಛೆಯನ್ನು ವಿರೋಧಿಸುವುದಾಗಿದೆ. ಅದು ಪರಿಪೂರ್ಣವಾದ ದೇವಹಿತಾನುಸರಣೆಗೆ ವಿರುದ್ಧವಾಗಿದೆ. ಯಥಾರ್ಥ ದೇವಪ್ರೇಮಿ ಕಷ್ಟಾನುಭವ ಕಾಲದಲ್ಲಿ ತನ್ನ ಹೆಜ್ಜೆಯನ್ನು ಮುಂದಕ್ಕಲ್ಲದೆ ತುಸು ಮಾತ್ರವಾದರೂ ಹಿಂದಕ್ಕಿಡುವುದಿಲ್ಲ. ಈ ಘಟ್ಟದಲ್ಲಿ ಅವನು ಜೀವವನ್ನು ತುಚ್ಛವೆಂದು ಗಣಿಸಿ, ಜೀವದ ಹಂಗು ತೊರೆದು ದೇವೇಚ್ಛೆಗಾಗಿ ಸಂಪೂರ್ಣ ವಿಧೇಯನಾಗಿದ್ದುಕೊಂಡು ಅವನ ಪ್ರೀತಿಯನ್ನು ಮಾತ್ರ ಆಶಿಸುತ್ತಾನೆ. ಇಂತಹ ಭಕ್ತನ ಕುರಿತು ಪವಿತ್ರ ಖುರ್ಆನಿನಲ್ಲಿ ಹೀಗೆ ಹೇಳಲಾಗಿದೆ:

وَمِنَ النَّاسِ مَنۡ يَّشۡرِىۡ نَفۡسَهُ ابۡتِغَآءَ مَرۡضَاتِ اللّٰهِ‌ؕ وَاللّٰهُ رَءُوۡفٌ ۢ بِالۡعِبَادِ

ದೇವನ ಪ್ರಿಯ ದಾಸನು ತನ್ನ ಜೀವವನ್ನು ದೇವಪಥದಲ್ಲಿ ಅರ್ಪಿಸಿ ಅದರ ಬದಲಿಗೆ ದೇವಸಂತುಷ್ಟಿಯನ್ನು ಪಡೆಯುತ್ತಾನೆ. ಇಂತಹವರೊಡನೆ ದೇವನು ವಿಶಿಷ್ಟ ರೀತಿಯಲ್ಲಿ ಕರುಣೆಯುಳ್ಳವನಾಗುತ್ತಾನೆ. **(2:208)**

ಸಂಕ್ಷಿಪ್ತವಾಗಿ, ದೇವನನ್ನು ಪಡೆಯಲಿಕ್ಕಾಗಿ ನಮ್ಮನ್ನು ಕೊಂಡೊಯ್ಯಲು ಶಕ್ತವಾದ ಸ್ಥಿರಚಿತ್ತತೆಯ ಅಥವಾ ಸ್ಥೈರ್ಯದ ಮೂಲತತ್ವ ಮೇಲೆ ವಿವರಿಸಲ್ಪಟ್ಟಿದೆ. ಗ್ರಹಿಸಲು ಮನಸ್ಸುಳ್ಳವರು ಗ್ರಹಿಸಿಕೊಳ್ಳಲಿ.

ಜೀವಿತೋದ್ದೇಶ ಸಿದ್ಧಿಯ **ಏಳನೆಯ ಮಾರ್ಗ** ಸಜ್ಜನರೊಡನೆ ಒಡನಾಟ ಮತ್ತು ಅವರ ಉತ್ತಮ ಮಾದರಿಯ ಅನುಕರಣೆಯಾಗಿದೆ. ಪ್ರವಾದಿಗಳ ಆಗಮನದ ಪ್ರಧಾನ ಉದ್ದೇಶಗಳಲ್ಲಿ ಒಂದು ಇದೇ ಆಗಿದೆ. ಪರಿಪೂರ್ಣವಾದ ಮಾದರಿಯನ್ನು ಅವಶ್ಯಪಡುವುದು ಮನುಷ್ಯನ ಸಹಜಗುಣವಾಗಿದೆ. ಪರಿಪೂರ್ಣ ಆದರ್ಶ ಅವನಲ್ಲಿ ಸತ್ಕರ್ಮದ ಆಸಕ್ತಿಯನ್ನೂ ಉತ್ಸಾಹವನ್ನೂ ವೃದ್ಧಿಗೊಳಿಸುತ್ತದೆ. ಉತ್ಕೃಷ್ಟ ಆದರ್ಶವನ್ನು ಅನುಕರಿಸದವನು ಆಲಸಿಗನಾಗಿ, ಕ್ರಮೇಣ ಸತ್ಕರ್ಮ ಪಥದಿಂದ ದೂರಸರಿಯುತ್ತಾನೆ. ಆದ್ದರಿಂದಲೇ ಪವಿತ್ರ ಖುರ್‌ಆನ್ ಹೀಗೆ ಬೋಧಿಸುತ್ತದೆ:

كُوْنُوْا مَعَ الصّٰدِقِيْنَ

ನೀವು ಸಾತ್ವಿಕರ ಸಹವಾಸ ಬೆಳೆಸಿರಿ. **(9:119)**

صِرَاطَ الَّذِيْنَ اَنْعَمْتَ عَلَيْهِمْ

ನಿಮಗೆ ಮುಂಚೆ ಅನುಗ್ರಹ ಸಿದ್ಧಿಸಿದವರ ಮಾರ್ಗವನ್ನು ಅನುಸರಿಸಿರಿ. **(1:7)**

ಜೀವಿತೋದ್ದೇಶ ಸಿದ್ಧಿಯ **ಎಂಟನೆಯ ಮಾರ್ಗ** ದೇವನಿಂದ ದಿವ್ಯದರ್ಶನ ಹಾಗೂ ದಿವ್ಯವಾಣಿಯನ್ನು ಪಡೆಯುವುದು ಮತ್ತು ಪಾವನವಾದ ಸ್ವಪ್ನಗಳನ್ನು ದರ್ಶಿಸುವುದಾಗಿದೆ. ದೇವನೆಡೆಗೆ ಸಾಗುವ ಸಂಚಾರ ಪಥವು ಕ್ಲೇಶಕರವೂ ದುಃಖಪೂರ್ಣವೂ ಆದ ಗೂಢ ಮಾರ್ಗವಾದುದರಿಂದ ಆಧ್ಯಾತ್ಮಿಕ ದಾರಿಹೋಕನು ಈ ಸತ್ಪಥದಿಂದ ವ್ಯತಿಕ್ರಮಿಸಲಿಕ್ಕೆ ಯಾ ಗುರಿಸಾಧನೆಯ ಕುರಿತು ಹತಾಶನಾಗಿ ಸಂಚಾರವನ್ನು ಮುಂದುವರಿಸಿಕೊಂಡು ಹೋಗದಿರಲಿಕ್ಕೆ ಅವಕಾಶವಿದೆ. ಆದ್ದರಿಂದ ಪರಮ ದಯಾವಂತನಾದ ದೇವನು ಆಧ್ಯಾತ್ಮಿಕ ಪಥದಲ್ಲಿ ಸಂಚರಿಸುವ ತನ್ನ ಭಕ್ತನನ್ನು ಸಾಂತ್ವನಗೊಳಿಸಿ, ಅವನಿಗೆ ಆಶ್ವಾಸನೆಯನ್ನಿತ್ತು, ಹಿಡಿದ ಹಾದಿಯಲ್ಲಿ ಮುಂದಕ್ಕೆ ಸಾಗಲು ಪ್ರೋತ್ಸಾಹ ಕೊಟ್ಟು ಆತನ ಆಸಕ್ತಿಯನ್ನು ವೃದ್ಧಿಗೊಳಿಸುವನು. ದೇವನ ಅಲಂಘ್ಯವಾದ ಈ ನಿಯಮ ಆಧ್ಯಾತ್ಮಿಕ ಮಾರ್ಗದಲ್ಲಿ ಸಂಚರಿಸುವ ಭಕ್ತರಲ್ಲಿ ಗೋಚರಿಸುತ್ತದೆ. ಎಂದರೆ, ದೇವನು ದಿವ್ಯವಚನಗಳಿಂದಲೂ ಪ್ರಕಟನೆಗಳಿಂದಲೂ ತನ್ನ ಸಹಾಯದ ಕುರಿತು ಅವರಿಗೆ ಮನದಟ್ಟು ಮಾಡಿಕೊಡುವನು. ಹೀಗೆ, ದೈವಿಕ ಸಾಂತ್ವನ ವಚನಗಳಿಂದ ಶಕ್ತಿ ಪಡೆದುಕೊಂಡು ಅವರು ಬಹಳ ಉತ್ಸಾಹದಿಂದ ಸಂಚಾರವನ್ನು ಮುಂದುವರಿಸುತ್ತಾರೆ. ಈ ಬಗ್ಗೆ ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

لَهُمُ الْبُشْرٰى فِى الْحَيٰوةِ الدُّنْيَا وَفِى الْاٰخِرَةِ

ಅವರಿಗೆ ಐಹಿಕ ಜೀವಿತದಲ್ಲೂ ಪಾರತ್ರಿಕ ಜೀವಿತದಲ್ಲೂ ಶುಭವಾರ್ತೆಗಳಿವೆ.

**(10:65)**

ಗುರಿ ಸಾಧನೆಗೆ ಸಹಾಯಕವಾದ ಬೇರೆಯೂ ಕೆಲವು ಮಾರ್ಗಗಳು ಪವಿತ್ರ ಖುರ್‌ಆನಿನಲ್ಲಿ ಪ್ರಸ್ತಾಪಿಸಲ್ಪಟ್ಟಿವೆ. ಆದರೆ ವಿಸ್ತಾರಭಯ ಕಾರಣದಿಂದ ಅವುಗಳ ಕುರಿತು ಇಲ್ಲಿ ಪ್ರತಿಪಾದಿಸಲು ಸಾಧ್ಯವಿಲ್ಲ.

**ನಾಲ್ಕನೆಯ ಪ್ರಶ್ನೆ:**

## ಧರ್ಮ ನಿಯಮಾನುಸರಣೆಯ ಫಲ

ನಾಲ್ಕನೆಯ ಪ್ರಶ್ನೆ, ಧರ್ಮಶಾಸ್ತ್ರ ನಿಯಮವನ್ನು ಅನುಸರಿಸಿ ಜೀವಿಸುವುದರಿಂದ ಮನುಷ್ಯನಿಗೆ ಈ ಲೋಕದಲ್ಲೂ ಪರಲೋಕದಲ್ಲೂ ಉಂಟಾಗುವ ಫಲವೇನೆಂದಾಗಿದೆ. ಇದರ ಉತ್ತರ ಒಂದು ರೀತಿಯಲ್ಲಿ ಒಂದನೆಯ ಪ್ರಶ್ನೆಯನ್ನು ಪ್ರತಿಪಾದಿಸುವಾಗ ನೀಡಲಾಗಿದೆ. ಎಂದರೆ, ದೈವಿಕವಾದ ಪರಿಪೂರ್ಣ ಧರ್ಮದ ಪ್ರಯೋಜನ, ಅದು ಮೃಗತುಲ್ಯನನ್ನು ಮನುಷ್ಯನನ್ನಾಗಿ, ನಂತರ ಅವನನ್ನು ನೈತಿಕ ಗುಣವನ್ನು ಹೊಂದಿದ ಮನುಷ್ಯನನ್ನಾಗಿ, ಕೊನೆಗೆ ಆಧ್ಯಾತ್ಮಿಕ ಸಿದ್ಧಿಗಳನ್ನು ಗಳಿಸಿದ ದೇವವಭಕ್ತನನ್ನಾಗಿ ಪರಿವರ್ತಿಸುತ್ತದೆ.

## ಪರಿಪೂರ್ಣ ಮನುಷ್ಯನ ಗುಣಗಳು

ವಿಶೇಷವಾಗಿ, ಧರ್ಮಶಾಸ್ತ್ರಕ್ಕೆ ಮನುಷ್ಯನ ಮೇಲಿರುವ ಸ್ವಾಧೀನ ಶಕ್ತಿಯೇನೆಂದರೆ, ಅದು ಅವನ ಜೀವಿತವನ್ನು ನಿಯಂತ್ರಿಸುತ್ತದೆ. ಈ ನಿಯಂತ್ರಣದ ಪರಿಣಾಮದಿಂದ ಅವನು ಸಹಜೀವಿಗಳ ಹಕ್ಕುಗಳ ಬಗ್ಗೆ ಸರಿಯಾದ ಜ್ಞಾನ ಪಡೆಯುತ್ತಾನೆ. ಅವರೊಡನೆ ವರ್ತಿಸುವಾಗ ನ್ಯಾಯ, ಪರೋಪಕಾರ, ಸಹಾನುಭೂತಿ ಎಂಬೀ ಸ್ವಭಾವಗಳನ್ನು ಯಥೋಚಿತವಾಗಿ ತೋರ್ಪಡಿಸುತ್ತಾನೆ. ತನಗೆ ದೇವನು ನೀಡಿದ ಜ್ಞಾನ, ಸುಖ – ಸಂಪತ್ತು ಮತ್ತು ಇತರ ಅನುಗ್ರಹಗಳಲ್ಲಿ ಅನ್ಯರನ್ನೂ ಯಥೋಚಿತ ಪಾಲುಗಾರರನ್ನಾಗಿ ಮಾಡುತ್ತಾನೆ. ಸೂರ್ಯನಂತೆ ಅವನು ತನ್ನ ಪ್ರಕಾಶವನ್ನು ಎಲ್ಲರ ಮೇಲೂ ಹರಡುತ್ತಾನೆ. ಚಂದ್ರನಂತೆ ಅವನು ಅತ್ಯುನ್ನತನಾದ ದೇವನಿಂದ ಪ್ರಕಾಶವನ್ನು ಪಡೆದುಕೊಂಡು ಅನ್ಯರಿಗೆ ತಲುಪಿಸುತ್ತಾನೆ. ಹಗಲಿನಂತೆ ಅವನು ಪ್ರಕಾಶಭರಿತನಾಗಿ ಸತ್ಕರ್ಮ ಮತ್ತು ಒಳಿತಿನ ಮಾರ್ಗಗಳನ್ನು ಜನರಿಗೆ ತೋರಿಸಿಕೊಡುತ್ತಾನೆ. ರಾತ್ರಿಯಂತೆ ಅವನು ಬಲಹೀನರ ದೌರ್ಬಲ್ಯಗಳನ್ನು ಮರೆಮಾಡಿ ಬಳಲಿದವರಿಗೆ ವಿಶ್ರಾಂತಿ ನೀಡುತ್ತಾನೆ. ಅವನು ಆಕಾಶದಂತೆ ನಿರಾಶ್ರಿತರಿಗೆ ಆಶ್ರಯಕೊಟ್ಟು ಸಂದರ್ಭಾನುಸಾರ ತನ್ನ ಅನುಗ್ರಹದ ಮಳೆಯನ್ನು ಅವರ ಮೇಲೆ ಸುರಿಸುತ್ತಾನೆ. ಭೂಮಿಯಂತೆ ಅವನು ಅತ್ಯಂತ ವಿನಯದಿಂದ ಇತರರಿಗೆ ಸುಖ ಕ್ಷೇಮ ನೀಡಲಿಕ್ಕಾಗಿ ಸ್ವಯಂ ಕಷ್ಟವನ್ನು ಸಹಿಸಿಕೊಂಡು ಸಕಲರನ್ನೂ

ತನ್ನ ಸಹಾಯವಲಯದಲ್ಲಿ ಒಟ್ಟುಗೂಡಿಸಿ ವಿವಿಧ ತರದ ಆಧ್ಯಾತ್ಮಿಕ ಫಲಗಳನ್ನು ಅವರ ಮುಂದಿರಿಸುತ್ತಾನೆ. ಪರಿಪೂರ್ಣ ಧರ್ಮನಿಯಮದಿಂದ ಈ ಬಗೆಯ ಪರಿವರ್ತನೆಯುಂಟಾಗುತ್ತದೆ. ಈ ನಿಯಮಶಾಸ್ತ್ರಕ್ಕೆ ಅನುಸಾರವಾಗಿ ಜೀವಿಸುವವನು ಸೃಷ್ಟಿಕರ್ತನಿಗಾಗಿ ತನ್ನ ಕರ್ತವ್ಯಗಳನ್ನು ಅನುಷ್ಠಿಸಲಿಕ್ಕೂ ಸಹಜೀವಿಗಳಿಗಾಗಿ ತನ್ನ ಹೊಣೆಯನ್ನು ಸಂಪೂರ್ಣವಾಗಿ ನಿರ್ವಹಿಸಲಿಕ್ಕೂ ಶಕ್ತನಾಗುತ್ತಾನೆ. ಇಂತಹ ಭಕ್ತನು ದೇವಪ್ರೀತಿಯಲ್ಲಿ ಲೀನನಾಗಿ ಸಹಜೀವಿಗಳ ಯಥಾರ್ಥ ಸೇವಕನಾಗಿ ಮಾರ್ಪಡುತ್ತಾನೆ. ಧರ್ಮಶಾಸ್ತ್ರಕ್ಕೆ ಅನುಗುಣವಾದ ಜೀವಿತ ಮನುಷ್ಯನಲ್ಲಿ ಇಲ್ಲಿ ಉಂಟುಮಾಡುವ ಪ್ರಭಾವ ಇದಾಗಿದೆ.

ಆದರೆ ಮರಣಾನಂತರ ಪರಲೋಕದಲ್ಲಿ ಅವನಿಗೆ ಸಿದ್ಧಿಸುವ ಫಲವಾದರೋ, ದೇವನೊಡನಿರುವ ಆಧ್ಯಾತ್ಮಿಕ ಸಂಬಂಧ ಆ ದಿನದಂದು ಪ್ರತ್ಯಕ್ಷದರ್ಶನ ರೂಪದಲ್ಲಿ ಅನುಭವವಾಗುತ್ತದೆ. ಸತ್ಯವಿಶ್ವಾಸ ಮತ್ತು ಯಥೋಚಿತವಾದ ಸತ್ಕರ್ಮದ ಪ್ರೇರಣೆಯಿಂದ ಅವನು ದೇವನೊಂದಿಗಿರುವ ಪ್ರೀತಿಯ ಕಾರಣದಿಂದ ಮಾಡುವ ಸೃಷ್ಟಿ ಸೇವೆ ಸ್ವರ್ಗದ ವೃಕ್ಷಗಳಾಗಿಯೂ ನದಿಗಳಾಗಿಯೂ ರೂಪಾಂತರಗೊಳ್ಳುವುವು. ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳಲಾಗಿದೆ:

وَالشَّمْسِ وَضُحٰهَا - وَالْقَمَرِ اِذَا تَلٰهَا - وَالنَّهَارِ اِذَا جَلّٰهَا - وَالَّيْلِ اِذَا يَغْشٰهَا -
وَالسَّمَآءِ وَمَا بَنٰهَا - وَالْاَرْضِ وَمَا طَحٰهَا - وَنَفْسٍ وَّمَا سَوّٰهَا - فَاَلْهَمَهَا فُجُوْرَهَا
وَتَقْوٰهَا - قَدْ اَفْلَحَ مَنْ زَكّٰهَا - وَقَدْ خَابَ مَنْ دَسّٰهَا - كَذَّبَتْ ثَمُوْدُ بِطَغْوٰهَآ - اِذِ
انْبَعَثَ اَشْقٰهَا - فَقَالَ لَهُمْ رَسُوْلُ اللّٰهِ نَاقَةَ اللّٰهِ وَسُقْيٰهَا - فَكَذَّبُوْهُ فَعَقَرُوْهَا - فَدَمْدَمَ
عَلَيْهِمْ رَبُّهُمْ بِذَنْۢبِهِمْ فَسَوّٰهَا - وَلَا يَخَافُ عُقْبٰهَا

ಸೂರ್ಯ ಮತ್ತು ಅದರ ಪ್ರಕಾಶದಾಣೆ, ಸೂರ್ಯನನ್ನು ಹಿಂಬಾಲಿಸುವ (ಎಂದರೆ ಸೂರ್ಯನಿಂದ ಪ್ರಕಾಶವನ್ನು ಪಡೆದು ಆ ಬೆಳಕನ್ನು ಜನರಿಗೆ ತಲಪಿಸುವ) ಚಂದ್ರನಾಣೆ, ಸೂರ್ಯನ ಕಾಂತಿಯನ್ನು ಬಹಿರಂಗಪಡಿಸುವ ಮತ್ತು ಮಾರ್ಗಗಳನ್ನು ಸ್ಪಷ್ಟವಾಗಿ ತೋರಿಸುವ ಹಗಲಿನಾಣೆ, ಅಂಧಕಾರವನ್ನು ಹರಡಿಸಿ ಸರ್ವವನ್ನೂ ಕತ್ತಲೆಯ ಮರೆಯಲ್ಲಿರಿಸುವ ರಾತ್ರಿಯಾಣೆ, ಆಕಾಶ ಮತ್ತು ಅದರ ಸೃಷ್ಟಿಯ ಆದಿಕಾರಣದಾಣೆ, ಭೂಮಿ ಮತ್ತು ಅದನ್ನು ಹರಡಿಸಿರುವ ಆದಿಕಾರಣದಾಣೆ, ಆತ್ಮ ಮತ್ತು ಅದನ್ನು ಸರ್ವ ವಸ್ತುಗಳೊಂದಿಗೆ ತುಲ್ಯಗುಣದಲ್ಲಿರಿಸಿದ ಅದರ ಶ್ರೇಷ್ಠತೆಯಾಣೆ, (ಎಂದರೆ, ಎಲ್ಲ ವಸ್ತುಗಳಲ್ಲೂ ಬೇರೆ ಬೇರೆಯಾಗಿ ಗೋಚರಿಸುವ

ವಿಶೇಷ ಗುಣಗಳೆಲ್ಲ, ಪರಿಪೂರ್ಣತೆ ಪಡೆದ ಮನುಷ್ಯನ ಆತ್ಮದಲ್ಲಿ ಒಟ್ಟಾಗಿ ಸಮ್ಮಿಳಿತವಾಗಿರುವುದರಿಂದ ಆ ವಸ್ತುಗಳಲ್ಲಿ ಪ್ರತಿಯೊಂದು ಪ್ರತ್ಯೇಕ ಪ್ರತ್ಯೇಕವಾಗಿ ಮಾನವ ಕುಲಕ್ಕೆ ಗೈಯುವ ಸೇವೆಗಳನ್ನೆಲ್ಲ ಮೊದಲು ಹೇಳಿದಂತೆ ಆ ಉತ್ತಮ ಮನುಷ್ಯನು ಒಬ್ಬಂಟಿಗನಾಗಿ ನಿರ್ವಹಿಸುವನು.) ಹೀಗೆ ಯಾರು ತನ್ನ ಆತ್ಮವನ್ನು ಪರಿಶುದ್ಧಗೊಳಿಸುತ್ತಾನೋ, ಎಂದರೆ, ಸೂರ್ಯ ಚಂದ್ರಾದಿಗಳಂತೆ ದೇವೇಚ್ಛೆಗೆ ವಿಧೇಯನಾಗಿ ಮಾನವ ಸೇವೆಯಲ್ಲಿ ನಿರತನಾಗಿರುತ್ತಾನೋ, ಅವನು ಮೋಕ್ಷ ಪಡೆಯುತ್ತಾನೆ; ಮೃತ್ಯುವಿನಿಂದ ವಿಮುಕ್ತನಾಗುತ್ತಾನೆ. **(91:2–10)**

ಇಲ್ಲಿ ಮರಣದಿಂದ ವಿಮುಕ್ತಿ ಅಥವಾ ಅಮರ ಜೀವಿತವೆಂಬುದರ ತಾತ್ಪರ್ಯ ಭಾವಿ ಕಾಲದಲ್ಲಿ ಪರಿಪೂರ್ಣ ಮನುಷ್ಯನಿಗೆ ಲಭಿಸುವ ನಿತ್ಯಜೀವನವೆಂದಾಗಿದೆ. ಇದರಿಂದ, ಧರ್ಮ ನಿಯಮಾನುಸರಣೆಯಿಂದ ಭಾವಿ ಜೀವಿತದಲ್ಲಿ ಪ್ರಾಪ್ತವಾಗುವ ಪ್ರತಿಫಲವು ದೇವದರ್ಶನವೆಂಬ ಆಹಾರದಿಂದ ಶಾಶ್ವತವಾಗಿರುವಂತಹ ನಿತ್ಯಜೀವನ ವೆಂದು ತಿಳಿದುಬರುತ್ತದೆ.

ಅದೇ ಅಧ್ಯಾಯ ಹೀಗೆ ಮುಂದುವರಿಯುತ್ತದೆ:

> ಯಾರು ತನ್ನ ಆತ್ಮವನ್ನು ಮಣ್ಣುಗೂಡಿಸಿದನೋ ಅಥವಾ ಕೆಡಿಸಿದನೋ (ಎಂದರೆ, ಉತ್ಕೃಷ್ಟ ಗುಣಗಳನ್ನು ಗಳಿಸಲು ಶಕ್ತಿ ಸಾಮರ್ಥ್ಯ ನೀಡಲ್ಪಟ್ಟಿದ್ದರೂ ಯಾರು ಅದರ ಪ್ರಯೋಜನವನ್ನು ಪಡೆಯಲು ಪ್ರಯತ್ನಿಸದೆ ಅಶುದ್ಧ ಜೀವಿತ ನಡೆಸಿ ಈ ಲೋಕವನ್ನು ತ್ಯಜಿಸುವನೋ) ಅವನು ನಾಶ ಹೊಂದುತ್ತಾನೆ, ಜೀವಿತದ ಬಗ್ಗೆ ನಿರಾಶೆಪಡುತ್ತಾನೆ. **(91:11)**

ಇನ್ನೂ ಉದಾಹರಣೆಯ ರೂಪದಲ್ಲಿ ಆ ಅಧ್ಯಾಯ ಮುಂದುವರಿಯುತ್ತದೆ:

> ಆತ್ಮವನ್ನು ಕೆಡಿಸಿದ ನಿರ್ಭಾಗ್ಯವಂತನ ಸ್ಥಿತಿ, 'ದೇವನ ಒಂಟೆ' ಎಂದು ಕರೆಯಲ್ಪಟ್ಟ ಒಂಟೆಯನ್ನು ಗಾಯಗೊಳಿಸಿ ತನ್ನ ಚಿಲುಮೆಯಿಂದ ನೀರು ಕುಡಿಯದಂತೆ ಮಾಡಿದ 'ಸಮೂದ್' ಜನಾಂಗದವರ ಸ್ಥಿತಿಯನ್ನು ಹೋಲುತ್ತದೆ. **(91:12–14)**

ಆತ್ಮವನ್ನು ಶುದ್ಧೀಕರಿಸದ ಭಾಗ್ಯಹೀನರು ವಾಸ್ತವದಲ್ಲಿ 'ದೇವನ ಒಂಟೆ'ಯನ್ನು ಗಾಯಗೊಳಿಸಿ, ತನ್ನ ಬುಗ್ಗೆಯಿಂದ ಅದು ನೀರು ಕುಡಿಯದಂತೆ ತಡೆಯುವವನಿಗೆ ಸಮಾನ. ಇದರಿಂದ ತಿಳಿದುಬರುವುದೇನೆಂದರೆ, ಮನುಷ್ಯನ ಆತ್ಮ ದೇವನ ಒಂಟೆ; ಅದು ಅವನು ಸವಾರಿ ಮಾಡುವ ವಾಹನ. ಇನ್ನೂ ಸ್ಪಷ್ಟವಾಗಿ ಹೇಳುವುದಾದರೆ, ಮನುಷ್ಯನ ಹೃದಯವು ದೇವನ ಮಹಾತ್ಮೆಗಳು ಪ್ರತ್ಯಕ್ಷಗೊಳ್ಳುವ ಸ್ಥಾನವಾಗಿದೆ. ಆ

ಒಂಟೆಯ ಬದುಕಿಗೋಸ್ಕರವಿರುವ ನೀರು ದೇವನ ಮೇಲಿನ ಪ್ರೀತಿ ಮತ್ತು ದೈವಿಕ ಜ್ಞಾನವಾಗಿದೆ.

ಅದೇ ಅಧ್ಯಾಯ ಹೀಗೆ ಮುಂದುವರಿಯುತ್ತದೆ:

> ಸಮೂದ್ ಜನಾಂಗದವರು ಒಂಟೆಯನ್ನು ಗಾಯಗೊಳಿಸಿ ನೀರು ಕುಡಿಯದಂತೆ ಅದನ್ನು ತಡೆದಾಗ ಅವರೆಲ್ಲರೂ ನಾಶಕ್ಕೆ ಗುರಿಯಾದರು. ದೇವನು ಅವರ ಮಕ್ಕಳನ್ನೂ ವಿಧವೆಯರನ್ನೂ ಕೂಡ ಲಕ್ಷ್ಯ ಮಾಡಲಿಲ್ಲ. **(91:15–16)**

ಹೀಗೆ ಯಾವೊಬ್ಬನು ತನ್ನ ಆತ್ಮವೆಂಬ ಒಂಟೆಯನ್ನು ಗಾಯಗೊಳಿಸಿ, ಅದರ ಪರಿಪೂರ್ಣತೆಗೆ ಶ್ರಮಿಸದೆ, ದೇವಾನುರಾಗವೆಂಬ ನೀರನ್ನು ಕುಡಿಯುವುದರಿಂದ ಅದನ್ನು ತಡೆಯುವನೋ ಅವನು ಸಹ ನಾಶವಾಗುವನು.

## ಪವಿತ್ರ ಖುರ್‌ಆನಿನ ಪ್ರಮಾಣವಚನಗಳ ತತ್ವ

ಸೂರ್ಯ ಚಂದ್ರಾದಿಗಳ ಮೇಲೆ ದೇವನು ಪ್ರಮಾಣ ಮಾಡಿದ್ದುದರಲ್ಲಿ ಗಹನವಾದೊಂದು ತತ್ವರಹಸ್ಯ ಅಡಕವಾಗಿದೆ. ಈ ರಹಸ್ಯವನ್ನು ಗ್ರಹಿಸದೆ ಇದ್ದುದರಿಂದ ಇಸ್ಲಾಮಿನ ವೈರಿಗಳಲ್ಲಿ ಹಲವರು ಈ ಬಗ್ಗೆ ದೋಷವನ್ನು ಕಾಣುತ್ತಾರೆ. ಪ್ರಮಾಣ ಮಾಡುವುದರ ಅಗತ್ಯ ದೇವನಿಗೇನಿದೆಯೆಂದೂ ಅವನು ಸೃಷ್ಟಿಸಿದ ವಸ್ತುಗಳ ಹೆಸರಿನಲ್ಲಿ ಆಣೆ ಹಾಕಿದ್ದು ಏಕೆಂದೂ ಅವರು ಆಕ್ಷೇಪಿಸುತ್ತಾರೆ. ಆದರೆ ಅವರ ತಿಳುವಳಿಕೆ ಕೇವಲ ಭೌಮಿಕವಾಗಿರುವುದರಿಂದಲೂ ಅವರಿಗೆ ಆಧ್ಯಾತ್ಮಿಕ ಜ್ಞಾನದ ಪ್ರಕಾಶ ಇಲ್ಲದೆ ಇದ್ದುದರಿಂದಲೂ ಪರಮಾರ್ಥ ಜ್ಞಾನವನ್ನು ಗ್ರಹಿಸಲು ಅವರಿಗೆ ಸಾಧ್ಯವಾಗುವುದಿಲ್ಲ. ಈ ವಿಷಯವನ್ನು ಸರಿಯಾಗಿ ತಿಳಿಯಬೇಕಿದ್ದರೆ ಪ್ರಮಾಣದ ಅರ್ಥವನ್ನೂ ಉದ್ದೇಶವನ್ನೂ ಪ್ರಥಮವಾಗಿ ಅರಿತುಕೊಳ್ಳಬೇಕಾಗಿದೆ. ಸಾಮಾನ್ಯವಾಗಿ ಒಂದು ವಿಷಯದಲ್ಲಿ ಪ್ರಮಾಣ ಮಾಡುವುದರ ಉದ್ದೇಶ ಆ ಸಂಗತಿಗೆ ರುಜುವಾತಾಗಿ ಒಂದು ಸಾಕ್ಷ್ಯವನ್ನು ತೋರಿಸುವುದಷ್ಟೆ. ಒಬ್ಬನು ತನ್ನ ವಾದವನ್ನು ರುಜುಪಡಿಸಲು ಸಾಕ್ಷ್ಯವೇನೂ ಇಲ್ಲದಿದ್ದರೆ, ಸರ್ವರಹಸ್ಯಗಳನ್ನು ಅರಿತಿರುವ ಹಾಗೂ ಸಕಲಕ್ಕೂ ಪ್ರಥಮ ಸಾಕ್ಷಿಯಾಗಿರುವ ದೇವನ ಪ್ರಮಾಣ ಮಾಡುತ್ತಾನೆ. ಈ ಪ್ರಮಾಣೋಚ್ಚರಣೆಯ ನಂತರ ದೇವನು ಮೌನಿಯಾಗಿದ್ದು, ತನ್ನ ಪ್ರಮಾಣದ ಫಲವಾಗಿ ತನ್ನ ಮೇಲೆ ದೇವಶಿಕ್ಷೆ ಎರಗದಿದ್ದರೆ, ತನ್ನ ವಾದದ ಸತ್ಯತೆಯನ್ನು, ದೇವನು ತನ್ನ ಸಾಕ್ಷ್ಯದ ಮೂಲಕ ದೃಢೀಕರಿಸಿದನೆಂಬ ರೀತಿಯಲ್ಲಿ ಆ ಪ್ರಮಾಣೋಚ್ಚಾರಕನು ದೇವನ ಪ್ರಮಾಣವನ್ನು ಮುಂದಿರಿಸುತ್ತಾನೆ. ಆದರೆ ಸೃಷ್ಟಿಗಳಿಗೆ ಮನುಷ್ಯನ ರಹಸ್ಯಗಳನ್ನು ಅರಿಯಲಿಕ್ಕಾಗಲಿ

ಮಿಥ್ಯಾ ಪ್ರಮಾಣದ ಫಲವಾಗಿ ಅವನನ್ನು ಶಿಕ್ಷಿಸಲಿಕ್ಕಾಗಲಿ ಶಕ್ತಿ ಇಲ್ಲವಾದುದರಿಂದ ಆ ವಸ್ತುಗಳ ಹೆಸರಿನಲ್ಲಿ ಆಣೆ ಹಾಕಬಾರದು. ಆದುದರಿಂದ ದೇವನು ಪ್ರಮಾಣ ಮಾಡುವುದಕ್ಕೆ ಮನುಷ್ಯರು ಪ್ರಮಾಣ ಮಾಡುವುದರ ಅರ್ಥ ಕಲ್ಪಿಸಬಾರದು. ದೈವಿಕ ಕರ್ಮ ಎರಡು ವಿಧ ಎಂಬುದಾಗಿ ನಿಸರ್ಗದಲ್ಲಿ ಗೋಚರಿಸುವ ದಿವ್ಯ ನಿಯಮ ವ್ಯವಸ್ಥೆಯಿಂದ ತಿಳಿದುಬರುತ್ತದೆ. ಒಂದು, ಎಲ್ಲರೂ ತಿಳಿದುಕೊಳ್ಳುವಂತಹ, ಭಿನ್ನಾಭಿಪ್ರಾಯಕ್ಕೆ ಎಡೆಯಿಲ್ಲದ ರೀತಿಯಲ್ಲಿ ಪ್ರತ್ಯಕ್ಷವಾಗಿರುವಂಥವು. ಇನ್ನೊಂದು, ತಿಳಿದುಕೊಳ್ಳುವಾಗ ತಪ್ಪು ಸಂಭವಿಸಬಹುದಾದಂತಹ ಹಾಗೂ ಭಿನ್ನಾಭಿಪ್ರಾಯಕ್ಕೆ ಎಡೆಗೊಡುವ ರೀತಿಯಲ್ಲಿ ಅನುಮಾನಾಸ್ಪದವಾಗಿರುವಂಥವು. ಆದುದರಿಂದ, ತನ್ನ ಪ್ರತ್ಯಕ್ಷಕರ್ಮದ ಸಾಕ್ಷ್ಯ ಮೂಲಕ, ಊಹಿಸಿ ತಿಳಿಯಬಹುದಾದ ಅದೃಶ್ಯಕರ್ಮದೆಡೆಗೆ ಮನುಷ್ಯರ ಗಮನವನ್ನು ಸೆಳೆಯುವುದೇ ಸರ್ವಜ್ಞನಾದ ದೇವನು ಪ್ರಮಾಣ ಮಾಡುವುದರ ಉದ್ದೇಶ.

ಮೇಲೆ ಉದ್ಧರಿಸಲಾದ ಪ್ರಮಾಣವಚನದಲ್ಲಿ ಪ್ರಸ್ತಾಪಿಸಲಾದಂತೆ ಸೂರ್ಯ, ಚಂದ್ರ, ಹಗಲು, ರಾತ್ರಿ, ಆಕಾಶ, ಭೂಮಿ ಇತ್ಯಾದಿಗಳಲ್ಲಿ ಮೇಲೆ ಹೇಳಿದಂತಹ ಗುಣಗಳಿವೆಯೆಂಬುದು ಸರ್ವವಿದಿತ. ಆದರೆ ಮನುಷ್ಯನ ಆತ್ಮದಲ್ಲಿ ಒಳಗೊಂಡಿರುವ ಇಂತಹ ವೈಶಿಷ್ಟ್ಯಗಳು ಎಲ್ಲರಿಗೂ ತಿಳಿಯುವಷ್ಟು ಸುವ್ಯಕ್ತವಲ್ಲ. ಒಟ್ಟಿನಲ್ಲಿ, ದೇವನು ತನ್ನ ವ್ಯಕ್ತಕರ್ಮಗಳನ್ನು ಅವ್ಯಕ್ತ ಕಾರ್ಯಗಳ ಪುರಾವೆಗೆ ಸಾಕ್ಷ್ಯವಾಗಿ ತೋರಿಸುತ್ತಾನೆ. ಎಂದರೆ, ಮನುಷ್ಯನ ಆತ್ಮದಲ್ಲಿ ಸ್ಥಿತಿಗೊಂಡಿರುವ ಗುಣಗಳ ಕುರಿತು ಸಂಶಯಪಡುವವರು ಸೂರ್ಯಚಂದ್ರಾದಿಗಳ ಸ್ಪಷ್ಟ ಗುಣಗಳ ಕುರಿತು ಚಿಂತನ ಮಾಡಬೇಕೆಂದೂ ಆಗ ಪ್ರತ್ಯಕ್ಷ ರೂಪದಲ್ಲಿ ಗೋಚರವಾಗುವ ಗುಣಗಳಿಂದ ಆತ್ಮದ ಗುಣಗಳನ್ನು ಅಂದಾಜು ಮಾಡಬಹುದೆಂದೂ ಈ ಪ್ರಮಾಣ ವಚನಗಳು ನಮಗೆ ಕಲಿಸುತ್ತವೆ. ವಾಸ್ತವದಲ್ಲಿ, ಮನುಷ್ಯನನ್ನು ಒಂದು ಚಿಕ್ಕ ಲೋಕವೆಂದು ಹೇಳಬಹುದು. ಅವನ ಆತ್ಮದಲ್ಲಿ ಸಮಸ್ತ ಪ್ರಪಂಚದ ಹ್ರಸ್ವರೂಪ ಅಡಕವಾಗಿದೆ. ಬ್ರಹ್ಮಾಂಡದ ಆಕಾಶಕಾಯಗಳು ಅವುಗಳ ವಿಶೇಷ ಶಕ್ತಿಗಳನ್ನು ಜೀವಜಾಲಗಳ ಸೇವೆಗಾಗಿ ವಿನಿಯೋಗಿಸುತ್ತವೆಯಷ್ಟೆ. ಹಾಗಿರುವಾಗ ಅತ್ಯುತ್ಕೃಷ್ಟ ಜೀವಿಯಾದ ಅತ್ಯುನ್ನತ ಸೃಷ್ಟಿಯಾದ ಮನುಷ್ಯನು ಸಹಜೀವಿಗಳಿಗೆ ಒಳಿತು ಮಾಡಲು ಅಸಮರ್ಥನೆಂದು ಭಾವಿಸುವುದು ವಿವೇಕರಹಿತವಲ್ಲವೇ?

ಸೂರ್ಯನಲ್ಲಿರುವಂತೆ ಮನುಷ್ಯಾತ್ಮದಲ್ಲೂ ಒಂದು ತೇಜಸ್ಸು ಅಥವಾ ವಿವೇಕ ಮತ್ತು ಜ್ಞಾನದ ಪ್ರಕಾಶ ಅಡಕಗೊಂಡಿದೆ. ಅದರ ಮೂಲಕ ಲೋಕವನ್ನಿಡೀ

ಪ್ರಕಾಶಮಯಗೊಳಿಸಲು ಅವನಿಗೆ ಸಾಧ್ಯವಿದೆ. ಚಂದ್ರನಂತೆ ಅವನು ಸರ್ವ ತೇಜಸ್ಸಿನ ಮೂಲವಾದ ದೇವನಿಂದ ದಿವ್ಯದರ್ಶನ, ದಿವ್ಯವಾಣಿ, ದಿವ್ಯ ಜ್ಞಾನ (ಇಲ್‌ಹಾಂ ಮತ್ತು ವಹ್ಯ್) ಇತ್ಯಾದಿಗಳನ್ನು ಪಡೆದು ಮಾನವೀಯ ಪರಿಪೂರ್ಣತೆ ಸಿದ್ಧಿಸದೆ ಇರುವವರಿಗೆ ಆ ಪ್ರಕಾಶವನ್ನು ಹಂಚುತ್ತಾನೆ. ಒಟ್ಟಿನಲ್ಲಿ, ಪ್ರವಾದಿತ್ವ ಪದವಿ ನಿರರ್ಥಕವೆಂದೂ ಸರ್ವೋನ್ನತನಾದ ದೇವನ ಕಡೆಯಿಂದಿರುವ ದೌತ್ಯ, ಧರ್ಮನಿಯಮ ಮತ್ತು ತತ್ವಗ್ರಂಥಗಳೆಲ್ಲ ವಂಚನೆ ಹಾಗೂ ಸ್ವಾರ್ಥದಿಂದ ಕೂಡಿದವುಗಳೆಂದೂ ಹೇಳುವುದು ಅವಿವೇಕವಾಗಿದೆ.

ಹಗಲು ಪ್ರಕಾಶಪೂರ್ಣವಾಗಿರುವುದರಿಂದ ಸಕಲ ಮಾರ್ಗಗಳೂ ಅವುಗಳ ಏರುತಗ್ಗುಗಳೂ ಸ್ಪಷ್ಟವಾಗಿ ಕಾಣಿಸುವ ಪ್ರಕಾರ, ಆಧ್ಯಾತ್ಮಿಕ ಪ್ರಭೆಯ ಹಗಲಿನಂತಿರುವ ಪರಿಪೂರ್ಣ ಮನುಷ್ಯನ ಆವಿರ್ಭಾವದಿಂದ ಎಲ್ಲ ಮಾರ್ಗಗಳೂ ಅಡೆತಡೆಗಳೂ ದೃಗ್ಗೋಚರವಾಗುತ್ತವೆ. ಆ ಸತ್ಪುರುಷನು ಸತ್ಯ ಮತ್ತು ಪ್ರಾಮಾಣಿಕತೆಯ ಉಜ್ವಲ ಪ್ರಕಾಶ ನೀಡುವ ಹಗಲಾಗಿದ್ದಾನೆ. ಆತನು ಸತ್ಯ ಮತ್ತು ಮಿಥ್ಯೆಯನ್ನು ಗುರುತಿಸಿ ಸನ್ಮಾರ್ಗವನ್ನು ತೋರಿಸಿಕೊಡುತ್ತಾನೆ. ಇದೇ ಪ್ರಕಾರ, ರಾತ್ರಿಯು ಬಳಲಿದವರಿಗೆ ಹೇಗೆ ಆರಾಮ ನೀಡುತ್ತದೆಂದು ನಾವು ನೋಡುತ್ತೇವೆ. ಹಗಲು ವೇಳೆ ದುಡಿದು ಆಯಾಸಗೊಂಡ ಕಾರ್ಮಿಕರು ರಾತ್ರಿ ಕಾಲದಲ್ಲಿ ವಿಶ್ರಾಂತಿ ಪಡೆದು ಸುಖವಾಗಿ ನಿದ್ರಿಸುತ್ತಾರೆ. ರಾತ್ರಿಯು ಎಲ್ಲರ ಕುಂದು ಕೊರತೆಗಳನ್ನು ಸಹ ಮರೆಮಾಡುತ್ತದೆ. ಅದೇ ರೀತಿ ಪರಿಪೂರ್ಣ ಗುಣಗಳಿಂದ ಕೂಡಿದ ದೇವದಾಸನು ಲೋಕಕ್ಕೆ ಸುಖ ಶಾಂತಿ ನೀಡಲು ಆವಿರ್ಭವಿಸುತ್ತಾನೆ. ದೇವನ ದಿವ್ಯವಾಣಿ ಮತ್ತು ದಿವ್ಯದರ್ಶನ ಸಿದ್ಧಿಸಿದ ಆ ಮಹಾಪುರುಷ ವಿವೇಕಶಾಲಿಗಳ ಆಧ್ಯಾತ್ಮಿಕ ಆತಂಕಗಳನ್ನು ನಿವಾರಿಸಿ ಅವರಿಗೆ ಆರಾಮವನ್ನೂ ಮನಶ್ಶಾಂತಿಯನ್ನೂ ನೀಡುತ್ತಾನೆ. ಮಹಾ ಬುದ್ಧಿಶಾಲಿಗಳಿಗೆ ಕೂಡ ತಿಳಿದುಕೊಳ್ಳಲು ಸಾಧ್ಯವಾಗದ ಆಧ್ಯಾತ್ಮಿಕ ತತ್ವಗಳೂ ಜ್ಞಾನ ರಹಸ್ಯಗಳೂ ಆ ದೇವದಾಸನ ಮುಖಾಂತರ ಬಹಿರಂಗಗೊಂಡು ಬಹಳ ಸುಲಭವಾಗಿ ಅರ್ಥವಾಗುತ್ತವೆ. ದೇವವಚನದ ಪ್ರಕಟನೆ ಮನುಷ್ಯನ ವಿವೇಕ ಶಕ್ತಿಯನ್ನು ತೀಕ್ಷ್ಣಗೊಳಿಸಿ ಅದರ ನ್ಯೂನತೆಗಳನ್ನು ಮರೆಮಾಚಿ ಅದರ ಕುಂದುಕೊರತೆಗಳು ಲೋಕಕ್ಕೆ ಬಹಿರಂಗವಾಗದಂತೆ ತಡೆಯುತ್ತದೆ. ವಿವೇಕಿಗಳು ದೇವವಚನದ ಪ್ರಕಾಶ ಪಡೆದು ಆಂತರಿಕವಾದ ತಮ್ಮ ತಪ್ಪುಗಳನ್ನು ತಿದ್ದಿ ದೇವನ ಪರಿಶುದ್ಧ ವಾಣಿಯ ಸಹಾಯ ಗಳಿಸಿ ಲೋಕಜನರ ಅಪವಾದದಿಂದ ಸ್ವಯಂ ರಕ್ಷಿಸಲ್ಪಡುತ್ತಾರೆ. ಆದ್ದರಿಂದಲೇ ಯಾವ ಮುಸ್ಲಿಂ ತತ್ವಜ್ಞಾನಿಯೂ ಗ್ರೀಕ್ ದಾರ್ಶನಿಕನಾದ ಪ್ಲೇಟೋನಂತೆ ವಿಗ್ರಹಕ್ಕೆ ಹುಂಜವನ್ನು ಬಲಿಯರ್ಪಿಸಲಿಲ್ಲ. ದೈವಿಕಪ್ರಕಾಶ ಸಿದ್ಧಿಯ ಭಾಗ್ಯ ಗಳಿಸದ

ಕಾರಣ ಪ್ಲೇಟೋ ತಪ್ಪು ಗ್ರಹಿಕೆಗೆ ಬಲಿಯಾದನು. ಮಹಾ ತತ್ವಜ್ಞಾನಿಯಾಗಿದ್ದು ಸಹ ಆತನು ಇಂತಹ ಮೌಢ್ಯವನ್ನು ತೋರಿಸಿದನು. ಆದರೆ ಮುಸ್ಲಿಂ ತತ್ವಜ್ಞಾನಿಗಳನ್ನು ಈ ರೀತಿಯ ವಿವೇಕ ರಹಿತ ಕ್ರಿಯೆಗಳಿಂದ ನಿರೋಧಿಸಿದ್ದು ಪ್ರವಾದಿ ಶ್ರೇಷ್ಠ ಮುಹಮ್ಮದ್(ಸ) ಅವರ ಮಾರ್ಗದರ್ಶನವೆಂಬುದು ನಿಸ್ಸಂದೇಹ. ಹೀಗೆ ದೇವವಚನ ರಾತ್ರಿಯ ಹಾಗೆ ವಿವೇಕಿಗಳಿಗೆ ಒಂದು ಆವರಣವಾಗುತ್ತದೆ.

ಪರಿಪೂರ್ಣತೆ ಸಿದ್ಧಿಸಿದ ದೇವದಾಸನು ಆಕಾಶ ಮಂಡಲದಂತೆ ದುಃಖಿತರಿಗೂ ಕ್ಲೇಶಕ್ಕೆ ಗುರಿಯಾದವರಿಗೂ ತನ್ನ ನೆರಳಿನಡಿಯಲ್ಲಿ ಆಶ್ರಯ ಕೊಡುತ್ತಾನೆ. ದೇವವಾಣಿ ಗಳಿಸಿದ ಭಕ್ತಜನರು ಸಾಮಾನ್ಯವಾಗಿಯೂ ದೇವನ ವರಿಷ್ಠದಾಸರಾದ ಪ್ರವಾದಿಗಳು ವಿಶೇಷವಾಗಿಯೂ ತಮ್ಮ ಅನುಗ್ರಹ ವೃಷ್ಟಿಯನ್ನು, ಆಕಾಶವು ಮಳೆಯನ್ನು ಸುರಿಸುವಂತೆ, ಲೋಕಕ್ಕೆ ಪ್ರದಾನ ಮಾಡುತ್ತಾರೆ. ಮಾತ್ರವಲ್ಲ, ಆ ಮಹಾತ್ಮರಲ್ಲಿ ಭೂಮಿಯ ಗುಣಗಳೂ ಒಳಗೊಂಡಿರುವುದರಿಂದ ಅವರ ಪರಿಶುದ್ಧತೆ ಪಡೆದ ಆತ್ಮಗಳಿಂದ ಉತ್ಕೃಷ್ಟ ಜ್ಞಾನಗಳ ಹಾಗೂ ತತ್ವ ರಹಸ್ಯಗಳ ವೃಕ್ಷಗಳು ಸಮೃದ್ಧವಾಗಿ ಬೆಳೆದು, ಅವುಗಳ ತಂಪಾದ ನೆರಳು ಮತ್ತು ಫಲಪುಷ್ಪಾದಿಗಳ ಮುಖಾಂತರ ಲೋಕಕ್ಕೆ ಅನುಗ್ರಹವುಂಟಾಗುತ್ತದೆ. ಹೀಗೆ ನಿಸರ್ಗದಲ್ಲಿ ದೃಗ್ಗೋಚರವಾಗುವ ನಿಯಮಗಳು ಊಹೆಯಿಂದ ಮಾತ್ರ ತಿಳಿಯಬಹುದಾದ ಗುಪ್ತನಿಯಮಗಳಿಗೆ ಸಾಕ್ಷಿ. ಈ ಸಾಕ್ಷ್ಯವನ್ನೇ ಸರ್ವಜ್ಞನಾದ ದೇವನು ಮೇಲಿನ ಪ್ರಮಾಣವಚನಗಳಲ್ಲಿ ಎತ್ತಿ ಹೇಳಿದ್ದು. ನೋಡಿರಿ, ಪವಿತ್ರ ಖುರ್‌ಆನಿನಲ್ಲಿ ಒಳಗೊಂಡಿರುವ ವಚನಗಳು ಅದೆಷ್ಟು ಅರ್ಥಗರ್ಭಿತವೂ ವಿವೇಕಯುತವೂ ಆಗಿವೆ! ಅವು ಆ ಅನಕ್ಷರಸ್ಥ, ಮರುಭೂಮಿ ನಿವಾಸಿಯ ಬಾಯಿಯಿಂದ ಹೊರಟವು. ಅದು ದೇವನ ಸತ್ಯವಾಣಿ ಅಲ್ಲವಾಗಿರುತ್ತಿದ್ದರೆ ಅದರ ತತ್ವ ರಹಸ್ಯವನ್ನು ಗ್ರಹಿಸಲಾಗದೆ ವಿವೇಕಿಗಳೆಂದೂ ವಿದ್ಯಾಸಂಪನ್ನರೆಂದೂ ಹೇಳಲ್ಪಡುವವರು ಅದನ್ನು ಆಕ್ಷೇಪಾರ್ಹವಾಗಿ ಗಣಿಸುತ್ತಿರಲಿಲ್ಲ. ತಮ್ಮ ಪರಿಮಿತ ಬುದ್ಧಿಶಕ್ತಿಯಿಂದ ಮನದಟ್ಟು ಮಾಡಿಕೊಳ್ಳಲು ಅಸಾಧ್ಯವಾದ ಯಾವುದೇ ಸಾರವತ್ತಾದ ವಿಚಾರವನ್ನಾಗಲಿ ಜನರು ಆಕ್ಷೇಪಾರ್ಹವಾಗಿ ಗಣಿಸುವುದು ಸಾಮಾನ್ಯ. ಜ್ಞಾನದಿಂದ ತುಂಬಿದ ಆ ತತ್ವ ಸಾಮಾನ್ಯ ಬುದ್ಧಿಶಕ್ತಿಗೆ ಅತೀತವೆಂಬುದಕ್ಕೆ ಆ ಆಕ್ಷೇಪಣೆಯೇ ಒಂದು ಸಾಕ್ಷ್ಯವಾಗಿದೆ. ಆದ್ದರಿಂದಲೇ ಸ್ವಂತ ಸಾಮರ್ಥ್ಯದಲ್ಲಿ ಹೆಗ್ಗಳಿಕೆಯನ್ನು ತೋರ್ಪಡಿಸುವ ಬುದ್ಧಿಶಾಲಿಗಳಿಗೆ ಕೂಡ ಪವಿತ್ರ ಖುರ್‌ಆನಿನ ಪ್ರಮಾಣವಚನದ ಬಗ್ಗೆ ಆಕ್ಷೇಪವುಂಟಾಯಿತು. ಆದರೆ, ಈಗ ಅದರ ರಹಸ್ಯ ಬಹಿರಂಗವಾಗಿ ವಾಸ್ತವಿಕತೆ ಪ್ರತ್ಯಕ್ಷಗೊಂಡುದುದರಿಂದ ವಿವೇಕಶಾಲಿಗಳಿಗೆ ಇನ್ನು ಆಕ್ಷೇಪಿಸಲಿಕ್ಕೆ ಎಡೆಯಿಲ್ಲ. ಬದಲಾಗಿ, ಈ ವಾಕ್ಯದ ಬಗ್ಗೆ ಚಿಂತಿಸುವಾಗಲೆಲ್ಲ ಅವರು ಅದರಿಂದ ಆನಂದಾನುಭೂತಿ ಪಡೆಯುವರು.

ದೈವಿಕ ಸಂಬೋಧನೆ ಮತ್ತು ದೈವಿಕ ಪ್ರಕಟನೆಯ ಆವಶ್ಯಕತೆಯನ್ನೂ ಸತ್ಯತೆಯನ್ನೂ ಸ್ಪಷ್ಟಪಡಿಸಲಿಕ್ಕಾಗಿ ಪವಿತ್ರ ಖುರ್‌ಆನ್ ಇನ್ನೊಂದೆಡೆಯಲ್ಲಿ ಪ್ರಮಾಣ ವಚನದ ರೂಪದಲ್ಲಿ ಪ್ರಕೃತಿ ನಿಯಮದ ಒಂದು ಸಾಕ್ಷ್ಯವನ್ನು ಉದ್ಧರಿಸುವುದನ್ನು ನೋಡಿರಿ:

وَالسَّمَآءِ ذَاتِ الرَّجۡعِ - وَالۡاَرۡضِ ذَاتِ الصَّدۡعِ - اِنَّهٗ لَقَوۡلٌ فَصۡلٌ - وَّمَا هُوَ بِالۡهَزۡلِ

ಮಳೆಯನ್ನು ಸುರಿಸುವ ಆಕಾಶದಾಣೆ, ಮಳೆ ನೀರಿನ ಸಹಾಯದಿಂದ ಸಸ್ಯಾದಿಗಳನ್ನು ಮೊಳೆಯಿಸುವ ಭೂಮಿಯಾಣೆ, ಖಂಡಿತವಾಗಿಯೂ ಈ ಖುರ್‌ಆನ್ ಸತ್ಯ – ಮಿಥ್ಯೆಗಳನ್ನು ಬೇರ್ಪಡಿಸಿ ತೋರಿಸುವ ದೇವವಚನವಾಗಿದೆ. ಇದು ನಿರರ್ಥಕವೋ ವ್ಯರ್ಥವೋ ಅಲ್ಲ. **(86:12–15)**

ಎಂದರೆ, ದೇವವಚನ ವ್ಯರ್ಥವಾಗಿ ಯಾ ಅಕಾಲದಲ್ಲಿ ಪ್ರಕಟಗೊಳ್ಳಲಿಲ್ಲ. ಅದು ಸೂಕ್ತ ಕಾಲದಲ್ಲಿ ಬರುವ ಮಳೆಯಂತೆ ಸರಿಯಾದ ಸಮಯದಲ್ಲಿ ಪ್ರಕಟಗೊಂಡಿದೆ. ಇಲ್ಲಿ ದೇವನು ತನ್ನ ವಚನವಾದ ಪವಿತ್ರ ಖುರ್‌ಆನಿನ ಸತ್ಯತೆಗೆ ಮೇಲಿನ ಪ್ರಮಾಣವಚನ ರೂಪದಲ್ಲಿ, ಸ್ಪಷ್ಟವಾಗಿ ಗೋಚರಿಸುವ ನಿಸರ್ಗದ ಒಂದು ನಿಯಮವನ್ನು ಸಾಕ್ಷ್ಯವಾಗಿ ಮುಂದಿಟ್ಟಿರುವನು. ಕಾಲೋಚಿತವಾಗಿಯೂ ಹಿತಾನುಸಾರವಾಗಿಯೂ ಆಕಾಶದಿಂದ ಮಳೆ ಸುರಿಯುತ್ತದೆ ಎಂಬುದು ಪ್ರಕೃತಿಯಲ್ಲಿ ನಾವು ಕಾಣುವ ಒಂದು ನಿಯಮವ್ಯವಸ್ಥೆಯಷ್ಟೆ. ಭೂಮಿಯಲ್ಲಿ ಕಾಣುವ ಸಸ್ಯಾದಿಗಳಿಗೆಲ್ಲ ಆಶ್ರಯ ಮಳೆನೀರಾಗಿದೆ. ಆಕಾಶದಿಂದ ಮಳೆ ಸುರಿಯದಿದ್ದರೆ ಕ್ರಮೇಣ ಬಾವಿಗಳಲ್ಲಿ ನೀರು ಬತ್ತಿಹೋಗುತ್ತದೆ. ಹೀಗೆ ಭೂಮಿಯ ನೀರಿನ ಇರುವಿಕೆಯು ಮಳೆ ನೀರನ್ನು ಆಶ್ರಯಿಸಿದೆ. ಆದ್ದರಿಂದಲೇ ಮಳೆ ಬಂದರೆ ಬಾವಿಗಳಲ್ಲಿ ನೀರು ಉಕ್ಕಿ ಬರುತ್ತದೆ. ಏಕೆಂದರೆ, ಆಕಾಶದಿಂದ ಸುರಿಯುವ ಮಳೆ ಭೂಮಿಯ ಅಡಿಯಲ್ಲಿರುವ ನೀರನ್ನು ಮೇಲಕ್ಕೆ ಆಕರ್ಷಿಸುತ್ತದೆ. ಇದೇ ರೀತಿಯ ಒಂದು ಪರಸ್ಪರ ಸಂಬಂಧ ದೈವಿಕ ವಾಣಿಗೂ ವಿವೇಕ ಜ್ಞಾನಕ್ಕೂ ಇದೆ. ದಿವ್ಯವಾಣಿ ಆಕಾಶಜಲ ಮತ್ತು ವಿವೇಕಜ್ಞಾನ ಭೌತಿಕಜಲ ಎಂದು ಹೇಳಬಹುದು. ಭೂಮಿಯ ನೀರು ಯಾವಾಗಲೂ ಮಳೆಯ ನೀರಿನಿಂದಾಗಿ ನಿರ್ಮಲವಾಗುತ್ತದೆ. ಹಾಗೆಯೇ ಆಕಾಶಜಲವೆಂಬ ದೈವಿಕ ವಚನದ ಪ್ರಕಟನೆ ನಿಲ್ಲಿಸಲ್ಪಟ್ಟರೆ ಭೌಮಿಕ ಜಲವೆಂಬ ವಿವೇಕ ಜ್ಞಾನ ಸಹ ಕ್ರಮೇಣ ಶುಷ್ಕಗೊಳ್ಳುವುದು. ಒಟ್ಟಿನಲ್ಲಿ, ದೈವಿಕ ವಚನದಿಂದ ಸಂಬೋಧಿತನಾದ ಓರ್ವ ಧರ್ಮಾತ್ಮನ ಆಗಮನದಿಂದ ಅನುಗ್ರಹಿಸಲ್ಪಡದೆ ಒಂದು ದೀರ್ಘಕಾಲ ಕಳೆದು ಹೋಗುವುದಾದರೆ, ಮಳೆ ನೀರಿನ ಅಭಾವದಿಂದ ಭೂಮಿಯ

ನೀರು ಬತ್ತಿ ಮಲಿನವಾಗುವ ತರದಲ್ಲಿ, ಮನುಷ್ಯನ ಬುದ್ಧಿ ಮತ್ತು ಜ್ಞಾನ ಕೆಟ್ಟು ಹೋಗುತ್ತವೆ.

ಈ ವಿಚಾರವನ್ನು ಗ್ರಹಿಸಲು ಪ್ರವಾದಿ ಶ್ರೇಷ್ಠರಾದ ಮುಹಮ್ಮದ್ ಪೈಗಂಬರರ(ಸ) ಆಗಮನಕ್ಕೆ ಮುಂಚೆ ಅಜ್ಞಾನ ಮತ್ತು ಅಧರ್ಮದಿಂದ ಅಂಧಕಾರಮಯವಾಗಿದ್ದ ಲೋಕದೆಡೆ ದೃಷ್ಟಿ ಹಾಯಿಸಿದರೆ ಸಾಕು. ಪ್ರವಾದಿ ಈಸಾ (ಯೇಸುಕ್ರಿಸ್ತ)ರ ಆಗಮನದ ಬಳಿಕ ಅಂದಿಗೆ ಆರುನೂರು ವರ್ಷಗಳು ಕಳೆದಿದ್ದರೂ ಆ ದೀರ್ಘಕಾಲದ ಅವಧಿಯಲ್ಲಿ ದೈವಿಕ ಪ್ರಬೋಧನೆ ಸಿದ್ಧಿಸಿದ ಯಾವ ಸುಧಾರಕನಾಗಲಿ ಆವಿರ್ಭವಿಸಿರಲಿಲ್ಲ. ತನ್ನಿಮಿತ್ತ ಲೋಕದಲ್ಲಿಡೀ ಮೂಢನಂಬಿಕೆ ಮತ್ತು ಅನಾಚಾರ ಬಲಗೊಂಡಿದ್ದುವು. ಮುಹಮ್ಮದ್ ಪೈಗಂಬರರ(ಸ) ಆಗಮನ ಕಾಲದಲ್ಲಿ ಸಾಮಾನ್ಯವಾಗಿ ಲೋಕದ ಸ್ಥಿತಿ ಈ ರೀತಿ ಕಲುಷಿತವಾಗಿತ್ತೆಂದು ಸಕಲ ರಾಜ್ಯಗಳ ಚರಿತ್ರೆಗಳು ಸಾಕ್ಷ್ಯವಹಿಸುತ್ತವೆ. ಒಂದು ದೀರ್ಘ ಕಾಲದ ವರೆಗೆ ದೈವಿಕ ಸಂಬೋಧನಾ ಪರಂಪರೆ ನಿಲ್ಲಿಸಲ್ಪಟ್ಟದ್ದೇ ಈ ದುರವಸ್ಥೆಗೆ ಕಾರಣವಾಗಿತ್ತು. ಅಂದು ಬುದ್ಧಿಶಕ್ತಿ ಮಾತ್ರದಿಂದ ಸ್ವರ್ಗ ರಾಜ್ಯದ ಆಡಳಿತೆಯಾಗಿತ್ತು. ದೈವಿಕ ಬೋಧನೆಯ ಪ್ರಕಾಶವನ್ನು ಪಡೆಯದ ಅಪೂರ್ಣ ಬುದ್ಧಿಶಕ್ತಿ ಜನರನ್ನು ಹಲವು ಬಗೆಯ ದುರ್ಮಾರ್ಗಗಳಲ್ಲಿ ಚಲಿಸುವಂತೆ ಮಾಡಿತು. ಹೀಗೆ ದೈವಿಕ ಬೋಧನೆಯೆಂಬ ಮಳೆ ಒಂದು ದೀರ್ಘಕಾಲದ ವರೆಗೆ ಸುರಿಯದಿದ್ದಾಗ ಬುದ್ಧಿಶಕ್ತಿಯೆಂಬ ನೀರು ಬತ್ತಿಹೋಯಿತು.

ಹೀಗೆ, ದೇವನು ಪ್ರಮಾಣ ವಚನದ ರೂಪದಲ್ಲಿ ಈ ಪ್ರಕೃತಿ ನಿಯಮದ ಕುರಿತು ನಮಗೆ ತಿಳುವಳಿಕೆ ನೀಡುತ್ತಾ ಭೂಮಿಯಲ್ಲಿ ಗೋಚರಿಸುವ ಸಸ್ಯ ಫಲಾದಿಗಳೆಲ್ಲ ಆಕಾಶದಿಂದ ಸುರಿಯುವ ಮಳೆ ನೀರನ್ನು ಆಶ್ರಯಿಸಿಕೊಂಡಿವೆ ಎಂಬ ಶಾಶ್ವತ ಹಾಗೂ ಸ್ಪಷ್ಟವಾದ ನಿಸರ್ಗ ನಿಯಮದೆಡೆಗೆ ನಮ್ಮ ಗಮನವನ್ನು ಸೆಳೆಯುತ್ತಾನೆ. ಪ್ರಕೃತಿಯ ಈ ಪ್ರತ್ಯಕ್ಷ ನಿಯಮವು ಪರೋಕ್ಷವಾದ ದೈವಿಕ ವಾಣಿಗೆ ಸಂಬಂಧಿಸಿದ ನಿಯಮಕ್ಕೆ ಒಂದು ಸಾಕ್ಷ್ಯವಾಗಿದೆ. ಇದರಿಂದ, ನಾವು ಬುದ್ಧಿಶಕ್ತಿಯನ್ನು ಮಾತ್ರ ಏಕ ಮಾರ್ಗದರ್ಶಕವೆಂದು ಭಾವಿಸಬಾರದೆಂದು ತಿಳಿದುಕೊಳ್ಳಬಹುದು. ಏಕೆಂದರೆ ಅದು ದೈವಿಕ ಬೋಧನೆಯೆಂಬ ದಿವ್ಯ ಜಲದ ಸಂಪರ್ಕವಿಲ್ಲದೆ ನಿರ್ಮಲ ಹಾಗೂ ಪವಿತ್ರಗೊಳ್ಳಲು ಸಾಧ್ಯವಿರುವ ನೀರಲ್ಲ. ಆಕಾಶದಿಂದ ಮಳೆನೀರು ಬಾವಿಗಳಲ್ಲಿ ಬಿದ್ದರೂ ಬೀಳದಿದ್ದರೂ ಕೆಳಗಡೆ ಇರುವ ನೀರನ್ನು ಅದು ಮೇಲಕ್ಕೆ ಉಕ್ಕಿಬರುವಂತೆ ಮಾಡುವುದು ಅದರ ಒಂದು ವಿಶೇಷ ಗುಣವಾಗಿದೆ. ಇದೇ ಪ್ರಕಾರ ದೈವಿಕ ವಚನದಿಂದ ಸಂಬೋಧಿತನಾದ ಧರ್ಮಾತ್ಮನೊಬ್ಬನ ಆಗಮನದ ಕಾರಣದಿಂದ, ಬುದ್ಧಿಶಾಲಿಗಳು

ಆತನನ್ನು ಅನುಸರಿಸಿದರೂ ಇಲ್ಲವಾದರೂ ಜನರ ಬುದ್ಧಿಶಕ್ತಿ ಅಭೂತಪೂರ್ವವಾಗಿ ತೀಕ್ಷ್ಣವೂ ನಿರ್ಮಲವೂ ಆಗುತ್ತದೆ. ಅವರು ಸ್ವಯಂ ಸತ್ಯಾನ್ವೇಷಣೆಗೆ ತೊಡಗುತ್ತಾರೆ. ಅವರ ಚಿಂತನಾಶಕ್ತಿಗೆ ವಿಶೇಷವಾದೊಂದು ಚಾಲನೆಯುಂಟಾಗುತ್ತದೆ. ಈ ತರದ ಬುದ್ಧಿ ವಿಕಾಸವೂ ಚೈತನ್ಯವೂ ಉತ್ಸುಕತೆಯೂ ದೈವಿಕ ಸಂದೇಶ ಗಳಿಸಿದ ಆ ಶ್ರೇಷ್ಠ ಪುರುಷನ ಆಗಮನದ ಅನುಗ್ರಹೀತ ಫಲಗಳಾಗಿವೆ. ಆದುದರಿಂದ, ಜನರು ಸಾಮಾನ್ಯವಾಗಿ ಧರ್ಮತತ್ವ ಅನ್ವೇಷಣೆಯಲ್ಲೂ ಚಿಂತನೆಯಲ್ಲೂ ಮಗ್ನರಾಗಿ ಕಂಡುಬಂದರೆ – ಬೇರೆ ಮಾತಿನಲ್ಲಿ ಹೇಳುವುದಾದರೆ, ಭೌಮಿಕಜಲಕ್ಕೆ ಚಲನವೂ ಉಕ್ಕೇರುವಿಕೆಯೂ ಉಂಟಾದಂತೆ ಗೋಚರಿಸುವುದಾದರೆ – ಆಕಾಶದಿಂದ ಬಿರುಸಾದ ವರ್ಷಧಾರೆ ಉಂಟಾಗಿರಬೇಕೆಂದೂ ದೈವಿಕ ಬೋಧನೆಯೆಂಬ ದೀಪ ಸತ್ಯಪುರುಷನೊಬ್ಬನ ಹೃದಯದಲ್ಲಿ ಬೆಳಗುತ್ತಿದೆಯೆಂದೂ ತಿಳಿದುಕೊಳ್ಳಬೇಕಾಗಿದೆ.

**ಐದನೆಯ ಪ್ರಶ್ನೆ:**

## ದೈವಿಕಜ್ಞಾನ ಸಿದ್ಧಿಯ ಮಾರ್ಗಗಳು

ದೈವಿಕಜ್ಞಾನ ಪ್ರಾಪ್ತಿಯ ಮಾರ್ಗಗಳು ಯಾವುವು ಎಂಬುದು ಐದನೆಯ ಪ್ರಶ್ನೆ. ಈ ವಿಷಯವನ್ನು ಪವಿತ್ರ ಖುರ್‌ಆನ್ ಸವಿಸ್ತಾರವಾಗಿ ಪ್ರತಿಪಾದಿಸುವುದಾದರೂ ಅವೆಲ್ಲವನ್ನೂ ಇಲ್ಲಿ ವಿವರಿಸಲು ಅವಕಾಶವಿಲ್ಲದಿರುವುದರಿಂದ ನಾನು ಬಹಳ ಸಂಕ್ಷಿಪ್ತವಾಗಿ ಪ್ರಸ್ತಾಪಿಸುವೆನು. ಪವಿತ್ರ ಖುರ್‌ಆನಿನ "ತಕಾಸುರ್" ಎಂಬ ಅಧ್ಯಾಯವನ್ನು ವ್ಯಾಖ್ಯಾನಿಸುತ್ತಾ ಮೊದಲು ವಿವರಿಸಿದ ಪ್ರಕಾರ ಪವಿತ್ರ ಖುರ್‌ಆನ್ ಜ್ಞಾನವನ್ನು "ಇಲ್ಮುಲ್ ಯಖೀನ್" (ಅನುಮಾನ ಜ್ಞಾನ), "ಐನುಲ್ ಯಖೀನ್" (ದರ್ಶನ ಜ್ಞಾನ), "ಹಖ್ಖುಲ್ ಯಖೀನ್" (ಅನುಭವ ಜ್ಞಾನ) ಎಂಬೀ ಮೂರು ವಿಧಗಳಾಗಿ ವಿಂಗಡಿಸಿದೆ. ಒಂದು ಸ್ಥಳದಲ್ಲಿ ಹೊಗೆಯನ್ನು ಮಾತ್ರ ಕಂಡು ಅಲ್ಲಿ ಬೆಂಕಿ ಇರಬೇಕೆಂದು ನಾವು ಅನುಮಾನಿಸುವ ರೀತಿಯಲ್ಲಿ ಒಂದು ವಿಷಯವನ್ನು ಇನ್ನೊಂದರ ಆಧಾರದಿಂದ ಊಹಿಸಿ ದೃಢಪಡಿಸುವುದನ್ನು "ಇಲ್ಮುಲ್ ಯಖೀನ್" ಎಂದು ಹೇಳಲಾಗುತ್ತದೆ. ಆದರೆ ನಾವು ಆ ಬೆಂಕಿಯನ್ನು ನೇರವಾಗಿ ಕಂಡರೆ ನಮಗೆ ಆ ಬಗ್ಗೆ "ಐನುಲ್ ಯಖೀನ್" ಅಥವಾ "ದರ್ಶನ ಜ್ಞಾನ" ಸಿದ್ಧಿಸುತ್ತದೆ. ಕೊನೆಯದಾಗಿ, ಆ ಬೆಂಕಿಯನ್ನು ಸ್ಪರ್ಶಿಸುವಾಗ ನಮಗುಂಟಾಗುವ ಅನುಭವ ಜ್ಞಾನವನ್ನು "ಹಖ್ಖುಲ್ ಯಖೀನ್" ಎಂದು ಹೇಳಲಾಗುತ್ತದೆ. ಈ ಮೂರು ವಿಧ ಜ್ಞಾನಗಳ ಕುರಿತು ಪ್ರತಿಪಾದಿಸುವ "ಸೂರಃ ತಕಾಸುರ್"ನ ವ್ಯಾಖ್ಯಾನವನ್ನು ಮೊದಲೊಮ್ಮೆ ಉಲ್ಲೇಖಿಸಿರುವ ಕಾರಣ ಆ ಬಗ್ಗೆ ಇಲ್ಲಿ ವಿವರಿಸುವುದಿಲ್ಲ.

ಮೊದಲ ವಿಧವಾದ ಅನುಮಾನ ಜ್ಞಾನ ಗಳಿಕೆಯ ದಾರಿ ವಿವೇಕ ಮತ್ತು ಶ್ರುತಿ (ವಿವಿಧ ಮಾರ್ಗಗಳಿಂದ ಲಭ್ಯವಾದ ಮಾಹಿತಿಗಳು) ಆಗಿವೆ. ನರಕವಾಸಿಗಳ ಕುರಿತು ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳಲಾಗಿದೆ:

قَالُوْا لَوْ كُنَّا نَسْمَعُ اَوْ نَعْقِلُ مَا كُنَّا فِيْٓ اَصْحٰبِ السَّعِيْرِ

ಅವರು ಹೇಳುವರು: ನಾವು ಬುದ್ಧಿಶಾಲಿಗಳಾದ ತತ್ವಚಿಂತಕರ ಮತ್ತು ಜ್ಞಾನಿಗಳ ಮಾತುಗಳನ್ನು ಗಮನಿಸಿದ್ದರೆ ಅಥವಾ ನಾವೇ ಚಿಂತಿಸಿ ಧಾರ್ಮಿಕ ವಿಶ್ವಾಸ ಪ್ರಮಾಣಗಳನ್ನು ವಿವೇಕಯುತವಾಗಿ ಪರಿಶೀಲಿಸಿದ್ದರೆ ನಾವು ನರಕವಾಸಿಗಳ ಗುಂಪಿನಲ್ಲಿ ಸೇರುತ್ತಿರಲಿಲ್ಲ. **(67:11)**

ಇದೇ ಅರ್ಥವನ್ನು ಸೂಚಿಸುವ ಮತ್ತೊಂದು ವಾಕ್ಯ ಈ ರೀತಿ ಇದೆ:

لَا يُكَلِّفُ اللّٰهُ نَفْسًا اِلَّا وُسْعَهَا

ದೇವನು ಯಾವ ಆತ್ಮದ ಮೇಲೆಯೂ ಅದರ ಜ್ಞಾನಶಕ್ತಿಗೆ ಮಿಗಿಲಾದ ಏನನ್ನೂ ಹೇರುವುದಿಲ್ಲ. **(2:287)**

ಎಂದರೆ, ದೇವನು ಮನುಷ್ಯನನ್ನು ಆಹ್ವಾನಿಸುವುದು ಮಾನವನ ಬುದ್ಧಿ ಮತ್ತು ಜ್ಞಾನದ ಪರಿಧಿಯೊಳಗಿನ ವಿಶ್ವಾಸದೆಡೆಗೂ ತತ್ವ ಸಂಹಿತೆಯೆಡೆಗೂ ಆಗಿದೆ. ಅವನಿಗೆ ವಹಿಸಲಾಗದ ಯಾವ ಭಾರವನ್ನೂ ಅವನ ಮೇಲೆ ದೇವನು ಹೊರಿಸುವುದಿಲ್ಲ. ಕಿವಿಗಳ ಮೂಲಕವೂ ಒಬ್ಬನಿಗೆ ಅನುಮಾನ ಜ್ಞಾನವನ್ನು ಗಳಿಸಲು ಸಾಧ್ಯವೆಂದು ಈ ಪವಿತ್ರ ಖುರ್‌ಆನ್ ವಾಕ್ಯಗಳು ತಿಳಿಸಿಕೊಡುತ್ತವೆ. ಉದಾಹರಣೆಗೆ, ಲಂಡನ್ ನಗರವನ್ನು ನೋಡಿರದಿದ್ದರೂ ಅಂತಹ ಒಂದು ನಗರವಿದೆಯೆಂದು ನಾವು ಕೇಳಿ ನಂಬುತ್ತೇವೆ. ಏಕೆಂದರೆ, ಆ ನಗರವನ್ನು ನೋಡಿದವರೆಲ್ಲರ ಮಾತುಗಳನ್ನು ನಮಗೆ ಅಲ್ಲಗಳೆಯಲಿಕ್ಕೆ ಸಾಧ್ಯವಿಲ್ಲ. ಹಾಗೆಯೇ ಔರಂಗಜೇಬ ಸಾಮ್ರಾಟನ ಕಾಲದಲ್ಲಿ ನಾವು ಜೀವಿಸಿರಲಿಲ್ಲ; ಆತನನ್ನು ನಾವು ಕಂಡಿಲ್ಲ. ಆದರೂ ಆತನು ಭಾರತವನ್ನು ಆಳಿದ ಮೊಗಲ್ ರಾಜರಲ್ಲಿ ಒಬ್ಬನೆಂಬ ವಿಷಯದಲ್ಲಿ ನಾವ್ಯಾರೂ ಸಂಶಯಪಡುವುದಿಲ್ಲ. ಹೀಗೆ ನಾವು ನಿಸ್ಸಂದೇಹವಾಗಿ ನಂಬಲಿಕ್ಕೆ ಕಾರಣ ಪರಂಪರೆಯಾಗಿ ಬಂದ ಶ್ರುತಿ ಮಾತ್ರವಾಗಿದೆ. ಹೀಗೆ ಒಂದು ವಸ್ತುವಿನ ವಾಸ್ತವಿಕತೆಯ ಕುರಿತು ಅಥವಾ ಅದರ ಅಸ್ತಿತ್ವದ ಕುರಿತು ನಿರ್ದೋಷಕರವಾದ ಶ್ರುತಿ ಮೂಲಕ ದೃಢವಿಶ್ವಾಸ ಹೊಂದಬಹುದಾಗಿದೆ. ದೇವಪ್ರೋಕ್ತ ಧರ್ಮಗ್ರಂಥಗಳು ಪರಂಪರಾಗತವಾಗಿ ಸಾಗಿ ಬಂದ ಮಾರ್ಗ ನಿರ್ದೋಷಕರವೂ ಆಕ್ಷೇಪರಹಿತವೂ ಆಗಿರುವುದಾದರೆ ಅವು ಸಹ ಜ್ಞಾನಸಿದ್ಧಿಗೆ ಯೋಗ್ಯ. ಆದರೆ ದೈವಿಕ ಗ್ರಂಥವೆಂದು ಭಾವಿಸಲ್ಪಡುವ ಒಂದು ಧರ್ಮ ಗ್ರಂಥದ ಪರಸ್ಪರ ವಿರುದ್ಧವಾಗಿರುವ ಐವತ್ತೋ ಅರುವತ್ತೋ ಪಾಠಾಂತರಗಳ ಪೈಕಿ ಮೂರೂ ನಾಲ್ಕೋ ಮಾತ್ರ ದೇವಪ್ರೋಕ್ತವೆಂದು ಆ ಗ್ರಂಥಾನುಯಾಯಿಗಳು ಅಂಗೀಕರಿಸಿ ಬಾಕಿಯವೆಲ್ಲ ಕೃತ್ರಿಮ ಹಾಗೂ ಕಲ್ಪಿತವೆಂದು ತಿರಸ್ಕರಿಸುವ ಪಕ್ಷದಲ್ಲಿ, ಪೂರ್ಣ ಹಾಗೂ ನಿಪುಣ ಪರಿಶೀಲನೆಯ ಬಳಿಕ ಹೊರತು ಹಾಗೆ ನಂಬುವುದಾಗಲಿ ಅಂಗೀಕರಿಸುವುದಾಗಲಿ ಅರ್ಥರಹಿತ. ಅಂತಹ ಪಾಠಾಂತರಗಳು ಅವುಗಳ ಪರಸ್ಪರ ವೈರುಧ್ಯಗಳ ಕಾರಣದಿಂದ ವಿಶ್ವಾಸಾರ್ಹವಲ್ಲದ್ದೂ ತ್ಯಾಜ್ಯವೂ ಆಗುತ್ತವೆ. ಮಾತ್ರವಲ್ಲ, ಅನ್ಯೋನ್ಯ ವಿರುದ್ಧ ಪ್ರಸ್ತಾಪನೆಗಳಿಂದ ಕೂಡಿದ ಅಂತಹ ಗ್ರಂಥಗಳು ಜ್ಞಾನಸಿದ್ಧಿಗೆ ಸಹಾಯಕವೆಂದು ತಿಳಿದುಕೊಳ್ಳಬಾರದು. ಏಕೆಂದರೆ, ಯಥಾರ್ಥ ಜ್ಞಾನ ಮಾತ್ರವೇ

ನಿಸ್ಸಂದೇಹವಾದ ತಿಳುವಳಿಕೆಯನ್ನು ಪ್ರದಾನ ಮಾಡುತ್ತದೆ. ಹಾಗಿರುವಾಗ ಪರಸ್ಪರ ವೈರುದ್ಧ್ಯಗಳ ಸಂಗ್ರಹದಿಂದ ನಿಜವಾದ ಜ್ಞಾನವನ್ನು ಗಳಿಸುವುದು ಅಸಾಧ್ಯ.

ಪವಿತ್ರ ಖುರ್‌ಆನ್ ನಿರ್ದೋಷಕರವಾಗಿಯೂ ನಿರ್ಬಾಧಿತವಾಗಿಯೂ ಸಾಗಿಬಂದಿದೆ ಎಂದು ಮಾತ್ರವಲ್ಲ, ಅದು ಅದರ ನೈಜತೆಯನ್ನು ಸಾಬೀತುಪಡಿಸಲು ವಿವೇಕಯುತ ಸಾಕ್ಷ್ಯಾಧಾರಗಳನ್ನು ತೋರಿಸುವ ಗ್ರಂಥವೂ ಆಗಿದೆಯೆಂಬುದು ಗಮನಾರ್ಹ. ಆ ಪವಿತ್ರ ಗ್ರಂಥ ಅದರ ಸಿದ್ಧಾಂತಗಳನ್ನೂ ಉಪದೇಶಗಳನ್ನೂ ಆಜ್ಞೆಗಳನ್ನೂ ದೇವಪ್ರೋಕ್ತವೆಂಬ ಕಾರಣದಿಂದ ಮಾತ್ರ ಅಂಗೀಕರಿಸಲಿಕ್ಕೆ ನಮ್ಮನ್ನು ನಿರ್ಬಂಧಿಸದೆ ಪ್ರತಿಯೊಂದು ವಿಷಯದ ಬಗ್ಗೆ ಅದು ಯುಕ್ತವಾದ ಸಾಕ್ಷ್ಯಗಳನ್ನು ನೀಡುತ್ತದೆ. ಅದರ ಎಲ್ಲ ತತ್ವಗಳು ಮನುಷ್ಯ ಪ್ರಕೃತಿಯಲ್ಲಿ ನಿಕ್ಷಿಪ್ತವಾಗಿವೆಯೆಂದು ಪವಿತ್ರ ಖುರ್‌ಆನ್ ಹೇಳುತ್ತದೆ, ನೋಡಿರಿ:

وَهٰذَا ذِكْرٌ مُّبَارَكٌ

ಈ ಅನುಗ್ರಹೀತ ಗ್ರಂಥ ನೂತನವಾಗಿ ಏನನ್ನೂ ತರಲಿಲ್ಲ; ಆದರೆ ಇದು ಮನುಷ್ಯ ಪ್ರಕೃತಿಯಲ್ಲೂ ನಿಸರ್ಗದಲ್ಲೂ ಅಂತರ್ಭೂತವಾಗಿರುವ ಸಂಗತಿಗಳನ್ನು ನೆನಪಿಗೆ ತರುವ ಒಂದು ಜ್ಞಾಪಕವಾಗಿದೆ. **(21:51)**

ಇನ್ನೊಂದೆಡೆಯಲ್ಲಿ ಅದು ಹೀಗೆ ಹೇಳುತ್ತದೆ:

لَآ إِكْرَاهَ فِي الدِّينِ

ಈ ಧರ್ಮದಲ್ಲಿ (ಇಸ್ಲಾಂ ಧರ್ಮದಲ್ಲಿ) ಯಾವುದೇ ರೀತಿಯ ಬಲಾತ್ಕಾರವಿಲ್ಲ.

**(2:257)**

ಎಂದರೆ, ಅದರ ಸಿದ್ಧಾಂತಗಳನ್ನು ಸ್ವೀಕರಿಸಲು ಅದು ಯಾರನ್ನೂ ಒತ್ತಾಯಪಡಿಸಲಿಕ್ಕೆ ಉದ್ದೇಶಿಸುವುದಿಲ್ಲ; ಸಕಲ ಸಂಗತಿಗಳಿಗೂ ಅದು ಪುರಾವೆಗಳನ್ನೂ ಸಾಕ್ಷ್ಯಾಧಾರಗಳನ್ನೂ ನೀಡುತ್ತದೆ. ಮಾತ್ರವಲ್ಲ, ಹೃದಯಗಳಿಗೆ ಪ್ರಕಾಶವೀಯುವ ಅಧ್ಯಾತ್ಮ ಶಕ್ತಿಯೂ ಅದರಲ್ಲಿ ಅಡಕವಾಗಿದೆ. ಬೇರೊಂದೆಡೆಯಲ್ಲಿ ಅದು ಹೀಗೆ ಹೇಳುತ್ತದೆ:

شِفَآءٌ لِّمَا فِي الصُّدُورِ

ಪವಿತ್ರ ಖುರ್‌ಆನ್ ಎಲ್ಲ ಆಧ್ಯಾತ್ಮಿಕ ರೋಗಗಳಿಗೆ ಶಮನಕಾರಿಯಾಗಿದೆ. **(10:58)**

ಎಂದರೆ, ಈ ಪವಿತ್ರ ಗ್ರಂಥದ ಮಹಾತ್ಮೆ, ಪರಂಪರಾಗತವಾಗಿ ಸಿದ್ಧಿಸಿದ ಒಂದು ಪೌರಾಣಿಕ ಗ್ರಂಥವೆಂಬ ಸ್ಥಿತಿಯಲ್ಲಿ ಅಲ್ಲ; ಅದು ಅದರ ಸರ್ವ ತತ್ವಗಳಿಗೂ ನಿರ್ದೋಷಕರವಾದ ಸಾಕ್ಷ್ಯಗಳನ್ನು ನೀಡುವ ಹಾಗೂ ಹೊಳೆಯುವಂತಹ ಆಧ್ಯಾತ್ಮಿಕ ಪ್ರಕಾಶವನ್ನು ಬೀರುವ ಒಂದು ಉತ್ಕೃಷ್ಟ ಗ್ರಂಥವೆಂಬ ನೆಲೆಯಲ್ಲಾಗಿದೆ.

ಇದೇ ಪ್ರಕಾರ, ಸರಿಯಾದ ವೈಚಾರಿಕ ಸಾಕ್ಷ್ಯಾಧಾರಗಳು ಒಬ್ಬನನ್ನು ನಿರ್ದಿಷ್ಟ ಜ್ಞಾನದೆಡೆಗೆ ಕೊಂಡೊಯ್ಯುತ್ತವೆ ಎಂಬುದು ನಿಸ್ಸಂದೇಹಕರ. ಈ ಸಂಗತಿಯನ್ನು ಪವಿತ್ರ ಖುರ್‌ಆನ್ ಈ ಕೆಳಗಿನ ವಾಕ್ಯಗಳಲ್ಲಿ ಸೂಚಿಸುತ್ತದೆ:

إِنَّ فِي خَلْقِ السَّمَاوَاتِ وَالْأَرْضِ وَاخْتِلَافِ اللَّيْلِ وَالنَّهَارِ لَآيَاتٍ لِّأُولِي الْأَلْبَابِ - الَّذِينَ يَذْكُرُونَ اللَّهَ قِيَامًا وَقُعُودًا وَعَلَىٰ جُنُوبِهِمْ وَيَتَفَكَّرُونَ فِي خَلْقِ السَّمَاوَاتِ وَالْأَرْضِ رَبَّنَا مَا خَلَقْتَ هَٰذَا بَاطِلًا سُبْحَانَكَ فَقِنَا عَذَابَ النَّارِ

ಬುದ್ಧಿವಂತರೂ ಜ್ಞಾನಿಗಳೂ ಭೂಮಿ ಮತ್ತು ಆಕಾಶಕಾಯಗಳ ಸೃಷ್ಟಿಯ ಕುರಿತು ಚಿಂತನ ಮಾಡುತ್ತಲೂ ರಾತ್ರಿ – ಹಗಲುಗಳ ವ್ಯತ್ಯಾಸದ ಕಾರಣಗಳ ಬಗ್ಗೆ ಗಾಢವಾಗಿ ಆಲೋಚಿಸುತ್ತಲೂ ಇರುವಾಗ ಪ್ರಪಂಚದ ಎಲ್ಲೆಲ್ಲೂ ಗೋಚರಿಸುವ ಸುವ್ಯವಸ್ಥೆಯಲ್ಲಿ ಸರ್ವೋನ್ನತನಾದ ದೇವನ ಅಸ್ತಿತ್ವವನ್ನು ರುಜುಪಡಿಸುವ ಆಧಾರಗಳು ಅವರಿಗೆ ಕಂಡುಬರುತ್ತವೆ. ಆಗ, ಅವರು ಇನ್ನೂ ಸ್ಪಷ್ಟವಾದ ಜ್ಞಾನ ಸಿದ್ಧಿಗಾಗಿ ದೇವನೊಡನೆ ಸಹಾಯ ಯಾಚಿಸುತ್ತಾ ನಿಂತುಕೊಂಡೂ ಕುಳಿತುಕೊಂಡೂ ಮಲಗಿಕೊಂಡೂ ಇರುವಾಗಲೆಲ್ಲ ಅವನನ್ನು ಸ್ಮರಿಸುತ್ತಾ ಇರುತ್ತಾರೆ. ತನ್ಮೂಲಕ ಅವರ ಬುದ್ಧಿಶಕ್ತಿ ತೀಕ್ಷ್ಣಗೊಳ್ಳುತ್ತದೆ. ಹಾಗೆ ಅವರು ಆಕಾಶಕಾಯಗಳ ಮತ್ತು ಭೂಮಿಯ ಪರಿಪೂರ್ಣ ಹಾಗೂ ಭದ್ರವಾದ ಸೃಷ್ಟಿವೈಚಿತ್ರ್ಯದ ಬಗ್ಗೆ ಚಿಂತಿಸುವಾಗ ಅವುಗಳಲ್ಲೆಲ್ಲ ಗೋಚರಿಸುವ ಕ್ರಮಬದ್ಧವಾದ ವ್ಯವಸ್ಥೆ ವ್ಯರ್ಥವೋ ಮಿಥ್ಯವೋ ಅಲ್ಲವೆಂದೂ ಬದಲಾಗಿ, ಅದು ಸರ್ವೋನ್ನತನಾದ ಪ್ರಪಂಚದ ಸೃಷ್ಟಿಕರ್ತನ ತೇಜೋಮಯ ಮುಖವನ್ನು ತೋರ್ಪಡಿಸುತ್ತದೆಯೆಂದೂ ಅವರಿಗೆ ಮನವರಿಕೆಯಾಗುತ್ತದೆ. ಹೀಗೆ, ಸೃಷ್ಟಿಕರ್ತನ ಕುರಿತು ಜ್ಞಾನ ಪಡೆದುದರಿಂದ ಅವರು ಅವನ ಗುಣಗಾನ ಮಾಡುತ್ತಾರೆ: "ಹೇ ಜಗದೊಡೆಯಾ, ನೀನು ಅತ್ಯಂತ ಪರಿಶುದ್ಧನಾಗಿರುವೆ. ನಿನ್ನ ಅಸ್ತಿತ್ವವನ್ನು ಅಲ್ಲಗಳೆಯುವುದು ಮತ್ತು ನಿನಗೆ ಅಯೋಗ್ಯ ಗುಣಗಳನ್ನು ಕಲ್ಪಿಸುವುದು ನಿನ್ನ ಪರಿಶುದ್ಧತೆಗೆ ಎಷ್ಟೋ ದೂರದ ಮಾತಾಗಿದೆ. ನಿನ್ನನ್ನು ನಿರಾಕರಿಸುವುದು

ಒಂದು ನರಕವಾಗಿದೆ. ಯಥಾರ್ಥ ಸುಖ ಮತ್ತು ಆನಂದ ನಿನ್ನಿಂದಲೂ ನಿನ್ನ ಜ್ಞಾನದಿಂದಲೂ ಲಭಿಸುತ್ತದೆ. ನಿನ್ನನ್ನು ಗುರುತಿಸಲು ಸಾಧ್ಯವಾಗದವನು ಇಹದಲ್ಲೇ ನರಕಾಗ್ನಿಗೆ ಗುರಿಯಾಗುತ್ತಾನೆ. ದೇವಾ, ನೀನು ನಮ್ಮನ್ನು ನರಕಾಗ್ನಿಯಿಂದ ರಕ್ಷಿಸು. **(3:191–192)**

ಪವಿತ್ರ ಖುರ್‌ಆನಿನಲ್ಲಿ ಮನುಷ್ಯಪ್ರಕೃತಿ ಎಂದು ಕರೆಯಲ್ಪಟ್ಟಿರುವ ಅಂತಃಕರಣ ಅಥವಾ ಮನಸ್ಸಾಕ್ಷಿ (ಒಪ್ಪುತಪ್ಪುಗಳ ಬಗ್ಗೆ ಒಳ ಅರಿವು) ಸಹ ಜ್ಞಾನಸಿದ್ಧಿಯ ಒಂದು ಮಾರ್ಗವಾಗಿದೆ. ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳಲಾಗಿದೆ:

فِطْرَتَ اللهِ الَّتِي فَطَرَ النَّاسَ عَلَيْهَا

ದಿವ್ಯ ಪ್ರಕೃತಿಯಲ್ಲಿ ಅಥವಾ ಪರಿಶುದ್ಧ ಪ್ರಕೃತಿಯಲ್ಲಿ ಮನುಷ್ಯರು ಸೃಷ್ಟಿಸಲ್ಪಟ್ಟಿದ್ದಾರೆ. **(30:31)**

ದೇವನು ಯಾವನೇ ಸಹಭಾಗಿ ಇಲ್ಲದೆ ಸಕಲ ವಸ್ತುಗಳ ಸೃಷ್ಟಿಕರ್ತನಾಗಿ ಜನನ – ಮರಣಕ್ಕೆ ಅತೀತನಾಗಿ ಏಕನಾಗಿರುವನೆಂದು ಬೋಧಿಸಲು ಪ್ರೇರೇಪಿಸುವುದು ಮನುಷ್ಯನಲ್ಲಿ ಕಂಡುಬರುವ ಈ ದೇವದತ್ತ ಮನುಷ್ಯಪ್ರಕೃತಿಯಾಗಿದೆ. ಈ ಮನುಷ್ಯಪ್ರಕೃತಿಯಿಂದ ಸಿದ್ಧಿಸುವ ಜ್ಞಾನ, ಹೊಗೆಗೆ ಸಂಬಂಧಿಸಿದ ತಿಳುವಳಿಕೆಯಿಂದ ಮನಸ್ಸು ಬೆಂಕಿಯ ಕುರಿತುಳ್ಳ ತಿಳುವಳಿಕೆಯನ್ನು ಪಡೆಯುವ ರೀತಿಯಲ್ಲಿ ಪ್ರತ್ಯಕ್ಷದಲ್ಲಿ ಅನುಮಾನಕರವಾಗಿರದಿದ್ದರೂ ಸೂಕ್ಷ್ಮ ರೂಪದಲ್ಲಿ ಅದಕ್ಕೆ ಅನುಮಾನದ ಒಂದು ಛಾಯೆಯಿರುವುದರಿಂದ ಅದನ್ನು ಅನುಮಾನ ಜ್ಞಾನದ ವರ್ಗದಲ್ಲಿ ಸೇರಿಸಲಾಗಿದೆ. ಸರ್ವಶಕ್ತನಾದ ದೇವನು ಪ್ರತಿಯೊಂದು ವಸ್ತುವಿನಲ್ಲಿ ಒಂದೊಂದು ವಿಶೇಷಗುಣವನ್ನು ಅಳವಡಿಸಿರುವನು. ಆ ಅವ್ಯಕ್ತ ಗುಣವನ್ನು ಮಾತಿನಿಂದ ನಿರೂಪಿಸಲು ಸಾಧ್ಯವಿಲ್ಲ. ಆದರೆ, ನಾವು ಆ ವಸ್ತುವಿನ ಕುರಿತು ಆಳವಾಗಿ ಪರಿಶೀಲಿಸಿದರೆ ಅದರಲ್ಲಿ ಅಡಕವಾಗಿರುವ ವಿಶೇಷಗುಣವನ್ನು ನಮಗೆ ಗುರುತಿಸಲು ಸಾಧ್ಯ. ಸಂಕ್ಷಿಪ್ತವಾಗಿ, ಆ ಗುಣ ಆ ವಸ್ತುವಿನಲ್ಲಿ, ಹೊಗೆ ಬೆಂಕಿಯೊಂದಿಗಿರುವ ರೀತಿಯಲ್ಲಿ ಅಭೇದ್ಯವಾಗಿ ಹೆಣೆಯಲ್ಪಟ್ಟಿದೆ. ಉದಾಹರಣೆಗೆ, ನಾವು ದೇವಸತ್ತೆಯ ಕುರಿತು ಚಿಂತನ ಮಾಡುತ್ತಾ ಅವನಿಗಿರಬೇಕಾದ ವಿಶೇಷಗುಣಗಳ ಬಗ್ಗೆ ಯೋಚಿಸುವುದಾದರೆ, ಅವನು ಜನನ ಮರಣಾದಿ ದುಃಖಗಳಿಗೆ ಗುರಿಯಾಗಬೇಕಾದೀತೇ ಎಂದು ಊಹಿಸುವುದು ಕೂಡ ನಮಗೆ ಎದೆಗುದಿಯುಂಟುಮಾಡುತ್ತದೆ. ದೇವನ ಕುರಿತು ಆ ರೀತಿಯ ಕಲ್ಪನೆಯನ್ನು ಮನುಷ್ಯಪ್ರಕೃತಿ ಅಥವಾ ಮನಸ್ಸಾಕ್ಷಿ ನಿರಾಕರಿಸುತ್ತದೆ. ಅಷ್ಟು ಮಾತ್ರವಲ್ಲ, ದೇವನ

ಬಗ್ಗೆ ಈ ರೀತಿಯ ವ್ಯಾಖ್ಯೆ ಪಾವನವಾದ ಮನುಷ್ಯ ಸ್ವಭಾವಕ್ಕೆ ಅಸಹ್ಯವಾಗಿ ತೋರಬಹುದು. ಏಕೆಂದರೆ ನಮ್ಮ ಸಕಲ ಭರವಸೆಗಳ ಆಶ್ರಯವಾಗಿರುವ ಸರ್ವಶಕ್ತನಾದ ದೇವನು ಸರ್ವ ವಿಧ ವಿಕಲತೆ ಮತ್ತು ನ್ಯೂನತೆಗಳಿಗೆ ಅತೀತನಾಗಿ ಸರ್ವಗುಣ ಸಂಪೂರ್ಣನಾಗಿ ಸರ್ವಜ್ಞನಾಗಿರಬೇಕೆಂದು ನಮ್ಮ ಮನಸ್ಸಾಕ್ಷಿ ಹೇಳುತ್ತದೆ. ದೇವವಿಚಾರ ನಮ್ಮ ಹೃದಯದಲ್ಲಿ ಮೂಡುವುದರೊಂದಿಗೆ ಅವನ ದಿವ್ಯ ಸ್ವರೂಪ ಮತ್ತು ಏಕತೆಗೆ ಅನ್ಯೋನ್ಯ, ಹೊಗೆ ಮತ್ತು ಬೆಂಕಿ ಪರಸ್ಪರವಿರುವಂತೆ, ಅಲ್ಲ ಅದಕ್ಕಿಂತಲೂ ಮಿಗಿಲಾದ ರೀತಿಯಲ್ಲಿ ಅವಿಭಾಜ್ಯವಾದ ಒಂದು ಸಂಬಂಧ ಇರುವುದಾಗಿ ಅನುಭವವಾಗುತ್ತದೆ. ಆದ್ದರಿಂದ ಅಂತಃಕರಣ ಅಥವಾ ಮನುಷ್ಯಪ್ರಕೃತಿ ಮುಖಾಂತರ ಸಿದ್ಧಿಸುವ ತಿಳುವಳಿಕೆಯನ್ನು ಅನುಮಾನ ಜ್ಞಾನದಲ್ಲಿ ಸೇರಿಸಲಾಗಿದೆ.

ಈ ಜ್ಞಾನಮಾರ್ಗಕ್ಕಿಂತ ಮಿಗಿಲಾದ “ಐನುಲ್ ಯಖೀನ್” ಅಥವಾ ದೃಷ್ಟಿ ಮುಖಾಂತರ ಲಭಿಸುವ ಜ್ಞಾನ ಅಧಿಕ ದೃಢತರದ್ದಾಗಿದೆ. ಎಂದರೆ, ಒಂದು ವಸ್ತುವಿಗೆ ಸಂಬಂಧಿಸಿದ ನಮ್ಮ ತಿಳವಳಿಕೆಗೆ ಬೇರೇನೂ ಮಾಧ್ಯಮವಾಗಿ ಇಲ್ಲದೆ ಆ ವಸ್ತುವಿನಿಂದಲೇ ನೇರವಾಗಿ ಸಿದ್ಧಿಸುವ ಜ್ಞಾನವಾಗಿದೆ. ಉದಾಹರಣೆಗೆ, ನಾವು ಘ್ರಾಣೇಂದ್ರಿಯ ಮೂಲಕ ಸುಗಂಧ ಅಥವಾ ದುರ್ಗಂಧವನ್ನು ಮೂಸುತ್ತೇವೆ. ರಸನೇಂದ್ರಿಯ ಮೂಲಕ ರುಚಿಯನ್ನು ತಿಳಿಯುತ್ತೇವೆ. ಸ್ಪರ್ಶೇಂದ್ರಿಯ ಮೂಲಕ ಉಷ್ಣ ಅಥವಾ ತಂಪನ್ನು ಗೊತ್ತು ಮಾಡುತ್ತೇವೆ. ಈ ಬಗೆಯ ತಿಳಿವಳಿಕೆಗಳೆಲ್ಲ “ಐನುಲ್ ಯಖೀನ್” ಎಂಬ ವರ್ಗದಲ್ಲಿ ಸೇರುತ್ತವೆ. ಆದರೆ ಪರಲೋಕಕ್ಕೆ ಸಂಬಂಧಿಸಿ ನಾವು ದೃಢ ಜ್ಞಾನ ಗಳಿಸುವುದು ನಮಗೆ ನೇರವಾಗಿ ‘ಇಲ್‌ಹಾಂ’ ಅಥವಾ ದೈವಿಕ ಬೋಧನೆ ಲಭಿಸುವಾಗ, ನಾವು ದೇವನ ಸ್ಪಷ್ಟವಾದ ಶಬ್ದಗಳನ್ನು ಶ್ರವಿಸುವಾಗ ಹಾಗೂ ನಾವು ಅವನ ದಿವ್ಯ ಮಹಾತ್ಮೆಗಳ ಪ್ರಕಟನೆಗಳನ್ನು ದರ್ಶಿಸುವಾಗ. ಸಂಪೂರ್ಣವಾದ ದೈವಿಕ ಜ್ಞಾನ ಲಭಿಸಲು ಇಲ್‌ಹಾಂ (ದೇವವಾಣಿ) ಅತಿ ಅಗತ್ಯವೆಂಬುದರಲ್ಲಿ ಸಂಶಯವಿಲ್ಲ. ಈ ಪರಿಪೂರ್ಣವಾದ ಪರಿಜ್ಞಾನ ಲಭಿಸುವುದಕ್ಕಾಗಿ ನಮ್ಮ ಹೃದಯಾಂತರಾಳದಲ್ಲಿ ಒಂದು ಬಗೆಯ ಹಸಿವು ಮತ್ತು ದಾಹ ಇರುವುದಾಗಿ ಅನುಭವವಾಗುತ್ತದೆ. ಆಧ್ಯಾತ್ಮಿಕ ದಾಹವನ್ನು ಶಮನಗೊಳಿಸಲಿಕ್ಕೆ ದೇವನು ಮೊದಲೇ ಮಾರ್ಗಗಳನ್ನು ಸಿದ್ಧಗೊಳಿಸಿಲ್ಲವಾಗಿದ್ದರೆ ಈ ಅಧ್ಯಾತ್ಮ ದಾಹ ಮತ್ತು ಹಸಿವನ್ನು ನಮ್ಮೊಳಗೆ ಅವನು ಉಂಟುಮಾಡಿರುವುದೇಕೆ? ಪರಲೋಕ ಜೀವಿತದ ಕ್ಷೇಮಕ್ಕೆ ಕಾರಣವಾಗಿರುವ ಐಹಿಕ ಜೀವಿತದಲ್ಲಿ, ಸತ್ಯಸ್ವರೂಪನೂ ಸರ್ವಸಂಪೂರ್ಣವೂ ಸಜೀವನೂ ಆಗಿರುವ ದೇವನಿಗೆ ಸಂಬಂಧಿಸಿ ಬರೇ ಕಟ್ಟು ಕತೆಗಳನ್ನು ಅವಲಂಬಿಸಿಕೊಂಡಿರುವ ವಿಶ್ವಾಸವನ್ನು ಕೈಗೊಂಡು ನಾವು ತೃಪ್ತಿಪಟ್ಟುಕೊಳ್ಳಬೇಕೇ? ಅಥವಾ ದೇವನ ಕುರಿತು

ಇಷ್ಟರ ವರೆಗೆ ಅಪೂರ್ಣವೂ ನ್ಯೂನವೂ ಆದ ಜ್ಞಾನದ ಹೊರತು ಬೇರೇನನ್ನೂ ಪ್ರದಾನ ಮಾಡಲು ಅಶಕ್ತವಾದ ವೈಚಾರಿಕ ಅನ್ವೇಷಣೆಯಲ್ಲಿ ಸಂತೃಪ್ತರಾಗಬೇಕೇ? ಏನು, ಯಥಾರ್ಥ ದೇವಭಕ್ತರೂ ದೇವಪ್ರೇಮಿಗಳೂ ತಮ್ಮ ಪ್ರಿಯಕರನಾದ ಆ ಪವಿತ್ರ ಸತ್ತೆಯ ಶಬ್ದಮಾಧುರ್ಯವನ್ನು ಆಸ್ವಾಧಿಸಲಿಕ್ಕೆ ಆಶಿಸುವುದಿಲ್ಲವೇ? ದೇವನಿಗಾಗಿ ಸರ್ವಸ್ವವನ್ನು ಪರಿತ್ಯಜಿಸಿ, ಹೃದಯ ಮತ್ತು ಪ್ರಾಣವನ್ನು ಅವನಿಗೆ ಅರ್ಪಿಸಿದವರು ಆ ಸತ್ಯ ಪ್ರಭಾ ಕೇಂದ್ರದ ಪ್ರಕಾಶಿಸುವ ಮುಖವನ್ನು ದರ್ಶಿಸದೆ, ಕಾಂತಿಹೀನವಾದ ಬೆಳಕಿನಲ್ಲಿ ಇದ್ದುಕೊಳ್ಳಲು ಇಷ್ಟಪಡುವರೇ? ಜೀವಂತ ದೇವನು ಮಾಧುರ್ಯಭರಿತ ಶಬ್ದದ ಮೂಲಕ "ನಾನಿದ್ದೇನೆ" ಎಂದು ಲೋಕಕ್ಕೆ ತಿಳಿಸುವುದು ಭೌತಿಕ ತತ್ವಜ್ಞಾನಿಗಳ ವಿಚಾರ ಸರಣಿಗಿಂತ ಎಷ್ಟಕ್ಕೂ ಮಹತ್ತರವಾದುದಲ್ಲವೇ? ವಾಸ್ತವದಲ್ಲಿ, ದೇವನ ಅಸ್ತಿತ್ವವನ್ನು ರುಜುಪಡಿಸಲಿಕ್ಕಾಗಿ ಅಪೂರ್ಣ ವಿಚಾರವಾದವನ್ನು ಮಾತ್ರ ಆಶ್ರಯಿಸಿ ಆ ತತ್ವವಾದಿಗಳು ರಚಿಸಿದ ಕೃತಿಗಳನ್ನೆಲ್ಲ ಒಂದು ಕಡೆಯಲ್ಲೂ ದೇವನಿದ್ದಾನೆಂದು ತೋರಿಸುವ "ಅನಲ್ ಮೌಜೂದ್" ಎಂಬ ಅವನ ಸ್ಪಷ್ಟವಾದ ವಚನವನ್ನು ಇನ್ನೊಂದು ಕಡೆಯಲ್ಲೂ ಇಟ್ಟು ತುಲನೆ ಮಾಡುವುದಾದರೆ ಆ ಎಲ್ಲ ಗ್ರಂಥಗಳೂ ದೇವನ ಸ್ಪಷ್ಟ ವಚನದ ಮುಂದೆ ನಗಣ್ಯವೆಂದು ತೋರಬಹುದು. ತತ್ವಜ್ಞಾನಿಗಳೆಂದು ಕರೆಯಲ್ಪಟ್ಟರೂ ಅಂಧಕಾರದಲ್ಲಿ ಚಲಿಸುವ ಅವರಿಂದ ಯಾವ ಪ್ರಕಾಶವನ್ನು ನಮಗೆ ನಿರೀಕ್ಷಿಸಲಿಕ್ಕೆ ಸಾಧ್ಯ?

ಸಂಕ್ಷಿಪ್ತವಾಗಿ ಹೇಳುವುದಾದರೆ, ಸತ್ಯಾನ್ವೇಷಕರಿಗೆ ಸರ್ವಜ್ಞನಾದ ದೇವನು ತನಗೆ ಸಂಬಂಧಿಸಿದ ಪೂರ್ಣ ತಿಳುವಳಿಕೆಯನ್ನು ನೀಡಲು ಉದ್ದೇಶಿಸಿದ್ದರೆ, ಅವರನ್ನು ಜ್ಞಾನ ಪ್ರಬುದ್ಧರನ್ನಾಗಿ ಮಾಡಲಿಕ್ಕೆ ತನ್ನ ದಿವ್ಯವಾಣಿ ಮತ್ತು ಸಂಬೋಧನೆಯ ಮಾರ್ಗವನ್ನು ಅವನು ತೆರೆದಿಟ್ಟಿರುವನೆಂಬುದು ನಿಶ್ಚಯ. ಈ ವಿಷಯದಲ್ಲಿ ಪವಿತ್ರ ಖುರ್‌ಆನ್ ಸತ್ಯಾನ್ವೇಷಕರಿಗೆ ಕಲಿಸುವ ಒಂದು ಪ್ರಾರ್ಥನೆ ಈ ರೀತಿ ಇದೆ:

اِهْدِنَا الصِّرَاطَ الْمُسْتَقِيْمَ - صِرَاطَ الَّذِيْنَ اَنْعَمْتَ عَلَيْهِمْ

ಹೇ ದೇವಾ, ನೀನು ನಮ್ಮನ್ನು ಸ್ಥಿರತೆಯ ಮಾರ್ಗದಲ್ಲಿ, ನಿನ್ನ ಅನುಗ್ರಹಕ್ಕೆ ಪಾತ್ರರಾದವರ ಮಾರ್ಗದಲ್ಲಿ ನಡೆಸು. **(1:6,7)**

ಇಲ್ಲಿ ಅನುಗ್ರಹ ಎಂಬುದರ ತಾತ್ಪರ್ಯ ದೇವನಿಂದ ಮನುಷ್ಯನಿಗೆ ನೇರವಾಗಿ ಲಭಿಸುವ ದಿವ್ಯವಾಣಿ (ಇಲ್‌ಹಾಂ), ದಿವ್ಯ ದರ್ಶನ ಮೊದಲಾದ ಆಧ್ಯಾತ್ಮಿಕ ಜ್ಞಾನಗಳಾಗಿವೆ. ಪವಿತ್ರ ಖುರ್‌ಆನ್ ಇನ್ನೊಂದೆಡೆಯಲ್ಲಿ ಹೀಗೆ ಹೇಳುತ್ತದೆ:

إِنَّ الَّذِيْنَ قَالُوْا رَبُّنَا اللّٰهُ ثُمَّ اسْتَقَامُوْا تَتَنَزَّلُ عَلَيْهِمُ الْمَلٰٓئِكَةُ اَلَّا تَخَافُوْا وَلَا تَحْزَنُوْا
وَاَبْشِرُوْا بِالْجَنَّةِ الَّتِيْ كُنْتُمْ تُوْعَدُوْنَ

ಸತ್ಯ ದೇವನನ್ನು ನಂಬಿಕೊಂಡು ಪೂರ್ಣ ಭಕ್ತಿಯನ್ನು ಕೈಗೊಂಡು ಸ್ಥಿರಚಿತ್ತರಾಗಿರುವವರ ಬಳಿಗೆ ದೇವದೂತರು ಇಳಿದು ಬಂದು ಹೀಗೆ ಸಂದೇಶ ನೀಡುವರು: ನೀವು ಭಯಪಡುವುದಾಗಲಿ, ವ್ಯಥೆಗೊಳ್ಳುವುದಾಗಲಿ ಬೇಡ. ನಿಮಗೆ ವಾಗ್ದಾನವಿತ್ತ ಸ್ವರ್ಗ ನಿಮಗಿರುವುದರಿಂದ ಸಂತೋಷಪಡಿರಿ. **(41:31)**

ಈ ಪವಿತ್ರ ವಾಕ್ಯದಲ್ಲಿ ದೇವದಾಸರಾದ ಭಕ್ತ ಜನರಿಗೆ ಭಯ ಮತ್ತು ದುಃಖದ ಸಂದರ್ಭಗಳಲ್ಲಿ ದಿವ್ಯವಾಣಿ (ಇಲ್‌ಹಾಂ) ಲಭಿಸುವುದೆಂದೂ ಅವರಿಗೆ ಸಾಂತ್ವನ ನೀಡಲಿಕ್ಕೆ ದೇವದೂತರು ಇಳಿದುಬರುವರೆಂದೂ ಸ್ಪಷ್ಟವಾಗಿ ಪ್ರಸ್ತಾಪಿಸಲಾಗಿದೆ. ಇದೇ ಪ್ರಕಾರ ಪವಿತ್ರ ಖುರ್‌ಆನ್ ಬೇರೊಂದೆಡೆಯಲ್ಲಿ ಹೀಗೆ ಹೇಳುತ್ತದೆ:

لَهُمُ الْبُشْرٰى فِي الْحَيٰوةِ الدُّنْيَا وَفِي الْاٰخِرَةِ

ದೇವನಲ್ಲಿ ಅನುರಕ್ತರಾದ ಭಕ್ತಜನರಿಗೆ ಅವನ ಪವಿತ್ರ ವಾಣಿಯ ಮೂಲಕ ಐಹಿಕ ಜೀವಿತದಲ್ಲೂ ಮುಂದಿನ ಜೀವಿತದಲ್ಲೂ ಶುಭವಾರ್ತೆ ಲಭಿಸುವುದು.

**(10:65)**

## ದಿವ್ಯವಾಣಿ ಎಂದರೇನು?

ಇಲ್ಲಿ ದಿವ್ಯವಾಣಿ (ಇಲ್‌ಹಾಂ) ಎಂಬುದರ ತಾತ್ಪರ್ಯವೇನೆಂದು ಸ್ಪಷ್ಟಪಡಿಸಬೇಕಾಗಿದೆ. "ಇಲ್‌ಹಾಂ" ಎಂದರೆ ಚಿಂತಿಸುತ್ತಿರುವವನೊಬ್ಬನ ಹೃದಯದಲ್ಲಿ ಹೊಸದಾಗಿ ಮೂಡಿಬರುವ ವಿಚಾರವಲ್ಲ. ಒಬ್ಬ ಕವಿ ಕಾವ್ಯ ರಚನೆಯಲ್ಲಿ ತೊಡಗಿ ಆಲೋಚನೆಯಲ್ಲಿ ಮಗ್ನನಾಗಿರುವಾಗ ಹೊಸದಾದೊಂದು ವಿಚಾರ ಅವನ ಹೃದಯದಲ್ಲಿ ಮೂಡುವುದಾದರೆ ಅದನ್ನು ದಿವ್ಯವಾಣಿ ಅಥವಾ ದಿವ್ಯಜ್ಞಾನ ಎಂದು ಹೇಳಲಾಗದು. ಅದು ದೈವಿಕ ನಿಸರ್ಗ ನಿಯಮಾನುಸಾರ ಮನುಷ್ಯನ ಆಲೋಚನೆಯ ಫಲದಿಂದ ಉಂಟಾಗುವುದಾಗಿದೆ. ಒಬ್ಬನು ಸದ್ವಿಚಾರ ಅಥವಾ ದುರ್ವಿಚಾರದಲ್ಲಿ ಮನಸ್ಸಿಟ್ಟು ಚಿಂತಿಸಿದರೆ ಅವನ ಆಲೋಚನೆಗೆ ಅನುಸಾರವಾದ ವಿಚಾರ ಮನಸ್ಸಿನಲ್ಲಿ ಉದ್ಭವಿಸುತ್ತದೆ. ಉದಾಹರಣೆಗೆ, ಸತ್ಯಸಂಧನೂ ಸಾತ್ವಿಕನೂ ಆದವನು ಸತ್ಯವನ್ನೂ ಧರ್ಮವನ್ನೂ ಬೆಂಬಲಿಸಲಿಕ್ಕಾಗಿಯೂ ದುಷ್ಟನಾದ ಇನ್ನೊಬ್ಬನು ಅಧರ್ಮವನ್ನು ಅನುಕೂಲಿಸಲಿಕ್ಕಾಗಿಯೂ ಸಜ್ಜನರನ್ನು ನಿಂದಿಸಲಿಕ್ಕಾಗಿಯೂ ಕಾವ್ಯ ರಚಿಸಲು

ತೊಡಗಿದರೆ, ಇಬ್ಬರು ಸಹ ಅವರವರ ಸಾಮರ್ಥ್ಯಕ್ಕನುಗುಣವಾಗಿ ಒಂದೊಂದು ಕಾವ್ಯವನ್ನು ರಚಿಸಬಹುದು. ಅಸತ್ಯವನ್ನು ಅನುಕೂಲಿಸಿ ಸಜ್ಜನರನ್ನು ದ್ವೇಷಿಸುವ ಕವಿ ಕವನ ರಚನೆಯಲ್ಲಿ ನಿಪುಣನಾಗಿದ್ದರೆ ಅವನ ಕವಿತೆ ಆ ಸಾತ್ವಿಕ ಕವಿಯ ರಚನೆಗಿಂತ ಮಿಗಿಲೆನಿಸಿದರೆ ಅದರಲ್ಲಿ ಆಶ್ಚರ್ಯಪಡಲಿಕ್ಕಿಲ್ಲ. ಆದ್ದರಿಂದ ಹೊಸದಾದೊಂದು ವಿಚಾರ ಹೃದಯದಲ್ಲಿ ಮೂಡಿಬರುವುದನ್ನು "ಇಲ್‌ಹಾಂ" (ದಿವ್ಯಸಂದೇಶ) ಎಂದು ಹೇಳುವುದಾದರೆ, ಸತ್ಯಕ್ಕೆ ವಿರುದ್ಧವಾಗಿ ಸದಾ ಬರೆಯುತ್ತಾ, ಕಟ್ಟುಕತೆ ರಚನೆ ಮತ್ತು ಮಿಥ್ಯಾರೋಪಗಳನ್ನು ಹೊರಿಸುವುದು ಕಸಬನ್ನಾಗಿ ಮಾಡಿರುವ ಸತ್ಯ ಮತ್ತು ಸಜ್ಜನರ ಶತ್ರುವಾಗಿರುವ ಒಬ್ಬ ದುಷ್ಟ ಕವಿಯನ್ನು "ಮುಲ್‌ಹಿಂ" ಅಥವಾ ದೇವನಿಂದ ಪ್ರೇರೇಪಿಸಪಟ್ಟವನು ಎಂದು ಹೇಳಬೇಕಾದೀತು. ಕತೆ, ಕಾದಂಬರಿಗಳಲ್ಲಿ ಅದ್ಭುತಕರವಾದ, ಚಮತ್ಕಾರಮಯವಾದ ವರ್ಣನೆಗಳು ಇರುತ್ತವೆ. ಹೀಗೆ ವಿಷಯಗಳು ಮಿಥ್ಯೆಯಾದರೂ ತದ್ವಿಷಯದಲ್ಲಿ ಚಿಂತಿಸುತ್ತಿರುವವರ ಹೃದಯಗಳಲ್ಲಿ ಹೊಸ ವಿಚಾರ ತರಂಗಗಳು ಏಳುವುದನ್ನು ಕಾಣಬಹುದು. ಈ ಬಗೆಯಲ್ಲಿ ಹೊಳೆಯುವ ವಿಚಾರವನ್ನು "ಇಲ್‌ಹಾಂ" (ದಿವ್ಯಬೋಧನೆ) ಎಂದು ಹೇಳಬಹುದೇ? ಇಲ್‌ಹಾಂ ಎಂದರೆ ಹೊಸದಾದೊಂದು ವಿಚಾರ ಹೃದಯದಲ್ಲಿ ಮೂಡುವುದರ ಹೆಸರೆಂದಾದರೆ ಒಬ್ಬ ಕಳ್ಳನನ್ನು ಸಹ "ಮುಲ್‌ಹಿಂ" (ದೇವನಿಂದ ಪ್ರೇರೇಪಿಸಪಟ್ಟವನು) ಎಂದು ಹೇಳಬಹುದಲ್ಲವೇ? ಏಕೆಂದರೆ, ಯೋಚಿಸುತ್ತಿರುವುದರ ಫಲವಾಗಿ ಕನ್ನ ಹಾಕುವ ಹೊಸ ಉಪಾಯಗಳೂ ಕೊಳ್ಳೆ ಹೊಡೆಯುವ ಮತ್ತು ಕೊಲೆ ಮಾಡುವ ಹೊಸ ದಾರಿಗಳೂ ಅವನ ಮನಸ್ಸಿಗೆ ಹೊಳೆಯುತ್ತವೆ. ಈ ರೀತಿಯ ಅಶುದ್ಧಕರವೂ ಅನೈತಿಕವೂ ಆದ ವಿಚಾರೋದಯವನ್ನು "ಇಲ್‌ಹಾಂ" ಎಂದು ಎಂದಿಗೂ ಹೆಸರಿಸಲಾಗದು. ತನ್ನ ವಚನ ಮೂಲಕ ಹೃದಯಗಳಿಗೆ ಸಮಾಧಾನವನ್ನೂ ಶಾಂತಿಯನ್ನೂ ನೀಡಿ, ಅರಿವಿಲ್ಲದವರಿಗೆ ಆಧ್ಯಾತ್ಮಿಕ ಅರಿವಿನ ಮೂಲಕ ಪರಿಜ್ಞಾನ ನೀಡುವ ಸತ್ಯದೇವನನ್ನು ತಿಳಿಯದವರು ದಿವ್ಯವಾಣಿಯ (ಇಲ್‌ಹಾಂ) ಕುರಿತು ಇಂತಹ ತಪ್ಪು ಕಲ್ಪನೆಗೆ ಗುರಿಯಾಗಿದ್ದಾರೆ.

ಹಾಗಾದರೆ, ಇಲ್‌ಹಾಂ (ದಿವ್ಯವಾಣಿ) ಎಂದರೇನು? ಅದು ಜೀವಂತನೂ ಸರ್ವಶಕ್ತನೂ ಆದ ದೇವನು ತನ್ನ ಆಯ್ದ ಭಕ್ತನೊಡನಾಗಲಿ, ತಾನು ಆರಿಸಲು ಇಚ್ಛಿಸುವ ಭಕ್ತನೊಡನಾಗಲಿ ತನ್ನ ಚೈತನ್ಯಮಯ ಹಾಗೂ ಸತ್ವಯುತ ವಚನಾಮೃತ ಮುಖಾಂತರ ಅಭಿಮುಖವಾಗಿ ಮಾತನಾಡುವುದಾಗಿದೆ. ಈ ದಿವ್ಯವಾಣಿ ತೃಪ್ತಿಕರವಾಗಿಯೂ ಕ್ರಮಾನುಗತವಾಗಿಯೂ ಮುಂದುವರಿಯುತ್ತಾ, ಹೀನ ವಿಚಾರ ಮಿಶ್ರಿತವಾಗಲಿ, ಅಪೂರ್ಣವಾಗಲಿ, ಅವ್ಯಕ್ತವಾಗಲಿ ಆಗಿರದೆ ಮಾಧುರ್ಯ

ಸಹಿತವೂ ವೈಭವಪೂರ್ಣವೂ ಜ್ಞಾನ ಗರ್ಭಿತವೂ ಆಗಿದ್ದರೆ, ಅದೇ, ದೇವನು ತನ್ನ ಭಕ್ತ ದಾಸನನ್ನು ಸಾಂತ್ವನಪಡಿಸುವ ಹಾಗೂ ತನ್ನ ದಿವ್ಯಸ್ವರೂಪವನ್ನು ಅವನಿಗೆ ಬಹಿರಂಗಪಡಿಸುವ ಪವಿತ್ರ ವಚನವಾಗಿದೆ. ಆದರೆ ಕೆಲವು ಬಾರಿ ಯಥಾರ್ಥ ದೇವವಚನಕ್ಕಿರುವ ಪೂರ್ಣವಾದ ಅನುಗ್ರಹದಿಂದ ಕೂಡಿರದ ಕೆಲವು ವಚನಗಳು ಒಬ್ಬ ಭಕ್ತನಿಗೆ ಪರೀಕ್ಷಾರ್ಥವಾಗಿ ಲಭಿಸಬಹುದು. ಅದರ ಫಲವಾಗಿ, ದೇವವಚನದ ತುಸು ರುಚಿ ಅನುಭವಿಸಿದ ನಂತರ ಅವನು ತನ್ನ ಮಾತು ಮತ್ತು ಕೃತಿಯನ್ನು ಯಥಾರ್ಥ ದೇವವಚನವನ್ನು ಪಡೆದ ಭಕ್ತದಾಸರಂತೆ ಪಾವನವಾಗಿರಿಸುತ್ತಾನೆ ಅಥವಾ ಸತ್ಪಥದಿಂದ ವ್ಯತಿಕ್ರಮಿಸುತ್ತಾನೆ. ಈ ಆರಂಭ ಘಟ್ಟದಲ್ಲಿ ಅವನು ದೇವನಿಂದ ಪರೀಕ್ಷಿಸಲ್ಪಡುತ್ತಾನೆ. ಅವನು ಸತ್ಯಭಕ್ತರಂತೆ ಧರ್ಮಪಥದಲ್ಲಿ ಚಲಿಸುವುದಿಲ್ಲವಾದರೆ ಈ ದಿವ್ಯಾನುಭೂತಿ ಅವನಿಗೆ ಲಭಿಸದೆ ಅವನ ಹೃದಯದಲ್ಲಿ ಒಂದು ವ್ಯಾಮೋಹ ಮಾತ್ರ ಬಾಕಿಯುಳಿಯುತ್ತದೆ. ಕೋಟ್ಯಾನುಕೋಟಿ ಭಕ್ತ ಜನರಿಗೆ ದಿವ್ಯವಾಣಿ ಲಭಿಸುತ್ತದೆ. ಆದರೆ ದೇವದೃಷ್ಟಿಯಲ್ಲಿ ಅವರೆಲ್ಲರಿಗೂ ಒಂದೇ ಸ್ಥಾನವಿರುವುದಿಲ್ಲವೆಂದು ನೆನಪಿಡತಕ್ಕದ್ದು. ಸ್ಪಷ್ಟವಾದ ರೀತಿಯಲ್ಲಿ ದೇವವಚನ ಗಳಿಸಿದ ಪ್ರವಾದಿಗಳೇ ಆಗಲಿ, ಎಲ್ಲರಿಗೂ ಸಮಾನ ಸ್ಥಾನವಿರುವುದಿಲ್ಲ. ದೇವನು ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳುತ್ತಾನೆ:

تِلْكَ الرُّسُلُ فَضَّلْنَا بَعْضَهُمْ عَلٰى بَعْضٍ

ನಾವು ಪ್ರವಾದಿಗಳ ಪೈಕಿ ಕೆಲವರನ್ನು ಬೇರೆ ಕೆಲವರಿಗಿಂತ ಶ್ರೇಷ್ಠರನ್ನಾಗಿ ಮಾಡಿದ್ದೇವೆ. **(2:254)**

ಈ ವಾಕ್ಯದಿಂದ, ದಿವ್ಯವಾಣಿ ಕರುಣಾನಿಧಿಯಾದ ದೇವನ ಕಡೆಯಿಂದಿರುವ ಒಂದು ಅನುಗ್ರಹವೆಂದೂ ಅದಕ್ಕೆ ದಿವ್ಯವಾಣಿ ಸಿದ್ಧಿಸಿದವರ ಸ್ಥಾನವ್ಯತ್ಯಾಸದೊಂದಿಗೆ ಸಂಬಂಧವಿಲ್ಲವೆಂದೂ ತಿಳಿದುಬರುತ್ತದೆ. ಅವರಿಗೆ ದೇವನೊಡನಿರುವ ಭಕ್ತಿ, ಶ್ರದ್ಧೆ, ವಿಶ್ವಾಸ ಹಾಗೂ ನಿಷ್ಠೆ ಎಂಬ ಗುಣ ಮಹಿಮೆಗಳಿಗೆ ಹೊಂದಿಕೊಂಡು ಅವರ ಸ್ಥಾನಮಾನಗಳಲ್ಲಿ ವ್ಯತ್ಯಾಸವಿರುತ್ತದೆ. ಮನೋಗುಣಗಳ ಈ ಹೆಚ್ಚುಕಮ್ಮಿಯನ್ನು ದೇವನು ಮಾತ್ರ ಬಲ್ಲವನಾಗಿದ್ದಾನೆ. ಅನುಗ್ರಹದಾಯಕ ಶರತ್ತುಗಳಿಂದ ಕೂಡಿದ ದಿವ್ಯವಾಣಿ ಸಿದ್ಧಿಸುವುದು ಸಹ ಈ ಗುಣಗಳ ಒಂದು ಫಲವೇ ಆಗಿದೆ. ಭಕ್ತನು ದೇವನೊಡನೆ ಮಾಡುವ ಪ್ರಾರ್ಥನೆಗೆ ಉತ್ತರ ಲಭಿಸುವುದಾದರೆ, ಹಾಗೆ ಈ ಕ್ರಮ ಮುಂದುವರಿದುಕೊಂಡು ಹೋಗುವುದಾದರೆ, ಹಾಗೂ ಈ ವಾಣಿಯಲ್ಲಿ ದಿವ್ಯಪ್ರಭಾವವೂ ತೇಜಸ್ಸೂ ಅಂತರ್ಲೀನವಾಗಿದ್ದು ಭವಿಷ್ಯತ್ಕಾಲಕ್ಕೆ

ಸಂಬಂಧಿಸಿದ ವಿಚಾರಗಳೂ ಪರಮಾರ್ಥ ಜ್ಞಾನವೂ ಒಳಗೊಂಡಿರುವುದಾದರೆ ಅದು ಖಂಡಿತವಾಗಿಯೂ ದಿವ್ಯವಾಣಿಯೇ ಆಗಿರುತ್ತದೆ. ಇಬ್ಬರು ಮಿತ್ರರು ಪರಸ್ಪರ ಸಂಭಾಷಣೆ ಮಾಡುವ ರೀತಿಯಲ್ಲಿ ಸೃಷ್ಟಿಕರ್ತನಾದ ದೇವ ಮತ್ತು ದಾಸನ ಮಧ್ಯೆ ನಿಕಟ ಸಂಪರ್ಕವಿರಬೇಕಾದುದು ದಿವ್ಯವಾಣಿಯ ಒಂದು ಅವಶ್ಯ ಲಕ್ಷಣವಾಗಿದೆ. ಸತ್ಯಭಕ್ತನು ಸರ್ವಶಕ್ತನಾದ ದೇವನೊಡನೆ ಮಾಡುವ ಪ್ರಾರ್ಥನೆಗೆ ಉತ್ತರವಾಗಿ ದೇವ ಸನ್ನಿಧಿಯಿಂದ ಮಾಧುರ್ಯಭರಿತ, ಆನಂದದಾಯಕ ವಚನವನ್ನು ಶ್ರವಿಸುವುದಾದರೆ ಹಾಗೂ ಅದು ಆತನ ಇಚ್ಛೆ, ಆಲೋಚನೆಗಳ ಫಲವಾಗಿರದೆ ಇದ್ದರೆ, ಅದು ಖಂಡಿತವಾಗಿಯೂ ದೇವನ ಕಡೆಯಿಂದಿರುವ ವಾಣಿಯೇ ಆಗಿರುತ್ತದೆ. ಇಂತಹ ಅನುಗ್ರಹ ಸಿದ್ಧಿಸಿದ ಭಕ್ತನು ನಿಶ್ಚಯವಾಗಿಯೂ ದೇವ ಸನ್ನಿಧಿಯಲ್ಲಿ ಗೌರವ ಪಡೆಯುತ್ತಾನೆ. ಆದರೆ ಸಜೀವ ಹಾಗೂ ಪರಿಶುದ್ಧವಾದ ದೇವವಚನ ಪಾರಿತೋಷಿಕವೆಂಬ ರೀತಿಯಲ್ಲಿ ಸ್ಪಷ್ಟರೂಪದಲ್ಲಿ ಪದೇ ಪದೇ ಲಭ್ಯವಾಗುವುದು ಸತ್ಯವಿಶ್ವಾಸದಲ್ಲೂ ಸತ್ಯನಿಷ್ಠೆಯಲ್ಲೂ ಸತ್ಕರ್ಮದಲ್ಲೂ ಅವರ್ಣನೀಯವಾದ ಪರಿಶುದ್ಧ ಸಂಬಂಧದಲ್ಲೂ ಅಭಿವೃದ್ಧಿ ಪಡೆಯುತ್ತಿರುವ ವ್ಯಕ್ತಿಗೆ ಮಾತ್ರವಾಗಿರುತ್ತದೆ; ಬೇರಾರಿಗೂ ಅಲ್ಲ. ಯಥಾರ್ಥ ಹಾಗೂ ಪವಿತ್ರವಾದ ದಿವ್ಯವಾಣಿ ಸೃಷ್ಟಿಕರ್ತನ ಮಹತ್ತರವಾದ ಅದ್ಭುತಗಳನ್ನು ಬಹಿರಂಗಪಡಿಸುತ್ತದೆ. ಅನೇಕ ಸಲ ಉಜ್ವಲವಾದೊಂದು ತೇಜಸ್ಸು ಹುಟ್ಟುತ್ತದೆ. ಅದರ ಜೊತೆಗೆ ಸ್ಪಷ್ಟವೂ ಪ್ರಭಾಪೂರ್ಣವೂ ಆದ ದೇವವಚನ ಅವತರಿಸುತ್ತದೆ. ಭೂಮ್ಯಾಕಾಶಗಳ ಸೃಷ್ಟಿಕರ್ತನಾದ ದೇವನೊಡನೆ ಮಾತನಾಡುವುದು ಹಾಗೂ ಅವನಿಂದ ಸಂಬೋಧಿಸಲ್ಪಡುವುದಕ್ಕಿಂತ ಮಿಗಿಲಾದೊಂದು ಅನುಗ್ರಹ ಮನುಷ್ಯನಿಗೆ ಬೇರೇನಿದೆ? ದಿವ್ಯವಾಣಿ ಮೂಲಕ ಭಕ್ತನು ಈ ಲೋಕದಲ್ಲಿ ದೇವದರ್ಶನವನ್ನು ಪಡೆಯುತ್ತಾನೆ.

ಆದರೆ ದೇವನ ಕಡೆಯಿಂದ ಉಂಟಾದುದು ಎಂಬುದಕ್ಕೆ ಯುಕ್ತವಾದ ಚಿಹ್ನೆಗಳೇನೂ ಇಲ್ಲದೆ ಉದ್ದೇಶರಹಿತವಾದ ಕೆಲವು ಮಾತುಗಳಾಗಲಿ, ವಚನಗಳಾಗಲಿ, ಕವನಗಳಾಗಲಿ ಒಬ್ಬನ ನಾಲಗೆಯಿಂದ ತನ್ನಷ್ಟಕ್ಕೆ ಉಚ್ಚರಿಸಲ್ಪಡುವುದಾದರೆ, ಅವನ ಆ ಸ್ಥಿತಿ ದೇವವಚನಕ್ಕೆ ಸಂಬಂಧಿಸಿದ ಈ ವಿವರಣೆಯಲ್ಲಿ ಒಳಗೊಳ್ಳುವುದಿಲ್ಲ. ಅಂತಹ ಒಂದು ಅನುಭವವನ್ನು ಪಡೆಯುವವನು ದೇವನ ಪರೀಕ್ಷೆಗೆ ಒಳಗಾಗುತ್ತಾನೆ. ಏಕೆಂದರೆ ದೇವನು ಕೆಲವೊಮ್ಮೆ ಕರ್ತವ್ಯಪ್ರಜ್ಞೆ ರಹಿತರೂ ಉದಾಸೀನರೂ ಆದ ಜನರನ್ನು ಈ ರೀತಿಯಲ್ಲಿ ಪರೀಕ್ಷಿಸುತ್ತಾನೆ. ದೇವನಿಂದ ಬಂದದ್ದೋ ಶೈತಾನನಿಂದ ಬಂದದ್ದೋ ಎಂದು ಗುರುತಿಸಲಿಕ್ಕಾಗದಂತಹ ಅಸ್ಪಷ್ಟ ಮಾತುಗಳಾಗಲಿ, ವಚನಗಳಾಗಲಿ ಅವರ ಹೃದಯದಲ್ಲಿ ಮೂಡುತ್ತವೆ. ಅಥವಾ ಅವರ ನಾಲಗೆಯಿಂದ ಉಚ್ಚರಿಸಲ್ಪಡುತ್ತವೆ.

ಹೀಗೆ ಪರೀಕ್ಷೆಗೊಳಪಡುವವನು ಪಶ್ಚಾತ್ತಾಪಪಟ್ಟು ದೇವನ ಕಡೆಗೆ ತಿರುಗಿ ಸ್ವಯಂ ಸುಧಾರಣೆಗೊಳ್ಳಲು ಪ್ರಯತ್ನಿಸಬೇಕಾಗಿದೆ. ಆದರೆ ಸತ್ಕರ್ಮಿ ಹಾಗೂ ಧರ್ಮನಿಷ್ಠ ಭಕ್ತನಿಗೆ ಅಡೆತಡೆಯಿಲ್ಲದೆ ಸ್ವಚ್ಛ ನಿರ್ಮಲವಾದ ದಿವ್ಯ ಬೋಧನೆ ಲಭಿಸುತ್ತದೆ. ತೇಜೋಮಯ, ಮಾಧುರ್ಯಭರಿತ, ಅರ್ಥಗರ್ಭಿತ, ಜ್ಞಾನಭರಿತ, ಪ್ರಭಾವಪೂರ್ಣ ದೇವವಚನ ಕೇಳಿಸುತ್ತದೆ. ಜಾಗೃತಾವಸ್ಥೆಯಲ್ಲಿ ಒಂದೇ ಸಂದರ್ಭದಲ್ಲೇ ಹತ್ತೋ ಅದಕ್ಕಿಂತ ಹೆಚ್ಚೋ ಪ್ರಾರ್ಥನೆಗಳಿಗೆ ದೇವನಿಂದ ಉತ್ತರ ಲಭಿಸುವ ಸೌಭಾಗ್ಯ ಹಲವು ಬಾರಿ ದೊರಕಿ, ಒಂದು ಪ್ರಾರ್ಥನೆಗೆ ಉತ್ತರ ಲಭಿಸಿದ ಕೂಡಲೇ ಇನ್ನೊಂದನ್ನು ಅಪೇಕ್ಷಿಸಿದಾಗ ಅದಕ್ಕೂ ಉತ್ತರ ಸಿಗುವ ರೀತಿಯಲ್ಲಿ ಮುಂದುವರಿದು ಹತ್ತೋ ಅದಕ್ಕಿಂತ ಹೆಚ್ಚೋ ಸಲ ಒಂದೇ ಸಂದರ್ಭದಲ್ಲಿ ದೇವನೊಡನೆ ಸಂಭಾಷಣೆ ಮಾಡುವ ಸೌಭಾಗ್ಯ ಲಭಿಸುತ್ತಲೂ, ಹೀಗೆ ಹಲವಾರು ಪ್ರಾರ್ಥನೆಗಳಿಗೆ ಉತ್ತರ ಹಾಗೂ ಮಹತ್ತರವಾದ ಸತ್ಯ ತತ್ವಗಳ ಕುರಿತು ಜ್ಞಾನವೂ ಭವಿಷ್ಯ ಘಟನೆಗಳ ಕುರಿತು ಸಮಾಚಾರಗಳೂ ಲಭ್ಯವಾಗುವುದಾದರೆ ಆತನು ಇತರರಿಗಿಂತ ದೇವನಿಗೆ ಕೃತಜ್ಞತೆ ಸಲ್ಲಿಸುತ್ತಲೂ ತನ್ನ ಜೀವಿತವನ್ನು ದೇವಪಥದಲ್ಲಿ ಅರ್ಪಿಸುತ್ತಲೂ ಇರಬೇಕಾಗಿದೆ. ಏಕೆಂದರೆ, ದೇವನು ಆತನನ್ನು ತನ್ನ ಅತ್ಯಂತ ದಯೆಯಿಂದ ತನ್ನ ಭಕ್ತದಾಸರಲ್ಲಿ ವರಿಷ್ಠನನ್ನಾಗಿ ಆರಿಸಿ ಪೂರ್ವಿಕ ಮಹಾನುಭಾವರಾದ ಸತ್ಯಭಕ್ತರಿಗೆ ನೀಡಲಾದ ಅನುಗ್ರಹಗಳಿಗೆ ಹಕ್ಕುದಾರರನ್ನಾಗಿ ಮಾಡಿರುವನು. ಇದು ಅತ್ಯಂತ ವಿರಳವಾದ ಅನುಗ್ರಹ ಸಿದ್ಧಿಯಾಗಿದೆ. ಈ ಭಾಗ್ಯ ಪಡೆದವರು ಬಾಕಿಯೆಲ್ಲವನ್ನೂ ಕ್ಷುಲ್ಲಕ ಹಾಗೂ ತುಚ್ಛವೆಂದು ಗಣಿಸುತ್ತಾರೆ.

ಆಧ್ಯಾತ್ಮಿಕವಾದ ಈ ಉತ್ಕೃಷ್ಟ ಸ್ಥಾನ ಪಡೆದ ಮಹಾಪುರುಷರು ಇಸ್ಲಾಮಿನಲ್ಲಿ ಎಲ್ಲ ಕಾಲದಲ್ಲೂ ಇರುತ್ತಾರೆ. ದೇವನು ತನ್ನ ಸತ್ಯದಾಸನನ್ನು ಸಮೀಪಿಸಿ ಆತನೊಡನೆ ಸಂಭಾಷಣೆ ಮಾಡುವುದು, ದೇವನು ಆತನೊಳಗೆ ಮಾತನಾಡುವುದು, ಆತನ ಹೃದಯವನ್ನು ತನ್ನ ಭದ್ರಾಸನವನ್ನಾಗಿ ಮಾಡಿ ಆತನನ್ನು ಸ್ವರ್ಗದೆಡೆಗೆ ಆಕರ್ಷಿಸುವುದು, ಪೂರ್ವಿಕ ಸಜ್ಜನರಿಗೆ ಪ್ರದಾನ ಮಾಡಿದ ಸಕಲ ಅನುಗ್ರಹಗಳನ್ನೂ ಆತನಿಗೆ ನೀಡುವುದು – ಇವು ಇಸ್ಲಾಮಿನಲ್ಲಿ ಮಾತ್ರವಿರುವ ಅನುಗ್ರಹಗಳಾಗಿವೆ. ಹೆಚ್ಚು ಹೆಚ್ಚಾಗಿ ದೇವಸಾಮೀಪ್ಯವನ್ನು ಅನುಭವಿಸುವ ಮನುಷ್ಯನು ಯಾವ ಹಂತಕ್ಕೆ ತಲಪುತ್ತಾನೆಂದು ಅಂಧ ಲೋಕ ತಿಳಿಯುವುದಿಲ್ಲ ಎಂಬುದು ದುಃಖಕರ. ದೇವನ ಸಾಮೀಪ್ಯವನ್ನು ಪಡೆಯಲಿಕ್ಕೆ ಜನರು ಸ್ವಯಂ ಆಧ್ಯಾತ್ಮಿಕ ಪಥದಲ್ಲಿ ನಡೆಯುವುದಿಲ್ಲ. ಈ ಮಾರ್ಗದಲ್ಲಿ ಚಲಿಸುವ ಅಧ್ಯಾತ್ಮ ಪುರುಷನನ್ನು ಒಂದೋ ಅವರು ಅವಿಶ್ವಾಸಿಯೆಂದೂ ಧರ್ಮಭ್ರಷ್ಟನೆಂದೂ ವಿಧಿಸಿ ತಿರಸ್ಕರಿಸುತ್ತಾರೆ ಅಥವಾ

ದೇವನ ಸ್ಥಾನವನ್ನು ನೀಡಿ ಪೂಜಿಸುತ್ತಾರೆ. ಈ ಎರಡು ರೀತಿಗಳೂ ಧರ್ಮ ವಿರುದ್ಧವಾಗಿವೆ. ಒಂದು, ತೀವ್ರ ವಿದ್ವೇಷದ ಫಲವಾಗಿದ್ದರೆ ಇನ್ನೊಂದು, ಅತಿರೇಕ ಪ್ರೀತಿಯ ಫಲವಾಗಿದೆ. ಆದರೆ ವಿವೇಕಿ ಮನುಷ್ಯನು ಈ ಎರಡು ವಿಧ ದೋಷಗಳು ಬಾಧಿಸದ ಮಧ್ಯಮಾರ್ಗವನ್ನು ಕೈಗೊಳ್ಳಬೇಕು. ಎಂದರೆ, ಉತ್ಕೃಷ್ಟವಾದ ಆಧ್ಯಾತ್ಮಿಕ ಸ್ಥಾನವನ್ನು ಹೊಂದಿರುವ ಮಹಾ ಪುರುಷನನ್ನು ನಿರಾಕರಿಸದೆಯೂ ಆತನ ಸ್ಥಾನ ಮಹಾತ್ಮ್ಯಕ್ಕೆ ಕುಂದುಂಟಾಗುವಂತೆ ಮಾಡದೆಯೂ ಆತನನ್ನು ದೇವನಂತೆ ಆರಾಧಿಸದೆಯೂ ಇರಬೇಕಾಗಿದೆ. ದೇವನು ತನ್ನ ದಿವ್ಯ ಹೊದಿಕೆಯನ್ನು ಈ ಭಕ್ತದಾಸನ ಮೇಲೆ ಹರಡಿ ನಿಕಟ ಸಂಬಂಧವನ್ನು ಪ್ರಕಟಿಸುತ್ತಾನೆ. ಆಗ ಆತನು ದೇವನನ್ನು ಕಾಣುವ ಕನ್ನಡಿಯಾಗಿ ಮಾರ್ಪಡುತ್ತಾನೆ. "ನನ್ನನ್ನು ಕಂಡವನು ದೇವನನ್ನು ಕಂಡವನಂತೆ" ಎಂದು ಮುಹಮ್ಮದ್ ಪೈಗಂಬರರು(ಸ) ಹೇಳಿದುದರ ತಾತ್ಪರ್ಯ ಇದೇ ಆಗಿದೆ. ಸಂಕ್ಷಿಪ್ತವಾಗಿ, ಮನುಷ್ಯನ ಆಧ್ಯಾತ್ಮಿಕ ಅಭಿವೃದ್ಧಿಯ ಕೊನೆಯ ಹಂತ ಇದಾಗಿದೆ. ಇಲ್ಲಿ ಅವನ ಎಲ್ಲ ಪ್ರಯತ್ನಗಳೂ ಕೊನೆಗೊಂಡು ಅವನು ಪೂರ್ಣವಾಗಿ ಸಂತೃಪ್ತಿಯನ್ನೂ ಶಾಂತಿಯನ್ನೂ ಪಡೆಯುತ್ತಾನೆ.

## ನಾನು ದೇವಸಂಬೋಧಿತನು

ಕುರುಡರಿಗೆ ದೃಷ್ಟಿ ಕೊಡಲಿಕ್ಕೂ ಅನ್ವೇಷಕರಿಗೆ ಸ್ವಯಂ ಗುಪ್ತನಾಗಿರುವ ದೇವನೆಡೆಗೆ ದಾರಿ ತೋರಿಸಲಿಕ್ಕೂ ಅಧಿಕಾಂಶ ಜನರು ಆ ಬಗ್ಗೆ ಮಾತನಾಡುತ್ತಿರುವರಾದರೂ ಕೆಲವೇ ಜನರಿಗೆ ಮಾತ್ರ ಲಭಿಸಿದ ಆ ಪರಿಶುದ್ಧ ಚಿಲುಮೆಯ ಕುರಿತು ಸತ್ಯವನ್ನು ಸ್ವೀಕರಿಸಲು ಬಯಸುವವರಿಗೆ ಶುಭವಾರ್ತೆ ನೀಡಲಿಕ್ಕೂ ಪರಮ ದಯಾಮಯನಾದ ದೇವನು ನನ್ನನ್ನು ಮೇಲೆ ಹೇಳಿದ ಉನ್ನತ ಪದವಿ ಮೂಲಕವೂ ಮೇಲೆ ವಿವರಿಸಿದ ರೀತಿಯ ಮಧುರ ವಚನಗಳಿಂದಲೂ ಅನುಗ್ರಹಿಸಿರುವನೆಂಬ ವಿಚಾರವನ್ನು ಇಲ್ಲಿ ಬಹಿರಂಗಪಡಿಸದಿದ್ದರೆ ನಾನು ಮನುಷ್ಯಕುಲಕ್ಕೆ ಒಂದು ಮಹಾ ಅನ್ಯಾಯ ಮಾಡಿದಂತಾಗುವುದು. ಮನುಷ್ಯನ ಮುಕ್ತಿಗೂ ಶಾಶ್ವತ ಸುಖಕ್ಕೂ ಮೂಲ ಕಾರಣವಾದ ದೇವಪ್ರಾಪ್ತಿಯು ಪವಿತ್ರ ಖುರ್‌ಆನಿಗೆ ಅನುಸಾರವಾಗಿ ಜೀವಿಸುವ ಮೂಲಕವಲ್ಲದೆ ಅಸಾಧ್ಯವೆಂದು ನಾನಿದೋ ಸಾರಿಹೇಳುತ್ತೇನೆ. ಜನರು ನಾನು ಕಂಡದ್ದನ್ನು ಕಾಣುವರಾದರೆ, ನಾನು ಕೇಳಿದ್ದನ್ನು ಕೇಳುವರಾದರೆ, ಕಟ್ಟುಕತೆಗಳನ್ನು ತ್ಯಜಿಸಿ ಯಥಾರ್ಥ ತತ್ವದೆಡೆಗೆ ಅವರು ಓಡಿ ಬರುವರಾದರೆ, ಹಾ, ಎಷ್ಟು ಚೆನ್ನ! ಯಾವುದರ ಮೂಲಕ ದೇವನನ್ನು ಕಾಣಲು ಸಾಧ್ಯವೋ ಆ ಪರಿಪೂರ್ಣ ಜ್ಞಾನದ ಮಾರ್ಗವೂ ಸಕಲ ಸಂದೇಹದ ಮಾಲಿನ್ಯಗಳನ್ನು ಹೋಗಲಾಡಿಸುವ ಸ್ವರ್ಗೀಯ

ಜಲವೂ ದೇವನ ಪವಿತ್ರ ಮುಖವನ್ನು ಪ್ರತಿಬಿಂಬಿಸಿ ತೋರಿಸುವ ಶುಭ್ರ ದರ್ಪಣವೂ ಮೇಲೆ ವಿವರಿಸಿದಂತಹ ದೇವನಿಂದ ಲಭಿಸುವ ಅಮೃತವಾಣಿಯೇ ಆಗಿದೆ. ಯಾವೊಬ್ಬನ ಆತ್ಮದಲ್ಲಿ ಪರಮಾರ್ಥ ತತ್ವವನ್ನು ತಿಳಿಯುವ ಜಿಜ್ಞಾಸೆಯುಂಟೋ ಅವನು ಎಚ್ಚೆತ್ತು ಅನ್ವೇಷಣೆ ಮಾಡಲಿ. ನಾನು ಸತ್ಯವಾಗಿ ಹೇಳುತ್ತೇನೆ: ಆತ್ಮದಲ್ಲಿ ಯಥಾರ್ಥ ಜಿಜ್ಞಾಸೆ ಹಾಗೂ ಹೃದಯದಲ್ಲಿ ನಿಜವಾದ ದಾಹವಿದ್ದರೆ ಜನರು ಆ ಮಾರ್ಗದ ಅನ್ವೇಷಣೆಯಲ್ಲಿ ತೊಡಗುವರು. ಆದರೆ ಈ ಮಾರ್ಗ ಹೇಗೆ ತೆರೆಯಲ್ಪಡುವುದು? ಅದರ ಪರದೆ ಸರಿಯುವುದೆಂತು? ಇಸ್ಲಾಂ ಮಾತ್ರ ಈ ಮಾರ್ಗದ ಕುರಿತು ಶುಭವಾರ್ತೆ ನೀಡುತ್ತದೆ ಮತ್ತು ಈ ಪದವಿಯನ್ನು ವಾಗ್ದಾನ ಮಾಡುತ್ತದೆ ಎಂದು ಸತ್ಯಾನ್ವೇಷಕರಿಗೆ ನಾನು ಭರವಸೆ ಕೊಡುತ್ತೇನೆ. ಇತರ ಧರ್ಮಾವಲಂಬಿಗಳು ದೇವವಚನವೆಂಬ ಅನುಗ್ರಹದ ಬಾಗಿಲು ಬಹಳ ಕಾಲದಿಂದ ಮುಚ್ಚಲ್ಪಟ್ಟಿದೆಯೆಂದು ಹೇಳುತ್ತಾರೆ. ಆದರೆ ಅವರು ಹೇಳುವ ಹಾಗೆ ದೇವನು ಈ ಮಾರ್ಗವನ್ನು ತಡೆಯಲಿಲ್ಲ. ಇದು ಅದಕ್ಕೆ ಪ್ರವೇಶ ಪಡೆಯಲಾಗದವರ ನೆವನ ಮಾತ್ರವಾಗಿದೆ. ನಮಗೆ ಕಣ್ಣುಗಳಿಲ್ಲದೆ ಕಾಣಲಿಕ್ಕೂ ಕಿವಿಗಳಿಲ್ಲದೆ ಕೇಳಲಿಕ್ಕೂ ನಾಲಿಗೆಯಿಲ್ಲದೆ ಮಾತನಾಡಲಿಕ್ಕೂ ಸಾಧ್ಯವಾಗದಂತೆಯೇ ಪವಿತ್ರ ಖುರ್‌ಆನಿನ ಸಹಾಯವಿಲ್ಲದೆ ಆ ಯಥಾರ್ಥ ಪ್ರೇಮ ಸ್ವರೂಪನಾದ ದೇವನ ಮುಖವನ್ನು ಕಾಣಲಿಕ್ಕೆ ಸಾಧ್ಯವಿಲ್ಲ. ನಾನು ಯೌವನಾವಸ್ಥೆಯನ್ನು ದಾಟಿ ವೃದ್ಧಾಪ್ಯವನ್ನು ಪಡೆದಿರುವನು. ಈ ದೀರ್ಘಕಾಲದ ಜೀವಿತದಲ್ಲಿ ಪಾವನ ಜ್ಞಾನದ ಮೂಲವಾದ ಈ ಮಾರ್ಗದ ಮೂಲಕವಲ್ಲದೆ ಪರಮಾರ್ಥಜ್ಞಾನವೆಂಬ ಅಮೃತವನ್ನು ಕುಡಿದ ಯಾರನ್ನೂ ನಾನು ಕಂಡಿಲ್ಲ.

## ದಿವ್ಯವಾಣಿ ಮೂಲಕ ಪರಿಪೂರ್ಣ ಜ್ಞಾನಸಿದ್ಧಿ

ಪ್ರಿಯ ಜನರೆ, ದೇವನೊಡನೆ ಹೋರಾಡಲಿಕ್ಕಾಗಲಿ, ಅವನ ಉದ್ದೇಶಗಳನ್ನು ತಡೆಯಲಿಕ್ಕಾಗಲಿ ಯಾರಿಂದಲೂ ಸಾಧ್ಯವಿಲ್ಲ. ತಿಳಿಯಿರಿ, ಪೂರ್ಣವಾದ ದಿವ್ಯಜ್ಞಾನದ ಮಾರ್ಗ ದೇವನ ಪ್ರವಾದಿಗಳಿಗೆ ಲಭಿಸಿದ ದಿವ್ಯವಾಣಿಯಾಗಿದೆ. ಆದರೆ ನಂತರ ದಯಾಸಾಗರನಾದ ದೇವನು ತನ್ನ ಅಮೃತ ವಚನದ ಬಾಗಿಲುಗಳನ್ನು ಮುಚ್ಚಿ ಲೋಕವನ್ನು ವಿನಾಶದೆಡೆಗೆ ದೂಡಿಬಿಡಲು ಎಂದೂ ಉದ್ದೇಶಿಸಲಿಲ್ಲ. ಬದಲಾಗಿ, ಅವನು ತನ್ನ ದಿವ್ಯವಾಣಿ ಮತ್ತು ಮಧುರ ವಚನಗಳ ಅನುಗ್ರಹೀತ ಬಾಗಿಲುಗಳನ್ನು ಸದಾ ತೆರೆದಿಟ್ಟಿರುವನು. ಸರಿಯಾದ ಮಾರ್ಗದಲ್ಲಿ ಅನ್ವೇಷಿಸಿದರೆ ನಿಮಗದು ಪ್ರಾಪ್ತವಾಗುವುದು. ಆ ಜೀವಜಲ ಆಕಾಶದಿಂದ ವರ್ಷಿಸಿ ಸರಿಯಾದ ಸ್ಥಳದಲ್ಲಿ

ಸಂಗ್ರಹವಾಗಿರುತ್ತದೆ. ನಿಮಗದನ್ನು ಕುಡಿಯಬೇಕೆಂದಿದ್ದರೆ ಎಡವಿ ತಡವಿ, ಎದ್ದು ಬಿದ್ದು ಆ ಜಲಾಶಯವನ್ನು ಸಮೀಪಿಸಿ ಅದಕ್ಕೆ ನಿಮ್ಮ ತುಟಿಗಳನ್ನು ತಾಗಿಸಬೇಕಾಗಿದೆ. ಹಾಗೆ ನೀವು ಆ ಝರಿಯಿಂದ ಕುಡಿದು ಸಂತೃಪ್ತರಾಗಬಹುದು. ದೈವಿಕ ಪ್ರಕಾಶ ಪ್ರಕಟಗೊಂಡು ಕಾಣುವ ಸ್ಥಳದೆಡೆಗೆ ಓಡಿ ಹೋಗಿ ತಾನು ಹುಡುಕುವ ಆ ಸ್ನೇಹಿತನ ಚಿಹ್ನೆ ಗೋಚರವಾಗುವ ಮಾರ್ಗವನ್ನು ಅನುಸರಿಸುವುದರಲ್ಲಿ ಮನುಷ್ಯನಿಗೆ ಸೌಭಾಗ್ಯವಿದೆ. ಪ್ರಕಾಶ ಆಕಾಶದಿಂದ ಭೂಮಿಯೆಡೆಗೆ ವ್ಯಾಪಿಸಿ ಬರುವಂತೆ ಸನ್ಮಾರ್ಗ ದರ್ಶನವೆಂಬ ಜ್ಯೋತಿ ಸಹ ಆಕಾಶದಿಂದ ಅಥವಾ ದೇವನಿಂದ ಅವತರಿಸುತ್ತದೆ. ಮನುಷ್ಯನ ಸ್ವಂತ ವಚನಗಳೂ ಸ್ವಂತ ಕಲ್ಪನೆಗಳೂ ಅವನಿಗೆ ಯಥಾರ್ಥ ದೈವಿಕಜ್ಞಾನ ನೀಡಲು ಶಕ್ತವಲ್ಲ. ಏನು, ನಿಮಗೆ ದಿವ್ಯ ಸಾಕ್ಷಾತ್ಕಾರದ ಹೊರತು ದೇವನನ್ನು ಪಡೆಯಲು ಸಾಧ್ಯವಿದೆಯೇ? ಈ ದಿವ್ಯ ಪ್ರಕಾಶದ ಸಹಾಯವಿಲ್ಲದೆ ಅಂಧಕಾರದಲ್ಲಿ ನಿಮಗೆ ಏನನ್ನಾದರೂ ಕಾಣಲು ಸಾಧ್ಯವಿದೆಯೇ? ಅದು ಸಾಧ್ಯವೆಂದಾದರೆ ದೇವನಿಗೆ ಸಂಬಂಧಿಸಿದ ಅಧ್ಯಾತ್ಮ ಜ್ಞಾನವೂ ದಿವ್ಯವಾಣಿಯ ಸಹಾಯವಿಲ್ಲದೆಯೇ ಸಿದ್ಧಿಸಬಹುದು. ಆದರೆ ನಮ್ಮ ಕಣ್ಣುಗಳಿಗೆ ಕಾಣುವ ಶಕ್ತಿಯಿದ್ದರೂ ನೋಡಲು ಅದಕ್ಕೆ ಪ್ರಕಾಶದ ಆವಶ್ಯಕತೆ ಇದೆ. ಕಿವಿಗಳಿಗೆ ಶ್ರವಣ ಶಕ್ತಿಯಿದ್ದರೂ ಕೇಳಲು ಅದಕ್ಕೆ ವಾಯುವಿನ ಅಗತ್ಯವಿದೆ. ಮಾತನಾಡದೆ ಮೌನಾವಲಂಬಿಯಾದ, ಎಲ್ಲವನ್ನೂ ನಮ್ಮ ಕಲ್ಪನಾ ಶಕ್ತಿಯಿಂದ ಮಾತ್ರ ತಿಳಿದುಕೊಳ್ಳಲು ಬಿಟ್ಟುಬಿಡುವ ದೇವನು ಖಂಡಿತವಾಗಿಯೂ ಸತ್ಯದೇವನಲ್ಲ. ತನ್ನ ಅಸ್ತಿತ್ವದ ಕುರಿತು ಸರಿಯಾದ ಜ್ಞಾನವನ್ನು ನೀಡುವವನೇ ಪರಿಪೂರ್ಣನೂ ಸಜೀವನೂ ಆದ ದೇವನು. ಅವನು ಈಗಲೂ ತನ್ನ ಇರುವಿಕೆಯ ಬಗ್ಗೆ ಲೋಕಕ್ಕೆ ಅರುಹಲಿಕ್ಕೆ ಉದ್ದೇಶಿಸಿರುವನು. ಸ್ವರ್ಗದ ಬಾಗಿಲುಗಳು ತೆರೆಯಲ್ಪಡಲಿವೆ. ಅರುಣೋದಯದ ಸಮಯ ಸಮೀಪಿಸಿದೆ. ಯಾವ ರೀತಿಯ ದುಃಖಕ್ಕೂ ಕಷ್ಟಕ್ಕೂ ಗುರಿಯಾಗದ ಸದಾ ಕಾಲವೂ ಪ್ರತಾಪಶಾಲಿಯೂ ತೇಜೋಮಯನೂ ಆಗಿರುವ ಸತ್ಯದೇವನನ್ನು ಬೇಗನೆ ಎಚ್ಚೆತ್ತು ಅನ್ವೇಷಿಸುವವನು ಭಾಗ್ಯಶಾಲಿ. ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

اَللّٰهُ نُوْرُ السَّمٰوٰتِ وَالْاَرْضِ

ದೇವನು ಆಕಾಶ ಮತ್ತು ಭೂಮಿಯ ಪ್ರಕಾಶವಾಗಿದ್ದಾನೆ. **(24:36)**

ದೇವನಿಂದಲೇ ಎಲ್ಲೆಡೆಗೂ ಪ್ರಕಾಶ ವ್ಯಾಪಿಸುತ್ತದೆ. ಸೂರ್ಯನಿಗೆ ಪ್ರಭೆ ನೀಡುವವನೂ ಸರ್ವಜೀವಿಗಳ ಜೀವದಾತನೂ ಅವನೇ ಆಗಿದ್ದಾನೆ. ಸಜೀವ ಸತ್ಯದೇವನು ಅವನೇ. ಅವನನ್ನು ಅಂಗೀಕರಿಸುವವನು ಭಾಗ್ಯವಂತನು.

# ಮಹಾತ್ಮರ ಕಷ್ಟಾನುಭವ

ಜ್ಞಾನಸಿದ್ಧಿಯ ಮೂರನೆಯ ಮಾರ್ಗ ‘ಹಖ್ಖುಲ್ ಯಖೀನ್’ ಅಥವಾ ಅನುಭವ ಜ್ಞಾನಕ್ಕೆ ತುಲ್ಯವಾದ ಪದವಿಯಲ್ಲಿರುವ ಸಂಗತಿಗಳಾಗಿವೆ. ಎಂದರೆ, ದೇವನಿಯುಕ್ತರಾದ ಪ್ರವಾದಿಗಳೂ ಸತ್ಯಸಂಧರಾದ ಸತ್ಪುರುಷರೂ ಶತ್ರುಗಳ ಕೈಗಳಿಂದಾಗಲಿ ದೇವವಿಧಿಯಿಂದಾಗಲಿ ಸಹಿಸಬೇಕಾಗಿ ಬರುವ ಕಷ್ಟಾನುಭವಗಳು ಮತ್ತು ಕ್ಲೇಶಗಳು. ಈ ರೀತಿಯ ಕಷ್ಟಾನುಭವಗಳ ಕಾರಣದಿಂದ ಮನುಷ್ಯನ ಹೃದಯದಲ್ಲಿ ಜ್ಞಾನರೂಪದಲ್ಲಿದ್ದ ಧರ್ಮನಿರ್ದೇಶನಗಳೂ ಧರ್ಮಶಾಸನಗಳೂ ಅನುಷ್ಠಾನಕ್ಕೆ ಬರುತ್ತವೆ. ಅನಂತರ ಅವು ಕರ್ಮಭೂಮಿಯಲ್ಲಿ ಪೋಷಿಸಲ್ಪಟ್ಟು ಪೂರ್ಣತೆಯನ್ನು ಪಡೆಯುತ್ತವೆ. ಹೀಗೆ, ಹೃದಯದಲ್ಲಿ ರೂಪುಗೊಂಡ ಭಾವನಾ ಜ್ಞಾನಗಳನ್ನು ಯಥಾರೀತಿ ಜೀವನದಲ್ಲಿ ಪ್ರತಿಬಿಂಬಿಸುವವನು ಆ ದಿವ್ಯ ಮಾರ್ಗೋಪದೇಶದ ಮಾದರಿ ಪುರುಷನಾಗುತ್ತಾನೆ. ಮನಸ್ಸಿನಲ್ಲೂ ಹೃದಯದಲ್ಲೂ ಜ್ಞಾನರೂಪದಲ್ಲಿ ತುಂಬಿಕೊಂಡಿದ್ದ ಕ್ಷಮೆ, ಪ್ರತಿಕ್ರಿಯೆ, ಸಹನೆ, ದಯೆ ಮುಂತಾದ ಗುಣಗಳೆಲ್ಲ ಕ್ರಿಯಾರೂಪದಲ್ಲಿ ಮನುಷ್ಯನ ಬಾಹ್ಯ ಮತ್ತು ಆಂತರಿಕವಾದ ಸಕಲ ಇಂದ್ರಿಯಗಳಲ್ಲೂ ಪ್ರತಿಚ್ಛಾಯೆ ಮೂಡಿಸತೊಡಗುತ್ತವೆ. ಈ ರೀತಿಯಲ್ಲಿ ಆತನಿಗೆ ಆ ಗುಣಗಳು ನಾಮಮಾತ್ರ ಗುಣಗಳಾಗಿರದೆ ಆತನ ಸಕಲ ಅವಯವಗಳಲ್ಲಿ ಪ್ರತಿಫಲಿಸಿ ಕಾಣುವ ಯಥಾರ್ಥ ಗುಣಗಳಾಗಿ ಶೋಭಿಸುತ್ತವೆ. ಈ ವಿಷಯದಲ್ಲಿ ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳುತ್ತಾನೆ:

وَلَنَبْلُوَنَّكُمْ بِشَيْءٍ مِّنَ الْخَوْفِ وَالْجُوعِ وَنَقْصٍ مِّنَ الْأَمْوَالِ وَالْأَنْفُسِ وَالثَّمَرٰتِ ۗ وَبَشِّرِ
الصّٰبِرِيْنَ - الَّذِيْنَ إِذَآ أَصَابَتْهُمْ مُّصِيْبَةٌ ۙ قَالُوْٓا إِنَّا لِلّٰهِ وَإِنَّآ إِلَيْهِ رٰجِعُوْنَ - أُولٰٓئِكَ عَلَيْهِمْ
صَلَوٰتٌ مِّنْ رَّبِّهِمْ وَرَحْمَةٌ ۖ وَأُولٰٓئِكَ هُمُ الْمُهْتَدُوْنَ -

ನಾವು ನಿಮ್ಮನ್ನು ಭಯ ಮತ್ತು ಹಸಿವೆಯ ಮೂಲಕವೂ ಧನನಷ್ಟ ಮತ್ತು ಜೀವಹಾನಿ ಮೂಲಕವೂ ಪ್ರಯತ್ನವನ್ನು ನಿಷ್ಫಲಗೊಳಿಸಿಯೂ ಸಂತಾನವನ್ನು ನಷ್ಟಗೊಳಿಸಿಯೂ ಪರೀಕ್ಷೆಗೊಳಪಡಿಸುವೆವು. (ಎಂದರೆ ಈ ರೀತಿಯ ದುಃಖಾನುಭವಗಳು ದೇವನಿಯತಿ ಪ್ರಕಾರ ಅಥವಾ ಶತ್ರುಗಳ ಕೈಯಿಂದ ನಿಮಗುಂಟಾಗುವುವು). ತಮಗೆ ಆಪತ್ತುಗಳು ಎದುರಾಗುವಾಗ ‘ನಾವು ಖಂಡಿತ ವಾಗಿಯೂ ದೇವನಿಗಾಗಿ ಇರುವವರೂ ಅವನೆಡೆಗೆ ಹಿಂತೆರಳುವವರೂ ಆಗಿದ್ದೇವೆ’ ಎಂದು ಹೇಳುವ ಸಹನಶೀಲರಿಗೆ ಶುಭವಾರ್ತೆ ನೀಡು. ಈ ಜನರಿಗೆ ದೇವನ ಅನುಗ್ರಹ ಮತ್ತು ಕರುಣೆಯಿದೆ. ಸನ್ಮಾರ್ಗದಲ್ಲಿ ಪರಿಪೂರ್ಣತೆ ಹೊಂದಿದವರು ಇವರೇ ಆಗಿದ್ದಾರೆ. **(2:156–158)**

ಇದರಿಂದ ತಿಳಿದು ಬರುವುದೇನೆಂದರೆ, ಮಸ್ತಿಷ್ಕದಲ್ಲಿ ಮತ್ತು ಹೃದಯದಲ್ಲಿ ಶೇಖರಿಸಲ್ಪಟ್ಟ, ಜೀವಿತಾನುಷ್ಠಾನದಲ್ಲಿ ಬಾರದ ಅರಿವಿಗೆ ಯಾವ ಶ್ರೇಷ್ಠತೆಯೂ ಇಲ್ಲ. ಮೆದುಳಿನಿಂದ ನಿರ್ಗಮಿಸಿ, ಕ್ರಿಯಾರೂಪದಲ್ಲಿ ಹೊರಬಂದು ಸಕಲೇಂದ್ರಿಯಗಳಲ್ಲೂ ಪ್ರತಿಬಿಂಬಿಸುವ ಅರಿವೇ ಯಥಾರ್ಥ ಜ್ಞಾನ. ಒಟ್ಟಿನಲ್ಲಿ, ಒಬ್ಬನ ಜ್ಞಾನ ಸುದೃಢವಾಗಲಿಕ್ಕೂ ವೃದ್ಧಿಹೊಂದಲಿಕ್ಕೂ ಉತ್ತಮ ಮಾರ್ಗ, ಅದನ್ನು ಕ್ರಿಯಾರೂಪದಲ್ಲಿ ತಂದು ಅದರ ಪ್ರತಿಚ್ಛಾಯೆಯನ್ನು ತನ್ನ ಇಂದ್ರಿಯಾದಿಗಳಲ್ಲಿ ಸ್ವರೂಪಿಸುವುದಾಗಿದೆ. ಚಿಕ್ಕದಾದೊಂದು ಕಾರ್ಯಕ್ಕೆ ಸಂಬಂಧಿಸಿದ ಅರಿವು ಕೂಡ ಕ್ರಿಯಾರೂಪದಲ್ಲಿ ಬರದಿದ್ದರೆ ಅಪೂರ್ಣವಾಗಿರುತ್ತದೆ. ಉದಾಹರಣೆಗೆ, ರೊಟ್ಟಿ ಮಾಡುವುದು ಸುಲಭವೆಂದೂ ಪ್ರಯಾಸಕರವಲ್ಲವೆಂದೂ ನಮಗೆ ಗೊತ್ತಿದೆ. ಅಂದರೆ, ಹಿಟ್ಟನ್ನು ನಾದಿ, ಒಂದೊಂದು ರೊಟ್ಟಿಗೆ ಬೇಕಾದಷ್ಟು ಗಾತ್ರದ ಉಂಡೆಮಾಡಿ ಅದನ್ನು ಎರಡು ಅಂಗೈಗಳ ಮಧ್ಯದಲ್ಲಿಟ್ಟು ತಟ್ಟಿ ಅಗಲಮಾಡಿ ಬಿಸಿಯಾದ ತವೆಯ ಮೇಲೆ ಹಾಕುವುದು; ಒಂದು ಮೈ ಕಾದ ನಂತರ ಮಗುಚಿ ಹಾಕಿ ಇನ್ನೊಂದು ಮೈಯನ್ನು ಕಾಯಿಸುವುದು. ಇದು ನಮ್ಮ ತಿಳುವಳಿಕೆ ಮಾತ್ರವಾಗಿದೆ. ಆದರೆ ನಮಗೆ ಅನುಭವಜ್ಞಾನ ಇಲ್ಲದಿದ್ದರೆ ಹಿಟ್ಟನ್ನು ನಾದುವಾಗಲೇ ನಮಗೆ ಪ್ರಯಾಸವಾಗುತ್ತದೆ. ನಾದಿದ ಹಿಟ್ಟು ಹದವಾಗದೆ ಹೆಚ್ಚು ಗಟ್ಟಿಯಾಗಲಿ, ತೆಳುವಾಗಲಿ ಆಗಬಹುದು. ಹಿಟ್ಟು ಹದವಾದರೂ ರೊಟ್ಟಿಗೆ ಸರಿಯಾದ ಆಕಾರ ಬಾರದಿರಬಹುದು. ರೊಟ್ಟಿಯನ್ನು ಕಾಯಿಸುವಾಗ ಒಂದು ಮೈ ಹೆಚ್ಚು ಬೆಂದು ಇನ್ನೊಂದು ಮೈ ಬೇಯದಿರಬಹುದು. ಹೀಗೆ ಅನುಭವವಿಲ್ಲದೆ, ಯಾರಾದರೂ ರೊಟ್ಟಿಮಾಡಲು ತೊಡಗುವನಾದರೆ ಅವನು ಬಹಳ ಕಷ್ಟಪಡುವನು; ಮಾತ್ರವಲ್ಲ ತುಂಬಾ ಹಿಟ್ಟನ್ನೂ ವ್ಯರ್ಥ ಮಾಡುವನು. ಸಾಮಾನ್ಯ ವಿಷಯದಲ್ಲಿ ಕೂಡ ಕ್ರಿಯಾಶಕ್ತಿಯಿಲ್ಲದ ತಿಳುವಳಿಕೆಯ ಸ್ಥಿತಿ ಈ ರೀತಿಯಾಗಿರುವಾಗ ಗಂಭೀರ ವಿಷಯಗಳಲ್ಲಿ ಭಾವನಾತ್ಮಕ ಜ್ಞಾನವನ್ನು ಮಾತ್ರ ಆಶ್ರಯಿಸಿಕೊಂಡರೆ ಪ್ರಯೋಜನವೇನು? ಒಟ್ಟಿನಲ್ಲಿ, ದೇವನು ಪರೀಕ್ಷಣಾರ್ಥ ನಮ್ಮ ಜೀವಿತದಲ್ಲಿ ತಂದೊಡ್ಡುವ ಕಷ್ಟ – ಕ್ಲೇಶಗಳು ನಮಗೆ ಅನುಭವಜ್ಞಾನ ಲಭಿಸುವಂತೆ ಮಾಡಲಿಕ್ಕಿರುವ ದಾರಿಗಳೆಂದು ಮೇಲೆ ಉದ್ಧರಿಸಲಾದ ಪವಿತ್ರ ಖುರ್‌ಆನ್ ವಚನಗಳು ನಮಗೆ ಬೋಧಿಸುತ್ತವೆ. ಬೇರೆ ಮಾತಿನಲ್ಲಿ ಹೇಳುವುದಾದರೆ, ಕಷ್ಟಾನುಭವಗಳ ಮೂಲಕ ಜ್ಞಾನರೂಪದ ಸ್ಥಿತಿಯಲ್ಲಿರುವ ಸದ್ಗುಣಗಳು ಅನುಷ್ಠಾನದಲ್ಲಿ ಬಂದು ಅದರ ಮೂಲಕ ಜ್ಞಾನವು ಪೂರ್ಣತೆಯನ್ನು ಪಡೆಯುತ್ತದೆ.

ಮತ್ತೊಂದೆಡೆಯಲ್ಲಿ ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

لَتُبْلَوُنَّ فِيٓ اَمْوَالِكُمْ وَاَنْفُسِكُمْ وَلَتَسْمَعُنَّ مِنَ الَّذِيْنَ اُوْتُوا الْكِتٰبَ مِنْ قَبْلِكُمْ وَمِنَ
الَّذِيْنَ اَشْرَكُوْٓا اَذًى كَثِيْرًا ۭ وَاِنْ تَصْبِرُوْا وَتَتَّقُوْا فَاِنَّ ذٰلِكَ مِنْ عَزْمِ الْاُمُوْرِ

ನಿಮ್ಮ ಸಂಪತ್ತು ಮತ್ತು ಜೀವಗಳ ಸಂಬಂಧಿಸಿ ನೀವು ಪರೀಕ್ಷಿಸಲ್ಪಡುವಿರಿ. ಎಂದರೆ, ಜನರು ನಿಮ್ಮ ಸಂಪತ್ತುಗಳನ್ನು ಕಸಿದುಕೊಂಡು ನಿಮ್ಮನ್ನು ಕೊಲೆ ಮಾಡುವರು. ಯಹೂದ, ಕ್ರೈಸ್ತ ಮತ್ತು ಬಹು ದೇವಾರಾಧಕರ ಕೈಯಿಂದ ನೀವು ಪೀಡಿಸಲ್ಪಡುವಿರಿ. ಅವರಿಂದ ಅಸಹನೀಯವಾದ ಅನೇಕ ಸಂಗತಿಗಳನ್ನು ಕೇಳಬೇಕಾದಿತು. ಆದರೆ ನೀವು ತಾಳ್ಮೆವಹಿಸಿದರೆ ಹಾಗೂ ಅನುಚಿತ ಕಾರ್ಯಗಳನ್ನು ಮಾಡುವುದರಿಂದ ನಿಮ್ಮನ್ನು ನೀವು ತಡೆದುಕೊಂಡರೆ ಅದೊಂದು ಶ್ರೇಷ್ಠ ಹಾಗೂ ಧೀರ ಕೃತ್ಯವಾಗುವುದು. **(3:187)**

ಕರ್ಮ ರೂಪದಲ್ಲಿ ಪ್ರಕಾಶಿತವಾಗುವ ಜ್ಞಾನ ಅನುಗ್ರಹೀತವೂ ಅನುಷ್ಠಾನದಲ್ಲಿ ಬಾರದ ಭಾವನಾತ್ಮಕ ತಿಳುವಳಿಕೆ ಫಲಶೂನ್ಯವೂ ಆಗಿರುವುದೆಂದು ಈ ಎಲ್ಲ ವಚನಗಳ ತಾತ್ಪರ್ಯವಾಗಿದೆ.

## ಹಝ್ರತ್ ಪೈಗಂಬರರ(ಸ) ಜೀವನದ ಎರಡು ಘಟ್ಟಗಳು

ವ್ಯಾಪಾರದಿಂದ ಧನ ವೃದ್ಧಿಗೊಳ್ಳುವಂತೆಯೇ ಜ್ಞಾನವು ಕ್ರಿಯಾತ್ಮಕ ರಂಗದಲ್ಲಿ ಪ್ರವೇಶಿಸುವ ಮೂಲಕ ಅದರ ಆಧ್ಯಾತ್ಮಿಕ ವಿಕಾಸವನ್ನು ಪಡೆಯುತ್ತದೆ. ಆದುದರಿಂದ ಜ್ಞಾನವನ್ನು ಪರಿಪೂರ್ಣತೆಗೆ ತಲುಪಿಸುವ ಉತ್ತಮ ಮಾರ್ಗ ಅದನ್ನು ಪ್ರಯೋಗದಲ್ಲಿ ತರುವುದೇ ಆಗಿದೆ. ಹಾಗೆ ಮಾಡುವುದರಿಂದ ಅದು ಶೋಭಾಯಮಾನವಾಗುತ್ತದೆ. ಅದರ ಎಲ್ಲ ಅಂಶಗಳನ್ನೂ ಪ್ರಯೋಗಾತ್ಮಕವಾಗಿ ಪರೀಕ್ಷಿಸುವುದೇ ಅದನ್ನು "ಹಖ್ಖುಲ್ ಯಖೀನ್" ಎಂಬ ಅನುಭವಾವಸ್ಥೆಗೆ ತಲಪಿಸುತ್ತದೆ. ಇಸ್ಲಾಮಿಕ ತತ್ವಗಳ ಸಂಬಂಧಿಸಿ ಇದನ್ನೇ ಕಾಣಬಹುದು. ಪವಿತ್ರ ಖುರ್‌ಆನಿನ ಮೂಲಕ ಜನರಿಗೆ ನೀಡಲ್ಪಟ್ಟಿರುವ ತತ್ವಗಳು ಕರ್ಮ ರೂಪದಲ್ಲಿ ಪ್ರಕಾಶಿಸಲ್ಪಡಲಿಕ್ಕೂ ಅದರ ಆಧ್ಯಾತ್ಮಿಕ ಪ್ರಭೆ ಪ್ರತಿಬಿಂಬಿಸಲ್ಪಡಲಿಕ್ಕೂ ಸರ್ವಶಕ್ತನಾದ ದೇವನು ಅವರಿಗೆ ಸಂದರ್ಭಗಳನ್ನೂ ಒದಗಿಸಿಕೊಟ್ಟಿರುವನು. ಈ ಉದ್ದೇಶದಿಂದ ದೇವನು ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಜೀವನ ಕಾಲವನ್ನು ಎರಡು ಹಂತಗಳಾಗಿ ವಿಂಗಡಿಸಿರುವನು. ಒಂದು: ದುಃಖ, ಕಷ್ಟ, ಕ್ಲೇಶಗಳ ಕಾಲ. ಇನ್ನೊಂದು: ವಿಜಯದ ಕಾಲ. ಈ ರೀತಿಯಲ್ಲಿ ಎರಡು ಹಂತಗಳಾಗಿ ವಿಂಗಡಿಸಿದ್ದು ಹಝ್ರತ್ ಪೈಗಂಬರರ(ಸ) ಎರಡು ಬಗೆಯ ಶ್ರೇಷ್ಠ ಗುಣಗಳು ಪ್ರಕಾಶಿಸಲ್ಪಡಲಿಕ್ಕಾಗಿದೆ. ಎಂದರೆ, ಕಷ್ಟತೆಗಳ ಅವಸ್ಥೆಯಲ್ಲಿ ಬಹಿರಂಗಗೊಳ್ಳಬೇಕಾದ ಸದ್ಗುಣಗಳು ಆ ಹಂತದಲ್ಲೂ ವಿಜಯ ಮತ್ತು ಅಧಿಕಾರದ ಕಾಲದಲ್ಲಿ ಅಭಿವ್ಯಕ್ತಿಗೊಳ್ಳಬೇಕಾದ ಮಹದ್ಗುಣಗಳು ಆ ಹಂತದಲ್ಲೂ ಪ್ರಕಟಗೊಂಡವು. ಈ ಪ್ರಕಾರ ಎರಡು ವಿಭಿನ್ನ ಹಂತಗಳಲ್ಲಿ ಹಝ್ರತ್ ಪೈಗಂಬರರ(ಸ) ಶ್ರೇಷ್ಠವಾದ ನೈತಿಕ ಗುಣಗಳು ಕರ್ಮ ರೂಪದಲ್ಲಿ ಪ್ರತಿಫಲನಗೊಂಡು ಅವು ಪರಿಪೂರ್ಣವಾದ

ರೀತಿಯಲ್ಲಿ ಪ್ರಕಾಶಿಸಲ್ಪಟ್ಟವು. ಹಝ್ರತ್ ಪೈಗಂಬರರ(ಸ) ಮಕ್ಕ ಜೀವನ ಕಾಲದಲ್ಲಿ ಹದಿಮೂರು ವರ್ಷಗಳ ವರೆಗೆ ಕಷ್ಟ-ಕ್ಲೇಶಗಳ ಅವಸ್ಥೆಯನ್ನು ಗಮನವಿಟ್ಟು ಅಧ್ಯಯನ ಮಾಡುವುದಾದರೆ ಸತ್ಯಭಕ್ತರಾದ ಸಿದ್ಧಪುರುಷರು ಕಷ್ಟಾನುಭವ ಕಾಲದಲ್ಲಿ ಪ್ರಕಟಿಸಬೇಕಾದ ಸಕಲ ನೈತಿಕ ಗುಣಗಳನ್ನು ಸಹ ಅತ್ಯಂತ ಮಹತ್ತರವಾದ ರೀತಿಯಲ್ಲಿ ಅವರು ಆಗ ತೋರಿಸಿದ್ದರೆಂದು ಸ್ಪಷ್ಟವಾಗುತ್ತದೆ. ದೇವನೊಡನಿರುವ ಅಸಂದಿಗ್ಧ ವಿಶ್ವಾಸ ಮತ್ತು ಭರವಸೆ, ಅಚಂಚಲವಾದ ದೃಢಚಿತ್ತತೆ, ಕರ್ತವ್ಯ ನಿಷ್ಠೆ, ಸ್ಥಿರೋತ್ಸಾಹ, ನಿರ್ಭಯತೆ ಇತ್ಯಾದಿ ಸಕಲ ಶ್ರೇಷ್ಠ ಗುಣಗಳನ್ನೂ ಹಝ್ರತ್ ಪೈಗಂಬರರಲ್ಲಿ(ಸ) ಕಂಡು ಆಕರ್ಷಿತರಾದ ಅವಿಶ್ವಾಸಿಗಳು, ವಿಶ್ವಾಸಿಗಳಾಗಿ ಪರಿವರ್ತಿತರಾಗಿ, ದೇವನಲ್ಲಿ ಪರಿಪೂರ್ಣವಾದ ಭರವಸೆಯನ್ನಿಡುವ ಒಬ್ಬ ದಿವ್ಯ ಪುರುಷನಿಗಲ್ಲದೆ ಇಂತಹ ಪರೀಕ್ಷಾ ಘಟ್ಟದಲ್ಲಿ ಸ್ಥಿರನಿಷ್ಠೆ ಮತ್ತು ಸಹನೆ ತೋರ್ಪಡಿಸಲಿಕ್ಕೆ ಸಾಧ್ಯವಿಲ್ಲವೆಂದು ಸಾಕ್ಷ್ಯವಹಿಸಿದರು.

ಅನಂತರ ಹಝ್ರತ್ ಪೈಗಂಬರರ(ಸ) ಜೀವನದ ಎರಡನೆಯ ಹಂತವಾದ ವಿಜಯ, ಅಧಿಕಾರ ಶಕ್ತಿ ಮತ್ತು ಐಶ್ವರ್ಯದ ಕಾಲ ಮದೀನದಲ್ಲಿ ಆರಂಭಿಸಿತು. ಈ ಕಾಲದಲ್ಲಿ ಹಝ್ರತ್ ಪೈಗಂಬರರ(ಸ) ಶ್ರೇಷ್ಠ ಗುಣಗಳ ಇನ್ನೊಂದು ರೂಪವಾದ ಕ್ಷಮಾಶೀಲತೆ, ಉದಾರತೆ, ಧೀರತೆ ಮೊದಲಾದವು ಪೂರ್ಣವಾಗಿ ಗೋಚರಿಸಿದವು. ಈ ಮಹತ್ತಾದ ಗುಣಗಳನ್ನು ಕಂಡಾಗಲೂ ಅವಿಶ್ವಾಸಿಗಳಲ್ಲಿ ಹಲವರು ಇಸ್ಲಾಂ ಧರ್ಮವನ್ನು ಸ್ವೀಕರಿಸಿದರು. ಹಝ್ರತ್ ಪೈಗಂಬರರು(ಸ) ತನ್ನನ್ನು ಪೀಡಿಸಿದವರಿಗೆ ಕ್ಷಮೆ ನೀಡಿದರು. ತನ್ನನ್ನು ಸ್ವದೇಶದಿಂದ ಹೊರ ಅಟ್ಟಿದವರಿಗೆ ಅಭಯ ನೀಡಿ, ಅವರ ಪೈಕಿ ಬಡವರನ್ನು ಐಶ್ವರ್ಯವಂತರನ್ನಾಗಿ ಮಾಡಿದರು. ತನ್ನ ಶಕ್ತಿಗೆ ಶರಣಾಗತರಾದ ಬದ್ಧವೈರಿಗಳಿಗೆ ಯಾವ ರೀತಿಯ ಶಿಕ್ಷೆ ವಿಧಿಸಲು ಸಾಧ್ಯವಿದ್ದರೂ ಅವರನ್ನು ಶಿಕ್ಷಿಸದೆ ಕ್ಷಮಿಸಿದರು. ಆ ಮಹಾತ್ಮರ ಈ ತರದ ಸದ್ಗುಣಗಳಿಂದ ಆಕರ್ಷಿತರಾದ ಬಹುತೇಕ ಜನರು, ದೇವನಿಯುಕ್ತರಾದ ಓರ್ವ ಸತ್ಯಪುರುಷನಿಗಲ್ಲದೆ ಇಂತಹ ಮಹದ್ಗುಣಗಳನ್ನು ಪ್ರದರ್ಶಿಸಲು ಸಾಧ್ಯವಿಲ್ಲವೆಂದು ಸಾಕ್ಷ್ಯವಹಿಸಿದರು. ಈ ಕಾರಣದಿಂದಲೇ ಶತ್ರುಗಳಿಗೆ ಹಝ್ರತ್ ಪೈಗಂಬರರ(ಸ) ಮೇಲಿದ್ದ ಹಳೆಯ ವಿದ್ವೇಷವು ಸ್ನೇಹವಾಗಿ ರೂಪಾಂತರಗೊಂಡಿತು.

ಹಝ್ರತ್ ಪೈಗಂಬರರು(ಸ) ತನ್ನ ಜೀವನದಲ್ಲಿ ಪ್ರತಿಬಿಂಬಿಸಿದ ಶ್ರೇಷ್ಠಗುಣ ಪವಿತ್ರ ಖುರ್ಆನಿನಲ್ಲಿ ಈ ರೀತಿ ವಿವರಿಸಲ್ಪಟ್ಟಿದೆ:

قُلْ إِنَّ صَلَاتِي وَنُسُكِي وَمَحْيَايَ وَمَمَاتِي لِلَّهِ رَبِّ الْعَالَمِينَ

ಅವರೊಡನೆ ಹೇಳು: ನನ್ನ ಪ್ರಾರ್ಥನೆ, ನನ್ನ ತ್ಯಾಗ, ನನ್ನ ಜೀವನ, ನನ್ನ ಮರಣ ಎಲ್ಲವೂ ದೇವಮಾರ್ಗದಲ್ಲಿ. **(6:163)**

ಎಂದರೆ, ದೇವನ ಮಹಿಮೆಯನ್ನು ಬಹಿರಂಗಪಡಿಸಲಿಕ್ಕಾಗಿ ಮತ್ತು ಅವನ ಸೃಷ್ಟಿಗಳಾದ ಮನುಷ್ಯರಿಗೆ ತನ್ನ ಮರಣದಿಂದ ಒಂದು ಜೀವನ ಪ್ರಾಪ್ತವಾಗುವ ರೀತಿಯಲ್ಲಿ ಹಿತವನ್ನುಂಟುಮಾಡಲಿಕ್ಕಾಗಿ. ಇಲ್ಲಿ ದೇವಪಥದಲ್ಲೂ ಮನುಷ್ಯರ ಕ್ಷೇಮಾಭಿವೃದ್ಧಿಗಾಗಿಯೂ ಮರಣ ಎಂದು ಹೇಳಿದುದರ ತಾತ್ಪರ್ಯ, ಹಝ್ರತ್ ಪೈಗಂಬರರು(ಸ) ತಿಳಿಗೇಡಿಗಳಂತೆ ಅಥವಾ ಮತಿಭ್ರಮಿಗಳಂತೆ ತನ್ನನ್ನು ತಾನೆ ಕೊಲ್ಲುವುದರ ಮೂಲಕ ಇತರರಿಗೆ ಹಿತವನ್ನುಂಟುಮಾಡಬಹುದೆಂಬ ಭ್ರಮೆಯಿಂದ ಆತ್ಮಹತ್ಯೆಗೆ ತಯಾರಾದರೆಂದು ಯಾರೂ ತಪ್ಪು ಭಾವಿಸಬಾರದು.ಹಝ್ರತ್ ಪೈಗಂಬರ್(ಸ) ಈ ರೀತಿಯ ಬುದ್ಧಿಹೀನ ವರ್ತನೆಯನ್ನು ಕಠಿಣವಾಗಿ ವಿರೋಧಿಸಿದ್ದರು. ಆತ್ಮಹತ್ಯೆ ಮಾಡುವವರನ್ನು ಪವಿತ್ರ ಖುರ್‌ಆನ್ ಮಹಾ ಅಪರಾಧಿಯೆಂದೂ ಶಿಕ್ಷಾರ್ಹನೆಂದೂ ಪರಿಗಣಿಸಿದೆ. ಅದು ಹೀಗೆ ಹೇಳುತ್ತದೆ:

لَا تُلْقُوْا بِاَيْدِيْكُمْ اِلَى التَّهْلُكَةِ

> ನೀವು ಆತ್ಮಹತ್ಯೆ ಮಾಡಬಾರದು; ಸ್ವಂತ ಕೈಗಳಿಂದ ನೀವು ನಿಮ್ಮನ್ನೇ ನಾಶಪಡಿಸಬೇಡಿರಿ. **(2:196)**

ಖಾಲಿದನ ಹೊಟ್ಟೆನೋವನ್ನು ಕಂಡು ಅನುಕಂಪದಿಂದ ಝೈದ್ ತನ್ನ ತಲೆಯನ್ನು ಜಜ್ಜಿಕೊಂಡರೆ, ಖಾಲಿದನ ಹೊಟ್ಟೆನೋವು ಶಮನವಾಗದೆಂದೂ ಹಾಗೆ ಮಾಡುವುದು ಝೈದನ ಮೂರ್ಖತನವೆಂಬುದೂ ಸ್ಪಷ್ಟವಷ್ಟೆ. ಅದನ್ನು ಝೈದ್‌ನ ಒಂದು ಸದ್ಗುಣವೆಂದು ಪರಿಗಣಿಸಲಾಗದು. ಝೈದ್ ತನ್ನ ತಲೆಯನ್ನು ಜಜ್ಜಿ ಕೊಳ್ಳುವುದರ ಬದಲು ಖಾಲಿದನಿಗೆ ಯೋಗ್ಯವಾದ ಶುಶ್ರೂಷೆ ನೀಡುವನಾದರೆ ಅದು ಪ್ರಯೋಜನಕರವೆನಿಸೀತು. ಸಂಕ್ಷಿಪ್ತವಾಗಿ, ಮೊದಲು ಉದ್ಧರಿಸಲಾದ ಪವಿತ್ರ ಖುರ್‌ಆನ್ ವಚನದ ತಾತ್ಪರ್ಯವೇನೆಂದರೆ, ಮನುಷ್ಯರನ್ನು ಸಕಲ ವಿಧ ಅನುಚಿತ ಬಂಧನಗಳಿಂದ ವಿಮುಕ್ತಿಗೊಳಿಸಿ ಅವರಿಗೆ ಒಳಿತುಂಟುಮಾಡಲಿಕ್ಕಾಗಿ ಹಝ್ರತ್ ಪೈಗಂಬರ್(ಸ) ತನ್ನ ಜೀವವನ್ನು ಅರ್ಪಿಸಿಕೊಂಡು, ಪ್ರಾರ್ಥನೆ ಮತ್ತು ಬೋಧನೆ ಮೂಲಕವೂ ವಿವೇಕಯುತ ಮಾರ್ಗದಿಂದಲೂ ಅವರನ್ನು ಉದ್ಧರಿಸಲು ಯತ್ನಿಸುತ್ತಾ ಅವರ ಕಡೆಯಿಂದ ಉಪದ್ರವಗಳನ್ನು ಕ್ಷಮಾಪೂರ್ವಕ ಸಹಿಸುತ್ತಾ ತನ್ನ ಸರ್ವ ಸುಖ ಕ್ಷೇಮಾದಿಗಳನ್ನು ಕಡೆಗಣಿಸಿದ್ದರು. ಈ ಮಹತ್ತಾದ ಪರಿತ್ಯಾಗವನ್ನು ಸೂಚಿಸುತ್ತಾ ಪವಿತ್ರ ಖುರ್‌ಆನ್ ಹಝ್ರತ್ ಪೈಗಂಬರರನ್ನು(ಸ) ಹೀಗೆ ಸಂಬೋಧಿಸುತ್ತದೆ:

لَعَلَّكَ بَاخِعٌ نَّفْسَكَ اَلَّا يَكُوْنُوْا مُؤْمِنِيْنَ

> ಜನರು ಸತ್ಯವನ್ನು ಸ್ವೀಕರಿಸದಿರುವುದರ ಬಗ್ಗೆ ಚಿಂತಿಸಿಯೂ ಅವರಿಗಾಗಿ ಕಠಿಣ ಪ್ರಯತ್ನ ಮಾಡಿಯೂ ನೀನು ನಿನ್ನ ಜೀವವನ್ನು ನಾಶಪಡಿಸುವಿಯಾ? **(26:4)**

ಇನ್ನೊಂದೆಡೆಯಲ್ಲಿ ಹೀಗೆ ಹೇಳುತ್ತದೆ:

فَلَا تَذْهَبْ نَفْسُكَ عَلَيْهِمْ حَسَرَٰتٍ

> ಸತ್ಯವನ್ನು ಅಂಗೀಕರಿಸದ ಜನರ ಕುರಿತು ವ್ಯಥೆಪಟ್ಟು ನೀನು ಜೀವವನ್ನು ನಾಶಪಡಿಸಬೇಡ. **(35:9)**

ಒಟ್ಟಿನಲ್ಲಿ, ಜನರಿಗಾಗಿ ಆತ್ಮತ್ಯಾಗ ಮಾಡುವ ಸರಿಯಾದ ರೀತಿಯೇನೆಂದರೆ, ಅವರ ಕ್ಷೇಮಾಭಿವೃದ್ಧಿಗಾಗಿ ಪ್ರಕೃತಿ ನಿಯಮ ಅನುಸಾರವೂ ಪ್ರಯೋಜನಕರವೂ ಆದ ಉತ್ತಮ ಮಾರ್ಗವನ್ನು ಅವಲಂಬಿಸಿ ಪರಿಶ್ರಮಿಸುವುದರಲ್ಲಿ ತನ್ನ ಜೀವನವನ್ನೇ ಅರ್ಪಿಸಿ, ಆ ಮಾರ್ಗದಲ್ಲಿ ತಡೆಯೊಡ್ಡುವ ಕಠಿಣ ತರದ ಅಡೆತಡೆಗಳನ್ನೂ ಕ್ಲೇಶಗಳನ್ನೂ ಅಚಂಚಲತೆಯಿಂದ ಎದುರಿಸುವುದಾಗಿದೆ. ಹಾಗಲ್ಲದೆ, ಜನರು ಭಯಂಕರವಾದ ಆಪತ್ತಿನಲ್ಲಿ ಅಥವಾ ದುರ್ಮಾರ್ಗದಲ್ಲಿ ಇರುವುದನ್ನು ಕಂಡಾಗ ತನ್ನ ತಲೆಯನ್ನು ಜಜ್ಜಿಕೊಳ್ಳುವುದಾಗಲಿ, ವಿಷ ಸೇವಿಸಿ ಸ್ವಯಂ ನಾಶ ಹೊಂದುವುದಾಗಲಿ ಅಲ್ಲ. ತನ್ನ ಈ ಅವಿವೇಕತನದಿಂದ ಅಧರ್ಮದಲ್ಲಿ ತೊಳಲಾಡುತ್ತಿರುವವರಿಗೆ ವಿಮೋಚನೆ ಲಭಿಸುವುದೆಂದು ಯಾರಾದರೂ ಭಾವಿಸಿ ತೃಪ್ತಿಪಡುವರಾದರೆ ಅದು ಬರೇ ಮೂರ್ಖತನವಾಗುತ್ತದೆ. ಜೀವನದಲ್ಲಿ ಎದುರಾಗುವ ಕಷ್ಟ–ದುಃಖಗಳನ್ನು ಸಹಿಸಲಾಗದೆ ಆತ್ಮಹತ್ಯೆಗೆ ತಯಾರಾಗುವವರು ಬದ್ಧ ಅಂಜುಕುಳಿಗಳು. ಈ ಬಗೆಯ ಆತ್ಮಹತ್ಯೆಯನ್ನು ಆ ಮೇಲೆ ಹೇಗೆ ವ್ಯಾಖ್ಯಾನಿಸಿದರೂ ಅದು ಅವಿವೇಕದ ಫಲವೂ ವಿವೇಕಿಗಳು ಇಷ್ಟಪಡದ ಭೀರುತ್ವವೂ ಆಗಿದೆಯೆಂಬುದು ಸಂದೇಹಾತೀತ.

ಒಬ್ಬನ ಜೀವಿತದಲ್ಲಿ ಕಷ್ಟ–ಕ್ಲೇಶಗಳ ಕಾಲದಂತೆಯೇ ಅಧಿಕಾರಶಕ್ತಿ ಮತ್ತು ಐಶ್ವರ್ಯದ ಕಾಲ ಸಹ ಬಂದೊದಗದಿದ್ದರೆ ಆತನ ನಿಜವಾದ ಸ್ವಭಾವಗಳು ಸ್ಪಷ್ಟಗೊಳ್ಳಲಾರವು. ಪ್ರತೀಕಾರ ಮಾಡುವ ಸಂದರ್ಭ ಲಭಿಸದೆ ಸದಾ ಪೀಡನೆಗೆ ಗುರಿಯಾದ ಒಬ್ಬನ ಸಹನೆ ಮತ್ತು ಅನಾಕ್ರಮಣ ಸ್ವಭಾವವು ನಿಜವಾದ ಅವನ ಕ್ಷಮಾಗುಣವೆಂದು ಪರಿಗಣಿಸಲ್ಪಡದು. ಕಾರಣವೇನೆಂದರೆ, ಸೇಡು ತೀರಿಸುವ ಅವಕಾಶ ಸಿಕ್ಕಿದರೆ ಅವನು ವಿರೋಧಿಗಳೊಡನೆ ಯಾವ ರೀತಿ ವರ್ತಿಸುವನೆಂದು ತೀರ್ಮಾನಿಸಲು ಸಾಧ್ಯವಿಲ್ಲ. ಅದೇ ಪ್ರಕಾರ, ಒಬ್ಬನು ಅಶಕ್ತನೂ ಅಧಿಕಾರರಹಿತನೂ ದರಿದ್ರನೂ ಆಗಿರುವ ಸ್ಥಿತಿಯಲ್ಲಿ ಅನ್ಯರ ಹಿಂಸೆಯನ್ನು ಸಹಿಸಿಕೊಂಡು ಕಾಲ ಕಳೆದು,

ಅಧಿಕಾರಶಕ್ತಿ ಮತ್ತು ಐಶ್ವರ್ಯವನ್ನು ಹೊಂದದೆಯೇ ಮರಣಪಡುವನಾದರೆ ಅವನ ಸ್ವಭಾವವನ್ನು ನಿರ್ಣಯಿಸಲಿಕ್ಕೆ ಸಾಧ್ಯವಿಲ್ಲ. ಒಮ್ಮೆಯೂ ಯುದ್ಧರಂಗದಲ್ಲಿ ಕಾಲಿಡದಿದ್ದ ಓರ್ವನ ಧೈರ್ಯವಾಗಲಿ, ಭೀರುತ್ವವಾಗಲಿ ಸಾಬೀತಾಗದು. ಮಾತ್ರವಲ್ಲ, ಅವನ ಮನೋಧರ್ಮದ ಕುರಿತು ನಮಗೆ ಏನೂ ಹೇಳಲಿಕ್ಕೆ ಸಾಧ್ಯವಿಲ್ಲ. ಹೀಗೆ, ವಿಭಿನ್ನ ಪರಿಸ್ಥಿತಿಗಳು ಒಬ್ಬನ ಜೀವಿತದಲ್ಲಿ ಎದುರಾಗದೆ ಅವನ ಸದ್ಗುಣಗಳ ಸಂಬಂಧಿಸಿ ನಿಶ್ಚಿತವಾಗಿ ಹೇಳಲಾಗದು. ಅವನು ಶತ್ರುಗಳ ಮೇಲೆ ಜಯ ಸಾಧಿಸಿದರೆ ಅವರೊಡನೆ ಹೇಗೆ ವರ್ತಿಸುವನೆಂದೂ ಧನಿಕನಾಗಿದ್ದರೆ ದರಿದ್ರರಿಗೂ ನಿರ್ಗತಿಕರಿಗೂ ಧಾನಧರ್ಮ ಮಾಡುವನೋ ಅಥವಾ ಧನವನ್ನೆಲ್ಲ ಕಟ್ಟಿಡುವನೋ ಎಂದೂ ಯುದ್ಧ ಕಣಕ್ಕೆ ಇಳಿಯಬೇಕಾಗಿ ಬಂದರೆ ಬೆನ್ನು ತೋರಿಸಿ ಓಡಿಹೋಗುವನೋ ಅಥವಾ ಧೀರತೆಯಿಂದ ಹೋರಾಡುವನೋ ಎಂದೂ ಅಂಥ ಸಂದರ್ಭ ಒದಗದಿದ್ದಲ್ಲಿ ನಮಗೆ ನಿರ್ಣಯಿಸಲು ಅಸಾಧ್ಯ. ಆದರೆ ದೇವನ ವಿಶೇಷವಾದ ಕೃಪಾಕಟಾಕ್ಷದಿಂದ ಹಝ್ರತ್ ಮುಹಮ್ಮದ್ ಪೈಗಂಬರರಿಗೆ(ಸ) ತನ್ನ ಜೀವಿತಕಾಲದಲ್ಲಿ ಸಕಲ ನೈತಿಕ ಗುಣಗಳನ್ನೂ ಪ್ರತಿಬಿಂಬಿಸಿ ತೋರಿಸಲು ಸೌಭಾಗ್ಯ ಸಿದ್ಧಿಸಿದೆ. ಹೀಗೆ, ಚರಿತ್ರೆಯ ಹಾಳೆಗಳಲ್ಲಿ ಎಲ್ಲಿಯೂ ಗೋಚರಿಸದಂತಹ ಅತುಲ್ಯವಾದ ಔದಾರ್ಯ, ಧೀರತೆ, ಸಹನೆ, ಕ್ಷಮಾಶೀಲತೆ, ನ್ಯಾಯನಿಷ್ಠೆ ಮೊದಲಾದ ಗುಣಗಳೆಲ್ಲವೂ ಹಝ್ರತ್ ಪೈಗಂಬರರ(ಸ) ಜೀವನದಲ್ಲಿ ಪೂರ್ಣವಾಗಿ ಪ್ರಕಟಗೊಂಡಿವೆ. ಬಲಹೀನತೆಯ ಮತ್ತು ಶಕ್ತಿಪ್ರತಾಪದ ಕಾಲದಲ್ಲಿ, ದಾರಿದ್ರ್ಯ ಮತ್ತು ಐಶ್ವರ್ಯದ ಕಾಲದಲ್ಲೆಲ್ಲ ತಾನು ಉತ್ಕೃಷ್ಟವಾದ ನೈತಿಕ ಗುಣಗಳ ಮತ್ತು ಮನೋಧರ್ಮಗಳ ತುಂಬಿದ ಪಾತ್ರೆಯೆಂದು ಹಝ್ರತ್ ಪೈಗಂಬರ್(ಸ) ಲೋಕಕ್ಕೆ ತೋರಿಸಿಕೊಟ್ಟಿರುವರು. ಹಝ್ರತ್ ಪೈಗಂಬರರ(ಸ) ಮನೋಹರವಾದ ಜೀವನದಲ್ಲಿ ಪ್ರತಿಬಿಂಬಿಸಿ ಕಾಣದಿರುವ ಯಾವುದೇ ಮಾನವಿಕ ಪರಿಪೂರ್ಣತೆಯಾಗಲಿ, ಮಹದ್ಗುಣವಾಗಲಿ ಇಲ್ಲ.

## ಇಸ್ಲಾಮಿಕ ಯುದ್ಧ

ಹೌದು, ನಿರಪರಾಧಿಗಳಾದ ಮುಸ್ಲಿಮರಿಗೆದುರಾಗಿ ತೀವ್ರವಾದ ಅಕ್ರಮ ಮತ್ತು ಅನ್ಯಾಯವೆಸಗಿ, ಅವರಲ್ಲಿ ಅನೇಕರನ್ನು ನಿರ್ದಯವಾಗಿ ವಧಿಸಿ ಇಸ್ಲಾಂ ಧರ್ಮವನ್ನು ನಿರ್ಮೂಲನ ಮಾಡಲು ಸದಾ ಪ್ರಯತ್ನಪಟ್ಟ ದುಷ್ಟರಾದ ಶತ್ರುಗಳನ್ನು ದೇವನು ಶಿಕ್ಷಿಸದೆ ಬಿಡಲಿಲ್ಲವೆಂಬುದು ವಾಸ್ತವ. ಅಂತಹ ದುಷ್ಟರನ್ನು ಶಿಕ್ಷಿಸದೆ ಬಿಡುವುದು, ಅವರ ಪಾದಗಳಡಿಯಲ್ಲಿ ದೌರ್ಜನ್ಯಗಳಿಗೆ ಗುರಿಯಾಗಿ ನಾಶಗೊಳ್ಳಲಿಕ್ಕೆ ಸತ್ಯಭಕ್ತರನ್ನು ಬಿಟ್ಟುಕೊಡುವುದಕ್ಕೆ ತುಲ್ಯ.

ಹಝ್ರತ್ ಪೈಗಂಬರರ(ಸ) ಆಜ್ಞೆ ಪ್ರಕಾರ ಮುಸ್ಲಿಮರು ಮಾಡಿದ ಯಾವುದೇ ಯುದ್ಧವಾಗಲಿ ಅಕಾರಣವಾಗಿ ಅನ್ಯರನ್ನು ಕೊಲ್ಲುವ ಉದ್ದೇಶದಿಂದಾಗಿರಲಿಲ್ಲ. ನಿರ್ದಯಿಗಳಾದ ವೈರಿಗಳು ಹಝ್ರತ್ ಪೈಗಂಬರರನ್ನೂ(ಸ) ಸಹಚರರನ್ನೂ ಸ್ವದೇಶದಿಂದ ಹೊರಗೆ ಅಟ್ಟಿದರು. ನಿರಪರಾಧಿಗಳಾದ ಅನೇಕ ಮುಸ್ಲಿಂ ಸ್ತ್ರೀ ಪುರುಷರನ್ನು ನಿಷ್ಕರುಣೆಯಿಂದ ಹತ್ಯೆ ಮಾಡಿದರು. ಅಷ್ಟು ಮಾತ್ರವಲ್ಲ, ಇಸ್ಲಾಂ ಧರ್ಮದ ಬೋಧನೆಗಳನ್ನು ಸಂಪೂರ್ಣವಾಗಿ ತಡೆಯಲಿಕ್ಕೂ ಹಾಗೆ ಇಸ್ಲಾಮನ್ನು ಬೇರು ಸಹಿತ ಕಿತ್ತು ಹಾಕಲಿಕ್ಕೂ ಅವರು ಮುಸ್ಲಿಮರಿಗೆದುರಾಗಿ ಯುದ್ಧಕ್ಕಿಳಿದರು. ಹೀಗೆ ದೌರ್ಜನ್ಯಕ್ಕೆ ಗುರಿಯಾದವರನ್ನು ರಕ್ಷಿಸಲಿಕ್ಕಾಗಿ ಧರ್ಮ ಸಂರಕ್ಷಕನಾದ ದೇವನು ಇಚ್ಛಿಸಿದುದರಿಂದ, ಖಡ್ಗಧಾರಿಗಳಾಗಿ ಬಂದ ಶತ್ರುಗಳನ್ನು ಖಡ್ಗದಿಂದಲೇ ಎದುರಿಸಲು ಅಪ್ಪಣೆ ಕೊಡಲಾಯಿತು. ಸಂಕ್ಷಿಪ್ತವಾಗಿ, ಸತ್ಯ ಭಕ್ತರಾದ ಆ ಶಾಂತಿಪ್ರಿಯರನ್ನು ನಿರ್ಮೂಲನ ಮಾಡಲಿಕ್ಕಾಗಿ ಯುದ್ಧಕ್ಕಿಳಿದವರಿಗೆದುರಾಗಿ ಮಾತ್ರವೇ ಹಝ್ರತ್ ಪೈಗಂಬರ್(ಸ) ಯುದ್ಧ ಮಾಡಿದ್ದರು. ಇಂತಹ ಆಪತ್ಕಾರಿ ಘಟ್ಟಗಳಲ್ಲಿ ಆತ್ಮರಕ್ಷಣೆಗಾಗಿ ಆಯುಧವೆತ್ತಲು ಇಸ್ಲಾಂ ಒಪ್ಪಿಗೆ ನೀಡದಿರುತ್ತಿದ್ದರೆ, ಸ್ತ್ರೀಯರೂ ಮಕ್ಕಳೂ ಸಹಿತ ಸಾವಿರಗಟ್ಟಲೆ ನಿರಪರಾಧಿಗಳು ಕೊಲ್ಲಲ್ಪಟ್ಟು ಕೊನೆಗೆ ಇಸ್ಲಾಂ ನಾಶಗೊಳ್ಳುತ್ತಿತ್ತು.

ದೇವಪ್ರೋಕ್ತವಾದ ಧರ್ಮದಲ್ಲಿ ವೈರಿಗಳ ಆಕ್ರಮಣವನ್ನು ತಡೆಯಲಿಕ್ಕಾಗಲಿ, ಅಪರಾಧಿಗಳನ್ನು ಶಿಕ್ಷಿಸಲಿಕ್ಕಾಗಲಿ ಯಾವುದೇ ನಿಯಮ ನಿರ್ದೇಶಗಳು ಇರಬಾರದೆಂದೂ ದೇವನ ಪ್ರೀತಿಯೂ ಕರುಣೆಯೂ ಸದಾ ಸೌಮ್ಯವೂ ಶಾಂತವೂ ಆದ ರೂಪದಲ್ಲಲ್ಲದೆ ಪ್ರಕಟವಾಗಬಾರದೆಂದೂ ಇಸ್ಲಾಮಿನ ವೈರಿಗಳು ಭಾವಿಸಿಕೊಂಡಿದ್ದಾರೆ. ಅವರು ತಮ್ಮ ಕಲ್ಪನೆ ಪ್ರಕಾರ ದೇವನ ಸರ್ವಶ್ರೇಷ್ಠ ಗುಣಗಳನ್ನು ಸೌಮ್ಯತೆ ಮತ್ತು ಶಾಂತತೆಗೆ ಮಾತ್ರ ಸೀಮಿತಗೊಳಿಸಿ, ತಾವು ದೇವನನ್ನು ಗೌರವಿಸುವುದಾಗಿ ತಿಳಿದುಕೊಂಡಿದ್ದಾರೆ. ಆದರೆ ಅವರ ಈ ಕಲ್ಪನೆ ತಪ್ಪೆಂದು ಚಿಂತಿಸುವವರಿಗೆ ಸುಲಭವಾಗಿ ವ್ಯಕ್ತವಾಗುತ್ತದೆ. ದೈವಿಕವಾದ ಪ್ರಕೃತಿ ನಿಯಮಗಳನ್ನು ವೀಕ್ಷಿಸಿದರೆ ದೇವನು ದಯಾಮಯನೆಂದು ಕಾಣಬಹುದು. ಆದರೆ ಅವನ ದಯೆ ಸದಾ ಒಂದೇ ರೀತಿಯಲ್ಲಿ ಶಾಂತವೂ ಮೃದುಲವು ಆದ ರೂಪದಲ್ಲಿ ಮಾತ್ರ ಪ್ರಕಟವಾಗುವುದಿಲ್ಲ. ಅವನು ಒಬ್ಬ ತಜ್ಞ ವೈದ್ಯನಂತೆ ಕೆಲವೊಮ್ಮೆ ರುಚಿಕರ ಮಧುರ ಪಾನೀಯ ನೀಡುವುದು ಹಾಗೂ ಕೆಲವೊಮ್ಮೆ ಕಹಿ ಕಷಾಯ ಕುಡಿಸುವುದು ಸಹ ತನ್ನ ಅತಿಯಾದ ಕಾರುಣ್ಯದಿಂದಲೇ ಆಗಿದೆ. ತನ್ನ ಸೃಷ್ಟಿಗಳ ಮೇಲೆ ಅವನು ದಯೆ ತೋರಿಸುವುದು ನಾವು ನಮ್ಮ ಸ್ವಂತ ದೇಹಗಳ ಮೇಲೆ ದಯೆ ತೋರಿಸುವ ರೀತಿಯಲ್ಲಾಗಿದೆಯೆಂದು ಹೇಳಬಹುದು. ನಮ್ಮಲ್ಲಿ ಪ್ರತಿಯೊಬ್ಬನೂ ಅವನವನ ದೇಹವನ್ನು ಪ್ರೀತಿಸುವನೆಂಬುದರಲ್ಲಿ ಸಂದೇಹವಿಲ್ಲ. ಯಾರೂ ತನ್ನ

ದೇಹಕ್ಕೆ ತುಸು ನೋವಾದರೂ ಉಂಟಾಗುವುದನ್ನು ಇಷ್ಟಪಡುವುದಿಲ್ಲ. ಇಂತಹ ಒಂದು ಆತ್ಮಸ್ನೇಹ ನಮ್ಮ ಸರ್ವಾಂಗಗಳಲ್ಲೂ ವ್ಯಾಪಿಸಿಕೊಂಡಿದೆ. ಯಾವುದೇ ಅವಯವಕ್ಕೂ ಹಾನಿಯುಂಟಾಗಲು ಇಷ್ಟ ಪಡದ ನಾವು ಸಕಲಾಂಗಗಳನ್ನೂ ಪ್ರೀತಿಸುವೆವಾದರೂ ಎಲ್ಲವನ್ನೂ ಒಂದೇ ತರದಲ್ಲಿ ಪ್ರೀತಿಸುವುದಿಲ್ಲವೆಂಬುದು ಸ್ಪಷ್ಟ. ಜೀವಿತೋದ್ದೇಶ ನಿರ್ವಹಣೆಗಾಗಿ ಅತ್ಯಂತ ಉಪಯುಕ್ತವಾದ ಶ್ರೇಷ್ಠ ಅವಯವಗಳ ಮೇಲಿರುವ ಪ್ರೀತಿಯೂ ಜಾಗರೂಕತೆಯೂ ನಮ್ಮ ಹೃದಯದಲ್ಲಿ ಗಣ್ಯ ಸ್ಥಾನವನ್ನು ಪಡೆದಿರುತ್ತದೆ. ಇದೇ ಪ್ರಕಾರ ಯಾವುದಾದರೊಂದು ಅಂಗದ ಮೇಲೆ ಮಾತ್ರವಿರುವುದಕ್ಕಿಂತಲೂ ಹೆಚ್ಚು ಪ್ರೀತಿಯೂ ಗಮನವೂ ನಮ್ಮ ಎಲ್ಲ ಅಂಗಗಳ ಮೇಲೆ ಸಮಷ್ಟಿಯಾಗಿ ಇರುತ್ತದೆ. ಒಟ್ಟಿನಲ್ಲಿ, ಅಪ್ರಧಾನವಾದ ಒಂದು ಅಂಗವನ್ನು ಗಾಯಗೊಳಿಸುವುದರಿಂದಾಗಲಿ, ಛೇದಿಸುವುದರಿಂದಾಗಲಿ ಬೇರೊಂದು ಪ್ರಧಾನ ಅವಯವದ ರಕ್ಷಣೆಯೂ ತನ್ಮೂಲಕ ಶರೀರಕ್ಕೆ ಸ್ವಾಸ್ಥ್ಯವೂ ಲಭಿಸುವುದೆಂದು ತೋರುವುದಾದರೆ ನಾವು ಆ ಅಂಗವನ್ನು ಛೇದಿಸಲಿಕ್ಕೂ ಸಿದ್ಧರಾಗುತ್ತೇವೆಯಷ್ಟೆ. ಆಗ ನಮಗೆ ಮನೋವೇದನೆ ಉಂಟಾಗುವುದಾದರೂ ಹಾಗೆ ಮಾಡದಿದ್ದರೆ ಒಂದು ಅವಯವಕ್ಕೆ ಅಂಟಿದ ಕೇಡು ಸರ್ವಾಂಗಗಳಿಗೂ ವ್ಯಾಪಿಸುವುದೆಂಬ ಭಯದಿಂದ ಆ ಶಸ್ತ್ರಕ್ರಿಯೆಗೆ ನಾವು ಒಪ್ಪಲೇಬೇಕಾಗುತ್ತದೆ. ಇದೇ ಪ್ರಕಾರ, ಸತ್ಯಭಕ್ತರಾದ ಸಾಧು ಜನರು ದುಷ್ಟರ ಕೈಯಿಂದ ನಾಶಗೊಳ್ಳುವುದಾಗಿಯೂ ಭೂಮಿಯಲ್ಲಿ ಗಲಭೆ ಹೆಚ್ಚುವುದಾಗಿಯೂ ಕಾಣುವಾಗ ಕಾರುಣ್ಯವಂತನಾದ ದೇವನು ಸಹ ಸಜ್ಜನರ ಸಂರಕ್ಷಣೆಗಾಗಿಯೂ ಶಾಂತಿ ಸಂಸ್ಥಾಪನೆಗಾಗಿಯೂ ಸಂದರ್ಭೋಚಿತವಾದ ಮಾರ್ಗಗಳನ್ನು ಕೈಗೊಳ್ಳುತ್ತಾನೆ. ಅವನು ದಯಾವಂತನಾಗಿರುವಂತೆಯೇ ಅಗಾಧ ಜ್ಞಾನಿಯೂ ಆಗಿರುವ ಕಾರಣ ದುಷ್ಟಜನರಿಗೆ ಆಕಾಶದಿಂದಾಗಲಿ, ಭೂಮಿಯಿಂದಾಗಲಿ ಶಿಕ್ಷೆ ಬಂದೆರಗುವಂತೆ ಮಾಡುತ್ತಾನೆ.

**"ಅಲ್‌ಹಮ್ದು ಲಿಲ್ಲಾಹಿ ರಬ್ಬಿಲ್ ಆಲಮೀನ್."**

ಅಖಿಲ ಲೋಕ ಸೃಷ್ಟಿಕರ್ತನಾದ, ಸರ್ವ ಸೃಷ್ಟಿ ಪರಿಪಾಲಕನಾದ, ಸರ್ವ ರಕ್ಷಕನಾದ ದೇವನಿಗೆ ಸಕಲ ಸ್ತುತಿ ಸ್ತೋತ್ರಗಳು ಸಲ್ಲುತ್ತವೆ.

––––––––––––––*****––––––––––––––